ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಲಾಯಿತು.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ, ಮೀನುಗಾರಿಗೆ ಮಂತ್ರಿಗಳು).—Sir, I lay the Fourth Annual Report of the Karnataka Milk Products Ltd. for the year 83–84

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಲಾಯಿತು.

ADJOURNMENT MOTION

Reg. Police Firing at Pavagada

SRI K. H. PATIL.—Sir, I have moved a privilege motion ....

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರು ಮತ್ತು ಇತರ ಸದಸ್ಯರು ಪಾವಗಡದಲ್ಲಿ ನಡೆದ ಘಟನೆ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ನಾನು ಅದನ್ನು ನಿಲುವಳಿ ಸೂಚನೆಯಾಗಿ ಅಳವಡಿಸಿಕೊಳ್ಳದೆ ನಿಯಮ ೬೦ರ ಅಡಿಯಲ್ಲಿ ಚರ್ಚೆಗೆ ಅವಕಾಶಮಾಡಿಕೊಟ್ಟಿದ್ದೇನೆ. ಈಗ ಚರ್ಚೆಯನ್ನು ಪ್ರಾರಂಭಿಸಬಹುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ನಾನು......

ಅಧ್ಯಕ್ಷರು.—ಈಗ ಶ್ರೀಮತಿ ನಾಗರತ್ನಮ್ಮನವರು ಶುರು ಮಾಡಲಿ ನಿಯಮ ೬೦ರ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಈಗ ತಾವು ಪ್ರಾರಂಭ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಕೇಳಿಕೊಂಡಿದ್ದೇವೆ ತದನಂತರ ಅದನ್ನು ಕನ್ವರ್ಟ್ ಮಾಡಬೇಕಾದರೆ ಕಾರಣವೇನು ?

ಅಧ್ಯಕ್ಷರು.—ಎರಡು ತಾಸು ಅವಕಾಶ ಕೊಡುತ್ತೇನೆ, ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು, ನಾವು ಹೇಳುವುದನ್ನು ಸ್ವಲ್ಪ ಕೇಳಬೇಕು.

ಅಧ್ಯಕ್ಷರು.—ನಾನು ಎರಡು ತಾಸು ತಮಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ನಮ್ಮನ್ನು ಕರೆಯಿಸಿದಾಗ ಕನ್‌ವರ್ಟ್ ಮಾಡುತ್ತೇನೆಂದು ಹೇಳಲಿಲ್ಲ. ನಿಲುವಳಿ ಸೂಚನೆಯಾಗಿಯೇ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಿರಿ.

ಅಧ್ಯಕ್ಷರು.—ನಿಯಮ ೬೦ರ ಪ್ರಕಾರ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮಗಳನ್ನು ನಂಬಿಕೆಗೆ ತೆಗೆದುಕೊಂಡು ಹೇಳಿದ್ದು ಒಂದು ಇಲ್ಲಿ ಮಾಡುವುದು ಇನ್ನೊಂದು.

ಅಧ್ಯಕ್ಷರು.—೧೨ ಗಂಟೆಯವರೆಗೆ ಚರ್ಚೆ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ನಿಯಮಗಳ ಪ್ರಕಾರ ನೀವು ಹೇಳುವುದನ್ನು ನಾವು ಕೇಳುತ್ತೇವೆ. ನೀವು ನಮ್ಮ ರಕ್ಷಣೆಗೆ ಬರಬೇಕು. ನಿಯಮಾವಳಿ ೫೯ರ ಪ್ರಕಾರ ನಿಲುವಳಿ ಸೂಚನೆ ಯಾಗಬೇಕಾದರೆ.—

"Subject to the provisions of these rules, a motion for an adjournment of the business of the House for the purposes of discussing a definite matter of urgent public importance may be made with the consent of the Speaker".

According to Rule 60 we have given notice to the Speaker, and the Secretary concerned.

Rule 62 says,

"No motion which seeks to raise discussion on a matter pending before any statutory triblunal or statutory

authority performing any judicial or quasi-judicial function or any commission or court of enquiry appointed to......

ಅಧ್ಯಕ್ಷರು.—ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಈಗ ಚರ್ಚೆ ಪ್ರಾರಂಭ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ರೂಲಿಂಗ್ ಕೊಡುವುದಕ್ಕೆ ಮುಂಚೆ ತಾವು ನಮ್ಮನ್ನು ಕೇಳಬೇಕಾಗಿತ್ತು.

ಶ್ರೀ ಎ. ಲಕ್ಷ್ಮೀಸಾಗರ್ —ಮಾನ್ಯ ಅಧ್ಯಕ್ಷರೆ .....

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಹೇಳುವುದನ್ನು ನಾವು ಒಪ್ಪಿಕೊಳ್ಳುವುದಿಲ್ಲ. ನಾವು ಹೇಳುವುದನ್ನು ಮೊದಲು ಅವರು ಕೇಳಲಿ. ನಿಲುವಳಿ ಸೂಚನೆಗೆ ಒಂದು ಮುಖ್ಯತ್ವ ಇದೆ. ನಡೆದಿರುವಂಥ ಘಟನೆಯ ವಿಚಾರದಲ್ಲಿ ವಿರೋಧ ಪಕ್ಷದವರು ಅದರ ಮಹತ್ವವನ್ನು ಅರಿತು ನಿಲುವಳಿ ಸೂಚನೆಯನ್ನು ನಿಯಮಾವಳಿ ಪ್ರಕಾರ ತಂದಿರುತ್ತಾರೆ. ಅದರ ಬಗ್ಗೆ ವಿಷಯಗಳನ್ನು ಕೇಳಿದಮೇಲೆ ಅದಕ್ಕೆ ಒಪ್ಪಿಗೆ ಕೊಡಬೇಕೆ? ಬಿಡಬೇಕೆ? ಎಂಬುದು ಮಾನ್ಯ ಸ್ಪೀಕರ್‌ರವರ ಜವಾಬ್ದಾರಿಗೆ ಬಿಟ್ಟಿದ್ದುದು, ಇದು ಎಲ್ಲಾ ಕಡೆ ನಡೆದುಕೊಂಡು ಬರುವಂಥ ಒಂದು ಪದ್ಧತಿ. ತಾವು ಒಪ್ಪಿಗೆ ಕೊಡದಿದ್ದರೆ ಅದು ಬೇರೆ ಸಮಾಚಾರ ನಿಯಮ ೬೯ರ ಪ್ರಕಾರ. ತಾವು ಅದನ್ನು ಕನ್‌ವರ್ಟ್ ಮಾಡಬಹುದು. ನೇರವಾಗಿ ೬೯ರ ಪ್ರಕಾರ ಕನ್‌ವರ್ಟ್ ಮಾಡುವುದಕ್ಕೆ ತಮಗೆ ಡಿಸ್ಕ್ರಿಷನರಿ ಪವರ್ ಇದೆಯೋ ಇಲ್ಲವೋ ಅದನ್ನು ನಾನು ಕೇಳುವುದಕ್ಕೆ ತಯಾರಿಲ್ಲ. ಸಂಸದೀಯ ಪದ್ಧತಿಯಲ್ಲಿ, ನಿಯಮಾವಳಿಗಳಿಗೆ ಅನುಸಾರವಾಗಿ ಇದು ಸರಿಯಲ್ಲ. ತಾವು ಮೊದಲು ಮಾತನಾಡುವುದಕ್ಕೆ ಅವಕಾಶ ಕೊಡಿ, ನಮ್ಮ ವಿಚಾರಗಳನ್ನು ಅಭಿಪ್ರಾಯಗಳನ್ನು ಕೇಳಿದಮೇಲೆ, ತಾವು ರೂಲಿಂಗ್ ಕೊಡುವುದು ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದವರು ನಿಲುವಳಿ ಸೂಚನೆ ಕೊಟ್ಟಿದ್ದಾರೆ. ತಾವು ಅದನ್ನು ಪರಿಶೀಲನೆ ಮಾಡಿ ತಮಗೆ ಇರತಕ್ಕ ಅಧಿಕಾರ ವ್ಯಾಪ್ತಿಯಲ್ಲಿ ನಿಯಮಾವಳಿಗಳ ಪ್ರಕಾರ ಈ ಒಂದು ವಿಷಯವನ್ನು ೬೯ನೇ ನಿಯಮದ ಮೇರೆಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಎನ್ನುವ ಮಾತನ್ನು ಕೂಡ ಹೇಳಿದ್ದೀರಿ. ತಮಗೆ ಅಧಿಕಾರ ಇದೆ ಎನ್ನುವುದನ್ನು ಸನ್ಮಾನ್ಯ ಸದಸ್ಯರು ಕೂಡ ತಿಳಿದುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಒಂದು ಸಲ ಕಾನೂನು ವ್ಯಾಪ್ತಿಯಲ್ಲಿ ಬರತಕ್ಕ ವಿಷಯದ ಬಗ್ಗೆ ಪೂರ್ವಾಪರ ಯೋಚನೆ ಮಾಡಿ ತಾವು ನಿರ್ಣಯ ಕೊಟ್ಟ ಮೇಲೆ, ಇದರ ಬಗ್ಗೆ ಮತ್ತೆ ವಿಶ್ಲೇಷಣೆ ಮಾಡತಕ್ಕಂಥಾದ್ದು ಸರಿಯಲ್ಲ. ತಮ್ಮ ನಿರ್ಣಯವೇ ಸರಿಯಾದುದು. ನಿಯಮಾವಳಿಗೆ ಅನುಸಾರವಾಗಿ ಅನುಗುಣವಾಗಿ ಸನ್ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶ ಇದೆ. ಅದಕ್ಕೆ ಅನುವು ಮಾಡಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮೂರು ಜನ ಸದಸ್ಯರು ನಿಲುವಳಿ ಸೂಚನೆಗೆ ನೋಟೀಸ್ ಕೊಟ್ಟಿದ್ದಾರೆ. ನಾನು ಈ ವಿಚಾರದಲ್ಲಿ ಸೋವೋಟೆ ಆಗಿ ರಿಜೆಕ್ಟ್ ಮಾಡುವುದಕ್ಕೆ ಹೋಗಿಲ್ಲ. ನನ್ನ ಛೇಂಬರಿನಲ್ಲಿ ನಿಮ್ಮ ವಾದಗಳನ್ನು ಕೇಳಿ ರಿಜೆಕ್ಟ್ ಮಾಡಬಹುದಿತ್ತು. ಹಾಗೂ ಕೂಡ ಮಾಡಿಲ್ಲ. ವಿಷಯದ ಪ್ರಾಮುಖ್ಯತೆಯನ್ನು ಅರಿತು, ನಿಯಮ ೬೯ರ ಪ್ರಕಾರ ಚರ್ಚೆಗೆ ಎರಡು ತಾಸಿನ ವರೆಗೂ ಚರ್ಚೆಗೆ ಅವಕಾಶ ಮಾಡಿ ಕೊಟ್ಟಿದ್ದೇನೆ

(ಗೊಂದಲ)

ಅಧ್ಯಕ್ಷರು.—ಈಗ ನೇರವಾಗಿ ಶ್ರೀಮಂತಿ ನಾಗರತ್ನಮ್ಮನವರು ಚರ್ಚೆಯನ್ನು ಪ್ರಾರಂಭ ಮಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ನಿಯಮ ೬೦ರ ಪ್ರಕಾರ ತಮ್ಮ ಮನವೊಲಿಸುವುದಕ್ಕೆ ಅವಕಾಶ ಕೊಡಬೇಕು. ಮೊದಲನೆಯ ಹಂತದ ಚರ್ಚೆಯನ್ನು ಕೇಳಿ, ಅದಕ್ಕೆ ತಾವು ಸಮಾಧಾನ ಆಗದೇ ಇದ್ದರೆ, ಆಗ ಬೇರೆ ರೀತಿ ಆಗಬಹುದು.

ಅಧ್ಯಕ್ಷರು.—ಈ ಬಗ್ಗೆ ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ನಿಯಮ ೬೯ರ ಪ್ರಕಾರ ಈಗಲೇ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ. ಇಲ್ಲ ಎಂದರೆ, 2 ಗಂಟೆಗೆ ಚರ್ಚೆಗೆ ಇಡುತ್ತೇನೆ ಎಂದು ಹೇಳಬಹುದಾಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ದೊಡ್ಡ ಮನಸ್ಸು ಮಾಡಿದುದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಸಮಯ ಹರಣ ಮಾಡುವುದು ಬೇಡ ತಾವು ಚರ್ಚೆ ಪ್ರಾರಂಭ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ನಾವು ಕೊಟ್ಟ ಉದ್ದೇಶವನ್ನು ತಾವು ತಿಳಿದುಕೊಳ್ಳಬೇಕು. ತಾವು ನೇರವಾಗಿ ಕನ್‌ವರ್ಟ್ ಮಾಡಬೇಕಿದ್ದರೆ, ನಮ್ಮನ್ನು ಕರೆಯಿಸಿ ಚರ್ಚೆ ಮಾಡತಕ್ಕ ಅಗತ್ಯ ಇರಲಿಲ್ಲ.

ಅಧ್ಯಕ್ಷರು.—ಕನ್‌ವರ್ಟ್ ಮಾಡತಕ್ಕದ್ದು, ಇದೆಲ್ಲಾ ಹೇಳಿಕೊಡಬೇಕಾಗಿಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ತಾವು ಒಂದು ನಿರ್ಣಯವನ್ನು ಕೊಟ್ಟಿದ್ದೀರಿ. ಒಂದು ರೀತಿಯಿಂದ ವಿರೋಧ ಪಕ್ಷದವರ ಒಂದು ಬೇಡಿಕೆಯನ್ನು ಮನ್ನಣೆ ಮಾಡಿದ್ದೀರಿ. ಎಲ್ಲಾ ವಿಷಯಗಳನ್ನು ಮುಂದೆ ಹಾಕಿ ಚರ್ಚೆ ಮಾಡಬೇಕೆನ್ನುವುದೇ ಅಡ್ಜರ್ನ್‌ಮೆಂಟ್ ಮೋಷನ್ ಅಭಿಪ್ರಾಯ. ಅದೇ ರೀತಿ ಸಭೆಯ ಕಾರ್ಯಕಲಾಪಗಳನ್ನು ಮುಂದೂಡಿ, ಅತೀ ಮಹತ್ವದ ವಿಚಾರ ಏನಿದೆ, ಇದನ್ನು ಒಪ್ಪಿಕೊಳ್ಳಬೇಕು ಎನ್ನುವುದು ಮೂಲಭೂತ ತತ್ವ. ಇದೇ ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಇರತಕ್ಕದ್ದು. ಅದನ್ನು ತಾವು ಒಪ್ಪಿದ ಕೂಡಲೇ ಎಲ್ಲಾ ಕಾರ್ಯಕಲಾಪಗಳನ್ನು ಮುಂದೂಡಿ, ಬೇಡಿಕೆಗೆ ಮನ್ನಣೆ ಕೊಟ್ಟಿದ್ದೀರಿ. ಸರ್ಕಾರದ ಒಂದು ವಾದವನ್ನು ಕೇಳಿ, ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಆದ್ದರಿಂದ, ಅದನ್ನು ಮಾಡುವುದು ಒಳ್ಳೆಯದು, ಅದರ ಮೇಲೆ ಚರ್ಚೆ ಬೇಡ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಕಂದಾಯ ಮಂತ್ರಿಗಳು ಹೇಳಿದ್ದುದನ್ನು ಭಾಗಶಃ ಒಪ್ಪಿಕೊಂಡಿರತಕ್ಕದ್ದು ಸರಿ. ನಾವು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೇವೆ. ಅದರ ಮುಖಾಂತರ ನಾವು ಎಷ್ಟು ಜನ ಚರ್ಚೆ ಮಾಡಬೇಕು. ಎಷ್ಟು ಜನ ನಿಮ್ಮ ಮನವೊಲಿಸಬೇಕೆನ್ನುವ ವಿಚಾರ ನಮಗೆ ಬಿಟ್ಟಿದ್ದದು. ಎರಡು ಗಂಟೆಗಳ ಕಾಲ—ಬಂಧನ ಹಾಕಿ ಮುಗಿಸಿ ಎಂದರೆ ನಮ್ಮ ಚರ್ಚೆಗೆ ಸಮಯ ಆಗುವುದಿಲ್ಲ. ಈ ವಿಚಾರ ಕೂಲಂಕಷವಾಗಿ ಚರ್ಚೆ ಆಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಆದ್ದರಿಂದ, ಎರಡು ಗಂಟೆಯೊಳಗೆ ಎಲ್ಲಾ ಹೇಳಿ ಎಂದರೆ ಅದು ಆಗದೇ ಹೋಗುವಂಥ ಕೆಲಸ.

ಅಧ್ಯಕ್ಷರು.—ಈಗ ಪ್ರಾರಂಭ ಮಾಡಿ ಆಮೇಲೆ ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಯಮ ಹೌ ಕ್ಲಿಯರ್ ಇದೆ.

ಅಧ್ಯಕ್ಷರು.—ನಾನು ಅದರ ಬಗ್ಗೆ ಈಗಾಗಲೇ ತೀರ್ಮಾನ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಇದನ್ನು ಪುನರ್ ಪರಿಶೀಲಿಸಬೇಕು.

ಅಧ್ಯಕ್ಷರು.—ತಮಗೆ ಅವಕಾಶ ಮಾಡಿಕೊಟ್ಟಿರುವುದು ತಪ್ಪು ಏನು ? ಈಗ ಶ್ರೀಮತಿ ನಾಗರತ್ನಮ್ಮನವರು ಪ್ರಾರಂಭ ಮಾಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ನಿಲುವಳಿ ಸೂಚನೆ ತರುವ ಉದ್ದೇಶ ಏನು. ನಿಲುವಳಿ ಸೂಚನೆಯನ್ನು ತಂದು ಇಲ್ಲಿ ಪಾಸ್ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಅದರ ಉದ್ದೇಶ ಏನು ಅಂದರೆ, ವಿರೋಧಪಕ್ಷದವರು ಯಾವ ವಿಷಯವನ್ನು ಗಮನದಲ್ಲಿಟ್ಟುಕೊಂಡು ನಿಲುವಳಿ ಸೂಚನೆಯನ್ನು ತರುತ್ತಾರೆ, ಆ ವಿಷಯದ ಬಗ್ಗೆ ಚರ್ಚೆ ಆಗಬೇಕು ಅಷ್ಟೇ ತಾನೇ ಅದನ್ನು ಏನಾದರೂ ಪಾಸ್ ಮಾಡುತ್ತೀರೋ ಇಲ್ಲಿ ?

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಹೆಗಡೆಯವರು ಈಗಾಗಲೇ ತಳೆದಿರುವ ಅಭಿಪ್ರಾಯ ಎಷ್ಟು ಉಗ್ರವಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ತಾವು ಒಂದು ಕ್ರಮವನ್ನು ಅನುಸರಿಸಿದಿರಿ. ಅದರ ಪ್ರಕಾರ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇನ್ನಿತರ ವಿರೋಧ ಪಕ್ಷದವರನ್ನೂ ಹಾಗೂ ನಮ್ಮನ್ನೂ ತಾವು ಕರೆಯಿಸಿದಿರಿ. ಕರೆಯಿಸಿ ಚರ್ಚೆಯೂ ಆಯಿತು. ಆ ಚರ್ಚೆಯ ನಂತರ ಒಂದು ಸಹಮತಕ್ಕೂ ನಾವು ಬಂದಿದ್ದೇವೆ. ನಿಯಮ ೬೮ರ ಪ್ರಕಾರ ಇಲ್ಲಿ ಚರ್ಚೆಗೂ ತಾವು ಅವಕಾಶ ವನ್ನು ಕೊಟ್ಟಿದ್ದೀರಿ. ನಿಯಮದ ಪ್ರಕಾರ ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದರೆ ಈ ದಿವಸದ ಕೊನೆಯ ಭಾಗದಲ್ಲಿ ಕೊಡ ಬೇಕಾಗಿತ್ತು, ಆದರೆ ತಾವು ಹಾಗೆ ಮಾಡದೆ, ಈ ಸದನದ ಮುಂದಿರತಕ್ಕ ಎಲ್ಲಾ ವಿಷಯಗಳನ್ನೂ ಬದಿಗೊತ್ತಿ ಇದನ್ನು ಚರ್ಚೆಗೆ ತೆಗೆದುಕೊಳ್ಳುವಂತೆ ತಾವು ಹೇಳಿದ್ದೀರಿ. ಅಂದಮೇಲೆ ಇದರ ಅರ್ಥವಾದರೂ ಏನು? ಪ್ರಾಕ್ಟಿಕಲ್ ಆಗಿ ನೋಡಿದರೆ ಇದು ಅಡ್ಜರ್ನ್‌ಮೆಂಟ್ ಮೋಷನ್ ಆಗುತ್ತದೆಯೋ ಇಲ್ಲವೊ?...

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿ ನಾವು ಮಾತನಾಡಿದ್ದುದು ಆ ರೀತಿ ಅಲ್ಲ...

ಶ್ರೀ ರಾಮಕೃಷ್ಣ ಹೆಗಡೆ.—ಇದು ಸ್ವಾಭಾವಿಕವಾಗಿ ನೋಡಿದರೆ ಅಡ್ಜರ್ನ್‌ಮೆಂಟ್ ಮೋಷನ್ನೇ ಆದಂತಾಯಿತು. ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತಾವು ಅಲೋ ಮಾಡದಿದ್ದರೂ ಒಂದು ರೀತಿ ಯಲ್ಲಿ ಇದು ಅಡ್ಜರ್ನ್‌ಮೆಂಟ್ ಮೋಷನ್‌ಗೇ ಅವಕಾಶವನ್ನು ಮಾಡಿಕೊಡುವಂತೆ ಕೊಟ್ಟಿದ್ದೀರಿ. ಆದ್ದರಿಂದ ಸುಮ್ಮನೆ ಕಾಲಹರಣ ಮಾಡುವುದಕ್ಕೆ ಬದಲಾಗಿ ಮುಂದುವರಿಸಿದರೆ ಒಳ್ಳೆಯದು.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ಮಾತನಾಡುವುದನ್ನು ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ರೀತಿ ಮಾತನಾಡಬಾರದು. ನಾವು ಇಲ್ಲಿ ಕುಳಿತಿರುವುದು ಕಾಲಹರಣ ಮಾಡುವುದಕ್ಕಲ್ಲ...

ಶ್ರೀ ರಾಮಕೃಷ್ಣ ಹೆಗಡೆ.—ತಾವು ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ನಾನು ವಿಷಯವನ್ನು ಕಾಂಟ್ರಡಿಕ್ಟ್ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಅರ್ಥಮಾಡಿಕೊಂಡಿದ್ದುದು ಏನೆಂದರೆ, ಅಡ್ಜರ್ನ್‌ಮೆಂಟ್ ಮೋಷನ್‌ನ ಮುಖ್ಯತ್ವ ಏನಿದೆ ಅದರ ಪ್ರಕಾರ ತಾವು ಅವಕಾಶವನ್ನು ಮಾಡಿಕೊಡುತ್ತೀರಿ ಎಂದು ಅದಕ್ಕೆ ಮಂತ್ರಿಗಳು ಹೇಳಿಕೆಯನ್ನು ಕೊಡುತ್ತಾರೆಂದು ಇದ್ದೆವು. ಆದರೆ ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ಚರ್ಚೆಮಾಡುವುದಕ್ಕಾಗುವುದಿಲ್ಲ. ರೂಲ್ ೬೮ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇನೆಂದು ತಾವು ಹೇಳುತ್ತಿದ್ದೀರಿ. ಇದನ್ನು ಅಡ್ಜರ್ನ್‌ಮೆಂಟ್‌ಮೋಷನ್ ಆಗಿ ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕೂ ತಮಗೆ ಅಧಿಕಾರ ಇದೆ, ನಿಯಮ ೬೮ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕೂ ತಮಗೆ ಅಧಿಕಾರ ಇದೆ. ಮೊದಲನೆಯದಾಗಿ ನಿಯಮ ೬೮ ರಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಡುವ ಅಭಿಪ್ರಾಯ ತಮ್ಮದು ಇದೆ. ತಾವು ಈರೀತಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇ ನೆಂದು ಹೇಳುವುದಾದರೆ ಈ ವಿಷಯದ ಮಹತ್ವವೇ ಹೋಗಿಬಿಡುತ್ತದೆ. ಅಡ್ಜರ್ನ್‌ಮೆಂಟ್ ಮೋಷನ್ ಎಂದರೇನು ಎಂಬ ಬಗ್ಗೆ ನಮಗೆ ಗೊತ್ತಿದೆ. ಅದೇರೀತಿ ನಿಯಮ ೬೮ರ ಪ್ರಕಾರವೂ ನಮಗೆ ಗೊತ್ತಿದೆ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಯಾವುದೇರೀತಿಯಿಂದ ತಂದರೂ ಅದಕ್ಕೆ ಇಮ್ಮಿಡಿಯಟ್, ಅರ್ಜೆಂಟ್ ಎನ್ನತಕ್ಕ ಪದಗಳ ಅರ್ಥ ಇದೆ. ಮೊದಲು ತಾವು ಚರ್ಚೆಗೆ ಅವಕಾಶ ಮಾಡಿಕೊಡಿ, ನಾವು ಮಾತ ನಾಡುತ್ತೇವೆ, ನಂತರ ಮಂತ್ರಿಗಳು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ, ಆಗ ನಾವು ಒಂದು ಒಮ್ಮತಕ್ಕೆ ಬರುವುದಕ್ಕೆ ಅನುಕೂಲವಾಗುತ್ತದೆಂದು ನಾವು ಹೇಳಿದ್ದೇವೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ವಿನಾಕಾರಣ ಕಾಲಹರಣ ಮಾಡುವುದಕ್ಕೆ ಇಲ್ಲಿಗೆ ನಾವು ಯಾರೂ ಬಂದಿಲ್ಲ.

ಅಧ್ಯಕ್ಷರು.—ವಿಷಯದ ಗಂಭೀರತೆಯನ್ನು ತಿಳಿದುಕೊಂಡು ನಾನು ನೇರವಾಗಿ ನಿಯಮ ೬೮ರ ಪ್ರಕಾರ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ನೀವು ಇದಕ್ಕಾಗಿ ೨ ತಾಸು ತೆಗೆದುಕೊಳ್ಳಿ ಎಂದೂ ಹೇಳಿದ್ದೇನೆ. ಆದ್ದರಿಂದ ಈಗ ನೀವು ಚರ್ಚೆಯನ್ನು ಪ್ರಾರಂಭಮಾಡಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ನಾನು ಈಗಾಗಲೇ ಇದರ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ನಾವು ಇದನ್ನು ತಂದಿರತಕ್ಕ ಉದ್ದೇಶ ಈ ಸದನಕ್ಕೆ...

(ಗೊಂದಲ)

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರು, ಮಾನ್ಯ ಕೃಷ್ಣನ್‌ರವರೂ ಮತ್ತು ಮಾನ್ಯ ವೆಂಕಟರಾಮಯ್ಯನವರೂ ಇದನ್ನೂ ಕೊಟ್ಟಿದ್ದಾರೆ. ಅವರು ಮೊದಲು ಚರ್ಚೆಯನ್ನು ಪ್ರಾರಂಭ ಮಾಡಲಿ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ನಾವು ಯಾರೂ ಕಾಲಹರಣ ಮಾಡುವುದಕ್ಕೆ ಇಲ್ಲಿಗೆ ಬಂದಿಲ್ಲ...

೧೦.೧೫ ಎ. ಎಂ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ ಇವತ್ತಿನದಿವಸ ಒಂದು ಹೀನಕೃತ್ಯ, ಒಂದು ಅಮಾನುಷ ಕೃತ್ಯದ ಬಗ್ಗೆ ತಮ್ಮ ಅಭಿಪ್ರಾಯದಮೇರೆಗೆ ಚರ್ಚೆ ಮಾಡುವುದಕ್ಕೆ ನಾನು ನಿಂತಿದ್ದೇನೆ. ಶ್ರೀಮತಿ ಪದ್ಮಮ್ಮ ಎಂಬಾಕೆ ಒಬ್ಬ ಹೆಣ್ಣು ಮಗಳು ಕೊಟ್ಟಿಗುತ್ತಾ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಿಡ್‌ವೈಫ್ ಆಗಿ ಕೆಲಸ ಮಾಡುತ್ತಿದ್ದಳು. ಆಕೆ ಕೆಲಸಕ್ಕೆ ಸೇರಿದ ಎರಡು ತಿಂಗಳಲ್ಲಿಯೇ ಆ ಊರಿನ ಪ್ರಮುಖರು ಒಬ್ಬರು ವಿ. ಪಿ. ಚೇರ್‌ಮೆನ್ ಅವರ ಕಣ್ಣಿಗೆ ಆಕೆ ಬಿದ್ದಳು. ಅವರು ಆಕೆಯ ಮನೆಗೆ ಆಗಾಗ್ಗೆ ಹೋಗುವುದು, ಆಳನ್ನು ಕಳುಹಿಸುವುದು ಬಾಗಿಲನು ತಟ್ಟುವುದು ಈ ರೀತಿಯಾಗಿ ನಾನಾರೀತಿಯಲ್ಲಿ ಆಕೆಗೆ ಹಿಂಸೆಯನ್ನು ಕೊಡುತ್ತಿದ್ದುದರಿಂದ ಎರಡುಬಾರಿ ಆಕೆ ತಿರಸ್ಕರಿಸಿ ಅವರ ಜೊತೆಯಲ್ಲಿ ಘರ್ಷಣೆಯನ್ನೂ ಕೂಡ ಮಾಡಿದ್ದಾಳೆ. ಅವಳನ್ನು ಯಾವರೀತಿ ಮಾತನಾಡಿದ್ದಾರೆಂಬುದನ್ನು ಅವಳ ಬಾಯಲ್ಲಿಯೇ ಕೇಳಿಬಂದಿದ್ದೇನೆ. ಅದರಿಂದಾಗಿ ಆಕೆ ಆರೋಗ್ಯ ಅಧಿಕಾರಿಗಳಾದ ಡಾ. ಗಂಗಾಧರ್‌ರವರಿಗೆ ದೂರು ಸಲ್ಲಿಸಿದಳು. ಡಾ. ಗಂಗಾಧರ್‌ರವರು ಪೋಲೀಸ್‌ಸ್ಟೇಷನ್‌ಗೆ ದೂರುಕೊಡಿ ಎಂದು ಹೇಳಿದರು. ಪೋಲೀಸ್ ಸ್ಟೇಷನ್‌ಗೆ ಹೋಗಿ ದೂರು ಸಲ್ಲಿಸಲು ಹೋದರೆ ಅಲ್ಲಿದ್ದ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ನಾಗರಾಜ್‌ರವರು ಆಕೆಯ ದೂರನ್ನು ತೆಗೆದುಕೊಳ್ಳಲಿಲ್ಲ. ಆದರೂ ಊರಿಗೆ ವಾಪಸ್ ಬಂದು ಸುಮ್ಮನೆ ಇದ್ದರೂ ಆಕೆಗೆ ಕಿರುಕುಳ ಕೊಡುವುದು ಇದರಿಂದ ಜಾಸ್ತಿಯಾಯಿತು. ಆದ್ದರಿಂದ ದಿನಾಂಕ ೨೪-೧-೧೯೮೭ರಂದು ಇವರ ಕಿರುಕುಳ ಮತ್ತು ಕಷ್ಟವನ್ನು ತಡೆಯಲಾರದೆ ರಾಜೀನಾಮೆಯನ್ನು ಕೊಟ್ಟಿದ್ದಾಳೆ, ಆಗ ಡಾ. ಗಂಗಾಧರ್‌ರವರು ಏಕೆ ಹೊಂದಾಣಿಕೆ ಮಾಡಿಕೊಂಡು ಹೋಗಲಿಕ್ಕೆ ಆಗುವುದಿಲ್ಲವೇ ಎಂದು ಉಪದೇಶ ಕೊಟ್ಟಿದ್ದಾರೆ. ಆದ್ದರಿಂದ ಆಕೆ ಈ ಕೆಲಸ ಸರಿಹೋಗುವುದಿಲ್ಲವೆಂದು ಬೇರೆ ಕಡೆ ಟ್ರಾನ್ಸ್‌ಫರ್ ಮಾಡಿಕೊಡಿ ಎಂದು ಕೇಳಿಕೊಂಡಿದ್ದಾಳೆ. ಅದನ್ನು ಅವರು ಗಣನೆಗೆ ತೆಗೆದುಕೊಳ್ಳದಿದ್ದರಿಂದ ರಾಜಿನಾಮೆಯನ್ನು ದಿನಾಂಕ ೩೦-೧-೮೭ರಲ್ಲಿ ಕೊಟ್ಟಿದ್ದಾಳೆ. ಆ ರಾಜಿನಾಮೆ ಪತ್ರವನ್ನು ಡಾ. ಗಂಗಾಧರ್‌ರವರು ವಾಪಸ್ ಕೊಟ್ಟಿರುವ ಬಗ್ಗೆ ಒಂದು ದೊಡ್ಡ ಕಥೆ ಅದರ ಹಿನ್ನೆಲೆಯಲ್ಲಿ ಇರುತ್ತದೆ. ಆಕೆ ಒಂದುದಿವಸ ಗಂಡನ ಜೊತೆಯಲ್ಲಿ ಮದುವೆಗೆ ಬೇರೆ ಊರಿಗೆ ಹೋಗಿ ಪಾವಗಡಕ್ಕೆ ಬಂದು ರಾತ್ರಿ ಊರಿಗೆ ಹೋಗಲಿಕ್ಕೆ ಬಸ್ ಸಿಗಲಿಲ್ಲವಾದ ಕಾರಣ ಅಲ್ಲಿಯೇ ಇಳಿದುಕೊಂಡಿದ್ದಾಳೆ. ಅಲ್ಲಿ ಆಲ ಎಂಬ ಅವಳ ಗಂಡನ ಸ್ನೇಹಿತ ಅವರನ್ನು ಕರೆದು ಇರುವುದಕ್ಕೆ ಸ್ಥಳವನ್ನು ಕೊಡಿ ಎಂದು ಕೇಳಿಕೊಂಡು ನಾನು ಲಗ್ಗೇಜ್ ನೋಡಿಕೊಂಡು ಬಸ್‌ಸ್ಟಾಂಡಿನಲ್ಲಿಯೇ ಇರುತ್ತೇನೆಂದು ಹೇಳಿ ಆಲಿ ಜೊತೆಯಲ್ಲಿ ಆಕೆಯ ಗಂಡ ನಾರಾಯಣಸ್ವಾಮಿ ಕಳುಹಿಸಿಕೊಟ್ಟಿದ್ದಾನೆ. ಗಂಡ ಕಳುಹಿಸಿದಾಗ ಸ್ವಲ್ಪ ದೂರ ಒಂದು ಸಿನಿಮಾ ಹೌಸ್ ಹತ್ತಿರ ಹೋದಾಗ ಮೂರುಜನ ಪೋಲೀಸ್ ಕಾನ್‌ಸ್ಟೇಬಲ್ಸ್ ಆಕಡೆಯಿಂದಲೇ ಬರುತ್ತಿದ್ದವರು ಆಕೆಯನ್ನು ಮನೋಇಚ್ಛೆ, ಬಾಯಿಗೆ ಬಂದಂತೆ ಬಯ್ಯುವುದಕ್ಕೆ ಶುರುಮಾಡಿದರು. ಆಕೆ ಹೆದರಿಕೊಂಡು ಬಾಯಿಬಡಿದುಕೊಂಡು ಗಂಡನ ಹತ್ತಿರ ಓಡಿದಳು. ಓಡಿ ಬಂದಾಗ ನ್ಯಾಯಯುತವಾಗಿ ಗಂಡನಾದವನು ನನ್ನ ಹೆಂಡತಿಯನ್ನು ಏತಕ್ಕೆ ಹೀಗೆ ಮಾತನಾಡುತ್ತೀರೆಂದು ಸ್ವಲ್ಪ ಖಾರವಾಗಿಯೇ ಮಾತನಾಡಿದ್ದಾನೆ. ಈ ಪೋಲೀಸ್ ಕಾನ್‌ಸ್ಟೇಬಲ್ಸ್ ತಕ್ಷಣವೇ ಪೋಲೀಸ್ ಸ್ಟೇಷನ್‌ಗೆ ಹೋಗಿ ಇನ್ನು ೩-೪ಜನ ಕಾನ್‌ಸ್ಟೇಬಲ್ಸನ್ನು ಮತ್ತು ಸಬ್ ಇನ್‌ಸ್ಪೆಕ್ಟರನ್ನು ಜೀಪಿನಲ್ಲಿ ಕರೆದುಕೊಂಡು ಬಂದು ಆಕೆಯ ಗಂಡನಿಗೆ ಸಿಕ್ಕಾಪಟ್ಟೆ ಹೊಡೆದು ಅದೇ ಜೀಪಿನಲ್ಲಿ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿದ್ದಾರೆ. ಪೋಲೀಸ್ ಸ್ಟೇಷನ್‌ಗೆ ಕರೆದು

ಕೊಂಡು ಹೋಗುವಾಗ ದಾರಿಯಲ್ಲಿಯೇ ಆಕೆಗೆ ಅವಮಾನಮಾಡಿಕೊಂಡು ಹೋಗಿದ್ದಾರೆ. ಅದನ್ನು ಬಾಯಲ್ಲಿ ಹೇಳುವುದಕ್ಕೆ ಆಗುವುದಿಲ್ಲ ವಿಧಿಯಿಲ್ಲದೆ ಹೇಳುತ್ತಿದ್ದೇನೆ. ಅವಳನ್ನು ಮತ್ತು ಆಕೆಯ ಗಂಡನನ್ನು ಸ್ಟೇಷನ್‌ಗೆ ಕರೆದುಕೊಂಡು ಹೋಗಿ, ಆಕೆಯ ಗಂಡನನ್ನು ಜೈಲಿಗೆ ಹಾಕಿ ಆಕೆಯನ್ನು ಎಲ್ಲಿಗೆ ಕರೆದುಕೊಂಡು ಹೋದರೋ ಗೊತ್ತಿಲ್ಲ ಮುಂದಿನ ಪರಿಸ್ಥಿತಿ ತಮಗೆ ಗೊತ್ತಿಲ್ಲದೆ ಇಲ್ಲ. ೧೯೮೭ನೇ ಇಸವಿಗೆ ೫೦ ಪರ್ಸೆಂಟ್ ಹೆಣ್ಣು ಮಕ್ಕಳೇ ಇರುವಾಗ ಅವರು ಹುಟ್ಟುವುದೇ ತಪ್ಪೆ, ಅವರು ಹುಟ್ಟಿದ ಮೇಲೆ ಸರ್ಕಾರಿ ಹುದ್ದೆಗಳಿಗೆ ಸೇರಿ ಸರ್ವಿಸ್ ಮಾಡುವುದೇ ತಪ್ಪೇ? ಅವರು ಮಾನವಾಗಿ ಬದುಕಬಾರದೆ. ಗಂಡ ಹೋಗಿ ಏತಕ್ಕೆ ನನ್ನ ಹೆಂಡತಿಗೆ ಈ ರೀತಿ ಹೊಡೆಯುತ್ತೀರಿ, ಅವಮಾನ ಮಾಡುತ್ತೀರಿ ಎಂದು ಕೇಳುವುದೇ ತಪ್ಪೇ? ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅವರನ್ನು ಮನಸೋ ಇಚ್ಛೆ ಹೊಡೆದಿದ್ದಾರೆ ಅಲ್ಲಿ ನಡೆದ ಕೃತ್ಯವನ್ನು ನೋಡಿದ್ದರೆ ಕಣ್ಣಲ್ಲಿ ನೀರು ಬರುವುದಿಲ್ಲ, ಕಣ್ಣಲ್ಲಿ ರಕ್ತ ಬರುತ್ತದೆ. ಪೋಲೀಸರಿಗೆ ಹೊಡೆಯುವುದು ಬಿಟ್ಟು ಬೇರೆ ಏನೂ ಬರುವುದಿಲ್ಲವೆಂದು ಕಾಣುತ್ತದೆ, ಏತಕ್ಕಾಗಿ ಈ ರೀತಿ ಹೊಡೆಯುತ್ತಿದ್ದಾರೆ ? ಅದನ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ, ಇವರಿಗೆ ಏನು ದೆವ್ವ ಬಂತೇ, ಭೂತ ಬಂತೆ, ಪಿಶಾಚಿ ಬಂತೇ ಎಂದು. ಇದೆಲ್ಲ ಆದರೂ ಜನಗಳು ಏನು ಮಾಡಿದರು ಎಂದರೆ, ಮಾರನೇಯ ದಿವಸ ಅಲ್ಲಿ ಜಾತ್ರೆ ಇದ್ದರೂ ಏನೋ ಗಲಾಟೆಯಾಗುತ್ತಿದೆ ಎಂದು ಎಲ್ಲರೂ ಪೋಲೀಸ್ ಸ್ಟೇಷನ್‌ನಲ್ಲಿ ಸೇರಿದ್ದಾರೆ ಅಷ್ಟು ಹೊತ್ತಿನಲ್ಲಿ ಆಕೆಯನ್ನೇನು ಹೊಡೆದು ಸಾಯಿಸುತ್ತಿದ್ದರೆ, ಆಕೆ ಸುಮ್ಮನೆ ಇರಬಾರದೆ ? ನಾನು ಬಾತ್ ರೂಮಿಗೆ ಹೋಗಬೇಕೆಂದಳಂತೆ. ಆಗ ಆಕೆಯನ್ನು ಎತ್ತಿಕೊಂಡು ಬಂದರಂತೆ. ಅದನ್ನು ನೋಡಿದ ಜನರು ಬಹಳ ನೊಂದಿದ್ದಾರೆ. ನೊಂದು ಕಲ್ಲು ತೂರಲು ಶುರು ಮಾಡಿದ್ದಾರೆ. ಅದೂ ಪೋಲೀಸ್ ಸ್ಟೇಷನ್ ಮೇಲೆ ತೂರಿದ್ದಾರೆ, ಅದರಿಂದ ಯಾರಿಗೂ ಏನೂ ಆಗಿಲ್ಲ. ಜಗಳದಲ್ಲಿ ಯಾರೂ ಹಾಲು, ತುಪ್ಪ ಕುಡಿ ಎಂದು ಹೇಳುವುದಿಲ್ಲ, ಬೈಯ್ದಿದ್ದಾರೆ, ಕಲ್ಲು ಹೊಡೆದಿದ್ದಾರೆ ಅಷ್ಟಕ್ಕೆ ಪೋಲೀಸರು ಏನುಮಾಡಿದ್ದಾರೆಂದರೆ, ಅವರು ಲಾಠಿ ಚಾರ್ಜ್ ಮಾಡಲಿಲ್ಲ, ಅಶ್ರುವಾಯುವನ್ನು ಬಿಡಲಿಲ್ಲ, ಏನೂ ಮಾಡಲಿಲ್ಲ, ಏಕ್‌ದಂ ಫೈರಿಂಗ್ ಶುರುಮಾಡಿದ್ದಾರೆ, ಫೈರಿಂಗ್ ಮಾಡುವುದಕ್ಕೆ ಅವರಿಗೆ ಆರ್ಡರ್ ಕೊಟ್ಟವರು ಯಾರು ? ಜನರಿಗೆ ವಾರ್ನಿಂಗ್ ಕೊಡಲಿಲ್ಲ, ಫೈರಿಂಗ್ ರೂಲ್ಸ್ ಏನಿದೆ ಅದನ್ನು ನೋಡದೆ ಫೈರಿಂಗ್ ಮಾಡಿದ್ದಾರೆ. ಅದರಿಂದ ಸ್ಥಳದಲ್ಲೇ ೬ ಜನ ಸತ್ತು ಆಸ್ಪತ್ರೆಗೆ ಹೋಗುವಾಗ ಇನ್ನೊಬ್ಬ ಒಟ್ಟು ೭ ಜನಗಳು ಆಹುತಿಯಾಗಿದ್ದಾರೆ. ಆ ಸ್ಥಳವನ್ನು ಹೋಗಿ ನೋಡಿದಾಗ ಅಕ್ಕಪಕ್ಕದ ಮನೆಯ ಕಿಟಕಿಯೊಳಗೆಲ್ಲ ಗುಂಡು ಹೋಗಿದೆ. ಗೋಡೆಯೊಳಗೆ ಗುಂಡು ಆಳವಾಗಿ ಹೊಕ್ಕಿದೆ. ಅಷ್ಟು ಲಾಂಗ್ ರೇಂಜ್ ಇಟ್ಟುಕೊಂಡು ಹೊಡೆದಿದ್ದಾರೆ. ಯಾವ ಪುರುಷಾರ್ಥಕ್ಕೆ ಈ ರೀತಿ ಹೊಡೆದರೋ, ಯಾವ ಸಂತೋಷಕ್ಕೆ ಹೊಡೆದರೋ, ಇವರಿಗೆ ಅದರಿಂದ ಏನಾಗಬೇಕಾಗಿತ್ತೋ ನನಗಂತೂ ಅರ್ಥವಾಗುತ್ತಿಲ್ಲ.

ಈಗ ಗೃಹ ಮಂತ್ರಿಗಳ ಖಾತೆ ಏನಾಗಿದೆ ಎಂದರೆ ಲಗಾಮು ಹಿಡಿಯುವುದಕ್ಕೆ ಸಾಧ್ಯವಿಲ್ಲದಿದ್ದರೆ ಕುದುರೆ ಹೇಗೆ ಇವರನ್ನು ಎತ್ತಿಹಾಕಿ ಓಡಿಹೋಗಿ ಮತ್ತೆ ವಾಪಸ್ಸು ಬಂದು ಇವರನ್ನೆ ತುಳಿಯುತ್ತದೋ ಹಾಗೆ, ಅಂಥ ಪುಂಡು ಕುದುರೆ ಹಾಗೆ ಆಗಿದೆ ಇವರ ಪರಿಸ್ಥಿತಿ. ಇವರ ಕೈಯಲ್ಲಿ ಲಗಾಮು ಹಿಡಿದು ಕುದುರೆ ಸವಾರಿ ಮಾಡುವುದಕ್ಕಾಗುತ್ತಿಲ್ಲ. ಅವರಲ್ಲಿ ಒಳ್ಳೆಯತನ ಇದೆ, ಆ ಒಳ್ಳೆಯತನವನ್ನು ಕಟ್ಟಿಕೊಂಡು ಏನು ಮಾಡೋಣ, ಇವರಿಗೆ ಲಗಾಮು ಹಿಡಿಯುವುದಕ್ಕೆ ಶಕ್ತಿ ಇಲ್ಲದಿದ್ದರೆ ಏನು ಪ್ರಯೋಜನ ? ಕುದುರೆ ಓಡಿಹೋದರೆ ಪರವಾಗಿಲ್ಲ, ಆದರೆ ಅದು ವಾಪಸ್ಸು ಬಂದು ತುಳಿಯುವ ಪರಿಸ್ಥಿತಿ ಉಂಟಾಗಿದೆ, ಇವರಿಗೆ ಏನಾಗಿದೆ ಎಂದರೆ ಮುಂದೆ ಪೈಲಟ್, ಹಿಂದೆ ಎಸ್ಕಾರ್ಟ್, ಇದರಲ್ಲಿಯೇ ಇವರು ತೃಪ್ತಿಯಾಗಿದ್ದಾರೆ. ಇದೆಲ್ಲ ಏತಕ್ಕೆ ಬೇಕು ? ಇವರ ಒಳ್ಳೆಯತನಕ್ಕೆ ಪೈಲಟ್ ಬೇಕಾಗಿಲ್ಲ. ಎಸ್ಕಾರ್ಟ್ ಬೇಕಾಗಿಲ್ಲ. ನಮ್ಮ ದೇಶದಲ್ಲಿ ಇವರಿಗೆ ಯಾರು ಗುಂಡು ಹೊಡೆಯುತ್ತಾರೆ ? ಅಷ್ಟಕ್ಕೆ ಇವರು ತೃಪ್ತಿಯಾಗಿಬಿಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ನೀಡುವುದರಲ್ಲಿ ಬಹಳ ಜಾಣರು. ಅವರು ಏನು ಹೇಳಿದ್ದಾರೆಂದರೆ, the real defence is by offence. ಭೂತ ಬಂತೋ, ಪ್ರೇತ ಬಂತೋ, ಇವರಿಗೆ ಏನಾಗಿದೆ, ಇವರು ಏಕೆ ಹೀಗೆ ಮಾಡಿದರು ಎಂದು ಪೋಲೀಸರನ್ನು ಸಹಸ್ರ ಸಹಸ್ರ ಸಾರಿ ಖಂಡಿಸಿದರು ಹೀಗೆ ಇವರುಗಳಿಗೆ ತಮ್ಮ ಅಧಿಕಾರಿಗಳ ಮೇಲೆ ಕಂಟ್ರೋಲ್ ಇಲ್ಲದಿದ್ದರೆ ಭೂತವೂ ಬರುತ್ತದೆ, ಪ್ರೇತವೂ ಬರುತ್ತದೆ. ಇವರು ಏನು ಮಾಡಿದರೂ, ಎಲ್ಲೆಲ್ಲಿ ನೋಡಿದರೂ, ಯಾವ ಸಬ್ ಇನ್ಸ್‌ಪೆಕ್ಟರನ್ನು ಕೇಳಿದರೂ ಹೊಡೆಯುವುದು, ಬಡಿಯುವುದು. ಅದರಲ್ಲೂ ಚುನಾವಣೆ ಆದಮೇಲೆ ಹೊಡೆತ. ಹೊಡೆತ,

ಹೊಡೆತ, ಸ್ವಲ್ಪದ್ದಕ್ಕೆ, ಎಲ್ಲದಕ್ಕೂ ಹೊಡೆಯುವುದು. ಇದಕ್ಕೆ ಅವರನ್ನು ಸಂಬಳ ಕೊಟ್ಟು ಇಟ್ಟಿದ್ದೀರಾ ? ಟ್ಯಾಕ್ಸ್ ಪೇಯರ್ಸ್ ಹಣವನ್ನು ಇವರಿಗೆ ಕೊಡುತ್ತಿದ್ದೀರಿ. ಸಬ್ ಇನ್ಸ್‌ಪೆಕ್ಟರುಗಳು ಅಧಿಕಾರಿಗಳು ಒಳ್ಳೆಯವರು ಇದ್ದಾರೆ. ಆದರೆ ಆ ಪರ್ಸೆಂಟೇಜ್ ಎಷ್ಟು ಎಂಬುದನ್ನು ಕಂಡು ಹಿಡಿದು ಹೊಡೆಯುವವರ ಬಡಿಯುವವರ ಮೇಲೆ ಲಂಗು ಲಗಾಮು ಹಾಕದಿದ್ದರೆ ಮಾನವಂತರಿಗೆ ಅದರಲ್ಲೂ ಹೆಣ್ಣು ಮಕ್ಕಳಿಗೆ ಈ ರಾಜ್ಯದಲ್ಲಿ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ದೇಶವನ್ನು ಬಿಟ್ಟು ಓಡಿ ಹೋಗಬೇಕಾಗುತ್ತದೆ, ಇದಕ್ಕೆ ಯಾವ ರೀತಿ ಶಿಕ್ಷೆ ಆಗಬೇಕೆಂಬುದನ್ನು ನನ್ನ ಬಾಯಲ್ಲಿ ಹೇಳಿಸಬೇಡಿ. ಏಕೆಂದರೆ ನಾನು ಬಹಳ ಕಠಿಣವಾದ ಶಿಕ್ಷೆ ಹೇಳುವುದಕ್ಕೆ ಇಷ್ಟಪಡುತ್ತೇನೆ, ಎಲ್ಲಾ ಕಡೆಯೂ ಕದ್ದವರಿಗೆ ಕೈ ಮುರಿಯುತ್ತಾರಂತೆ. ಸುಳ್ಳು ತಟಪಟ ಹೇಳಿದವರಿಗೆ ನಾಲಿಗೆ ಒಡೆಯುತ್ತಾರಂತೆ. ಹಾಗೇ ಇವರುಗಳಿಗೆ ಏನಾದರೂ ಒಂದು ಒಡೆಯುವ ಏರ್ಪಾಡು ಆಗಬೇಕು. ಹಾಗೆ ಮಾಡಿದರೆ ಇವರು ಕೇಳುತ್ತಾರೆಯೋ ಹೊರತು ಇಲ್ಲದಿದ್ದರೆ ಬಗ್ಗುವುದಿಲ್ಲ ಅಧ್ಯಕ್ಷರೆ. ಅಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿ ಇದು ಬಂದಿದ್ದರೆ ನನ್ನ ಹತ್ತಿರ ಬೇಕಾದಷ್ಟು ಮೆಟೀರಿಯಲ್ಸ್ ಇತ್ತು ' ಪೋಲೀಸರ ಗುಂಡಿಗೆ ಆರು ಮಂದಿ ಆಹುತಿ, ನ್ಯಾಯಾಂಗ ತನಿಖೆಗೆ ಒತ್ತಾಯ ' " Seven killed as police fire on Pavagada mob. " ಇದು ಪತ್ರಿಕೆಯಲ್ಲಿ ಬಂದಿದೆ. ಎಲ್ಲದಕ್ಕಿಂತ ಜಾಸ್ತಿ ಏನಾಗಿದೆಯೆಂದರೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬರೆದಿದ್ದಾರೆ. ಪೋಲೀಸ್ ಆಫೀಸರ್‌ಗಳನ್ನು ಮಾನ್ಯ ಮುಖ್ಯಮಂತ್ರಿಗಳು ದೂಷಣೆ ಮಾಡಿ ಸರಿಯಾಗಿರಬೇಕು ಎಂದು ಹೇಳಿದ್ದಕ್ಕೆ ದೊಡ್ಡ ಆಫೀಸರ್ ಹೇಳಿದ್ದಾರೆ, ಅವರಿಗೆ ಬೇಕಾದಾಗ ನಮ್ಮನ್ನು ಉಪಯೋಗಿಸಿಕೊಳ್ಳುತ್ತಾರೆ, ಬೇಡದೇ ಇದ್ದಾಗ ನಮ್ಮನ್ನು ಖಂಡಿಸುತ್ತಾರೆ, ಇದು ಯಾವ ನ್ಯಾಯ ? ಎಂದು ಇದು ನಿಜವಾಗಿಯೂ ಅಡ್ಮಿನಿಸ್ಟ್ರೇಷನ್‌ನಲ್ಲಿ ಬಿಗಿ ತೋರಿಸುವುದಿಲ್ಲ. ಮಾನ್ಯ ರಾಚಯ್ಯನವರು ಏನೋ ಒಳ್ಳೆಯವರು. ಅವರು ಯಾವಾಗಲೂ ಹೇಳುತ್ತಾರೆ ನಾನು ರಾಜೀನಾಮೆ ಕೊಟ್ಟರೆ ಸಾಲ್ವ್ ಆಗುತ್ತದೆಯೇ ಎಂದು, ಅವರನ್ನು ರಾಜೀನಾಮೆ ಕೊಡಿ ಎಂದು ಯಾರು ಕೇಳುತ್ತಾರೆ ? ಭದ್ರವಾಗಿ ಅಧಿಕಾರ ನಡೆಸಿ ಎಂದು ಹೇಳುತ್ತೇವೆಯೋ ಹೊರತು ರಾಜೀನಾಮೆ ಕೊಟ್ಟು ಓಡಿಹೋಗಿ ಎಂದು ಹೇಳುವುದಿಲ್ಲ. ಅದು ಸಾಧ್ಯವಾಗದೇ ಹೋದರೆ ಏನು ಮಾಡುವುದಕ್ಕಾಗುತ್ತದೆ ? ಮೊದಲು ನಾನು ಹೇಳಿದ ಹಾಗೆ ಇವರಿಗೆ ಎದುರೆ ಸವಾರಿ ಮಾಡುವುದಕ್ಕೆ ಬರುತ್ತಿಲ್ಲ, ಅದು ಇವರನ್ನು ಹತ್ತಿ ಕುಣಿಯುತ್ತಿದೆ. ಏನು ಮಾಡಬೇಕು ? ಆ ಬಗ್ಗೆ ಅವರೇ ಬಾಯಲ್ಲಿ ಹೇಳಲಿ. ಇಂಥ ಚಿತ್ರಹಿಂಸೆ ಹೆಣ್ಣುಮಕ್ಕಳಿಗೆ ಆಗಬಾರದು. ಬಾಯಿ ತೆಗೆದರೆ ಹೆಣ್ಣು ಮಕ್ಕಳಿಗೆ ಪ್ರೊಟೆಕ್ಷನ್ ಕೊಡುತ್ತೇವೆ, ಹೆಣ್ಣುಮಕ್ಕಳಿಗೆ ಅಧಿಕಾರ ಕೊಡುತ್ತೇವೆ ಹೆಣ್ಣು ಮಕ್ಕಳಿಗೆ ಶಿಖರದ ಮೇಲೆ ಕೂಡಿಸುತ್ತೇವೆ ಎಂದು ಹೇಳುವ ಸರ್ಕಾರ ಇವತ್ತು ಪೇಪರ್ ತೆಗೆದರೆ ಅಲ್ಲಿ ಸರ ಕಿತ್ತುಕೊಂಡು ಹೋದರಂತೆ ಮನೆಯಲ್ಲಿ ಖೂನಿ ಆಯಿತಂತೆ ಎಂದು ಇದ್ದರೆ ಇವರು ಇನ್ನೆಂಥ ಪ್ರೊಟೆಕ್ಷನ್ ಕೊಡುವುದು ? ಇನ್ನೆಂಥ ಅಧಿಕಾರ ಮಾಡುವುದು ? ಮಾನ್ಯ ಗೃಹಮಂತ್ರಿಗಳ ಅಧಿಕಾರದಲ್ಲಿ ಸ್ವಲ್ಪವೂ ಸಮಾಧಾನ ಇಲ್ಲ ಎಂದು ಹೇಳಿ ಇನ್ನೂ ಮಾತನಾಡುವವರು ಇರುವುದರಿಂದ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ,

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಅಧ್ಯಕ್ಷರೇ, ಪಾವಗಡದಲ್ಲಿ ನಡೆದ ಪೋಲೀಸ್ ದೌರ್ಜನ್ಯ, ದಬ್ಬಾಳಿಕೆ ಹತ್ಯಾಕಾಂಡ ನಡೆದಿರುವುದು ಕರ್ನಾಟಕದಲ್ಲಿ ಇದು ಮೊದಲನೆಯದು ಎಂದು ಕಾಣುತ್ತದೆ. ಪ್ರತಿಭಟನೆ ಮಾಡುವುದಕ್ಕೆ ಹೋಗಿ ಏಳು ಜನ ಸತ್ತರು. ಇವರು ಏನು ಮಾಡುತ್ತಿದ್ದಾರೆ ಎಂದು ನೋಡುವುದಕ್ಕೆ ಅವರ ಆತ್ಮ ಈ ಸದನಕ್ಕೆ ಬಂದಿದೆಯೋ ಏನೋ. ಒಂದಂತೂ ಗ್ಯಾರಂಟಿ.

ಒಬ್ಬ ಜನತಾ ಸದಸ್ಯರು.— ನಿಮಗೆ ಆತ್ಮ ಇದೆಯೋ ?

ಶ್ರೀ ಆರ್. ವೆಂಕಟರಾಮಯ್ಯ.— ನಿಮಗೆ ಆತ್ಮ ಯಾವುದೂ ಇಲ್ಲ. ನಿಮಗೆ ಕಾಡಿಯುವ ಆತ್ಮ ಒಂದೇ ಇರುವುದು. ಅಷ್ಟೇ. ಅದು ರಾತ್ರಿ ಹೊತ್ತು ಆಕ್ಟೀವಾಗಿರುತ್ತದೆ. ಹಗಲು ಹೊತ್ತು ಆಕ್ಟೀವಾಗಿರುವುದಿಲ್ಲ, ಏಳು ಜನ ಪದ್ಮಮ್ಮನಿಗೆ ಏನೋ ಒಂದು ದೌರ್ಜನ್ಯ ನಡೆಯಿತು. ನಾರಾಯಣಸ್ವಾಮಿಗೆ ದೌರ್ಜನ್ಯ ನಡೆಯಿತು ಎಂದು ಪ್ರತಿಭಟನೆ ಮಾಡುವುದಕ್ಕೆ ಹೋಗಿ ಸತ್ತಿದ್ದಾರೆ, ನಾನಂದುಕೊಂಡಿರುವುದು ಡೈರೆಕ್ಟರ್ ಜನರಲ್ ಮತ್ತು ರಾಚಯ್ಯನವರಿಗೆ ದೆವ್ವಗಳಾಗಿ ಅವರು ಬಂದು ಹಿಡಿಯುತ್ತಾರೆ. ಇವರಿಬ್ಬರನ್ನು ಮಾತ್ರ ಬಿಡುವುದಿಲ್ಲ. ರಾತ್ರಿ ಹೊತ್ತು ಕುಳಿತಿದ್ದರೆ

ಇವರ ಮುಂದೆ ಅದು ಬರುತ್ತದೆ. ನಿಮ್ಮ ಅಧಿಕಾರ ಯಾವರೀತಿ ಇದೆ, ಎಷ್ಟು ಚೆನ್ನಾಗಿ ನಡೆಯುತ್ತಿದೆ ಎಂದು ಡೆಫನೆಟ್ಟಾಗಿ ಬಂದು ಹೇಳುತ್ತದೆ. ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಚೆನ್ನಾಗಿ ಹೇಳಿದ್ದಾರೆ. " The events have confirmend that there is something rotten in the police administration." ಎಂದು ಈ ಅಡ್ಮಿನಿಸ್ಟ್ರೇಷನ್ ಕೊಳೆತು ನಾಶವಾಗಿ ಹೋಗಿದೆ, ನಿಜವಾಗಿ ಅಡ್ಮಿನಿಸ್ಟ್ರೇಷನ್ ಇದೆಯೋ ಇಲ್ಲವೋ ಎಂದು ಯೋಚನೆ ಮಾಡಬೇಕಾಗಿದೆ. ಒಂದೇ ಒಂದು ಅಪ್ರಿಷಿಯೇಟ್ ಮಾಡುತ್ತೇನೆ. ಚೀಫ್ ಮಿನಿಸ್ಟರ್ ಮತ್ತು ಹೋಂ ಮಿನಿಸ್ಟರ್ .. ಇವರೇನು ದೆವ್ವಗಳಾ ರಾಕ್ಷಸರಾ ? ಡಕಾಯಿತರನ್ನು ಹಿಡಿಯಿರಿ ಎಂದು ಹೇಳಿದರೆ ಪೋಲೀಸ್ ಸ್ಟೇಷನ್ ಮುಂದೆ ಬಂದು ಪ್ರತಿಭಟನೆ ಮಾಡುವವರನ್ನು ಹೊಡೆದಿದ್ದಾರೆ ಎಲ್ಲಿ ಹೊಡೆಯಬೇಕು ಎಂಬ ಜ್ಞಾನ ಇವರಿಗೆ ಇಲ್ಲವೆ ? ಎಂದು ಪೋಲೀಸ್ ಆಫೀಸರ್ಸ್ ಮೀಟಿಂಗ್‌ನಲ್ಲಿ ಹೇಳಿದ್ದಾರೆ. ನಿಜವಾಗಿ ಅದನ್ನು ಅಪ್ರಿಷಿಯೇಟ್ ಮಾಡುತ್ತೇನೆ. ಕಾಲಿಗೆ ಹೊಡೆಯುವುದು ಬಿಟ್ಟು ಎದೆಗೆ, ತಲೆಗೆ ಹೊಡೆದಿದ್ದಾರೆ. ತಲೆಗೆ ಏಟು ಬಿದ್ದು ಪಾರ್ಟ್ಸ್ ಎಲ್ಲಾ ಈಚೆಗೆ ಬಂದಿದ್ದು ಕಾಗೆಗಳು ಅದನ್ನು ತಿನ್ನುತ್ತಿವೆ ಎಂದು ಪೇಪರ್‌ನಲ್ಲಿ ಓದಿದ್ದೇವೆ, ನೋಡಿದ್ದೇವೆ. ನಾವು ಯಾವ ಗ್ರೇಡಿಗೆ ಇಳಿದಿದ್ದೇವೆ ಎಂದರೆ.. ... ಪದ್ಮಮ್ಮ ನಮ್ಮ ಡಿಸ್ಟ್ರಿಕ್ಟ್‌ನವರು. ದುರಾದೃಷ್ಟವಶಾತ್ ಅವರಿಗೆ ಎ. ಎನ್. ಎಂ. ಕೆಲಸ ಸಿಕ್ಕಿತು.

ಶ್ರೀ ಸಿ. ಬೈರೇಗೌಡ.— ನೀವು ಕೊಡಿಸಿದ್ದೀರಾ ?

ಶ್ರೀ ಆರ್. ವೆಂಕಟರಾಮಯ್ಯ.— ನಾನು ಕೆಲಸ ಕೊಡಿಸಿರಲಿಲ್ಲ. ಶ್ರೀಮಾನ್ ಬೈರೇಗೌಡರು ಕೊಡಿಸಿರಬಹುದು. ನಾವು ಈ ಸಭೆಯಲ್ಲಿ ಮಾಡುವಂತಹ ಭಾಷಣಕ್ಕೆ ಮರ್ಯಾದೆ ಇರಬೇಕು. ಏನಾದರೂ ಕೆಲಸ ಸಾಧಿಸಬೇಕು. ಪಾವಗಡದ ಘಟನೆಯ ಬಗ್ಗೆ ಗೃಹ ಮಂತ್ರಿಗಳಾದ ಶ್ರೀಮಾನ್ ರಾಚಯ್ಯನವರು ಹಾಗೂ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಹೆಗಡೆಯವರು ನ್ಯಾಯಾಂಗ ವಿಚಾರಣೆಯನ್ನು ಮಾಡುವುದಾಗಿ ಹೇಳಿದ್ದಾರೆ. ಆದರೆ ಅದರಿಂದ ಏನು ಪ್ರಯೋಜನ ? ಯಾವುದೇ ಒಂದು ಕೆಲಸವನ್ನು ಮಾಡಬೇಕಾದರೂ ಹೇಳುವುದಕ್ಕೂ—ಮಾಡುವುದಕ್ಕೂ ಸ್ವಲ್ಪ ಸಂಬಂಧ ಇರಬೇಕು. ಆ ಹೆಣ್ಣುಮಗಳ ಬಗ್ಗೆ ಅಮಾನುಷವಾಗಿ ನಡೆದುಕೊಂಡಿದಂತಹ ಒಬ್ಬ ಸಬ್ ಇನ್ಸ್‌ಪೆಕ್ಟರ್ ಏನು ಇದ್ದಾರೆ, ಅವನು ಮನುಷ್ಯನೋ ? ಅಥವಾ ರಾಕ್ಷಸನೋ ? ನನಗೆ ಗೊತ್ತಿಲ್ಲ. ಆಕೆಯ ಪ್ರೈವೇಟ್ ಪಾರ್ಟ್ಸ್‌ನಲ್ಲಿ ಲಾಟಿ ಇಟ್ಟು ತಿರುಗಿಸಿದ ಎಂದು ಹೇಳಿದರೆ ಏನು ಹೇಳಬೇಕು ? ಅವನ ಬಗ್ಗೆ ಏನನ್ನು ಅರ್ಥ ಮಾಡಿಕೊಳ್ಳಬೇಕು ? ಆಕೆಯ ಪ್ರೈವೇಟ್ ಪಾರ್ಟ್ಸ್‌ನಲ್ಲಿ ಲಾಟಿಯಿಂದ ಹೊಡೆದ ಅಂದರೆ ಅವನ ಬಗ್ಗೆ ಯಾವ ರೀತಿ ಯೋಚನೆ ಮಾಡಬೇಕು ?

(ಗೊಂದಲ)

ಆ ಪೋಲೀಸ್‌ನವರು ೫ ಜನ ಆಕೆಯ ಮೇಲೆ ಅತ್ಯಾಚಾರ ಮಾಡಿದ್ದಾರೆ. ಅವರು ಮನುಷ್ಯರೋ ? ರಾಕ್ಷಸರೋ ? ಬೆಳಗ್ಗೆ ಶ್ರೀಮಾನ್ ರಾಚಯ್ಯನವರು ಅಲ್ಲಿಗೆ ಹೋದರು. ಅವರು ಅಲ್ಲಿಗೆ ಹೋಗಿದ್ದಾಗ ೫೦೦ ಜನ ಸೇರಿದ್ದರು, ಆ ಜನರ ಎದುರಿನಲ್ಲಿ ಇವರನ್ನು ಸಸ್‌ಪೆಂಡ್ ಮಾಡುತ್ತೇನೆ ಎಂದು ಹೇಳಿದರು. ಸಸ್‌ಪೆಂಡ್ ಮಾಡುವುದರಿಂದ ಆಗುವಂತಹ ಪ್ರಯೋಜನ ಏನು ಎಂಬುದು ನಮಗೆ ಗೊತ್ತು. ಸಸ್‌ಪೆಂಡ್ ಮಾಡಿದ ಮೇಲೆ ಅದರ ಬಗ್ಗೆ ವಿಚಾರಣೆಯಾಗಿ ಅದು ಹಾಗೆಯೇ ಡ್ರಾಪಾಗುತ್ತದೆ. ವಿಚಾರಣೆಯಲ್ಲಿ ಪೋಲೀಸ್‌ನವರು ಬಂದು ಅವರು ನಮ್ಮಗಳ ಮೇಲೆ ಕಲ್ಲು ಹೊಡೆದರು, ಸೈಕಲ್ ಮೋಟರ್‌ಗೆ ಬೆಂಕಿ ಹಚ್ಚಿದರು. ಪೋಲೀಸ್‌ನವರೊಬ್ಬರನ್ನು ಎತ್ತಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಿದರು. ಎಂದು ಹೇಳುತ್ತಾರೆ, ಅಲ್ಲಿಗೆ ಅದು ಮುಕ್ತಾಯವಾಗುತ್ತದೆ ಅಲ್ಲಿಯವರೆಗೆ ಯಾರು ಇರುತ್ತಾರೆ ? ಯಾರು ಇರುವುದಿಲ್ಲವೋ ನಮಗೆ ಗೊತ್ತಿಲ್ಲ. ಬೆಳಗಾದ ಮೇಲೂ ಆಕೆಯ ಮೇಲೆ ೫ ಜನ ರೇಪ್ ಮಾಡಿದರು. ಬೆಳಗ್ಗೆ ಧರ್ಮನಾಯಕ್–ಅವನನ್ನು ಅಧರ್ಮನಾಯಕ್ ಎಂದು ಕರೆಯಬೇಕು. ಅವನು ಸರ್ಕಲ್ ಇನ್ಸ್‌ಪೆಕ್ಟರ್. ಕುಡಿದು ಬಂದು ತಿರುಗಿ ಶುರು ಮಾಡಿದ. ಬೆಳಗ್ಗೆ ಡಿ. ವೈ. ಎಸ್. ಪಿ. ಲಕ್ಷ್ಮಣ್ ಇವರ ಸಮ್ಮುಖದಲ್ಲೇ ಒಂದು ಗೋಲಿಬಾರ್ ಆಯಿತು. ೭ ಜನ ಸತ್ತಿದ್ದಾರೆ ಎಂದು ಹೇಳಿದರೆ ಇನ್ನೇನು ಹೇಳಬೇಕು. ಜನತಾ ಪಾರ್ಟಿಯ ಚುನಾವಣಾ ಪ್ರಣಾಳಿಕೆಯಲ್ಲೇ ಯಾವ ಕಾರಣದಿಂದಲೂ ಪೋಲೀಸ್‌ನವರು ಫೈರಿಂಗ್ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹತ್ತಾರು ಸಾರಿ ಹೇಳಿದ್ದಾರೆ. ನಮ್ಮ ಹತ್ತಿರ

ಟಿಯರ್‌ಗ್ಯಾಸ್‌ಗೆ ಸೆಲ್ ಇರಲಿಲ್ಲ. ಲಾಠಿ ಚಾರ್ಜ್ ಮಾಡುವುದಕ್ಕೆ ಜನರು ಕಡಿಮೆ ಇದ್ದುದರಿಂದ ಗುಂಡು ಹಾರಿಸಿದರು ಎಂದು ಹೇಳುವುದಾದರೆ, ನಿಜವಾಗಿಯೂ ಇದು ಮನುಷ್ಯರು ಮಾಡುವಂತಹ ಕೆಲಸವೇ ? ಅವರಿಗೆ ಏನಾದರೂ ಮನುಷ್ಯತ್ವ ಇದೆಯೋ ? ಅಲ್ಲಿದ್ದಂತಹ ಧರ್ಮನಾಯಕ್ ಎಂಬುವರನ್ನು ಸಸ್ಪೆಂಡ್ ಮಾಡಿದ್ದೀರಿ. ನಂತರ ಅವರ ಮನೆಯ ಮೇಲೆ ದಾಳಿ ಮಾಡಿ ವರಮಾ ಕ್ಕಿಂತ ಹೆಚ್ಚು ಸಂಪಾದನೆ ಮಾಡಿದ್ದ ಎಂಬುದಾಗಿ ಅವರ ಮೇಲೆ ಕೇಸನ್ನು ರಿಜಿಸ್ಟರ್ ಮಾಡಿದ್ದಾರೆ. ನಂತರ ಅಲ್ಲಿದ್ದಂತಹ ಡಿ. ವೈ. ಎಸ್. ಪಿ. ಯನ್ನು ಅಲ್ಲಿರುವುದು ಬೇಡ ನಮ್ಮ ಆಫೀಸಿಗೆ ಬಂದು ಬಿಡು ಎಂದು ಹೇಳಿ ಅವನನ್ನು ಇಲ್ಲಿಗೆ ಪೋಸ್ಟ್ ಮಾಡಿದ್ದಾರೆ. ಆತನಿಗೆ ಯಾರು ಯಾರು ಸಪೋರ್ಟರ್ಸ್ ಇರಬಹುದು. ಇವರ ಪರವಾಗಿ ವೀರಣ್ಣನವರು ಇದ್ದಾರೆ, ಶ್ರೀಮಾನ್ ವೈ. ಕೆ. ರಾಮಯ್ಯನವರ ಹೆಸರೂ ಬಂದಿದೆ. ಇವರು ಮೊದಲು ಶ್ರೀ ವೈ. ಕೆ. ರಾಮಯ್ಯನವರ ಶಿಷ್ಯರಾಗಿದ್ದರು, ಒಳ್ಳೆಯ ಕೆಲಸ ಮಾಡಿದ್ದಾರೆ ಎಂಬುದಾಗಿ ತಿಳಿದು ಇವರನ್ನು ಶ್ರೀ ವೀರಣ್ಣನವರು ಅಲ್ಲಿಗೆ ತೆಗೆದುಕೊಂಡು ಹೋದರು ಎಂದು ಹೇಳಿದ್ದಾರೆ. ಇದು ನಿಜವೋ ಸುಳ್ಳೋ ನನಗೆ ಗೊತ್ತಿಲ್ಲ. ಅಲ್ಲಿ ಈತನಿಂದ ಈ ಒಂದು ಘಟನೆಯಾದ ಮೇಲೆ ನೀನು ಬಹಳ ದೊಡ್ಡ ಮನುಷ್ಯ ಬೆಂಗಳೂರಿಗೆ ಬಂದು ಬಿಡು ಎಂದು ಹೇಳಿ ಅವನನ್ನು ಬೆಂಗಳೂರಿಗೆ ಪೋಸ್ಟ್ ಮಾಡಿದ್ದಾರೆ. ಇನ್ನೇನು ಅವನಿಗೆ ಮೆಡಲ್ ಕೊಡಬೇಕಾಗಿದೆ.

ಶ್ರೀ ವೈ. ಕೆ. ರಾಮಯ್ಯ.— ನಾನೂ ಪಾವಗಡಕ್ಕೆ ಹೋಗಿಬಂದಿದ್ದೇನೆ. ತಮಗೂ ಗೊತ್ತಿರುವಂತೆ ಇಡೀ ಜಿಲ್ಲೆಯಾದ್ಯಂತ ನಾನು ಅಧಿಕಾರಿಶಾಹಿ ವಿರುದ್ಧ ಎಂಬುದು ಜನಜನಿತವಾದ ಮಾತು. ಸನ್ಮಾನ್ಯ ಮುಖ್ಯ ಮಂತ್ರಿಗಳೂ ಇಲ್ಲಿಯೇ ಇದ್ದಾರೆ. ಸನ್ಮಾನ್ಯ ಒಳಾಡಳಿತ ಮಂತ್ರಿಗಳೂ ಇಲ್ಲಿಯೇ ಇದ್ದಾರೆ. ನಾನು ಯಾವುದೇ ಅಧಿಕಾರಿಯನ್ನು ಯಾವುದೇ ಸ್ಥಳಕ್ಕೆ ಹಾಕಿ ಎಂದು ಹೇಳುವ ಕೆಲಸವನ್ನು ಇವತ್ತಿನವರೆಗೂ ಮಾಡಿಲ್ಲ. ದಯಮಾಡಿ ಅವರಿಗೆ ಆ ಮನೋಭಾವನೆ ಇದ್ದರೆ ದಯಮಾಡಿ ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಅವನು ನನ್ನ ಶಿಷ್ಯನೂ ಅಲ್ಲ. ನನ್ನ ಜಿಲ್ಲೆಯ ವಿರೋಧಪಕ್ಷದ ನನ್ನ ಸ್ನೇಹಿತರಿಗೆ ಎಲ್ಲರಿಗೂ ನನ್ನ ಮನೋಭಾವನೆ ಅರ್ಥವಾಗಿದೆ. ಅವರು ಯಾರಾದರೂ ಇಂತಹದು ಇದ್ದರೆ ಹೇಳಲಿ. ಇಂತಹ ಸುದ್ದಿ ಪತ್ರಿಕೆಯಲ್ಲಿ ಬಂದಿದೆ ಎಂಬುದಾಗಿ ಮಾನ್ಯ ವೆಂಕಟರಾಮಯ್ಯನವರು ಹೇಳಿದರು. ಪತ್ರಿಕೆಯವರಿಗೆ ತಿಳುವಳಿಕೆ ಇಲ್ಲದೆ ಆ ರೀತಿ ಬರೆದಿರಬಹುದು. ದಯಮಾಡಿ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇಲ್ಲ ಅವರು ಸಬ್‌ಸ್ಟ್ರಾನ್ಶಿಯೇಟ್ ಮಾಡುವುದಾದರೆ ನಾನು ಅದಕ್ಕೆ ಸಿದ್ಧವಾಗುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಮೊದಲು ಅವರು ನಿಮ್ಮ ತಾಲ್ಲೂಕಿನಲ್ಲಿದ್ದು ಒಳ್ಳೆಯ ಕೆಲಸ ಮಾಡಿದ್ದು ಬಹಳ ಎಫಿಸಿಯಂಟ್ ಆಫೀಸರ್ ಎಂದು ತಿಳಿದುಕೊಂಡ ಮೇಲೆ ನೀವು ನಮ್ಮ ಸಬ್ ಡಿವಿಜನ್‌ಗೆ ಬಂದುಬಿಡು ಎಂಬುದಾಗಿ ಶ್ರೀಮಾನ್ ವೀರಣ್ಣನವರು ತೆಗೆದುಕೊಂಡರು.

ಶ್ರೀ ವೀರಣ್ಣನವರು ಅವರ ಬಗ್ಗೆ ಹೇಳಿದ್ದರ ಬಗ್ಗೆ ಯೋಚನೆ ಇಲ್ಲ. ತಾವು ತಪ್ಪು ತಿಳಿದುಕೊಳ್ಳಬಾರದು.

ಶ್ರೀ ವೈ. ಕೆ. ರಾಮಯ್ಯ.—ನಾನು ಅವರನ್ನ ಹಾಕಿಸಿಕೊಂಡಿಲ್ಲ. ನನಗೂ ಅವರಿಗೂ ಸಂಬಂಧ ಇಲ್ಲ. ನನಗೆ ಆ ವಿಷಯ ಗೊತ್ತಿಲ್ಲ. ನಾನು ಮಾತ್ರ ಯಾವ ಅಧಿಕಾರಿಗಳನ್ನು ಹಾಕಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಇಷ್ಟೆಲ್ಲಾ ನಡೆದಿದ್ದರೂ ಡಿ.ವೈ ಎಸ್.ಪಿ. ಬಗ್ಗೆ......

ಶ್ರೀ ವೈ. ಕೆ. ರಾಮಯ್ಯ.—ನಾನು ಹೇಳಬೇಕಾಗುತ್ತದೆ. Either you have to confirm or refuse it.

ಶ್ರೀ ಆರ್. ವೆಂಕಟರಾಮಯ್ಯ.—ಅವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಅವರು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಅದನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೇನೆ. ಅವರ ಶಿಷ್ಯ ಎಂದು ಒಪ್ಪಿಕೊಂಡಿದ್ದಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ.—ಮಾನ್ಯ ವೆಂಕಟರಾಮಯ್ಯನವರ ಮಾತನ್ನು ಮಾನ್ಯ ವೆ. ಕೆ. ರಾಮಯ್ಯನವರು ಅಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳಬಾರದು.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ತಾವು ನೇರವಾಗಿ ಚೆಂದವಾಗಿ ಮಾತನಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ನಿಜವಾಗಿಯೂ ಅವರು ನ್ಯಾಯವಾಗಿ ನಡೆದುಕೊಳ್ಳುತ್ತಾರೆ ಜನರಿಗೆ ಮಾತು ಕೊಟ್ಟಹಾಗೆ ನಡೆದುಕೊಳ್ಳುತ್ತೇವೆಂದು ಹೇಳುವ ರಾಚಯ್ಯನವರು ಡಿ.ವೈ.ಎಸ್.ಪಿ. ಯವರನ್ನು ಸಸ್ಪೆಂಡ್ ಮಾಡಬೇಕಾಗಿತ್ತು. ಯಾವುದೋ ರಾಜಕಾರಣಿ ಬಂದು, ಇವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಡಿ ಎಂದು ಹೇಳಿದ. ಡಿ. ವೈ.ಎಸ್.ಪಿ. ಸಮ್ಮುಖದಲ್ಲೇ ಅಲ್ಲಿ ಗೋಲೀಬಾರ್ ನಡೆದಿದೆ ಅಲ್ಲಿ ೨೫ ಜನರಿಗೆ ಏಟು ಬಿದ್ದಿದೆ. ಹಾಗೂ ೭ ಜನ ಸತ್ತಿದ್ದಾರೆ. ಆ ಒಬ್ಬ ಡಿ. ವೈ ಎಸ್.ಪಿ.ಯನ್ನು ಅಲ್ಲಿಂದ ಇಲ್ಲಿಗೆ ಪ್ರಮೋಷನ್ ಕೊಟ್ಟು ಕಳುಹಿಸಿದ್ದಾರೆ. ಇಲ್ಲಿ ಇದ್ದರೆ, ಏನೇನು ಬರುತ್ತದೆಯೋ ಅದಕ್ಕೆ ಏನಾದರೂ ಮಾಡಿಕೊಳ್ಳಬಹುದೆಂದು ಹೇಳಿ ಇಲ್ಲಿಗೆ ಕಳುಹಿಸಿದ್ದಾರೆ. ಇವತ್ತು ಅವರನ್ನು ಸಸ್ಪೆಂಡ್ ಮಾಡಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಈ ಆಫೀಸರ್ ಮೇಲೆ ಮರ್ಡರ್ ಕೇಸ್ ಹಾಕಿ ಕಾನೂನು ರೀತ್ಯ ಕ್ರಮ ತೆಗೆದುಕೊಂಡಿದ್ದರೆ ನಾವು ಒಪ್ಪಿಕೊಳ್ಳುತ್ತಿದ್ದೆವು. ಈಗ ಜ್ಯುಡಿಷಿಯಲ್ ಎನ್‌ಕ್ವಯರಿ ಶುರುವಾಗಿದೆ. ಈ ಜ್ಯುಡಿಷಿಯಲ್ ಎನ್‌ಕ್ವಯರಿಗಳ ಮೇಲೆ ನನಗೆ ನಂಬಿಕೆ ಹೋಗಿದೆ, ಇಂತಹದ್ದು ನೂರಾರು ಪ್ರಕರಣಗಳು ಆಗಿವೆ. ನಾವು ಇಂತಹ ವಿಷಯಗಳನ್ನು ಅಸೆಂಬ್ಲಿಯಲ್ಲಿ ರೈಸ್ ಮಾಡುತ್ತೇವೆ. ಆ ಬಗ್ಗೆ ಎನ್‌ಕ್ವಯರಿ ಆಗಿ ರಿಪೋರ್ಟ್ ಬರುತ್ತದೆ. ಹಾಗೆ ಬಂದ ವರದಿಗಳ ಮೇಲೆ ಕ್ರಮ ತೆಗೆದುಕೊಂಡದ್ದು ನನಗೆ ಗೊತ್ತೇ ಇಲ್ಲ. ಮೊನ್ನೆ ಮಾಲೂರಿನಲ್ಲಿ ಫೈರಿಂಗ್ ಆಗಿ ಏಳೆಂಟು ಜನ ಸತ್ತರು. ಆ ಬಗ್ಗೆ ಎನ್‌ಕ್ವಯರಿ ರಿಪೋರ್ಟ್ ಬಂತು. ಎಸ್.ಪಿ. ಯವರನ್ನು ಇಂಡಿಕ್ಟ್ ಮಾಡಿದರು. ೫ ವರ್ಷ ಆದ ಮೇಲೆ ಒಂದು ಷೋಕಾಸ್ ನೋಟೀಸ್ ಕೊಡುತ್ತಾರೆ. ಅದಕ್ಕೆ ಅವರು ಏನೋ ಒಂದು ರಿಪ್ಲೈ ಕೊಡುತ್ತಾರೆ. ನಾನು ಅಲ್ಲ, ಮತ್ತೊಬ್ಬ ಇದ್ದ ಎಂತಲೋ ಅಥವಾ ಏನೋ ರಿಪ್ಲೈ ಕೊಡುತ್ತಾರೆ. ಅದನ್ನು ಇವರು ಒಪ್ಪಿಕೊಳ್ಳುತ್ತಾರೆ ಇಲ್ಲದಿದ್ದಗೆ ಬಿಟ್ಟುಬಿಡುತ್ತಾರೆ, ಕೊನೆಗೆ ಅದು ಕೋಲ್ಡ್ ಸ್ಟೋರೇಜಿಗೆ ಹೋಗಿಬಿಡುತ್ತದೆ. ಪಾವಗಡದಲ್ಲಿ ಮೊದಲು ತೋಳಗಳು ತೋಟದಲ್ಲಿ ಇದ್ದವು. ಈಗ ಅವು ನಗರಕ್ಕೆ ಬಂದು ಬಿಟ್ಟಿವೆ. ನನಗೆ ಅಲ್ಲಿನ ರೆಸ್ಪಾನ್ಸಿಬಲ್ ಪರ್ಸನ್ ಒಬ್ಬರು ಹೇಳಿದರು. ಅಲ್ಲಿ ಸತ್ತದ್ದು ೧೧ ಜನ ಮಿಕ್ಕಳಿ ಜನರನ್ನು ಹೆಸರಿಲ್ಲದೇ ಎಲ್ಲೆಲ್ಲೋ ಹೊತ್ತುಕೊಂಡು ಹೋಗಿ ಬೀಸಾಡಿದ್ದಾರೆ ಅಥವಾ ಸುಟ್ಟುಹಾಕಿದ್ದಾರೆ ಎಂದು ಹೇಳಿದರು. ಅಲ್ಲಿ ಗಾಯಗೊಂಡದ್ದು ಕೇವಲ ೨೫ ಜನ ಅಲ್ಲ ಸುಮಾರು ೪೦–೫೦ ಗಾಯಗೊಂಡಿದ್ದು ಅವರಲ್ಲಿ ೨೫ ಜನರಿಗೆ ಸೀರಿಯಸ್ಸಾಗಿ ಗಾಯಗಳಾಗಿದ್ದು ೬–೭ ಜನರ ಸ್ಥಿತಿ ಚಿಂತಾಜನಕವಾಗಿದೆಯೆಂದು ಹೇಳಿದರು. ಎಷ್ಟೋ ಜನ ಗಾಯಗೊಂಡವರು ಕೇಸ್ ಹಾಕುತ್ತಾರೆಂದು ಹೇಳಿ ಎಲ್ಲೆಲ್ಲೋ ಓಡಿಹೋಗಿದ್ದಾರೆಂದು ಹೇಳಿದರು. ಇಂತಹ ಪ್ರಕರಣಗಳ ಬಗ್ಗೆ ನಿಜವಾಗಿಯೂ ತಲೆತಗ್ಗಿಸಬೇಕು. ಇವರು ಸಮಾಜಕ್ಕೆ ಏನು ಉತ್ತರ ಕೊಡಬೇಕೆಂದು ಗೊತ್ತಾಗುತ್ತಾ ಇಲ್ಲ. ಇಂತಹದ್ದಕ್ಕೆ ಕಾರಣರು ಯಾರು ಎಂದು ಯೋಚನೆ ಮಾಡಬೇಕು.

ಅಧ್ಯಕ್ಷರು.—ತಮ್ಮ ಭಾಷಣಕ್ಕೆ ೧೩ ನಿಮಿಷಗಳಾಯಿತು.

ಶ್ರೀ ಆರ್. ವೆಂಕಟರಾಮಯ್ಯ.—ಪದ್ಮಮ್ಮನಿಗೆ ದುರದೃಷ್ಟವಶಾತ್ ಬಸ್ ತಪ್ಪಿತು. ರಾತ್ರಿ ೧೦–೩೦ ಆಗಿದ್ದರಿಂದ ಆಕೆ ಸ್ನೇಹಿತರ ಮನೆಗೆ ಮಲಗಿಕೊಳ್ಳಲು ಹೋಗುತ್ತಿರುವಾಗ ಇಬ್ಬರು ಪೋಲೀಸರು ಆಕೆಗೆ ಹೊಡೆದರು. ಆಕೆ ಹೊಡೆತ ತಿಂದ ಮೇಲೆ ಗಂಡನನ್ನು ಕರೆದುಕೊಂಡು ಬಂದದ್ದು ತಪ್ಪೆ ? ಆಕೆ ಯಾರದೋ ಮನೆಗೆ ಹೋಗುತ್ತಿರುವಾಗ, ಯಾವುದೇ ಕೆಟ್ಟ ಹವ್ಯಾಸಗಳು ಇಲ್ಲದಿದ್ದರೂ ಆಕೆಯ ಮೇಲೆ ಪೋಲೀಸರು ದೌರ್ಜನ್ಯ ನಡೆಸಬೇಕಾದರೆ ಏನು ಕಾರಣ ? ನಮಗೇನು ಭಯವೆಂದರೆ ಈ ಸಮಾಜದಲ್ಲಿ ಎಂತಹ ಹೀನಕೃತ್ಯಗಳನ್ನು ಮಾಡುತ್ತಿದ್ದಾರೆಂದರೆ, ಆಕೆ ತೊಟ್ಟಿದ್ದ ರವಿಕೆಯ ಒಳಗಡೆ ಲಾಠಿಯನ್ನು ತೂರಿಸಿ ಮೇಲಕ್ಕೆತ್ತಿದರು ಎಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿದ್ದೇವೆ. ಇದಕ್ಕಿಂತ ದೌರ್ಜನ್ಯವನ್ನು ಪ್ರಪಂಚದಲ್ಲಿ ನಾವೆಲ್ಲೂ ಕಾಣುವುದಿಲ್ಲ ಇಂತಹ ಕೃತ್ಯಗಳಿಂದ ನೂರಾರು ಜನ ರೊಚ್ಚಿಗೆದ್ದು ಪೋಲೀಸ್ ಸ್ಟೇಷನ್ ಹತ್ತಿರ ಹೋದಾಗ, ಸರ್ಕಲ್ ಇನ್‌ಸ್ಪೆಕ್ಟರ್ ಸಂಬಂಧಪಟ್ಟ ಪೋಲೀಸರನ್ನು ಸಸ್ಪೆಂಡ್ ಮಾಡುತ್ತೇನೆಂದು ಹೇಳಿದ್ದರೆ, ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಉಪಾಯವಾಗಿ ವರ್ತಿಸಿದ್ದರೆ ಯಾವುದೇ ಗಲಾಟೆಯಾಗುತ್ತಿರಲಿಲ್ಲ. ಜನರು ರೊಚ್ಚಿಗೇಳು

ವುದರಲ್ಲಿ ತಪ್ಪೇನು ಇದೆ ? ಜನರು ಈ ರೀತಿ ಮಾಡುತ್ತಿದ್ದಾರೆಂದು ಎಸ್.ಪಿ. ಯವರಿಗೆ ತಿಳಿಸ ಬಹುದಾಗಿತ್ತು, ಅಥವಾ ಇನ್ನೊಬ್ಬರು ಆಫೀಸರ್‌ಗೆ ತಿಳಿಸಬಹುದಾಗಿತ್ತು. ವೈರ್‌ಲೆಸ್ ಸಿಸ್ಟಮ್ ಇರುವುದು ಏತಕ್ಕೆ ? ಎರಡು ನಿಮಿಷಗಳಲ್ಲಿ ದೆಹಲಿಗೆ ಮಾತನಾಡಬಹುದು. ಹಿರಿಯ ಅಧಿಕಾರಿಗಳು ಮತ್ತು ಎಸ್.ಪಿ. ಯವರು ಈ ವಿಚಾರ ನಮಗೆ ಗೊತ್ತೆ ಇರಲಿಲ್ಲವೆಂದು ಹೇಳಿಕೆ ಕೊಟ್ಟಿದ್ದಾರೆ, ಹಿರಿಯ ಅಧಿಕಾರಿಗಳಿಗೆ ವಿಷಯವನ್ನು ತಿಳಿಸಿದ್ದರೆ ಇಂತಹ ಒಂದು ಪರಿಸ್ಥಿತಿ ಬರುತ್ತಿರಲಿಲ್ಲ. ಇದರ ಬಗ್ಗೆ ಮಾನ್ಯ ರಾಚಯ್ಯನವರು ಇದು ನನಗೆ ಗೊತ್ತಿರಲಿಲ್ಲವೆಂದು ಹೇಳುತ್ತಾರೆ. ಅವರ ಒಳ್ಳೆಯತನ ವನ್ನು ಪೋಲೀಸ್‌ನವರು ಪೂರ್ತಿ ದುರುಪಯೋಗ ಮಾಡಿಕೊಂಡಿದ್ದಾರೆ. ಮಾನ್ಯ ರಾಚಯ್ಯನವರಿಗೆ ನಮ್ಮ ಸ್ನೇಹಿತರು ಹೇಳಿದ ಹಾಗೆ ಪೋಲೀಸ್ ಇಲಾಖೆಯು ಲಗಾಮು ಪೂರ್ತಿ ತಪ್ಪಿಹೋಗುತ್ತಿದೆ ಯೆಂದು ನನ್ನ ಅನಿಸಿಕೆ. ಮೊನ್ನೆ ಗುರುಮಿಠ್‌ಕಲ್‌ನಲ್ಲಿ ನಡೆದ ಘಟನೆಯ ಬಗ್ಗೆ ತೆಗೆದುಕೊಂಡ ಕ್ರಮ ದಿಂದ ಪೋಲೀಸ್ ಆಫೀಸರ್ಸ್ ಭಯಬೀಳಬೇಕಾಗಿತ್ತು. ಈಗ ಪಾವಗಡದಲ್ಲಿ ನಡೆದ ಘಟನೆಯನ್ನು ನೋಡಿದರೆ ರಾಚಯ್ಯನವರು ಹೇಳುತ್ತಿರುತ್ತಾರೆ, ಪೋಲೀಸ್‌ನವರು ಮಾಡುವುದನ್ನು ಮಾಡುತ್ತಿರು ತ್ತಾರೆ. ಮಾನ್ಯ ರಾಚಯ್ಯನವರು ಡಿ.ಜಿ.ಪಿ. ಯವರಿಗೆ ಹೇಳುತ್ತಾರೆ, ಡಿ.ಜಿ.ಪಿ. ಯವರು ಅಲ್ಲಿರುವ ಸೆಂಟ್ರಲ್ ರೇಂಜ್ ಡಿ.ಐ.ಜಿ. ಯವರಿಗೆ ಹೇಳುತ್ತಾರೆ, ಇವರು ರೆಕಾರ್ಡ್ ಬಿಲ್ಡಪ್ ಮಾಡುವುದರಲ್ಲಿ ಅಲ್ಲಿಯ ಜನರು ಸತ್ತಿರುತ್ತಾರೆ. ಇದು ತುಂಬಾ ಖಂಡನೀಯ. ಇದರಲ್ಲಿ ಭಾಗಿಯಾಗಿರತಕ್ಕವರ ಕೆಲವು ಹೆಸರುಗಳನ್ನು ಬಿಟ್ಟಿದ್ದಾರೆ. ಡ್ರೈವರ್ ರಾಜಣ್ಣ, ಪೋಲೀಸ್ ಕಾನ್ಸ್‌ಟೇಬಲ್ ಮಲ್ಲಯ್ಯ. ಸಬ್‌ಇನ್ಸ್‌ಪೆಕ್ಟರ್ ರಾಮಕೃಷ್ಣಪ್ಪ ಇನ್ನೊಬ್ಬರು ಪಾಲುಗೊಂಡಿದ್ದಾರೆ. ಅವರ ಹೆಸರುಗಳನ್ನು ಬಿಟ್ಟು ಬಿಟ್ಟಿದ್ದಾರೆ. ಕೆಲವರ ಮೇಲೆ ಮಾತ್ರ ಕ್ರಮ ತೆಗೆದುಕೊಂಡಿರುವುದು ಬಹಳ ಅನ್ಯಾಯ. ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ ಎಂದರೆ ಮಾನ್ಯ ರಾಚಯ್ಯನವರು ಕ್ರಮ ತೆಗೆದುಕೊಳ್ಳಬೇಕಾದರೆ ಕಾನೂನಿನ ಇತಿಮಿತಿಯಿದೆ ಎಂದು ಒಂದೇ ಮಾತು ಹೇಳಿ ತಪ್ಪಿಸಿಕೊಳ್ಳುತ್ತಾರೆ. ಕಾನೂನಿನ ವ್ಯಾಪ್ತಿ ಬಹಳ ಸೀಮಿತವೆಂದು ಹೇಳುತ್ತಾರೆ. ಕಂಪಲ್ಸರಿ ರಿಟೈರ್‌ಮೆಂಟ್ ಮಾಡಿದರೆ ಅಧಿಕಾರಿಗಳಿಗೆ ಭೀತಿ ಇರುತ್ತದೆ. ಇಂತಹ ಘಟನೆಗಳು ನಡೆಯುವುದಿಲ್ಲ. ಕ್ರಮ ತೆಗೆದುಕೊಳ್ಳುತ್ತೇವೆ ಎಂದರೆ ಅವರಿಗೆ ಶೋಕಾಸ್ ನೋಟೀಸ್ ನೀಡಿ, ಎನ್‌ಕ್ವಯರಿ ಮಾಡಿ, ಎನ್‌ಕ್ವಯರಿ ರಿಪೋರ್ಟ್ ಬರುವುದಕ್ಕೆ ಎರಡು ಮೂರು ವರ್ಷಗಳು ಆಗುತ್ತದೆ. ದಯವಿಟ್ಟು ಈ ವಿಚಾರವನ್ನು ಇಲ್ಲಿಗೆ ಬಿಡಬಾರದು, ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆ ಕೊಡಲೇಬೇಕು, ಶಿಕ್ಷೆ ಕೊಟ್ಟರೆ ನಿಜವಾಗಿಯೂ ಪೋಲೀಸ್ ಇಲಾಖೆಯಲ್ಲಿ ಒಂದು ವ್ಯವಸ್ಥೆ ನಿರ್ಮಾಣವಾಗುತ್ತದೆ. Otherwise it will become a rotten force in Karnataka. It has become the rottenest force and it will become the rottenest force in Karnataka. ಜನಗಳಿಗೆ ರಕ್ಷಣೆ ಇರುವುದಿಲ್ಲ. ಯಾರಾದರೂ ಬೀದಿಯಲ್ಲಿ ಓಡಾಡುವುದು ಕಷ್ಟವಾಗುತ್ತದೆ. ಜನವರಿ ೧೯೮೭ನೇ ಇಸವಿಯಲ್ಲಿ ಅಖಿಲಭಾರತ್ ಬಂದ್‌ಗೆ ಕರೆ ಕೊಟ್ಟಿದ್ದೆವು. ನನ್ನನ್ನು ಬಂಧಿಸಿ ಪೋಲೀಸ್ ಸ್ಟೇಷನ್‌ನ ಒಳಗೆ ಇಟ್ಟಿದ್ದರು, ರಾತ್ರಿ ೧೨ ಗಂಟೆ ಸಮಯದಲ್ಲಿ ಒಬ್ಬ ಮುಸಲ್ಮಾನ ವ್ಯಕ್ತಿಯನ್ನು ಚೆನ್ನಾಗಿ ಹೊಡೆದು ಚರ್ಮ ಸುಲಿದರು. ಏತಕ್ಕೆ ಹೀಗೆ ಹೊಡೆಯುತ್ತಿದ್ದಾರೆ ಎಂದು ಕೇಳಿದ್ದಕ್ಕೆ ಆತ ಮುಂಬಾಗಿಲಿನಲ್ಲಿ ಉಚ್ಚೆ ಹುಯ್ಯುತ್ತಿದ್ದಾನೆ, ಉಚ್ಚೆ ಹುಯ್ಯಬೇಕಾದರೆ ಸರ್ಕಲ್ ಇನ್ಸ್‌ಪೆಕ್ಟರ್ ಪರ್ಮಿಷನ್ ಬೇಕು. ಇಲ್ಲದಿದ್ದರೆ ಆತ ಉಚ್ಚೆ ಹುಯ್ಯಲಿಕ್ಕೆ ಬಂಗಾರಪೇಟೆಗೋ, ಕೋಲಾರಕ್ಕೋ ಹೋಗಬೇಕು. ಉಚ್ಚೆ ಹುಯ್ಯಲಿಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಪರ್ಮಿಷನ್ ಏತಕ್ಕೆ ಬೇಕೆಂದರೆ, ಬಸ್ಸಿನಲ್ಲಿ ಬರುವಾಗ ಉಚ್ಚೆ ಹುಯ್ಯಲಿಕ್ಕೆ ಅರ್ಜೆಂಟಾಯಿತು, ಅದಕ್ಕೆ ಪರ್ಮಿಷನ್ ಬೇಕೆ ? ಇದು ತುಂಬಾ ಅನ್ಯಾಯ. ಯಾರೇ ಆಗಲಿ ಮನುಷ್ಯರಾಗಿ ವರ್ತಿಸಬೇಕು. ಪೋಲೀಸ್‌ನವರಿಗೆ ಬುದ್ಧಿ ಬರುವ ಹಾಗೆ ಮಾಡಬೇಕು. ಇಲ್ಲದಿದ್ದರೆ ರಾಚಯ್ಯನವರಿಗೆ ಪೋಲೀಸ್ ಇಲಾಖೆಯನ್ನು ನಿರ್ವಹಿಸಲಿಕ್ಕೆ ಸಾಧ್ಯವಿಲ್ಲ. ಅಗ್ರಿಕಲ್ಚರಲ್ ಅಥವಾ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಹೋಗುವುದು ಬಹಳ ಒಳ್ಳೆಯದು ಎನ್ನುವ ತೀರ್ಮಾನಕ್ಕೆ ಬರುವುದು ಒಳ್ಳೆಯದು.

ಶ್ರೀ ರಾಚಯ್ಯನವರಿಗೆ ಕೋಪ ಬರಬೇಕು. ಮೊಸಳೆ ಕಣ್ಣೀರು ಹಾಕಿದರೆ ಪ್ರಯೋಜನ ಇಲ್ಲ. ಮೊಸಳೆ ಕಣ್ಣೀರಿನಿಂದ ಈ ಫೋರ್ಸ್‌ನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ದಯ ವಿಟ್ಟು ಇವರಿಗೆಲ್ಲಾ ಪನಿಶ್‌ಮೆಂಟ್ ಕೊಟ್ಟು ನೊಂದವರಿಗೆ ನ್ಯಾಯ ಸಿಗುವ ಹಾಗೆ ಮಾಡಬೇಕೆಂದು

ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಪಾವಗಡದಲ್ಲಿ ನಡೆದಂಥ ಘಟನೆ ತೀರಾ ಅಮಾನವೀಯವಾದದ್ದು ಮತ್ತೆ ಇದೊಂದು ರಾಕ್ಷಸೀ ಕೃತ್ಯ ಎನ್ನುವುದನ್ನು ಇಲ್ಲಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ, ಏಕೆಂದರೆ ಶ್ರೀ ರಾಮಕೃಷ್ಣ ಹೆಗಡೆಯವರು ಇದನ್ನು ಹೇಳಿದ್ದಾರೆ, ಹಾಗೆಯೇ ಶ್ರೀ ರಾಚಯ್ಯನವರು ಇದನ್ನು ಮತ್ತೊಂದು ರೂಪದಲ್ಲಿ ಹೇಳಿದ್ದಾರೆ, ಒಬ್ಬ ಹೆಣ್ಣು ಮಗಳ ಮೇಲೆ ಈ ರೀತಿಯ ಅತ್ಯಾಚಾರ ಪೋಲೀಸ್ ಸ್ಟೇಷನ್ ಮತ್ತು ಹೊರಗಡೆ ನಡೆದಿದೆ ಎಂದರೆ, ಈ ರಾಜ್ಯದಲ್ಲಿ ಇವತ್ತು ಹೆಣ್ಣು ಮಕ್ಕಳಿಗೆ ಸರಿಯಾದಂಥ ರಕ್ಷಣೆ ನೀಡುವಂಥ ಸರ್ಕಾರ ಇದೆಯೇ, ಇಂತಹ ವ್ಯವಸ್ಥೆ ಇದೆಯೇ ಎಂಬ ಮೊದಲನೆಯ ಪ್ರಶ್ನೆ ಇಲ್ಲಿ ಬರುತ್ತದೆ. ಇದರ ಬಗ್ಗೆ ಹೆಚ್ಚು ವಿವರಣೆಗೆ ಹೋಗುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಮಾನ್ಯ ವೆಂಕಟರಾಮಯ್ಯನವರು ಈ ಹೆಣ್ಣು ಮಗಳ ಬಗ್ಗೆ ಬಹಳ ವಿವರವಾಗಿ ಹೇಳಿದ್ದಾರೆ. ಆ ಭಾಷೆಯಲ್ಲಿ ಹೇಳುವುದಕ್ಕೆ ಕಷ್ಟ ಆದರೂ ಸಹ ಅವರು ಆ ಭಾಷೆಯಲ್ಲಿ ಹೇಳಿ ಬಿಟ್ಟಿದ್ದಾರೆ. ಅವರು ಸ್ವಲ್ಪ ಧೈರ್ಯ ಮಾಡಿಯೇ ಹೇಳಿದರು. ಅದಕ್ಕೂ ಸ್ವಲ್ಪ ಧೈರ್ಯ ಬೇಕು. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಒಬ್ಬ ಸಬ್ ಇನ್‌ಸ್ಪೆಕ್ಟರ್ ಬಸವರಾಜ್ ಎನ್ನುವವರು ಮತ್ತು ಇನ್ನೊಬ್ಬರು ಧರ್ಮನಾಯಕ್ ಎನ್ನುವವರು ಇಬ್ಬರೂ ಸಹ ಸಿಕ್ಕಾಪಟ್ಟೆ ತುಳಿದರು, ಹೊಡೆದರು ಮತ್ತು ಬೇರೆ ಬೇರೆ ರೀತಿಯ ಅತ್ಯಾಚಾರ ನಡೆಸಿದರು ಎಂಬುದನ್ನು ಸ್ಪಷ್ಟವಾಗಿ ಹೇಳಿದರು, ನಾನು ಕೂಡ ಅಲ್ಲಿಗೆ ಹೋಗಿದ್ದೆ. ಹೋಗಿ ಪದ್ಮಮ್ಮ ನಾರಾಯಣಸ್ವಾಮಿ ರವರೊಡನೆ ಮಾತನಾಡಿದೆ. ಬೇರೆ ಜನರ ಹತ್ತಿರವೂ ಮಾತನಾಡಿದೆ. ಮುನಿಸಿಪಾಲಿಟಿ ಪ್ರೆಸಿಡೆಂಟ್, ಬೇರೆ ಕೌನ್ಸಿಲರ್‌ಗಳ ಹತ್ತಿರ ಮಾತನಾಡಿದೆ. ಪೋಲೀಸ್ ಸ್ಟೇಷನ್‌ನಲ್ಲಿದ್ದಂಥ ಜನಗಳ ಹತ್ತಿರವೂ ಮಾತನಾಡಿದೆ. ಅಧಿಕಾರಗಳ ಹತ್ತಿರವೂ ಮಾತನಾಡಿದ್ದೇನೆ. ಎಲ್ಲರ ಹತ್ತಿರವೂ ಮಾತನಾಡಿ ವಿಷಯ ಸಂಗ್ರಹಿಸಿದೆ. ಆದರೆ ಒಂದು ಅಂಶ ಕಂಡು ಬರುವುದು ಏನೆಂದರೆ, ಇಬ್ಬರು ಗಂಡ ಹೆಂಡತಿ ಬೇರೆ ಊರಿನಿಂದ ರಾತ್ರಿ ಬಂದರು. ಬಂದು ಇಲ್ಲಿ ತಮ್ಮ ಸ್ನೇಹಿತರು ಶ್ರೀ ಆಲ್ಲಿ ಎನ್ನುವವರ ಜೊತೆಗೆ ಆಕೆಯನ್ನು ಕಳಿಸಿದರೆ, ೨–೩ ಜನ ಪೋಲೀಸರು ರಾತ್ರಿ ಕುಡಿದು ಬಂದು ಅವತ್ತಿನ ದಿವಸ ಅತ್ಯಾಚಾರ ಮಾಡುವುದಕ್ಕೆ ಹೋಗಿದ್ದಾರೆ. ಸಾರ್ವಜನಿಕರ ಎದುರಿನಲ್ಲೇ ಆಕೆಯನ್ನು ಹೊಡೆದು, ನಂತರ ಆಕೆ ತನ್ನ ಗಂಡನ ಸಹಾಯ ಕೇಳುವುದಕ್ಕೆ ಬಂದಾಗ ಅವನನ್ನೂ ಕೂಡ ಹೊಡೆದು, ಆಯಮ್ಮನನ್ನು ಮತ್ತೆ ಹೊಡೆದು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಅಲ್ಲಿ, ನಾರಾಯಣ ಸ್ವಾಮಿಯ ಬಟ್ಟೆಬಿಚ್ಚಿ ಲಾಕಪ್ಪಿನಲ್ಲಿ ಹಾಕಿ ಒಬ್ಬೊಬ್ಬರೂ ಹೊಡೆದಿದ್ದಾರೆ ಸಬ್ ಇನ್‌ಸ್ಪೆಕ್ಟರ್ ಬಸವರಾಜ್ ಹೊಡೆದಿದ್ದಾರೆ, ಮತ್ತು ಧರ್ಮನಾಯಕ್ ಅವರೂ ಸಹ ಹೊಡೆದಿದ್ದಾರೆ. ಒಬ್ಬರ ನಂತರ ಒಬ್ಬರಾಗಿ ಬೂಟಿನಲ್ಲಿ, ಲಾಠಿಯಲ್ಲಿ ಹೊಡೆದಿದ್ದಾರೆ. ಆಯಮ್ಮನಿಗೂ ಸಹ ಸಿಕ್ಕಾಪಟ್ಟೆ ಹೊಡೆದಿದ್ದಾರೆ. ನನಗೆ ತಿಳಿದು ಬಂದ ಪ್ರಕಾರ ಪದ್ಮಮ್ಮನ ಮೇಲೆ ರೇಪ್ ಕೂಡ ಮಾಡಿದರು ಎಂದು ಹೇಳುತ್ತಿದ್ದಾರೆ. ನಾನು ನೋಡಿಲ್ಲ. ಪದ್ಮಮ್ಮನನ್ನೇ ನಾನು ವಿಷಯ ಏನು ಎಂದು ಕೇಳಿದೆ. ಆದರೆ ನಾನು ತಮ್ಮ ಗಮನಕ್ಕೆ ತರಬೇಕಾಗಿರುವುದು ಏನೆಂದರೆ, ಶ್ರೀ ಮತಿ ಪದ್ಮಮ್ಮ ಬರೆದಿರುವ ಪತ್ರ, ಅದನ್ನು ತಮಗೆ ಕಳಿಸಿ ಕೊಡುತ್ತೇನೆ. ಲಂಕೇಶ್ ಪತ್ರಿಕೆಯಲ್ಲಿ ಅದನ್ನು ಪಬ್ಲಿಷ್ ಮಾಡಿದ್ದಾರೆ ತಾವು ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ ಇಷ್ಟೊಂದು ಅಮಾನವೀಯವಾಗಿ ಈ ಪೋಲೀಸರು ನಡೆದು ಕೊಂಡಿದ್ದಾರೆ ಎಂಬುದು ತಿಳಿಯುತ್ತದೆ. ಈ ಪತ್ರವನ್ನು ಓದುವುದಕ್ಕೆ ನನಗೆ ಜಿಜ್ಞಾಸೆ ಆಗುತ್ತದೆ ಏಕೆಂದರೆ ಅದನ್ನು ಓದುವುದಕ್ಕೇ ನನಗೆ ಅಸಹ್ಯವಾಗುತ್ತದೆ. ಶ್ರೀ ಮತಿ ಎಂ. ಪಿ. ಪದ್ಮಮ್ಮ ಬರೆದಿರುವ ಪತ್ರ ಇದು ‘‘...... ಸರ್ಕಲ್‌ನಲ್ಲಿ ಹೀನಾಯವಾಗಿ ಚಿತ್ರಹಿಂಸೆ ಮಾಡಿದರಲ್ಲದೆ ನನಗೆ ‘‘ ಇತ್ಯಾದಿ ಇತ್ಯಾದಿ. ಆ ಮೇಲೆ ‘‘...... ಶ್ರೀನಿವಾಸಯ್ಯ ಮತ್ತು ಬಸವರಾಜ್‌ರವರು ಸಾರ್ವಜನಿಕರ ಎದುರಿಗೇ ಜಾಕೆಟ್ಟಿನೊಳಗೇ......ಹಾಕಿ ‘‘......ಏನೇನೋ ಹಾಕಿದ್ದಾರೆ ” ‘‘ ಜೀಪಿನಲ್ಲಿ ಸೂಟ್‌ಕೇಸ್ ತರುವಾಗ ಅತ್ಯಾಚಾರ ಮಾಡಿದ್ದಾರೆ......‘‘ ಆಮೇಲೆ ಕಟ್ಟಿಗೆ ಹಾಕಿ ......ಅದು ಬೇಡ ಬಿಡಿ, ‘‘ತೊಡೆ, ಎದೆ ಸೊಂಟಕ್ಕೆ ಅಪಘಾತವಾಗಿದೆ, ಉದಿಕೊಂಡಿದೆ...

ಶ್ರೀ ಮತಿ. ಆರ್. ಲೀಲಾದೇವಿ ಪ್ರಸಾದ್.—ಅದು ಪತ್ರಿಕೆಯಲ್ಲಿ ಬಂದಿರುವುದು. ಅದನ್ನು ಓದುವುದು ಬೇಡ.

ಶ್ರೀ ಆರ್. ಎನ್. ನಾಯಕ್.—ನಿಮಗೆ ಈ ವಿಚಾರದಲ್ಲಿ, ನಿಮ್ಮ ಮನಸ್ಸಿಗ ನೋವಾಗಿದ್ದರೆ ಮಾನ್ಯ ರಾಚಯ್ಯನವರು ರಾಜೀನಾಮೆ ಕೊಡುವುದಕ್ಕೆ ಹೇಳಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರೇ ತಾವು ಮಾತನಾಡಿ. ಎಲ್ಲರೂ "ಹೌದು ಹೌದು" ಎನ್ನುವ ರೀತಿಯಲ್ಲಿ ತಾವು ಹೇಳಬೇಕು,

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ತಮಗೆ ಕಳುಹಿಸಿ ಕೊಡುತ್ತೇನೆ. ತಾವೇ ಓದಿ ನಾನೂ ಕೂಡ ಇದನ್ನು ಓದುತ್ತಾ ಇರಲಿಲ್ಲ, ಇದು ಪಬ್ಲಿಷ್ ಆಗಿದೆ.

ಶ್ರೀ ಎಂ. ರಾಮಪ್ಪ.—ಈ ವಿಚಾರದಲ್ಲಿ ನಾವು ಮಾತನಾಡುವುದೇ ಬೇಡ. ಸುಮ್ಮನೆ ನಮ್ಮ ಮನೆಗೆ ಹೋಗುವುದು ಒಳ್ಳೆಯದು. ನೀವು ಮಾಡಿರುವ ಕೃತ್ಯಗಳಿಗೆ ನಾವು ಮನೆಗೆ ಹೋಗುವುದೇ ಒಳ್ಳೆಯದು

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ಓದಿದ ಮೇಲೆ ಒಂದು ಜ್ಞಾಪಕ ಬರುತ್ತದೆ. ಪೋಲೀಸಿನವರು ಇಷ್ಟೊಂದು ಅವಮಾನವೀಯವಾಗಿ ವರ್ತಿಸಿರುವುದು ಇವತ್ತೇನು ಹೊಸದಲ್ಲ. ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇದು ಹೊಸದು ಆಗಿದೆ. ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಇದು ನಡೆದಿದೆ. ಹಿಂದೆ ಮಲಬಾರ್ ಸ್ಪೆಷಲ್ ಪೋಲೀಸಿನವರು ಬಹಳ ರಾಕ್ಷಸೀಕೃತ್ಯ ಮಾಡುತ್ತಾರೆಂದು ಪತ್ರಿಕೆಯಲ್ಲಿ ಬರುತ್ತಿತ್ತು. ಕೆಲಸಕ್ಕೆ ತೆಗೆದು ಕೊಳ್ಳುವಾಗ ಅಭ್ಯರ್ಥಿಯನ್ನು ಹೊಡೆಯುವುದು, ಬಡಿಯುವುದು, ಚಿತ್ರಹಿಂಸೆ ಮಾಡುವುದು ಇತ್ಯಾದಿ ಮಾಡುವುದರ ಜೊತೆಗೆ, ಅವರು ನಿನ್ನ ತಾಯಿಯನ್ನು ಹೊಡೆದಿದ್ದೀಯಾ ಎಂದು ಕೇಳುತ್ತಿದ್ದರಂತೆ ಇದು ಅವರ ರಿಪೋರ್ಟಿನಲ್ಲಿ ಇದೆ. ನಿನ್ನ ತಾಯಿಯನ್ನು ಹೊಡೆದಿದ್ದೀಯಾ ಎಂದು ಕೇಳಿದಾಗ ಆತ ನಾನು ಹೊಡೆದಿಲ್ಲ ಎಂದು ಹೇಳಿದರೆ, ಅವನನ್ನು ರೆಕ್ರೂಟ್‌ಮೆಂಟ್ ಮಾಡಿಕೊಳ್ಳುತ್ತಾ ಇರಲಿಲ್ಲ, ತಾಯಿಯನ್ನು ಹೊಡೆದಿದ್ದೇನೆ ಎಂದು ಹೇಳಿದರೆ ಆತನನ್ನು ರೆಕ್ರೂಟ್ ಮಾಡಿಕೊಳ್ಳುತ್ತಿದ್ದರು. ಆದರೆ ಇವೊತ್ತು ಏನಾಗಿದೆ ಎಂದರೆ, ತಾಯಿಯನ್ನು ಹೊಡೆದಿದ್ದಾನೆ ಎಂಬುದಲ್ಲ, ತಾಯಿಯನ್ನು ಅತ್ಯಾಚಾರ ಮಾಡಿದ್ದೀಯಾ ಎಂದು ಕೇಳತಕ್ಕಂಥ ಪರಿಸ್ಥಿತಿ ಬಂದಿದೆ. ಪಾವಗಡದಲ್ಲಿ ನಡೆದಿರತಕ್ಕ ದುರ್ಘಟನೆಯಲ್ಲಿ ಮತ್ತು ಶ್ರೀಮತಿ ಪದ್ಮಮ್ಮನವರ ಹೇಳಿಕೆಯಿಂದ ಎಲ್ಲರೂ ತಲೆ ತಗ್ಗಿಸಬೇಕಾಗಿದೆ. ಪೋಸ್ಟ್ ಷೇಮ್‌ಫುಲ್ ಎಂದು ಮಾನ್ಯ ರಾಮಕೃಷ್ಣ ಹೆಗಡೆಯವರೇ ಹೇಳಿದ್ದಾರೆ. ಈ ಅತ್ಯಾಚಾರ, ಹೊಡೆಯುವುದು, ಬಡಿಯುವುದು ಇವೆಲ್ಲಾ ಅಮಾನುಷವಾದುದು. ಈ ರಾಕ್ಷಸೀ ಕೃತ್ಯಗಳನ್ನು ಯಾರೂ ಒಪ್ಪಿಕೊಳ್ಳುವುದಿಲ್ಲ ಹೆಣ್ಣು ಮಕ್ಕಳು ಪೋಲೀಸ್ ಸ್ಟೇಷನ್‌ಗೆ ಬಂದರೆ ಯಾವ ರೀತಿ ನಡೆದುಕೊಳ್ಳಬೇಕು ಎಂಬುದಕ್ಕೆ, ಸರ್ಕಾರಿ ಆದೇಶ ಒಂದು ಇದೆ. ಇದೇ ಸರ್ಕಾರ ಬಂದ ಮೇಲೆ ಸರ್ಕಾರಿ ಆದೇಶ ಹೊರಡಿಸಿದೆ. ಇದರ ಪ್ರಕಾರ, ರಾತ್ರಿ ಹೊತ್ತು ಹೆಣ್ಣು ಮಕ್ಕಳನ್ನು ಪೋಲೀಸ್ ಸ್ಟೇಷನ್‌ನಲ್ಲಿ ಇಟ್ಟು ಕೊಳ್ಳಬಾರದು. ಇವೊತ್ತು ಈ ಒಂದು ಸರ್ಕಾರಿ ಆದೇಶವನ್ನು ಮೀರಿ, ಪಾವಗಡದಲ್ಲಿ ಈ ಕೆಲಸ ನಡೆದಿದೆ. ಅಲ್ಲಿನ ಪೋಲೀಸ್ ಅಧಿಕಾರಿಗಳು ಸರ್ಕಾರಿ ಆದೇಶ ಮೀರಿ ನಡೆದುಕೊಂಡಿದ್ದಾರೆ. ಅಮಾನವೀಯವಾಗಿ ನಡೆದುಕೊಂಡಿದ್ದಾರೆ, ಇದು ಪ್ರಪಂಚಕ್ಕೇ ಗೊತ್ತಿದೆ. ಇವತ್ತು ತಪ್ಪಿತಸ್ಥರನ್ನು ಸಸ್ಪೆಂಡ್ ಮಾಡುತ್ತೇವೆ, ಎನ್‌ಕ್ವೈರಿ ಮಾಡುತ್ತೇವೆಂದು ನೀವು ಹೇಳುತ್ತೀರಿ. ಇದಕ್ಕೆಲ್ಲಾ ಏನು ಅರ್ಥ ಇದೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿಸುತ್ತೇವೆ. ಇದು ಅತ್ಯಂತ ದೊಡ್ಡ ಎನ್‌ಕ್ವೈರಿ ಎಂದು ಹೇಳುತ್ತೀರಿ. ಮತ್ತೆ ಒಂದು ಕಥೆ ಹೇಳುತ್ತೀರಿ ಇದು ಅಮಾನುಷವಾದುದು, ಸರಿಯಾದುದಲ್ಲ, ಅಕೃತ್ಯ ಮಾಡಿದ್ದಾರೆಂದೂ, ಮೈಸೂರಿನ ಘಟನೆ ನಡೆಯಬೇಕಾಗಿರಲಿಲ್ಲ, ಬೆಂಗಳೂರಿನ ಘಟನೆ ನಡೆಯಬೇಕಾಗಿರಲಿಲ್ಲ, ಗುರುಮಿಠಕಲ್‌ನ ಘಟನೆ ನಡೆಯಬೇಕಾಗಿರಲಿಲ್ಲ, ಪಾವಗಡದಲ್ಲಿ ಇಂತಹ ಘಟನೆ ನಡೆಯಬೇಕಾಗಿರಲಿಲ್ಲ ಎಂದು ಮಾನ್ಯ ರಾಚಯ್ಯನವರೂ ಹೇಳಿದ್ದಾರೆ, ಮುಖ್ಯ ಮಂತ್ರಿಗಳೂ ಹೇಳಿದ್ದಾರೆ. ಇಷ್ಟೆಲ್ಲಾ ಹೇಳಿದಂಥವರಿಗೆ ಪೋಲೀಸಿನವರ ಮೇಲೆ ಕಂಟ್ರೋಲ್ ಇಲ್ಲ. ಇವತ್ತು ಈ ವ್ಯವಸ್ಥೆ ಡಿ. ಕಂಟ್ರೋಲ್ ಆಗಿದೆ. ಈ ಸರ್ಕಾರ ಬಂದ ಮೇಲೆ, ಇದು ಹೆಚ್ಚಾಗುತ್ತಿದೆ. ಮಾನ್ಯ ಗುಂಡೂರಾವ್ ಅವರು ಇದ್ದಾಗ ಗುಂಡು ಹಾರಿಸಿ ಹೋದರು. ಏತಕ್ಕೆ ನೀವು ಈ ರೀತಿ ಮಾಡುತ್ತೀರಿ ಎಂದು ಕೇಳಿದರೆ ಗುಂಡೂರಾಯರು ನಾನು ಮಾಡುವುದೇ ಹಾಗೆ ಎಂದು ಹೇಳುತ್ತಿದ್ದರು. ಏತಕ್ಕಯ್ಯಾ ಕುಡಿಯುತ್ತೀಯ ಎಂದರೆ, ನಾನು ಕುಡಿಯುತ್ತೇನೆ, ಏತಕ್ಕೆ ಇಸ್ಪೀಟ್ ಆಡುತ್ತೀಯಾ ಎಂದರೆ, ನಾನು ಇಸ್ಪೀಟಾ

ಆಡುತ್ತೇನೆ, ಏತಕ್ಕೆ ಬಡಿಯುವುದು ಹೊಡೆಯುವುದು ಎಂದರೆ, ನಾನು ಹೊಡೆಯುವುದೇ, ಎಂದ, ಅವರು ಈ ರೀತಿ ಹೇಳುತ್ತಿದ್ದರು. ಇವರು ಏನು ಎಂದರೆ ಈ ರೀತಿ ಹೇಳುವುದಿಲ್ಲ, ಆದರೆ ಮಾಡು ವುದೆಲ್ಲಾ ಅದೇನೆ, ಅವರಿಗೂ ಇವರಿಗೂ ಏನೂ ವ್ಯತ್ಯಾಸ ಕಂಡು ಬರುವುದಿಲ್ಲ. Lashing out at the police, " hitting out at the police, criticism. ಇದರಿಂದ ನೀವು ಯಾರನ್ನು ಸಂತೋಷ ಪಡಿಸುತ್ತೀರಿ. " You have no control over the police., what have you done with them ? ಅಂತಹವರನ್ನು ಸುಮ್ಮನೆ ಎನ್‌ಕ್ವೈರಿ ಮಾಡಿದರೆ ನೀವು ಯಾರನ್ನು ಸ್ಯಾಟಿಸಫೈ ಮಾಡುತ್ತೀರಿ, ಇದರಿಂದ ಯಾರಿಗೆ ಅನುಕೂಲ ಆಗುತ್ತದೆ ? ಯಾರನೂ, ಸ್ಯಾಟಿಸಫೈ ಮಾಡುವುದಕ್ಕೆ ಆಗುವುದಿಲ್ಲ. ಈ ವಿಷಯದ ಬಗ್ಗೆ ನಿಮಗೆ ಕಳಕಳಿ ಇದ್ದಿದ್ದರೆ. ಸ್ತ್ರೀಯರ ಬಗ್ಗೆ ಗೌರವ ಇದ್ದಿದ್ದರೆ, ಯಾವ ಪೋಲೀಸರು ಇದನ್ನು ಮಾಡಿದ್ದಾರೆ, ಅದು ಮಾನ್ಯ ರಾಜಯ್ಯನವರಿಗೆ ಗೊತ್ತಿದೆ, ಅವರೂ ಅಲ್ಲಿಗೆ ಹೋಗಿದ್ದರು, ಅವರಿಗೆ ಎಲ್ಲಾ ಗೊತ್ತಿದೆ, ಅವರು ತಮ್ಮ ಹೃದಯ ಮುಟ್ಟಿ ನೋಡಿಕೊಳ್ಳಲಿ ಯಾವ ಪೋಲೀಸರು ಇದನ್ನು ಮಾಡಿದ್ದಾರೆ, ಅವರಿಗೆ, ಅಟ್‌ಲೀಸ್ಟ್, ಅವರ ಮೇಲೆ ಕೇಸ್ ಹಾಕಬೇಕು, ಕ್ರಿಮಿನಲ್ ಕೇಸ್ ಹಾಕಿ ಅವರನ್ನು ಅರೆಸ್ಟ್ ಮಾಡ ಬೇಕಾಗಿತ್ತು. ಇದು ಮಿನಿಮಮ್ ನನ್ನಂಥವನಾಗಿದ್ದರೆ ಅವರನ್ನು ಮರಕ್ಕೆಕಟ್ಟಿ ಚಡಿಯಲ್ಲಿ ಹೊಡೆಯಿರಿ ಎಂದು ಹೇಳುತ್ತಿದ್ದೆ, ಅವರನ್ನು ಸುಟ್ಟು ಹಾಕಿದರೂ ಪರವಾಗಿಲ್ಲ ಎಂದು ಹೇಳುತ್ತಿದ್ದೆ. ಅದನ್ನು ನೀವು ಮಾಡುವುದಿಲ್ಲ, ಅದನ್ನು ಮಾಡುವುದಕ್ಕೆ ನಿಮಗೆ ಶಕ್ತಿ ಇಲ್ಲ, ಸರಕಾರಕ್ಕೂ ಶಕ್ತಿ ಇಲ್ಲ. ನಮ್ಮ ಸರಕಾರ ಬಂದರೆ ಮಾಡುತ್ತೇವೆ, ನಮ್ಮ ಸರಕಾರ ಬರಲಿ ನೋಡೋಣ. ನಾವು ಅಂತಹವರಿಗೆ ಅವಕಾಶ ಕೊಡುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ನಿಮ್ಮ ಸರಕಾರ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇಡೀ ಪ್ರಪಂಚವೇ ಇವತ್ತು ಕಮ್ಯುನಿಸರಿನತ್ತ ಹೋಗುತ್ತಿರ ಬೇಕಾದರೆ ನಿಮ್ಮಂಥವರು ಯಾರೋ ಹೇಳಬಹುದು. ಪ್ರಪಂಚದ ಮೂರನೇ ಒಂದು ಭಾಗದಲ್ಲಿ ಸಮತಾವಾದ ಇದೆ.........

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಏನೋ ನೀವು ಸಮಾಧಾನಕ್ಕೆ ಹೇಳಿಕೊಳ್ಳಬಹುದು.........

ಶ್ರೀ ಎಂ.ಎಸ್. ಕೃಷ್ಣನ್.—ಸಮಾಧಾನಕ್ಕೆ ಅಲ್ಲ ಇದು ವಾಸ್ತವಾಂಶ.

ಶ್ರೀ ವೇದಾಂತ ಹೆಮ್ಮಿಗೆ.—ನಮ್ಮ ಸರಕಾರದಲ್ಲಿ ನ್ಯಾಯಾಂಗ ತನಿಖೆಯಾದರೂ ನಡೆಯುತ್ತದೆ, ಕಮ್ಯುನಿಸ್ಟ್ ಸರಕಾರದಲ್ಲಿ ಅದೂ ಕೇಳುವುದಿಲ್ಲ, ಅದೂ ನಡೆಯುವುದಿಲ್ಲ, ಸುಮ್ಮನೆ ಷೂಟ್ ಮಾಡುತ್ತಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಹೆಮ್ಮಿಗೆಯವರು ಬರೀ ವೇದಾಂತ ಹೇಳುವುದಷ್ಟೇ, ಆಚಾರ ಹೇಳುವುದಕ್ಕೆ, ಬದನೆಕಾಯಿ ತಿನ್ನುವುದಕ್ಕೆ ಎನ್ನುವಂತಹ ರೀತಿಯಲ್ಲಿ ವರ್ತಿಸುವ ಜನ ಅವರು. ನಾವು ಆಚಾರ ಹೇಳುವುದಕ್ಕೂ ಹೋಗುವುದಿಲ್ಲ, ಬದನೆಕಾಯಿ ತಿನ್ನುವುದಕ್ಕೂ ಹೋಗುವುದಿಲ್ಲ. ನಾವೆಲ್ಲಾ ವರ್ತಿಸುವುದು ಒಂದೇ ರೀತಿ. ಮೊನ್ನೆದಿವಸ ತಾವೇ ಹೇಳಿದರಲ್ಲ, ಸೋವಿಯತ್ ರಷ್ಯಾದಲ್ಲಿ ಮೇಲಧಿಕಾರಿಗಳು ಲಂಚ ತೆಗೆದುಕೊಂಡಾಗ ಅವರನ್ನು ಗುಂಡಿಕ್ಕಿ ಸಾಯಿಸಿದರು ಎಂದು. ಅಂತಹ ಜನ ನಾವು.

ಶ್ರೀ ವೇದಾಂತ ಹೆಮ್ಮಿಗೆ.—ವಿಚಾರಣೆ ಬೇಡ, ಯಾರೋ ಹೇಳಿದರು, ಅವರನ್ನು ಗುಂಡಿಕ್ಕಿ ಹೊಡೆದರು.

ಶ್ರೀ ಎಂ.ಎಸ್. ಕೃಷ್ಣನ್.—ವಿಚಾರಣೆ ನಡೆದಿದೆಯೋ ಇಲ್ಲವೇ ಎಂಬುದು ನಿಮಗೆ ಗೊತ್ತಿದೆಯೇ, ಗೊರ್ಬಚೇವ್ ಅವರು ನೀವೂ ಸ್ನೇಹಿತರೇ, ಗೊತ್ತಿಲ್ಲದೆ ಏತಕ್ಕೆ ಈ ವಿಷಯ ಮಾತನಾಡುತ್ತೀರಿ.

ಬರೀ ಕಣ್ಣೀರು ಸುರಿಸುವುದು ಬೇಡ. ಬರೀ ಲ್ಯಾಷಿಂಗ್ ಔಟ್, ಕ್ರಿಟಿಸಿಸಮ್ ಅಲ್ಲ. ಮಿನಿಮಮ್ ಏನಾದರೂ ಮಾಡಬೇಕಾಗಿದ್ದರೆ ಅವರ ಮೇಲೆ ಕೇಸ್ ಹಾಕಬೇಕಾಗಿತ್ತು. ಅದನ್ನು ಮಾಡಿಲ್ಲ. ಬಹಳ ಮುಖ್ಯವಾದ ಇನ್ನೊಂದು ಅಂಶ ಎಂದರೆ, ಪೋಲೀಸ್ ಡಿಪಾರ್ಟ್‌ಮೆಂಟ್ ಮೇಲೆ ರಾಜಕೀಯ ಹಸ್ತಕ್ಷೇಪ, ಪೊಲಿಟಿಕಲ್ ಇಂಟರ್‌ಫಿಯರೆನ್ಸ್ ಜಾಸ್ತಿ ಇದೆ. ಆದುದರಿಂದಲೇ ಇಂತಹ

ಘಟನೆಗಳು ಸಾರಾಸಗಟಾಗಿ ನಡೆದುಕೊಂಡು ಬರುತ್ತಿವೆ. ಯಾರೇ ಇರಲಿ, ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ಇರಲಿ, ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಇರಲಿ ಎಲ್ಲರೂ ರಾಜಕೀಯ ವ್ಯಕ್ತಿಗೆ ಸಲಾಮ್ ಹೊಡೆಯಬೇಕು. ಅವರು ಹೇಳಿದಹಾಗೆ ಕೇಳಬೇಕು. ಅವರ ತಾಳಕ್ಕೆ ತಕ್ಕಹಾಗೆ ಕುಣಿಯಬೇಕು. ಅವರ ತಾಳಕ್ಕೆ ತಕ್ಕಹಾಗೆ ಕುಣಿಯದೇ ಹೋದರೆ, ಅವರನ್ನು ಟ್ರಾನ್ಸ್‌ಫರ್ ಮಾಡುತ್ತಾರೆ. ಅಲ್ಲಿಂದ ಕಿತ್ತು ಹಾಕುತ್ತಾರೆ. ಅದಕ್ಕೋಸ್ಕರ ಅವರಿಗೆ ಸಲಾಮ್ ಹೊಡೆದುಕೊಂಡು ಇರಬೇಕು. ಪೋಲೀಸ್ ಇಲಾಖೆಯ ಮೇಲೆ ಪೊಲಿಟಿಕಲ್ ಇಂಟರ್‌ಫಿಯರೆನ್ಸ್ ಜಾಸ್ತಿಯಾಗಿದೆ, ಪಾವಗಡದಲ್ಲೂ ನಾನು ಇದನ್ನೇ ಕೇಳಿದೆ. ಪಾವಗಡದಲ್ಲೂ ಇದೇ ಆಗಿದೆ. ಗುಜ್ಜನೋಡು ಗ್ರಾಮದ ಪಂಚಾಯತಿಯ ಎಕ್ಸ್ ಚೇರ್ಮನ್ ಇದರಲ್ಲಿ ಇದ್ದಾರೆ. ರಾಜಕೀಯ ಎಂದು ಹೇಳಿದ್ದಕ್ಕೆ ಇದೊಂದು ಉದಾಹರಣೆ ಹೇಳುತ್ತಿದ್ದೇನೆ. ಇದರಲ್ಲಿ ಅವರ ಕೈವಾಡ ಇದೆ ಎಂದು ಗೊತ್ತಾಯಿತು. ಪದ್ಮಮ್ಮನವರೂ ಸಹ ಇದನ್ನು ಹೇಳಿದರು. ಅವರು ಇವತ್ತು ಈ ಮಹಿಳೆಯನ್ನು ಕೆಡಿಸುವುದಕ್ಕೆ ಪ್ರಯತ್ನ ಪಟ್ಟರು. ಅದು ಆಗಲಿಲ್ಲ. ಅವಳ ಮೇಲೆ ರಿವೆಂಜ್ ತೆಗೆದುಕೊಳ್ಳುವುದಕ್ಕೋಸ್ಕರ, ಪೋಲೀಸರಿಗೆ ಹೇಳಿ, ಪ್ರಭಾವಯುತರಾದ ರಾಜಕೀಯ ವ್ಯಕ್ತಿಗಳ ಸಹಾಯ ಪಡೆದು, ರಿವೆಂಜ್ ತೆಗೆದುಕೊಳ್ಳುವುದಕ್ಕೆ ಮಾಡಿರುವ ಕೃತ್ಯ ಇದು. ಆದರಿಂದ ಬಂದಿರುವ ಕೃತ್ಯ ಇದು. ಅವರೆಲ್ಲರಿಗೂ ಗೊತ್ತಿದೆ. ಗೊತ್ತಿಲ್ಲದೆ ಏನೂ ಇಲ್ಲ. ಬೇಕು ಎಂದು ಮಾಡಿಸಿದಂತಹ ಕೃತ್ಯ ಇದು. ಈ ರೀತಿಯ ಕೃತ್ಯವನ್ನು ಮಾಡಿಸಬೇಕೆಂದು ಮನಸ್ಸಿನಲ್ಲಿಟ್ಟುಕೊಂಡು ಪೋಲೀಸಿನವರ ಮೂಲಕ ಮಾಡಿಸಿದಂತಹ ಹಿಂಸಾಕೃತ್ಯವಿದು. ಇದನ್ನು ನಾವಿಲ್ಲಿ ಯಾರೂ ಮರೆಯುವುದಕ್ಕೆ ಆಗುವುದಿಲ್ಲ. ಇದರಲ್ಲಿ ಆ ಛೇರ್ಮನ್‌ರ ಕೈವಾಡವಿದೆಯೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ ಇನ್ನೊಂದು ಇಲ್ಲಿ ಬಹಳ ಮುಖ್ಯವಾದದು ಏನೆಂದರೆ ಅಲ್ಲಿನ ಎನ್.ಜಿ.ಓ.ಗಳು ಧರಣಿ ಮಾಡಿದ್ದಾರೆ. ಈ ಹಿಂದೆ ಎನ್.ಜಿ.ಓ.ಗಳ ಬಗ್ಗೆ ಕೂಡ ಈ ಪೋಲೀಸಿನವರು ಬಹಳ ಹೀನಾಯಮಾನವಾಗಿ ವರ್ತನೆ ಮಾಡಿದ್ದಾರೆ. ಎನ್.ಜಿ.ಓ.ಗಳು ಧರಣಿ ಮಾಡಿದಾಗ ಅಲ್ಲಿನ ಪೋಲೀಸಿನವರು ಫೈರಿಂಗ್ ಮಾಡಿದರು. ಪೋಲೀಸಿನವರು ಮನುಷ್ಯರನ್ನು ಮಾನವೀಯತೆ ದೃಷ್ಟಿಯಿಂದ ನೋಡುವುದಾಗಲಿ, ನಾಗರೀಕತೆಯಿಂದ ವರ್ತನೆ ಮಾಡುವುದಾಗಲಿ, ಸೌಜನ್ಯತೆಯಿಂದ ಕಾಣುವುದಕ್ಕಾಗಲಿ ಅವರು ಇಷ್ಟಪಡುತ್ತಿರಲಿಲ್ಲ. ಒಂದು ಹಳ್ಳಿಯಲ್ಲಿ ಏನಾದರೂ ಗಲಾಟೆ ಅಥವಾ ಗಲಭೆಗಳು ಆದರೆ ಆ ಹಳ್ಳಿಯ ಜನ ರೊಚ್ಚಿಗೇಳುತ್ತಾರೆ ಆದರೆ ಇಂತಹ ವಿಷಯಗಳಲ್ಲಿ ಸರ್ಕಾರದ ಅಧಿಕಾರಿಗಳು ಮತ್ತು ನೌಕರರು ಬಂದು ಧರಣಿ ಮಾಡುವುದನ್ನು ನಾನು ನೋಡಿಲ್ಲ. ಆದರೆ ಪಾವಗಡದಲ್ಲಿ ಸರ್ಕಾರಿ ನೌಕರರು ಬಂದು ಧರಣಿ ಮಾಡಿದ್ದಾರೆ. ಇದಕ್ಕೆ ಕಾರಣ ಪೋಲೀಸಿನವರ ವರ್ತನೆಯೇ. ಇದೆಲ್ಲಾ ಸರ್ಕಾರಕ್ಕೆ ಗೊತ್ತಿಲ್ಲದೆ ಇರುವ ವಿಷಯವೇನೂ ಅಲ್ಲ. ಪೋಲೀಸ್ ಇಲಾಖೆಯವರಿಗೆ ಗೊತ್ತಿಲ್ಲದೆ ಇರುವಂತಹ ವಿಷಯ ವೇನೂ ಅಲ್ಲ. ಇಂತಹವರ ಮೇಲೆ ತಾವು ಏತಕ್ಕೆ ಕಾರ್ಯಕ್ರಮ ತೆಗೆದುಕೊಂಡಿಲ್ಲ? ಇದರ ಹಿನ್ನೆಲೆ ಏನು?......

ಅಧ್ಯಕ್ಷರು.—೧೫ ನಿಮಿಷವಾಯಿತು ತಾವು ದಯವಿಟ್ಟು ಬೇಗ ಮುಗಿಸಿ

ಶ್ರೀ ಎಂ. ಎಸ್. ಕೃಷ್ಣನ್.—ಇನ್ನು ಎರಡು ಮೂರು ಮುಖ್ಯವಾದ ವಿಷಯಗಳನ್ನು ಮಾತ್ರ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿನ ಪೋಲೀಸ್ ಅಧಿಕಾರಿಗಳಾದ ಬಸವರಾಜ್ ಮತ್ತು ಧರ್ಮನಾಯಕರ ಮೇಲೆ ಬೇಕಾದಷ್ಟು ದೂರುಗಳು ಇವೆ. ತಾವು ರೈತರ ಬಗ್ಗೆ ಹೆಚ್ಚು ಕಾಳಜಿಯನ್ನು, ಹೆಚ್ಚು ಅನುಕಂಪವನ್ನು ತೋರಿಸುವಂತಹ ಜನ. ಎಂದು ಹೇಳಿಕೊಳ್ಳುತ್ತೀರಿ ಆದರೆ ನಾನು ಯಾವಾಗಲಾದರೂ ರೈತರ ಬಗ್ಗೆ ಪ್ರಸ್ತಾಪ ಮಾಡಿದರೆ ನೀವೇನೂ ರೈತರಲ್ಲ ನೀವು ಮಾತನಾಡಬೇಡಿ ಸುಮ್ಮನಿರಿ ಎಂದು ನನಗೆ ಹೇಳುತ್ತೀರಿ. ಆದರೆ ಇವತ್ತು ನಾನು ಕೇಳುತ್ತೇನೆ ಎಷ್ಟು ಜನ ತಮ್ಮಲ್ಲಿ ಈಗ ರೈತರನ್ನು ಡಿಫೆಂಡ್ ಮಾಡುತ್ತಿದ್ದೀರಿ? ರೈತರ ಸಮಸ್ಯೆಗಳನ್ನು ಎಷ್ಟು ಜನ ತಿಳಿದುಕೊಂಡಿದ್ದೀರಿ? ಅಲ್ಲಿ ರೈತರನ್ನು ಚೆನ್ನಾಗಿ ಹೊಡೆದು ಚಿತ್ರ ಹಿಂಸೆಯನ್ನು ಮಾಡಿರುವ ನಿದರ್ಶನಗಳು ಬೇಕಾದಷ್ಟು ಇವೆ. ಅಲ್ಲಿನ ರೈತ ಸಂಘದ ಅಧ್ಯಕ್ಷರಾದಂಥ ಶ್ರೀಮಾನ್ ರಾಮನುಜಪ್ಪನವರು ರೈತರ ಸಮಸ್ಯೆಗಳ ಬಗ್ಗೆ ವಿಚಾರ ಮಾಡಲು ಹೋದಾಗ ಅವರನ್ನು ಸಹ ಚೆನ್ನಾಗಿ ಹೊಡೆದು, ಪೋಲೀಸ್ ಸ್ಟೇಷನ್‌ನಲ್ಲಿ ತಳ್ಳಿದ್ದಾರೆ. ಅಲ್ಲದೆ ಅವರನ್ನು ಎಕ್ಸ್‌ಟರ್ನ್‌ಮೆಂಟ್ ಆರ್ಡರ್ ಮಾಡಬೇಕೆಂದು ಹೇಳಿದಂತ ಜನ ನೀವು ಒಬ್ಬ ಸಣ್ಣ ವ್ಯಾಪಾರಸ್ಥ ಮುನಿಸಿಪಲ್ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದು ಸಣ್ಣ ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡಿ ಜೀವನ ಮಾಡುತ್ತಿದ್ದ. ಆ ಪೆಟ್ಟಿಗೆ ಅಂಗಡಿ ಒಬ್ಬ ರಾಜಕಾರಣಿಗೆ ಬೇಕಾಗಿತ್ತು. ಆ ಪೆಟ್ಟಿಗೆ ಅಂಗಡಿಯವನ ಮೇಲೆ ಪೋಲೀಸಿನವರನ್ನು ರಾಜಕಾರಣಿಗಳು

ಬಿಟ್ಟು ಅವನನ್ನು ಅಲ್ಲಿಂದ ಎಬ್ಬಿಸಿ ಆ ಪೆಟ್ಟಿಗೆ ಅಂಗಡಿಯನ್ನು ರಾಜಕಾರಣಿಗಳಿಗೆ ಕೊಡಿಸಿದರು. ಈ ರೀತಿಯ ರಾಜಕೀಯ ಕೈವಾಡಗಳು ಅಲ್ಲಿ ನಡೆಯುತ್ತಿವೆ. ಪೋಲೀಸಿನವರನ್ನು ಬಳಸಿಕೊಂಡು ರಾಜಕಾರಣ ಮಾಡುತ್ತಿದ್ದಾರೆ. ಅಲ್ಲಿ ಈ ಕೆಲಸಗಳು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿವೆ. ಆದ್ದರಿಂದ ರಾಜಕಾರಣಿಗಳ ಮಧ್ಯೆ ಪ್ರವೇಶ ತಪ್ಪಿಸಬೇಕು. ಅದು ಯಾವ ಪಕ್ಷದವರೇ ಆಗಿರಲಿ. ಈಗ ನಮ್ಮ ಕ್ಷೇತ್ರದಲ್ಲಿ ಯಾರಾದರೂ ತಪ್ಪು ಮಾಡಿದರೆ ಅವರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗುತ್ತಾರೆ. ಆಗ ನನ್ನ ಬಳಿ ಜನ ಬರುತ್ತಾರೆ. ನಾನು ಫೋನ್ ಮಾಡಿ ನೋಡಪ್ಪ ಅವರಿಗೆ ತುಂಬಾ ಕಷ್ಟವಾಗಿದೆಯಂತೆ ಆದರೆ ಬಿಟ್ಟುಬಿಡಿ ಎಂದು ಹೇಳುತ್ತೇನೆ. ಆಗ ಅವರು ಇಲ್ಲಾ ಸಾರ್ ಬಿಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಆಗ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ ಸುಮ್ಮನಾಗುತ್ತೇನೆ. ಆದರೆ ಪಾವಗಡದಲ್ಲಿ ನಡೆದಿರುತಕ್ಕಂತಹ ಕೃತ್ಯಕ್ಕೆ ತಾವು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದಿತ್ತು. ಇದರಿಂದ ಏನು ರೀ ಆಕ್ಷನ್ ಆಯಿತು? ಮಾನ್ಯ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಆ ಬಗ್ಗೆ ತಮ್ಮ ಪಕ್ಷದವರು ಮೆಚ್ಚಿಕೊಂಡಿರಬಹುದು. ಆ ಸ್ಟೇಟ್‌ಮೆಂಟ್ ಏನು ಎನ್ನುವುದನ್ನು ನಾನು ಸ್ವಲ್ಪ ಓದಿ ಹೇಳುತ್ತೇನೆ. ಅದು ಈ ರೀತಿ ಇದೆ. 'Hegde's outburst irks police officials, ಎಲ್ಲವನ್ನು ನಾನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಒಂದೆರಡು ಸೆಂಟೆನ್ಸ್ ಮಾತ್ರ ಹೇಳುತ್ತೇನೆ.

> 'It is no longer something heard only in whispers that legislators, not excluding ministers, bend themselves double to get the sub-inspectors of their choice and even their own caste or community, posted in police stations located in their respective constituencies. Postings and transfers have become quite common......'

Another

> "Agreed that the department has become rotten. But how can Mr. Hegde and his colleagues absolve themselves of all responsibility, when political interfearence has reached its zenith" asked a top official.
>
> A senior officer, who was immensely respected for his toughness not long ago but now languishing in an inconsequential post, said the practice of paying obesiance to the politicians began about five years ago and "the evil merely continues'. He charged that "yes men" had been appointed in certain keypositions to facilitate inteference. "They follow the orders because they are afraid of being dethroned."

Further it says :

> However a police officer admitted that most policemen were corrupt as they had to paya 'mamool' before joining the force or for getting a 'fertile' posting. The money usually goes to the politicians via middlemen. "No wonder, he goes about recovering this money the moment he joins the service and he has little motivation to be useful to the public".

So, politicians and political inferference unless that is removed there can be no clean administration.

ನಾನು ಅದು ಮಾಡುತ್ತೇನೆ, ಇದು ಮಾಡುತ್ತೇನೆ ಎಂದರೆ ಏನು ಪ್ರಯೋಜನ ಇಲ್ಲ. ಮಠಗಳ ಬಗ್ಗೆ ತಿಳಿದುಕೊಂಡಿರುವವರು ಇವರು ಮಿನಿಮಮ್ ಆಗಿ ರಾಜೀನಾಮೆಯನ್ನು ಕೊಡಲೇಬೇಕು. ಹಿಂದೆ ಒಂದು ಸಲ ಮಾಡಿದ್ದರು. ನನಗೆ ಅವರ ಬಗ್ಗೆ ವೈಯಕ್ತಿಕ ದ್ವೇಷ ಏನೂ ಇಲ್ಲ. ಇದು ಕಲೆಕ್ಟೀವ್ ರೆಸ್‌ಪಾನ್ಸಿಬಿಲಿಟಿ. ಒಂದು ಡಿಪಾರ್ಟ್‌ಮೆಂಟಿನಲ್ಲಿ ಇಷ್ಟೊಂದು ಅಲಿಗೇಷನ್ ಬಂದಿದೆ. ಮತ್ತೆ ಕಳೆದ ೨೦ ತಿಂಗಳುಗಳಿಂದ ಜಾಸ್ತಿ ಜಾಸ್ತಿ ಯಾಗುತ್ತಿದೆ. ಹಲವಾರು ಘಟನೆಗಳು ನಡೆದಿದೆ, ಗುರುಮಿಠಕಲ್, ತುಮಕೂರು, ಬೆಂಗಳೂರು, ಪಾವಗಡದಲ್ಲಿ ಇಂಥ ಹಲವಾರು ಘಟನೆಗಳು ನಡೆದಿದೆ. ಈ ರೆಸ್‌ಪಾನ್ಸಿಬಿಲಿಟಿ ಅವರುಗಳದೇ ಇರಬೇಕಾದರೆ ಮಿನಿಮಂ ಎಂದರೆ ರಾಜೀನಾಮೆ ಕೊಡಬೇಕಾಗುತ್ತದೆ. "I have not been able to control, let me resign and go" if this had been done I would have appreciated .....

ಒಬ್ಬ ಮಾನ್ಯ ಸದಸ್ಯರು.—ರಾಜೀನಾಮೆ ಕೊಟ್ಟರೆ ವಾಪಸ್ಸು ಕರೆದುಕೊಂಡು ಬರುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಜೀನಾಮೆ ಕೊಟ್ಟು ಅವರನ್ನು ಮತ್ತೆ ಕರೆದುಕೊಂಡು ಬಂದರೆ ಅದು ಅವರ ಪಾರ್ಟಿ ವಿಷಯ. ಆದರೆ ನಮ್ಮ ದೇಶದಲ್ಲಿ ಒಳ್ಳೆಯ ಪರಂಪರೆಯುಳ್ಳ ಜನ, ಲಾಲ್‌ಬಹದ್ದೂರ್ ಶಾಸ್ತ್ರಿಯಂಥ ಜನ ಇದ್ದಾರೆ. ಆ ಪರಂಪರೆಗೆ ಇವರು ಸೇರಿಕೊಂಡವರು ಎಂದು ಹೇಳಿಕೊಳ್ಳುತ್ತಿದ್ದಾರೆ. ಆ ಪರಂಪರೆಗೆ ಸೇರಿಕೊಂಡಿದ್ದರೆ ಮಿನಿಮಂ ಆಗಿ ಈ ಕೆಲಸವನ್ನು ಮಾಡಲೇಬೇಕಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಮಧುಗಿರಿಯಲ್ಲಿ ನಡೆದಂಥ ಪ್ರಕರಣದಲ್ಲಿ ಅವರ ಪಾರ್ಟಿಯವರೇ ಆದ ಮಾನ್ಯ ಎಂ. ವಿ. ರಾಮರಾವ್‌ರವರು ರಾಜೀನಾಮೆ ಕೊಡಲಿಲ್ಲವೇ ?

ಶ್ರೀ ಎಂ. ಎಸ್. ಕೃಷ್ಣನ್.—ಹೌದು. ಬಹಳ ಒಳ್ಳೆಯ ವಿಷಯವನ್ನೇ ಜ್ಞಾಪಿಸಿದ್ದೀರಿ. ನಾನು ಹೆಗಡೆಯವರ ಬಗ್ಗೆ ಅಸೂಯೆ ತಳೆದು ಅವರು ತೊಲಗಿಹೋಗಿಬಿಡಲಿ ಎಂದು ಈ ರೀತಿ ಮಾತ ನಾಡುತ್ತಿಲ್ಲ. ನಾನು ಯಾವ ದೃಷ್ಟಿಯಿಂದಲೂ ಹೇಳುತ್ತಿಲ್ಲ. ಈ ರೀತಿ ಮಾಡಿರುವುದು ಸರಿಯಲ್ಲ. ಇದಕ್ಕೆ ಅವರಿಬ್ಬರೂ ರಾಜೀನಾಮೆಯನ್ನು ಕೊಡಬೇಕಾಗುತ್ತದೆ. ಅವರುಗಳಿಗೆ ಕಲೆಕ್ಟೀವ್ ರೆಸ್‌ಪಾನ್ಸಿಬಿಲಿಟಿ ಇದೆ. ಇಬ್ಬರೂ ರಾಜೀನಾಮೆಯನ್ನು ಕೊಡಬೇಕಾಗುತ್ತದೆ. ಇದನ್ನು ಮಾಡದೇ ಹೋದರೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿದರೆ ಏನು ಪ್ರಯೋಜನ ? ಇದಕ್ಕಾಗಿಯೇ ಪೋಲೀಸ್ ಫೈರಿಂಗ್ ನಡೆಯಬೇಕಾಗಿರಲಿಲ್ಲ. ನಾನು ತಮ್ಮಷ್ಟು ಲಾ ಓದಿಲ್ಲ. ಆದರೆ ಅಲ್ಲಿರುವಂಥ ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟ್, ಅಲ್ಲಿರುವ ತಹಶೀಲ್ದಾರರನ್ನು ಕನ್‌ಸಲ್ಟ್ ಮಾಡಿ ಅವರನ್ನು ಒಪ್ಪಿಸಿ ಮಾಡಿದ್ದಾರೆ ಎಂದರೂ ಆ ರೀತಿ ಆಗಿಲ್ಲ. ಅಲ್ಲಿ ಯಾರ ಮೈಮೇಲೂ ಬೀಳಲಿಲ್ಲ, ಅಲ್ಲಿ ಏನನ್ನು ಸುಟ್ಟುಹಾಕಿಲ್ಲ. ಸಡನ್ ಆಗಿ ಪೋಲೀಸ್ ಫೈರಿಂಗ್ ಮಾಡಿದರು. ಅಲ್ಲಿಯೇ ತಹಶೀಲ್ದಾರ್ ಇದ್ದರೂ ಅವರನ್ನು ಸಹಾ ಕೇಳಲಿಲ್ಲ. ತಹಶೀಲ್ದಾರ್ ರರಿಗೆ ಯಾರೋ ತಿಳಿಸಿದ್ದಾರೆ, ಅಲ್ಲಿ ಗಲಾಟೆಯಾಗುತ್ತಿದೆ ಎಂದು. ಅಲ್ಲಿ ಜೀಪು ಸಹ ಬರಲಿಲ್ಲ. ಯಾರನ್ನು ಕೇಳಲಿಲ್ಲ, ಫೈರಿಂಗ್ ಮಾಡಿದರು. ಯಾವ ಅಧಿಕಾರಿಯನ್ನೂ ಸಹ ಇವರು ಕನ್‌ಸಲ್ಟ್ ಮಾಡಿಲ್ಲ. ಇದಕ್ಕಿದ್ದಂತೆ ಫೈರಿಂಗ್ ಮಾಡಿದ್ದಾರೆ. ಇದು ಅಕ್ಷಮ್ಯ ಅಪರಾಧ, ಶೀರಾ ಘೋರ ವಾದುದು. For atonement of sin committed by the department you should resign. That is what I want to say.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ವಿರೋಧ ಪಕ್ಷದ ನಾಯಕರು ಹಾಗೂ ವೆಂಕಟರಾಮಯ್ಯನವರು ಮತ್ತು ಕೃಷ್ಣನ್‌ರವರು ಹೇಳಿದ್ದಾರೆ. ಕೆಲವು ವಿಷಯಗಳನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಅದರಲ್ಲಿ ಈ ಒಂದು ಇನ್‌ಸಿಡೆಂಟನ್ನು ಪದ್ಮಮ್ಮ ಮತ್ತು ನಾರಾಯಣಸ್ವಾಮಿ ಅವರ ಮೇಲೆ ನಡೆದಂಥ ಹಲ್ಲೆಯ ಬಗ್ಗೆ ಹೇಳುತ್ತೇನೆ. ಗುರುಮಿಠಕಲ್ ಆದ ನಂತರ ಕೇವಲ ಒಂದು ತಿಂಗಳು ಅಂತರದೊಳಗೆ ಈ ಒಂದು ಇನ್‌ಸಿಡೆಂಟ್ ಪುನಃ ಪಾವಗಡದಲ್ಲಿ ಪೋಲೀಸರು ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ರಾಚಯ್ಯನವರು ಪೋಲೀಸರು ಮಾಡಿದಂಥ ಕೆಲಸಕ್ಕೆ ಅವರು ಒಪ್ಪಿಲ್ಲ ಮತ್ತು ಪೋಲೀಸರ ಕಾನ್‌ಫರೆನ್ಸ್‌ನಲ್ಲಿ ಹೆಗಡೆಯವರು ಬ್ಲಾಸ್ಟ್ ಮಾಡಿದ್ದಾರೆ, ರಾಚಯ್ಯನವರೂ ಕೂಡಾ ಬಹಳ ಮನನೊಂದು ಹೇಳಿದ್ದಾರೆ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಪೇಪರ್‌ನಲ್ಲಿ ಕೂಡಾ ನಾವು ಓದಿದ್ದೇವೆ, ಮತ್ತು ಅನೇಕ ಕಡೆ ಅವರೂ ಕೂಡಾ ಹೇಳಿದ್ದಾರೆ

ಇಷ್ಟೆಲ್ಲಾ ಆದರೂ ಕೂಡ, ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ನಡೆದುದು, ಈ ಒಂದು ಸಂಗತಿ ಮಾತ್ರವಲ್ಲ. ಪಾವಗಡದಲ್ಲಿ ಮಾತ್ರ ಇವೊತ್ತಿನ ದಿವಸ ಪೋಲೀಸರ ಅಚಾತುರ್ಯದಿಂದ, ಅಥವಾ

ಕಣ್ಣಿಣ್ಣತಪ್ಪಿ, ಕೈ ತಪ್ಪಿ ನಡೆದಂತಹ ಒಂದು ಘಟನೆ ಎಂದು ಹೇಳುವಂತಿಲ್ಲ. ಇದೇ ರೀತಿಯಲ್ಲಿ ಅನೇಕ ಘಟನೆಗಳು ನಡೆದವು. ಮಾನ್ಯ ಮುಖ್ಯ ಮಂತ್ರಿಗಳವರು ಒಪ್ಪಿಕೊಂಡ ಹಾಗೆ, ಗುರುಮಿಟ್ಕಲ್‌ನಲ್ಲಿ ನಡೆಯಿತು, ಬೆಂಗಳೂರು, ತುಮಕೂರು, ಮೈಸೂರು, ಕೋಲಾರ, ಹೀಗೆ ನಾನಾ ಕಡೆಗಳಲ್ಲಿ ಇಂತಹ ಘಟನೆಗಳು ನಡೆದವು. ಇಂತಹ ಘಟನೆಗಳು ಅನಾವಶ್ಯಕವಾಗಿ ನಡೆಯಿತು ಎಂದು ಅವರೇ ಒಪ್ಪಿ ಕೊಂಡಿದ್ದಾರೆ. ಹಾಗೆ ತಾವುಗಳು ಒಪ್ಪಿಕೊಂಡಮೇಲೆ ಅಧಿಕಾರಸ್ಥಾನದಲ್ಲಿರಲು ಯಾವ ನೈತಿಕ ಹಕ್ಕು ತಮಗೆ ಇದೆ ಎಂದು ನಾನು ಕೇಳುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳವರಿಗಾಗಲೀ, ಗೃಹಸಚಿವ ರವರಿಗಾಗಲೀ, ತಮ್ಮ ಸ್ಥಾನದಲ್ಲಿ ಮುಂದುವರಿಯಲು ಯಾವ ಅಧಿಕಾರ ಇದೆ ಎಂದು ನಾನು ಕೇಳು ತ್ತಿದ್ದೇನೆ. ಅಂಥಹ ಒಂದು ನೈತಿಕತೆ ತಮ್ಮಲ್ಲಿ ಇದ್ದಿದ್ದರೆ, ಇಂತಹ ಘಟನೆಗಳು ನಡೆದ ತತ್‌ಕ್ಷಣ ಘಟನೆಯ ವಾಸ್ತವತೆಯು ಮನವರಿಕೆಯಾದ ಕೂಡಲೇ ಅಧಿಕಾರವನ್ನು ತ್ಯಜಿಸ ಬೇಕಾಗಿತ್ತು. ಹಿಂದೆ ಇದೇ ರೀತಿಯಲ್ಲಿ ನಿಮ್ಮ ಅಧಿಕಾರಿಗಳು ನಡೆದುಕೊಂಡಾಗ ಆಗಿನ ಗೃಹಸಚಿವರಾಗಿದ್ದ ಎಂ. ವಿ. ರಾಮ ರಾವ್‌ರವರು ಮಧುಗಿರಿ ಪ್ರಕರಣದಲ್ಲಿ ರಾಜೀನಾಮೆ ಕೊಟ್ಟಿದ್ದರು. ಅವರು ಘಟನೆಯ ಗಂಭೀರತೆ ಯನ್ನು ತಿಳಿದು ತತ್‌ಕ್ಷಣ ರಾಜಿನಾಮೆಯನ್ನು ಕೊಟ್ಟರು. ತಾವುಗಳು ಯಾವ ಯಾವ ಕಾರಣ ಕ್ಕಾಗಿಯೋ ರಾಜೀನಾಮೆ ಕೊಡುತ್ತೀರಿ, ಆದರೆ ಇಂತಹ ಘಟನೆಯ ಬಗ್ಗೆ ಮೌನವಾಗಿದ್ದೀರಿ. ಜನರಲ್ ಅಡ್ಮಿನಿಸ್ಟ್ರೇಟೀವ್ ಡಿಪಾರ್ಟ್‌ಮೆಂಟ್ ಮತ್ತು ಪೋಲೀಸ್ ಇಲಾಖೆಯ ಮೇಲಿನ ಅಧಿಕಾರವನ್ನೂ ಕೂಡ ತಾವುಗಳು ಇಟ್ಟುಕೊಂಡಿದ್ದೀರಿ. ಆದರೂ ಕೂಡ ದೊಡ್ಡ ಹೊಣೆಗಾರಿಕೆಯನ್ನು ಹೊತ್ತು ಕೊಂಡಿದ್ದರೂ ಕೂಡ, ಪದೇ, ಪದೇ, ಬೇರೆ ರೀತಿಯ ಹೇಳಿಕೆಗಳನ್ನು ಕೊಡುತ್ತಾ ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದೀರಿ. ತಮ್ಮ ಹೊಣೆ, ಕರ್ತವ್ಯ, ಜವಾಬ್ದಾರಿಗಳ ಕಡೆಗೆ ನಿರ್ಲಕ್ಷಭಾವದಿಂದ ಇದ್ದೀರಿ, ಇದು ನಿಜಕ್ಕೂ ತುಂಬಾ ನಾಚಿಕೆಗೇಡು ಎಂದು ಹೇಳಬೇಕಾಗುತ್ತದೆ. ಇಂತಹ ಒಂದೊಂದು ಸಂಗತಿ ಆದಮೇಲೆ ಆ ಅಧಿಕಾರಿಗಳನ್ನು ಕರೆಯಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದರ ಮೂಲಕ ಸರಿ ಯಾದ ದಾರಿಗೆ ತರಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ ಎರಡು ತಿಂಗಳಿಗೊಮ್ಮೆ, ಮೂರು ತಿಂಗಳಿ ಗೊಮ್ಮೆ, ಎಸ್. ಪಿ. ಮುಂತಾಗಿ ಅಧಿಕಾರಿಗಳನ್ನು ಕರೆಯಿಸಿ ಕಾನ್‌ಫೆರೆನ್ಸ್ ನಡೆಸುತ್ತೀರಿ. ಯಾವಾಗ ಪೋಲೀಸ್ ಅಧಿಕಾರಿಗಳು ಇಂಥಹ ಘಟನೆಗಳಿಗೆ ಕಾರಣರು ಎಂದು ಮನವರಿಕೆ ಆದಮೇಲೆ, ಯಾವರೀತಿ ಯಲ್ಲಿ ಬೆಂಗಳೂರು, ಮೈಸೂರು, ಕೋಲಾರ, ತುಮಕೂರು, ಹೀಗೆ ಅಲ್ಲಿ ನಡೆದ ಘಟನೆಗಳು ತಪ್ಪು ಎಂದು ನೀವೇ ಹೇಳುತ್ತಾ ಇದ್ದೀರಿ, ಅದೇರೀತಿ ನಡೆದ ಘಟನೆಗಳು ಮುಂದೆ ಪುನಃ ಆಗದ ರೀತಿಯಲ್ಲಿ ಎಚ್ಚರಿಕೆಯನ್ನು ತಾವುಗಳು ವಹಿಸಬಹುದಾಗಿತ್ತು. ಆದರೆ ಆ ದಿಸೆಯಲ್ಲಿ ಏನೂ ಶ್ರಮವನ್ನು, ಕರ್ತವ್ಯವನ್ನು ನೀವು ನಿರ್ವಹಿಸಲಿಲ್ಲ. ಘಟನೆಗಳು ಆದ ತತ್‌ಕ್ಷಣ ಮೃತರ ಕುಟುಂಬದವರಿಗೆ ೨೦ ಸಾವಿರ ರೂಪಾಯಿಗಳನ್ನು ಕೊಡುತ್ತೇವೆ, ನ್ಯಾಯಾಂಗ ವಿಚಾರಣೆ ಮಾಡುತ್ತೇವೆ ಎಂದು ಹೇಳುತ್ತೀರಿ. ಹಾಗೆ ಹೇಳಿದ ಕೂಡಲೇ ಜನರು ಶಾಂತರಾಗುತ್ತಾರೆ, ವಿಷಯವನ್ನು ಮರೆಯುತ್ತಾರೆ ಎಂಬ ಭಾವ ನೆಯು ತಮ್ಮಲ್ಲಿ ಬಂದಿದೆ.

ಇವೊತ್ತು ಒಬ್ಬ ಹೆಣ್ಣುಮಕ್ಕಳು ಎ.ಎನ್.ಎಂ. ಆಗಿಯಾಗಲೀ, ನರ್ಸ್‌ಗಳಾಗಿ ಯಾಗಲೀ ಹಳ್ಳಿ ಗಳಲ್ಲಿ ಕೆಲಸ ಮಾಡುತ್ತಿದ್ದಾಗ, ಅಂತಹವರ ಗತಿ ಏನು ? ಹೀಗೆ ನಡೆದರೆ ಮುಂದೆ ಯಾರು ಧೈರ್ಯ ದಿಂದ ಹಳ್ಳಿಗಳಲ್ಲಿ ಕೆಲಸ ಮಾಡಲು ಮುಂದೆ ಬರುತ್ತಾರೆ ? ಈಗಾಗಲೇ ನರ್ಸ್‌ಪೋಸ್ಟ್‌ಗಾಗಲೀ, ಎ.ಎನ್.ಎಂ ಪೋಸ್ಟ್‌ಗಳಿಗಾಗಲೀ ಬರುವ ಜನರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಇದೇ ಪರಿ ಸ್ಥಿತಿ ಮುಂದುವರಿದರೆ ಆ ಹುದ್ದೆಗಳಿಗೆ ಯಾರೂ ಬರುವುದಿಲ್ಲ. ಏಕೆಂದರೆ ಪೋಲೀಸರಿಂದ ಆಗಿರತಕ್ಕಂಥ ಅನ್ಯಾಯ ಆ ರೀತಿಯಲ್ಲಿ ಇದೆ. ಲಂಕೇಶ್ ಪತ್ರಿಕೆಯಲ್ಲಿ ಬಂದಂತಹ ವರದಿಯನ್ನು ಓದಿ ನೋಡಿದ ಯಾವ ತಂದೆತಾಯಿಗಳೂ ಕೂಡ ತಮ್ಮ ಮಕ್ಕಳನ್ನು ಆ ಕೆಲಸಕ್ಕೆ ಹಳ್ಳಿಗಳಿಗೆ ಕಳುಹಿಸಲಾರರು, ಯಾವ ಅಣ್ಣತಮ್ಮಂದಿರೂ ತಮ್ಮ ಸಹೋದರಿಯರನ್ನು ಆ ಕೆಲಸಕ್ಕೆ ಕಳುಹಿಸಲು ಒಪ್ಪಲಾರರು ಎಂದು ಹೇಳ ಬೇಕಾಗುತ್ತದೆ. ಅಂತಹ ಒಂದು ಪರಿಸ್ಥಿತಿಗೆ ತಾವುಗಳು ರಾಜ್ಯವನ್ನು ತಂದು ನಿಲ್ಲಿಸಿದ್ದೀರಿ.

ಕೆಲಸಗಾರರ ರಕ್ಷಣೆಯಾಗಲೀ, ಹೆಣ್ಣುಮಕ್ಕಳ ರಕ್ಷಣೆಯ ವಿಷಯದಲ್ಲಾಗಲೀ, ಅಲ್ಪಸಂಖ್ಯಾತರ ರಕ್ಷಣೆಯ ವಿಷಯದಲ್ಲಾಗಲೀ ಯಾರಿಗೂ ಯಾವ ರೀತಿಯಲ್ಲೂ ಸೂಕ್ತ ರಕ್ಷಣೆಯ ಭರವಸೆ ಇಲ್ಲದಾಗಿದೆ. ಹೀಗಾದ ಮೇಲೆ ತಾವುಗಳು ಯಾರಿಗೋಸ್ಕರವಾಗಿ ಅಧಿಕಾರವನ್ನು ಚಲಾಯಿಸುತ್ತಿದ್ದೀರಿ ? ತಮ್ಮ ರಾಜ್ಯದಲ್ಲಿ ಯಾರೂ ಕೂಡ ಸುರಕ್ಷಿತವಾಗಿ ಇಲ್ಲ. ಹೀಗೆಂದ ಮೇಲೆ ತಾವುಗಳು ಅಧಿಕಾರದಲ್ಲಿ ಏಕೆ ಇರಬೇಕು ? ಜನರನ್ನು ನೆಮ್ಮದಿಯಿಂದ, ಶಾಂತಿಯಿಂದ ಬಾಳುವಂತೆ ಮಾಡುವ ಒಂದು ವಾತಾವರಣ

ವನ್ನು ಸೃಷ್ಟಿ ಮಾಡುವುದು ಸರಕಾರದ ಆದ್ಯ ಕರ್ತವ್ಯವಾಗಿದೆ. ಅಂತಹ ಜನರು ತಮ್ಮ ಆಡಳಿತದಲ್ಲಿ ನೆಮ್ಮದಿಯಿಂದ ಬಾಳುವ ಸಂದರ್ಭ ಇಲ್ಲ ಎನ್ನುವುದಾದರೆ ಖಂಡಿತವಾಗಿಯೂ ಒಂದು ನಿಮಿಷವೂ ಕೂಡ ತಾವುಗಳು ಅಧಿಕಾರದಲ್ಲಿರತಕ್ಕಂಥ ಯೋಗ್ಯತೆ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗುತ್ತದೆ.

೧೧.೧೫ ಪಿ.ಎಂ.

ಇದು ಇಲ್ಲಿಗೇ ನಿಂತಿಲ್ಲ. ನಾನು ಒಂದು ವಿಷಯ ಹೇಳುತ್ತೇನೆ. ಈ ಘಟನೆಯಾದ ಮೇಲೆ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಏನು ಹೇಳಿದ್ದಾರೆ ಎಂದರೆ "ಉದ್ರಿಕ್ತ ಜನರು ನಿನ್ನೆ ಆದ ಗೋಲಿಬಾರಿನಿಂದ ಆವೇಶಭರಿತರಾಗಿ ಗೃಹಮಂತ್ರಿಗಳನ್ನು ಸುತ್ತುವರಿದು ಸುಮಾರು ಎರಡು ಗಂಟೆ ಹೇಳಿದ್ದನ್ನು ಗೃಹಮಂತ್ರಿಗಳು ಮೌನವಾಗಿ ಕೇಳಿದರು. ಎಂಥ ಸಂದರ್ಭ ಬಂದರೂ ಗೋಲಿಬಾರ್ ಮಾಡಬೇಡಿ ಎಂದು ಸರ್ಕಾರ ಆದೇಶ ನೀಡಿದೆ. ಆದರೂ ಪೋಲೀಸರು ಮೈಸೂರು ಬೆಂಗಳೂರು ತುಮಕೂರುಗಳಲ್ಲಿ ಕಳೆದ ತಿಂಗಳು ಗುಂಡು ಹಾರಿಸಿದರು. ಈಗ ಪಾವಗಡದಲ್ಲಿ ಅದನ್ನೇ ಮಾಡಿದರು. ಡಕಾಯಿತರು ಬಂದಾಗ ಹೊಡೆಯಿರಿ ಎಂದರೆ ಇವರು ಅವರ ಹತ್ತಿರ ಹೋಗದೆ ಅಮಾಯಕ ಜನರ ಮೇಲೆ ತಮ್ಮ ಪ್ರತಾಪ ತೋರಿಸಿದ್ದಾರೆಂದು ರಾಚಯ್ಯನವರು ಹೇಳಿದರು". ಈ ರೀತಿ ಪತ್ರಿಕೆಯಲ್ಲಿ ಬಂದಿದೆ. ಅಂದರೆ ತಾವು ಕೊಡುವ ಆದೇಶಕ್ಕೆ ಗೌರವ ಇಲ್ಲ. ತಮ್ಮ ಆರ್ಡರನ್ನು ಪೋಲಿಸ್ ಅಧಿಕಾರಿಗಳು ಮನ್ನಿಸುವುದಿಲ್ಲ ಎಂದ ಮೇಲೆ ತಾವು ಏಕೆ ಆ ಜಾಗದಲ್ಲಿ ಇರಬೇಕು ? ತಮ್ಮ ಆರ್ಡರನ್ನು ಇಂಪ್ಲಿಮೆಂಟ್ ಅವರು ಮಾಡುವುದಿಲ್ಲವೆಂದರೆ ಇಲ್ಲ ಅವರು ಇರಬೇಕು ಇಲ್ಲ ತಾವು ಆ ಜಾಗದಲ್ಲಿ ಇರಬೇಕು. ಆ ಧೈರ್ಯವನ್ನು ನೀವು ತೋರಿಸಿ.

ಗುಂಡು ಹಾರಿಸಬೇಡಿ ಎಂದು ತಾವೇ ಹೇಳುತ್ತಿದ್ದೀರಿ, ಅಲ್ಲದೆ ಗುಂಡು ಹಾರಿಸಿರುವುದು ಅನಾವಶ್ಯಕವಾಗಿತ್ತು ಎಂದು ಒಪ್ಪಿಕೊಂಡೂ ಇದ್ದೀರಿ. ಅಂದರೆ ಇದರಲ್ಲಿ ಒಂದು ರಾಜಕೀಯ ಇದೆ. ಒಂದು, ನೀವು ಮಾಡಿದಂಥ ಆರ್ಡರನ್ನು ಮುಖ್ಯಮಂತ್ರಿಗಳು ಇಂಪ್ಲಿಮೆಂಟ್ ಮಾಡಬೇಡಿ ಎನ್ನುತ್ತಾರೆ, ಇಲ್ಲ ಮುಖ್ಯಮಂತ್ರಿಗಳು ಬೇರೆ ಆರ್ಡರ್ ಕೊಡುತ್ತಿರಬೇಕು ಅಥವಾ ನೀವು ಕೊಡುತ್ತಿರಬೇಕು. ನಿಮ್ಮ ಮಾತಿಗೆ, ಜಿ.ಓ.ಗೆ ಬೆಲೆ ಇಲ್ಲ. ಸದನದಲ್ಲಿಯೇ ನೀವು ಅನೇಕ ಸಲ ಹೇಳಿದ್ದೀರಿ. ನನ್ನ ರೂಪ ನೋಡುವುದಕ್ಕೆ ಸೌಮ್ಯವಾಗಿದೆ, ಆದರೆ ನನ್ನ ಆರ್ಡರ್ಸ್ ಕಠಿಣವಾಗಿವೆ ಎಂದು. ಇದೇ ಏನು ನಿಮ್ಮ ಕಠಿಣತೆ ? ಅದನ್ನು ಅವರು ಯಾರೂ ಗಮನ ಕೊಡುತ್ತಿಲ್ಲ. ರಾಜಕಾರಣಿಗಳು ಅವರಿಗೆ ಬೇಕಾದಂಥ ಅಧಿಕಾರಿಗಳನ್ನೇ ಪ್ರೆಷರ್ ತಂದು ಹಾಕಿಸಿಕೊಳ್ಳುತ್ತಾರೆ. ಆಯಾ ಜಿಲ್ಲೆಯಲ್ಲಿ ಪೋಲೀಸ್ ಠಾಣೆಯಲ್ಲಿ ಏನು ಕೆಲಸ ನಡೆದರೂ ನಡೆಯುತ್ತದೆ. ಇದು ನೇರವಾಗಿ ಪೊಲಿಟಿಕಲ್ ಇಂಟರ್‌ಫಿಯರೆನ್ಸ್ ಆಗುತ್ತಿದೆ. ಇದನ್ನು ಸರಿಪಡಿಸುವುದಾಗಿ ಮುಖ್ಯಮಂತ್ರಿಗಳು ನೀವೂ ಹೇಳಿದ್ದೀರಿ ಮಾನ್ಯ ಮುಖ್ಯಮಂತ್ರಿಗಳಂತೂ ಪೋಲಿಸ್ ಕಾನ್‌ಫರೆನ್ಸ್‌ನಲ್ಲಿ ಬಹಳ ಕಠಿಣವಾಗಿ ಹೇಳಿದ್ದಾರೆ. ಇದರಿಂದ ಏನು ಅನ್ನಿಸುತ್ತಿದೆ ಎಂದರೆ ಟೀಕಿಸುವ ಅವಕಾಶವನ್ನು ಬೇರೆಯವರಿಗೆ ಕೊಡಬಾರದು. ಮೊದಲಿಗೇ ನಾವೇ ಟೀಕಿಸಿಬಿಟ್ಟರೆ ವಿರೋಧ ಪಕ್ಷದವರು, ಸಾರ್ವಜನಿಕರು ಟೀಕಿಸುವಂತಿಲ್ಲ ಎಂಬ ಭಾವನೆ ನಿಮ್ಮದು. ಆಗ ಜನರಿಗೆ ಏನಪ್ಪ ನಮ್ಮ ಮುಖ್ಯಮಂತ್ರಿಗಳೂ ಒಪ್ಪಿಕೊಂಡಿದ್ದಾರೆ. ಇಂಥ ಒಳ್ಳೆಯ ಮುಖ್ಯಮಂತ್ರಿಗಳು ಇನ್ನೆಲ್ಲಿ ಸಿಗುತ್ತಾರೆ ಎಂದು. ನಾನು ಹೇಳುತ್ತೇನೆ. ಈ ಲಿಪ್ ಸಿಂಪತಿ ಬೇಕಾಗಿಲ್ಲ, ರಾಜ್ಯದಲ್ಲಿ ಜನ ಹೇಗೆ ಸುರಕ್ಷವಾಗಿದ್ದಾರೆ ಎಂಬುದನ್ನು ತೋರಿಸಿ. ಅದನ್ನು ಬಿಟ್ಟು ಪೋಲಿಸರು ಏನು ಹೇಳುತ್ತಾರೆಂದರೆ

"The Chief Minister Ramakrishna Hegde on Wednesday lashed out at the State police for their warring image over the last two months which saw multiple firing incidents during the riots over a newspaper shortstory, the Garumitkal affair in which elected representatives were stripped and paraded by them and the Pavagada Firing the other day in which seven people died,

Mr. Hegde said angrily : 'The people are not your firing range Do not show your marksmanship on them why should you shoot at their chests and heads ?'.

ಎಂದರೆ ಅವರೇ ಒಪ್ಪಿಕೊಂಡಿದ್ದಾರೆ. ನೀವು ಮಾಡುವುದು ತಪ್ಪು. ಇದು ಸರಿಯಲ್ಲವೆಂದು ಹೇಳಿದ್ದಾರೆ. ಅಡ್ಮಿನಿಸ್ಟ್ರೇಷನ್‌ನಲ್ಲಿ ಬಿಗಿ ಇರಬೇಕು. ತಾವು ಏಕೆ ಇದರ ಬಗ್ಗೆ ಹೇಳಿಕೆ ಕೊಟ್ಟಿರಿ. ಇದನ್ನು ನೋಡಿದರೆ We can say that this Govt. is inefficient to run it. You are inefficient, You are incapable. This is what is being felt ಒಂದು ಕಡೆ ಸ್ಟೇಟ್‌ಮೆಂಟ್ ಕೊಡುವುದನ್ನು ನೋಡಿದರೆ ನೀವು ಈ ರಾಜ್ಯದ ಆಡಳಿತ ಮಾಡಲು ನಿಮ್ಮಲ್ಲಿ ಯೋಗ್ಯತೆ ಇಲ್ಲವೆಂದು ತೋರಿಸುತ್ತದೆ ಅದು ಇದ್ದಿದ್ದರೆ ನೀವು ಈ ರೀತಿಯಾಗಿ ಹೇಳತಕ್ಕಂಥ ಪ್ರಶ್ನೆ ಬರುತ್ತಿರಲಿಲ್ಲ. ನೀವು ಗುಂಡು ಹಾರಿಸಬೇಡಿ, ತಲೆ ಮೇಲೆ, ಚೆಸ್ಟ್ ಮೇಲೆ, ಹೊಟ್ಟೆ ಮೇಲೆ ಹೊಡೆಯಲು ಹೇಳಲಿಲ್ಲ ಎಂದರೆ ನಿಮ್ಮ ಮಾತು ಕೇಳಲು ಅವರು ತಯಾರಿಲ್ಲ. ಹಾಗಾದರೆ ನೀವು ಏಕೆ ಇರಬೇಕು. ಆಡಳಿತ ಮಾಡಬೇಕು.

ಇದಾದ ನಂತರ ಇನ್ನೊಂದು ಫನ್ನಿ ಥಿಂಗ್ ಎಂದರೆ ಇವರ ಮಾತಿಗೆ ಎಷ್ಟು ಬೆಲೆ ಇದೆ ಎಂದು ಗೊತ್ತಾಗುತ್ತದೆ. ಇವರಿಗೆ ಹಾಗೂ ಈ ಸರ್ಕಾರಕ್ಕೆ ಅವರು ಎಷ್ಟು ಹೆದರುತ್ತಾರೆ ಎಂಬುದರ ಬಗ್ಗೆ ಒಂದು ಮಾತನ್ನು ಹೇಳುತ್ತೇವೆ. ೨೩ನೇ ತಾರೀಖು ಒಂದು ರಿಆಕ್ಷನ್ ಕೊಟ್ಟಿದ್ದಾರೆ. ಈಗಾಗಲೇ ಮಾನ್ಯ ಕೃಷ್ಣನ್ ಅವರು ಹೇಳಿದ್ದಾರೆ ಅದರಲ್ಲಿ ಏನು ರಿಆಕ್ಷನ್ ಕೊಟ್ಟಿದ್ದಾರೆ ಅಂದರೆ "Hegde's Ou burst, irks police Officials" ಮಾನ್ಯ ಮುಖ್ಯಮಂತ್ರಿಗಳೇ ಹೈಯೆಸ್ಟ್ ಅಥಾರಿಟಿ. ಇವೊತ್ತು ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ, ತದನಂತರ ನಂಬರ್ ಟೂ ಹೋಮ್ ಮಿನಿಸ್ಟರ್ ಅವರು ಮತ್ತೊಂದು ಕಡೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ಇಬ್ಬರ ಸ್ಟೇಟ್‌ಮೆಂಟನ್ನು ಅದೇ ಖಾತೆಯಲ್ಲಿ ಕೆಲಸ ಮಾಡತಕ್ಕವರು ಇದರ ಬಗ್ಗೆ ಒಂದು ಅಭಿಪ್ರಾಯ ಕೊಟ್ಟಿದ್ದಾರೆ. ಇವರು ಏನು ಹೇಳುತ್ತಾರೆ, ಅದೇನೆಂದರೆ

"A quick survey among the police, from the Sub-Inspector to the top officers level by ENS..."

This has come in Indian Express.

ಈ ಒಂದು ಇನ್ಸಿಡೆಂಟ್ ಆದ ನಂತರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಒಂದು ವರದಿ ಬಂದಿದೆ. ಇನ್ಸಿಡೆಂಟ್ ಆದ ನಂತರ ಅನೇಕ ನ್ಯೂಸ್ ಪೇಪರ್ ಏಜೆನ್ಸಿಗಳ ರಿಪೋರ್ಟರ್ಸ್‌ಗಳು ಚೀಫ್ ರಿಪೋರ್ಟರ್ಸ್‌ಗಳು ಆಲ್ಲಿ ಸರ್ವೇ ಮಾಡಿದ್ದಾರೆ.

ಅನೇಕ ಪೋಲೀಸ್ ಅಧಿಕಾರಿಗಳು ಅವರ ರಿಯಾಕ್ಷನ್ ಏನು ಎಂದು ಕೇಳಿದ್ದಾರೆ.

"A quick survey among the police. from the sub-insyecter to the top offiec invel. by ENS rtvealed that Mr. Hegde's outhur-t has resulted in widespread feeling of hurt and 5emoralisation."

ಇದು ಒಂದು ಕಡೆ ಬಿಟ್ಟು ನಂತರ ಅವರು ಪೋಲೀಸ್ ಇಲಾಖೆಯಲ್ಲಿ ಡೀಮಾರಲೈಸೇಷನ್ ಆದರೆ ನಾಳೆ ಯಾವ ಬಡವರೇ ಆಗಲಿ, ಟೆನೆಂಟ್ಸ್ ಆಗಲಿ, ಮೈನಾರಿಟೀಸ್ ಆಗಲಿ, ಹೆಣ್ಣು ಮಕ್ಕಳೇ ಆಗಲಿ, ಷೆಡ್ಯೂಲ್ಡ್ ಕ್ಯಾಸ್ಟ್, ವೀಕರ್ ಸೆಕ್ಷನ್ಸ್ ಜನರಾಗಲಿ ಇವರಿಗೆಲ್ಲಾ ಸೂಕ್ತ ಸೇಫ್-ಗಾರ್ಡ್ ಮಾಡತಕ್ಕಂಥ ಜವಾಬ್ದಾರಿಯನ್ನು ಪೋಲೀಸರು ತೆಗೆದುಕೊಂಡಿಲ್ಲ ಎಂದು ಈ ಒಂದು ಸ್ಟೇಟ್‌ಮೆಂಟಿನಿಂದ ಬರುತ್ತದೆ. ಇದು ಒಂದು ಕಡೆ. ಎರಡನೆಯದಾಗಿ

"...Although many senior officers concede that Mr. Hegde's remarks could be justified in the light of the Gurmitkal and Pavagada incidents. They point out that in his "Public relations drive" he has completely glossed

over the "roots of cancer" that has afflicted the police force for which he and his partymen have to take the blame."

"Agreedthat the department has become rotten, but how can Mr. Hegde and his collegues aboslve themselves of all responsibility, when political interfence has reached its zenith ,,asked a top official."

ಮಾನ್ಯ ಮುಖ್ಯಮಂತ್ರಿಗಳು ಪೇಪರ್‌ನಲ್ಲಿ ಬಂದಿರತಕ್ಕಂಥ ಕಾಮೆಂಟ್ಸ್ ಅನ್ನು ತೆಗೆದುಕೊಂಡು ಓದಿದರೆ ಏನು ಪ್ರಯೋಜನ ? This is the public opinion gathered by the noted ENS Reporter which was appeared in a newspaper.

ಶ್ರೀ ರಾಮಕೃಷ್ಣ ಹೆಗಡೆ.—ಪೇಪರ್‌ನಲ್ಲಿ ಬಂದಿರುವುದೆಲ್ಲಾ ನಿಜವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪೇಪರ್‌ನಲ್ಲಿ ಬಂದಿರುವುದು ತಪ್ಪು ಅಥವಾ ತಾವು ಸ್ಟೇಟ್‌ಮೆಂಟ್ ಕೊಟ್ಟಿಲ್ಲ ಎಂದ ಮೇಲೆ ಅದನ್ನು ತಾವು ಡಿನೇ ಮಾಡಿದ್ದೀರಾ ? ಹೋಮ್ ಮಿನಿಸ್ಟರ್ ಡಿನೇ ಮಾಡಿದ್ದಾರೆಯೋ, ಹೋಮ್ ಸೆಕ್ರೆಟರಿ ಆಗಲಿ ಇದು ಸರಿಯಲ್ಲ ಎಂದು ಡಿನೇ ಮಾಡಿದ್ದಾರೆಯೋ ತಾವೇ ಆಗಲಿ ಪೊಲೀಸ್ ಅಧಿಕಾರಿ ಡಿ. ಐ. ಜಿ. ಆಗಲೀ ಡಿನೇ ಮಾಡಿ ಹೇಳಿಕೆ ಕೊಟ್ಟಿದ್ದೀರಾ ? ಇಲ್ಲ, ಕೊಟ್ಟಿಲ್ಲ. ಪೇಪರ್‌ನಲ್ಲಿ ಬಂದಿರುವುದು ತಪ್ಪು ಎಂದು ಹೇಳಿದ್ದರೆ ನಾನು ಇದರ ಬಗ್ಗೆ ಹೆಚ್ಚು ಮಾತನಾಡುತ್ತಿರಲಿಲ್ಲ. ಆದರೆ ಇವರು ಇದೇ ಹೌಸ್‌ನಲ್ಲಿ ಜಗತ್ತಿನಲ್ಲಿ ಇರತಕ್ಕಂಥದ್ದರ ಬಗ್ಗೆ ಎಲ್ಲಾ ರೆಫರ್ ಮಾಡುತ್ತಾರೆ. ಬಿಹಾರ್‌ನಲ್ಲಿ ಹೀಗೆ ಆಗಿದೆ, ಉತ್ತರಪ್ರದೇಶದಲ್ಲಿ ಹಾಗೆ ಆಗಿದೆ, ಜಮ್ಮು ಕಾಶ್ಮೀರದಲ್ಲಿ ಹಾಗೆ ಆಗಿದೆ ಎಂದು ಹೇಳುತ್ತಾರೆ. ಆದ್ದರಿಂದ ನೀವು ನಮ್ಮ ವಾದವನ್ನು ಸಮಾಧಾನದಿಂದ ಕೇಳಬೇಕು. ನಿಮಗೆ ವಿರೋಧವಾಗಿರುವುದರಿಂದ ಇದನ್ನು ಕೇಳಲು ತಾವು ತಯಾರಾಗಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಪಂಜಾಬಿನಲ್ಲಿ ೬ ಕೋಟಿ ರೂಪಾಯಿಗಳನ್ನು ದರೋಡೆ ಮಾಡಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರನ್ನು ಬೇಕಾದರೆ ಪಂಜಾಬಿಗೆ ಕಳಿಸಿ.

ಶ್ರೀ ಜಿ. ನಾರಾಯಣ ಕುಮಾರ್.—ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ವಿಷಯವನ್ನು ತಿಳಿದುಕೊಂಡು ನೇರವಾಗಿ ಹೇಳಿದರೆ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ಬಂದಿರುವುದು ಪಬ್ಲಿಕ್ ಒಪೀನಿಯನ್. ನೀವು ಓದಲಿ ಬಿಡಲಿ ತಾವು ಓದಿದ್ದರೆ ಬಹಳ ಸಂತೋಷ ಆಗುತ್ತಿತ್ತು. ಓದಿದ ಕೂಡಲೇ ರಿಯಾಕ್ಷನ್ ಕೊಟ್ಟಿದ್ದರೆ ಚೆನ್ನಾಗಿ ಇರುತ್ತಾ ಇತ್ತು.

ಶ್ರೀ ಜಿ. ನಾರಾಯಣಕುಮಾರ್.—ನಮ್ಮ ಸರ್ಕಾರ ತಪ್ಪು ಮಾಡಿದರೂ ತಪ್ಪು ಎಂದು ಹೇಳತಕ್ಕಂಥ ಪರಿಪಾಠವನ್ನು ಇಟ್ಟುಕೊಂಡಿರತಕ್ಕಂಥವರು ನಾವು. ನಮ್ಮ ಮುಖ್ಯಮಂತ್ರಿಗಳು ದೊಡ್ಡ ಮನಸ್ಸಿನಿಂದ ತಪ್ಪನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ಪಂಪಾಪತಿ.—ಅವರು ಮಾಡಿದ್ದನ್ನೆಲ್ಲಾ ಮಾಡುತ್ತಿದ್ದೀರಿ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ ಏನಾದರೂ ಮುಂದೆ ಇದರಲ್ಲಿ ಒಳ್ಳೆಯದು ಇದ್ದರೆ ಹೇಳಿ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಹಲವಾರು ಬಾರಿ ಹೇಳಿದ್ದೇನೆ. ತಾವು ಸ್ಪೀಕರ್ ಅವರು ಈ ರೀತಿ ಮಾತನಾಡಬಾರದೆಂದು ಹೇಳಿದ್ದೆ. ತಾವು ಏತಕ್ಕೆ ಹೀಗೆ ಮಾತನಾಡುತ್ತೀರಿ ? ಮೈಸೂರು ಸಭೆಯಲ್ಲಿ ಈ ತರಹ ಮಾತನಾಡುವುದಿಲ್ಲ.

ಅಧ್ಯಕ್ಷರು.—ನೀವು ನನಗೆ ಹೀಗೆ ಹೇಳಬಾರದು. ನಾನು ಏನು ಹೇಳಿದೆ ಎಂದರೆ ಏನಾದರೂ ಒಳ್ಳೆಯದು ಇದ್ದರೆ ಹೇಳಿ ಎಂದು.

ಶ್ರೀ ಕೆ. ಮಲ್ಲಪ್ಪ.—ಈ ವಿಷಯದ ಬಗ್ಗೆ ಪತ್ರಿಕೆಯಲ್ಲಿ ಬಂದಿರುವುದನ್ನೆಲ್ಲಾ ಓದುತ್ತಾಯಿರುತ್ತಾ ಇದ್ದೀರಿ.

ಶ್ರೀಮತಿ ನಾಗರತ್ನಮ್ಮ.—ಮಾನ್ಯ ಮಲ್ಲಪ್ಪನವರೇ, ದಯಮಾಡಿ ನಾವು ಹೇಳುವುದನ್ನು ಕೇಳಿಸಿಕೊಳ್ಳಬೇಕು ಅವರು ಏತಕ್ಕೆ ಸಮಾಧಾನವಾಗಿ ಕುಳಿತು ಕೇಳಬಾರದು.

SRI M. MALLIKARJUNA KARGE.—"Lower level officers in many instances, have been posted at the 'behest' of politicians to the 'chosen' district, circle or even station. The sub-inspectors no longer care for Superintendents of Police. They know that they have political bosses to protect them and indulge in all kinds of nefarious activities. It is the officers who refuse to toe the politicians line...

ಎಂದು ಈ ರೀತಿ ಹೇಳಿದ್ದಾರೆ.

ಅವರು ತಮ್ಮ ತೊಂದರೆ ಏನು ಇದೆ ಎಂಬುದನ್ನು ಈ ಮೂಲಕ ತಿಳಿಸಿದ್ದಾರೆ. ಏತಕ್ಕೆ ಇಂತಹ ಇನ್ಸಿಡೆಂಟ್ಸ್‌ಗಳು ಆಗುತ್ತಾ ಇವೆ? ಇದಕ್ಕೆ ಕಾರಣರು ಯಾರು ಎಂಬುದನ್ನು ಕೂಡ ಹೇಳಿದ್ದಾರೆ. ಏತಕ್ಕೆ ನೀವು ಅವರ ಹೇಳಿಕೆಯ ಮೇಲೆ ರಿಯಾಕ್ಟ್ ಮಾಡಲಿಲ್ಲ?

ಪೊಲಿಟಿಷಿಯನ್ಸ್ ಇಂಟರ್‌ಫಿಯರ್ ಮಾಡುತ್ತಾ ಇದ್ದಾರೆ. ರಾಜಕೀಯ ಒತ್ತಡ ಇದೆ. ಅದಕ್ಕಾಗಿ ನಾವು ಏನೂ ಕೂಡ ಕಂಟ್ರೋಲ್ ಇಲ್ಲ ಎನ್ನತಕ್ಕ ಮಾತನ್ನು ಇವೊತ್ತಿನ ದಿವಸ ಪೋಲೀಸ್ ಮೇಲಧಿಕಾರಿಗಳು ಸ್ಟೇಟ್‌ಮೆಂಟ್ ಮೂಲಕ ಕೊಟ್ಟಿದ್ದಾರೆ. ನೀವು ಅದರ ಬಗ್ಗೆ ಎನ್‌ಕ್ವಯರಿ ಮಾಡಿಸಿ ಯಾರು ಕೊಟ್ಟಿದ್ದಾರೆ ಎಂಬುದನ್ನು ಕಂಡು ಹಿಡಿದಿದ್ದೀರಾ? ನಿಮ್ಮಲ್ಲಿ ಸಿ. ಓ. ಡಿ. ಇಂಟೆಲಿಜೆನ್ಸ್ ಬ್ಯೂರೋ ಎಲ್ಲಾ ಇದೆ. ಮುಂದೆ ಅದರಲ್ಲಿ ಏನು ಹೇಳಿದ್ದಾರೆ ಎಂಬುದನ್ನು ಸಹಾ ಓದುತ್ತೇನೆ.

"However, a police officer admitted that most policemen were corrupt as they had to pay a 'mamol' before joining the force or for getting a 'fertile' posting. The money usually goes to the politicians via middlemen. No wonder, he goes about recovering this money the moment he joins the service and he has little motivation to be useful to the public."

"But the problem is that politicians expect us to perform the role of 'devils' or most days in the year. And they wont us to become angels when thing get hot for them.,,

ಇದರ ಅರ್ಥ ತಮಗೆ ನೇರವಾಗಿ ಹೇಳಿದ್ದಾರೆ, ಯಾವಾಗ ಬೇಕು ಆಗ ಅವರನ್ನು ನೀವು ಉಪಯೋಗ ಮಾಡಿಕೊಳ್ಳುತ್ತೀರಿ, ನೀವು ಹೇಳಿದ ಹಾಗೆ ಕೇಳದಿದ್ದರೆ ನಾವು ಒಳ್ಳೆಯವರಲ್ಲ ಎನ್ನತಕ್ಕಂತಹ ಅಭಿಪ್ರಾಯವನ್ನು ಜನರಿಗೆ ಕೊಟ್ಟು ತಾವು ಉಳಿಯುತ್ತಿದ್ದೀರಿ ಎನ್ನತಕ್ಕಂತಹ ಮಾತನ್ನು ಇವೊತ್ತಿನ ದಿವಸ ಹೇಳಿದ್ದಾರೆ. ಇವೊತ್ತು ನೀವು ಅಧಿಕಾರದಲ್ಲಿದ್ದೀರಿ ನಿಮಗೆ ಹೇಳಬಹುದು ನಾಳೆ ಯಾರು ಅಧಿಕಾರಕ್ಕೆ ಬರುತ್ತಾರೆ ಅವರಿಗೆ ಹೇಳಬಹುದು ಏಕೆ ಹೀಗಾಗಿದೆ ಅದನ್ನು

ನೀವು ಏಕೆ ಇನ್‌ವೆಸ್ಟಿಗೇಷನ್ ಮಾಡಿಲ್ಲ ? ಇಲಾಖೆಯಲ್ಲಿ ಏನೋ ವ್ಯತ್ಯಾಸ ಇರುವುದರಿಂದ ಈ ರೀತಿಯಾಗಿ ಸ್ಟೇಟ್‌ಮೆಂಟ್‌ಗಳು ಬರಬೇಕು ಅದಕ್ಕೆ ವಿರುದ್ಧವಾಗಿ ತಮ್ಮ ಸ್ಟೇಟ್‌ಮೆಂಟ್‌ಗಳು ಇರಬೇಕೆಂದು ಹೇಳಿದರೆ. ಇವೊತ್ತಿನ ದಿವಸ ಈ ಇಲಾಖೆ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆಂದು ನಾವು ಭಾವಿಸುತ್ತೇವೆ. ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ ಅವರದ್ದು ಇಲ್ಲವೇ ? ಅವರು ಈ ಸಚಿವ ಸಂಪುಟದ ಕ್ಯಾಪ್ಟನ್ ಆಗಿದ್ದಾರೆ. ಈಗ ಕ್ಲಾಸ್-ಗಿ ಅಧಿಕಾರಿಗಳ ಟ್ರಾನ್ಸ್‌ಫರ್‌ಗಳೆಲ್ಲಾ ಅವರ ಮೇಲೆ ಇದೆ. ಇದರಲ್ಲಿ ತಮ್ಮ ಜವಾಬ್ದಾರಿ ಇದೆ ಇದಕ್ಕೆ ತಾವು ಹೊಣೆಗಾರರು. ಈ ಇನ್‌ಸಿಡೆಂಟ್ ಆದ ಮೇಲೆ ತಾವು ರಾಜೀನಾಮೆ ಕೊಟ್ಟರೆ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯಾದ ಮೇಲೆ ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆಯವರೇ ಹುಟ್ಟಿದ್ದಾರೆ ಮತ್ತೆ ಯಾರೂ ಹುಟ್ಟೇ ಇಲ್ಲ ಎನ್ನತಕ್ಕಂತಹ ಮಾತು ಬರುತ್ತದೆ ಆ ಹೆಸರು ತಮಗೆ ಬರಲಿ...

ಶ್ರೀ ಎಂ ರಘುಪತಿ.—ತನ್ನ ಬಾಯಿ ಚಪಲ ತೀರಿ ಹೋಯಿತಲ್ಲವೇ ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಷ್ಟು ಇನ್‌ಸಿಡೆಂಟ್ಸ್ ಆಗಿದ್ದರೂ, ನೀವು. ಅಧಿಕಾರಕ್ಕೆ ಬಂದ ನಾಲ್ಕು ವರ್ಷಗಳ ಅವಧಿಯಲ್ಲಿ ನೂರಾರು ಇನ್‌ಸಿಡೆಂಟ್ ಆಗಿವೆ. ಅದರಲ್ಲೂ ಎಲ್ಲದಕ್ಕಿಂತ ಕೆಟ್ಟ ಘಟನೆಗಳೆಂದರೆ ಪಾವಗಡ, ಬಳ್ಳಾರಿ ಮತ್ತು ಗುರುಮಿಠಕಲ್‌ನಲ್ಲಿ ಆದಂತಹ ಘಟನೆಗಳು. ಇಷ್ಟು ಘಟನೆಗಳಿಗೂ ಅವರು ಜವಾಬ್ದಾರರಾಗಿದ್ದಾರೆ. ಅವರಲ್ಲಿ ನೀತಿ ಇದ್ದರೆ. ಮೌಲ್ಯಾಧಾರಿತ ರಾಜಕಾರಣದಲ್ಲಿ ವಿಶ್ವಾಸ ಇರತಕ್ಕಂತಹವರಾಗಿದ್ದರೆ ಅವರು ರಾಜೀನಾಮೆ ಕೊಡಬೇಕೆಂದು ತಮ್ಮ ಮೂಲಕ ಹೇಳಲಿಚ್ಛಿಸುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ...

(ಗೊಂದಲ)

ಶ್ರೀ ಬಿ. ಲಕ್ಕಪ್ಪ —ಮಾನ್ಯ ಅಧ್ಯಕ್ಷರೇ, ನಾನು ಆ ಜಿಲ್ಲೆಯಿಂದ ಬಂದವನು ನನಗೂ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಅಧ್ಯಕ್ಷರೇ, ಈವರೆಗೆ ನಮ್ಮ ಪಕ್ಷದ ನಾಯಕಿಯವರು ಹಾಗೂ ವಿರೋಧ ಪಕ್ಷದ ಅನೇಕ ಸದಸ್ಯರು ಈ ಘಟನೆಯ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಈ ತುಮಕೂರು ಜಿಲ್ಲೆಯಲ್ಲಿ ನಡೆದ ಘಟನೆಯ ಬಗ್ಗೆ ಹೆಚ್ಚು ಮಾತನಾಡುವುದಕ್ಕಿಂತ ಮಾತನಾಡದೇ ಮೌನವಾಗಿರುವುದು ವಿಹಿತವೆಂದು ನನ್ನ ಅಭಿಪ್ರಾಯವಾಗಿದೆ. ಈ ವಿಷಯದಲ್ಲಿ ನಮ್ಮ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ತಮ್ಮ ನೀತಿಯನ್ನು ನೀತಿಯ ಹಿನ್ನೆಲೆಯಲ್ಲಿ ಇಡೀ ರಾಜ್ಯದ ನೀತಿಯನ್ನು ಸ್ಪಷ್ಟವಾಗಿ ಎರಡು ವಿಭಾಗಗಳನ್ನು ಮಾಡಿ, ರೂಪಿಸಿದ್ದಾರೆ. ಈ ರೀತಿ ಅತ್ಯಾಚಾರ ಎಸಗತಕ್ಕಂತಹ ಪೋಲೀಸ್ ವರ್ಗ ಒಂದು ಕಡೆ ಇನ್ನೊಂದು ಕಡೆ ಮಾನನೀಯರಾದ ಜನತೆ, ಇದಕ್ಕೆ ರಾಜಕೀಯ ಪಕ್ಷದ ಬೆಂಬಲ ಇಲ್ಲ ಎನ್ನುವ ದೃಷ್ಟಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರಿಂದ ಅವರನ್ನು ಅಭಿನಂದಿಸದೆ ಬೇರೆ ಗತ್ಯಂತರವಿಲ್ಲ. ಆದರೆ ಮುಂದಿನ ಪರಿಸ್ಥಿತಿ ಏನಾಗಿದೆ ಎಂಬುದರ ಬಗ್ಗೆ ಹೆಗಡೆಜೀಯವರು ವಿಶೇಷ ಗಮನವನ್ನು ಕೊಡಬೇಕು ಹೇಳಿದ ನೀತಿಯನ್ನು ಸ್ಪಷ್ಟವಾದ ರೀತಿಯಿಂದ ಆಚರಣೆಗೆ ತಂದು ಯಾರುಯಾರು ಇದಕ್ಕೆ ಸಂಬಂಧಿಸಿದ್ದಾರೆ ಅವರನ್ನು ಉಗ್ರವಾದ ಶಿಕ್ಷೆಗೆ ಗುರಿ ಪಡಿಸಿದರೆ ನಿಜವಾಗಿಯೂ ಇದಕ್ಕಿಂತ ಹೆಚ್ಚಾಗಿ ತಮ್ಮನ್ನು ಶ್ಲಾಘನೆ ಮಾಡುತ್ತೇವೆ. ಆದರೆ ತಾವು ಆ ರೀತಿ ಮಾಡಿಲ್ಲವೆಂದು ಕಳಕಳಿಯಿಂದ ಇಲ್ಲಿ ಹೇಳಬೇಕಾಗುತ್ತದೆ. ತಮ್ಮ ಕೈಯ್ಯಲ್ಲಿ ಅಸ್ತ್ರ ಇದೆ ಅದನ್ನು ಉಪಯೋಗ ಮಾಡಿ ಅಸ್ತ್ರ ಇಲ್ಲದ ಜನರು ದುರಾಚಾರ, ಅನಾಚಾರ ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ ಇಂತಹ ಸ್ಥಿತಿಯಲ್ಲಿ ಆಡಳಿತ ನಡೆಯುತ್ತಾ ಹೋದರೆ ನಿಜವಾಗಿಯೂ ಸರಕಾರ ಜನತೆಯನ್ನು ಕಾಯುತ್ತದೆಯೇ ಎಂದು ಜನರಿಗೆ ಅನುಮಾನಾಸ್ಪದವಾಗುತ್ತದೆ.

ಅತ್ಯಂತ ಕಡಿಮೆ ದರ್ಜೆಯ ಕಾರ್ಯಕ್ರಮವನ್ನು ನಾನು ಈ ಸರ್ಕಾರದಿಂದ ಅಪೇಕ್ಷೆ ಮಾಡುವುದು ಎಂದರೆ ಅಂದಿನ ಗೋಲಿಬಾರ್‌ಗೆ ಯಾರು ಹುಕುಂ ಮಾಡಿದರು, ಆ ಹುಕುಂ ಮಾಡಿದಂಥವರಿಗೆ ಶಿಕ್ಷೆ

ಕೆಳಗೆ ಗುನ್ನೆ ರಿಜಿಸ್ಟರ್ ಮಾಡಿ ಅವನನ್ನು ಜೈಲಿನಲ್ಲಿ ಹಾಕಿ, ಬೇಕಾದರೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹೋಗಿ ಬಿಡುಗಡೆ ಮಾಡಿ ಎಂದು ಹೇಳಬಹುದು. ಅದನ್ನು ಬಿಟ್ಟು ಜುಡಿಶಿಯಲ್ ಎನ್‌ಕ್ವೈರಿ ಮಾಡುತ್ತೇವೆ ಎಂದು ಹೇಳಿದರೆ ಹೇಗೆ ಆಗುತ್ತದೆ? ಕಣ್ಣಿಗೆ ಕಾಣದ್ದನ್ನು ತಪ್ಪು ಎಂದು ಕಂಡು ಬಂದರೆ ಆಗ ಜುಡಿಷಿಯಲ್ ಎನ್‌ಕ್ವೈರಿಗೆ ಹಾಕಿ, ಇಲ್ಲಿ ನಿಜವಾಗಿಯೂ ಕಣ್ಣಿಗೆ ಕಾಣುತ್ತಿದೆ. ಇವರು ಮಾಡಬಾರದಂಥ ಅಕೃತ್ಯಗಳನ್ನು ಮಾಡಿದಾರೆ ಒಬ್ಬನೂ ಸಹಾ ಇವರು ಮಾಡಿದಂಥ ಕೆಲಸ ಯೋಗ್ಯ ಎಂದು ಹೇಳುವುದಕ್ಕಾಗುವುದಿಲ್ಲ. ಮಾನವೀಯ ಸ್ತ್ರೀಯರೇ ಆಗಲೀ ನಮ್ಮ ಪಕ್ಷದ ಸ್ತ್ರೀಯರೇ ಆಗಲೀ ನಿಮ್ಮ ಪಕ್ಷದ ಸ್ತ್ರೀಯರೇ ಆಗಲಿ, ಇವೊತ್ತು ಯಾರೂ ಕೂಡ ತಲೆಯನ್ನು ಮೇಲೆ ಎತ್ತಿ ಓಡಾಡಲಿಕ್ಕೆ ಆಗುತ್ತಿಲ್ಲ. ಇಂಥ ಹೀನಾಯಮಾನ ಸ್ಥಿತಿ ಉಂಟಾಗಿದೆ. ಈ ರೀತಿಯಾಗಿ ಪೋಲೀಸರು ವರ್ತನೆಯನ್ನು ಮಾಡಿದ್ದಾರೆ. ಅಂದರೆ ಇವತ್ತಿನ ಸಂದರ್ಭದಲ್ಲಿ ನಾವು ಪತ್ರಿಕೆಯವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ ನೀವು ಹೇಳಿದಂಥ ಮಾತುಗಳನ್ನು ಬಹಳ ಸ್ಪಷ್ಟವಾಗಿ ಎತ್ತಿ ತೋರಿಸಿದ್ದಾರೆ. ಜನರಿಗೆ ನಮ್ಮ ಹೆಗಡೆಯವರು ಪರವಾಗಿಲ್ಲ, ನಮ್ಮ ಮುಖ್ಯ ಮಂತ್ರಿಗಳು ನಮ್ಮ ಹಿಂದೆ ಇದ್ದಾರೆ, ಅವರು ಪೋಲೀಸರನ್ನು ರಕ್ಷಣೆ ಮಾಡುವುದಿಲ್ಲ ಎನ್ನುವುದನ್ನು ಪತ್ರಿಕೆಯವರು ವ್ಯಕ್ತ ಮಾಡಿ ತೋರಿಸಿದ್ದಾರೆ. ಇದೇ ಪತ್ರಿಕೆಯವರು ಮತ್ತೆ ತನಿಖೆ ಮಾಡಿದಾಗ ಪೋಲೀಸ್ ಅಧಿಕಾರಿಗಳು ಅಹವಾಲನ್ನು ಕೊಟ್ಟಿದ್ದಾರೆ. ಆ ಹಿನ್ನೆಲೆ ಏನು ಇದೆ, ಆ ಅಹವಾಲಿನಲ್ಲಿ ಏನು ಇದೆ ಎಂದರೆ ಇವತ್ತು ಪೋಲೀಸರು ಹಾಗೆ ಹೀಗೆ ಎಂದು ಹೇಳುತ್ತಾರೆ, ನಾವು ಏನು ಮಾಡಬೇಕು ನಮ್ಮದು ತಪ್ಪಿಲ್ಲ ಎಂದು ಹೇಳಿ ಅಹವಾಲನ್ನು ಕೊಟ್ಟಿದ್ದಾರೆ. ಈ ರೀತಿ ಉಪಾಯ ಮಾಡಿ ಅಹವಾಲನ್ನು ಕೊಟ್ಟಿದ್ದಾರೆ. ಪಾವಗಡದಂಥ ನಿರುಪದ್ರವಿ ಪ್ರಾಣಿಗಳು ಕರ್ನಾಟಕದಲ್ಲಿ ಬೇರೆ ಕಡೆ ಇನ್ನೆಲ್ಲೂ ಇಲ್ಲ. ಆ ಜನರು ಬಹಳ ಉತ್ತಮ ಜನ. ಅಂಥ ಜನರ ಮೇಲೆ ಮಾಡಿರುವ ಈ ಕೊಲೆಯನ್ನು ಆ ಜನರ ಮೇಲೆ ರಾಮಕೃಷ್ಣ ಹೆಗಡೆಯವರು ನಿಜವಾಗಿಯೂ ೩೦೨ರ ಕೆಳಗೆ ಗುನ್ನೆ ರಿಜಿಸ್ಟರ್ ಮಾಡಿ, ಆ ರೀತಿಯಲ್ಲಿ ಗುನ್ನೆ ರಿಜಿಸ್ಟರ್ ಮಾಡಲಿಕ್ಕೆ ಬರುವುದಿಲ್ಲ ಎಂದು ಪೋಲೀಸ್ ಅಧಿಕಾರಿಗಳು ಏನಾದರೂ ಹೇಳಿದರೆ ಅಂಥ ಅಧಿಕಾರಿಯನ್ನು ಹುಚ್ಚಾಸ್ಪತ್ರೆಗೆ ಕಳುಹಿಸ ಬೇಕಾಗಿತ್ತು ಈ ಗುನ್ನೆ ರಿಜಿಸ್ಟರ್ ಮಾಡಿ ಕೀರ್ತಿಯನ್ನು ತಾವು ಪಡೆಯಿರಿ. ರಾಜೀನಾಮೆ ಕೊಡುವುದಕ್ಕಿಂತ ಈ ರೀತಿ ಗುನ್ನೆ ರಿಜಿಸ್ಟರ್ ಮಾಡಿ. ಅಂಥ ಅಪರಾಧಿಗಳನ್ನು ಶಿಕ್ಷೆಗೆ ಗುರಿ ಮಾಡಿದರೆ ತಾವು ಶಹಬಾಷ್ ಕೀರ್ತಿಗೆ ಪಾತ್ರರಾಗುತ್ತೀರಿ. ಹೋಂ ಮಿನಿಸ್ಟರನ್ನು ಬಹಳ ತೊಂದರೆಗೆ ಈಡು ಮಾಡಿಬಿಟ್ಟಿದ್ದೀರಿ. ಅವರು ಹೇಳುತ್ತಾರೆ, ನನಗೆ ನಿದ್ದೆಯೇ ಬರುವುದಿಲ್ಲ. ಆ ಹೆಣ್ಣುಮಗಳು ಕಣ್ಣೆದುರಿಗೆ ಬರುತ್ತಾಳೆ, ಜನ ಕಣ್ಣೆದುರಿಗೆ ಬರುತ್ತಾರೆ, ಗುಂಡು ಹೊಡೆದ ಹಾಗೆ ಆಗುತ್ತದೆ ಎಂದು ಹೇಳುತ್ತಾರೆ, ಅವರನ್ನು ಇಷ್ಟು ಏತಕ್ಕೆ ಕಷ್ಟಕ್ಕೆ ಗುರಿ ಮಾಡುತ್ತಿದ್ದೀರಿ. ಪೂರ್ತಿ ಅಧಿಕಾರವನ್ನು ಅವರಿಗೆ ಕೊಟ್ಟುಬಿಡಿ. ಮಾನ್ಯ ರಾಚಯ್ಯನವರೇ ಇದರಲ್ಲಿ ನಾನು ಕೈಹಾಕುವುದಿಲ್ಲ ಎಂದು ಹೇಳಿ. ನೀವು ಕೈ ಹಾಕುವುದಿಲ್ಲ ಕೈ ಹಾಕಿಸುವಂಥ ಜನ ಇದ್ದಾರೆ ಎಂದು ಹೇಳುತ್ತೇನೆ. ಕನಿಷ್ಟಪಕ್ಷ ಆ ಹೆಣ್ಣುಮಗಳ ಮೇಲೆ ಮಾಡಿದಂಥ ಅತ್ಯಾಚಾರಕ್ಕೆ ಗುನ್ನೆ ರಿಜಿಸ್ಟರ್ ಮಾಡಿ ಅವರು ಪೋಲೀಸರನ್ನು ತಮ್ಮ ಕೆಲಸಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ತಾವು ಅದನ್ನು ಬಂದ್ ಮಾಡಬೇಕು ಮತ್ತು ಇವತ್ತೂ ಸಹಿತ ನೀವು ಕನಿಷ್ಟಪಕ್ಷ ಗುನ್ನೆ ರಿಜಿಸ್ಟರ್ ಮಾಡಿ ಆ ಹೆಣ್ಣುಮಗಳ ಮೇಲೆ ಮಾಡಿದಂಥ ಅಪಮಾನದ ಬಗ್ಗೆ ೩೦೨ರ ಕೆಳಗೆ ಕೇಸ್ ರಿಜಿಸ್ಟರ್ ಮಾಡಿ. ಡಾಕ್ಟರುಗಳು ಹೇಳುವಾಗ ಬಹಳ ವರ್ಣನೆ ಮಾಡಿ ಹೇಳಿದ್ದಾರೆ. ಅದನ್ನು ಹೇಳುವುದಕ್ಕೆ ಆಗುವುದಿಲ್ಲ. ಆ ರೀತಿಯ ವರ್ಣನೆ ಮಾಡಲಿಕ್ಕೆ ಹೋಗುವುದಿಲ್ಲ. ಬಹಳ ಹೀನಾಯಮಾನಸ್ಥಿತಿಯಲ್ಲಿ, ಕಂಗಾಲಾಗಿ ಆ ಹೆಣ್ಣುಮಗಳನ್ನು ಇವೊತ್ತು ಅಲ್ಲಿಂದ ಕೋಲಾರಕ್ಕೆ ವರ್ಗ ಮಾಡಿ ಆರ್ಡರ್ ಕೊಡುತ್ತೀರಿ. ಇದು ಮನುಷ್ಯತ್ವವೇ? ಹೋಂ ಮಿನಿಸ್ಟರ್ ಹೆಲ್ತ್ ಮಿನಿಸ್ಟರ್‌ಗೆ ವರ್ಗದ ಆರ್ಡರ್ ಕೊಡುವುದಕ್ಕೆ ಯಾವ ಯಾವ ಅಧಿಕಾರಿ ಈ ರೀತಿ ಆರ್ಡರನ್ನು ಮಾಡಿದ್ದಾರೆ, ಆ ಅಧಿಕಾರಿಯನ್ನು ಕರೆಯಿಸಿ ತರಾಟೆಗೆ ತೆಗೆದುಕೊಳ್ಳಿ. ಇವತ್ತು ನೀವು ಅಲ್ಲಿ ಇರಬಹುದು, ನಾವು ಇಲ್ಲಿ ಇರಬಹುದು, ನಾವು ವಿರೋಧ ಪಕ್ಷದಲ್ಲಿ ಇದ್ದುಕೊಂಡು ಟೀಕೆ ಮಾಡಬಹುದು, ಆದರೆ ನಿಜವಾಗಿ ನಿಮ್ಮ ಬಗ್ಗೆ ನಮ್ಮ ಅಭಿಮಾನ ಅಧಿಕಾರಸ್ಥರಿಗಿಂತ ಹೆಚ್ಚಿಗೆ ಇದೆ ಎಂದು ತಾವು ದಯವಿಟ್ಟು ಮರೆಯಬಾರದು.

ಆದರೆ ಇಂತಹ ಹೆಣ್ಣುಮಗಳನ್ನು ವರ್ಗ ಮಾಡುವುದು ನ್ಯಾಯವಾಗುವುದಿಲ್ಲ. ಅದನ್ನು ತಾವು ವಿಚಾರ ಮಾಡಬೇಕು ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಚಾರ ಗೊತ್ತಿರಬಹುದೋ ಏನೋ ನನಗೆ ಗೊತ್ತಿಲ್ಲ. ಆ ಅಧಿಕಾರಿಗೆ ಗೋಲಿಬಾರ್ ಮಾಡುವುದಕ್ಕೆ ಆರ್ಡರ್ ಕೊಟ್ಟವರು ಯಾರು? ತಹಸೀಲ್ದಾರರು ಕೊಟ್ಟಿಲ್ಲ. ಪೋಲೀಸಿನವರು ಬಂದು ತಹಸೀಲ್ದಾರರನ್ನು ಹೊರಗೆ ಹೋಗಿರಿ ಎಂದು

ಹೇಳಿದರು. ಅಂಥವನನ್ನು ಅಂದರೆ ಆ ಅಧಿಕಾರಿಯನ್ನು ತೆಗೆದುಕೊಂಡು ಹೋಗಿ ಹೆಡ್ ಆಫೀಸಿನಲ್ಲಿ ಇಟ್ಟಿದ್ದೀರಿ. ಇದು ಅವನಿಗೆ ಪ್ರಮೋಷನ್ ಮಾಡಿದ ಹಾಗೆ ಆಗಲಿಲ್ಲವೆ? ಇದನ್ನು ನೋಡಿದರೆ ನೀವು ನಿರ್ಗತಿಕರಾದ ಜನರಿಗೆ ಶಿಕ್ಷೆ ಮಾಡುತ್ತಿದ್ದೀರಿ ಎಂದು ಗೊತ್ತಾಗುತ್ತದೆ ವಾಸ್ತವಾಂಶವನ್ನು ತಿಳಿಯಬೇಕು. ಅಂಥ ಜನರನ್ನು ಇಂತಹ ಅಪಾದನೆ ಮಾಡುವುದಕ್ಕೆ ಕೈಹಾಕಬೇಡಿರಿ. ನಾನು ಇನ್ನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ ಈ ಬಗ್ಗೆ ಒಂದೇ ಒಂದು ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ವಿಚಾರ ಮಾನ್ಯ ಮುಖ್ಯ ಮಂತ್ರಿಗಳಿಗೂ ಬೇಕಾಗಿದೆ, ಮತ್ತು ಈ ವಿಚಾರದಲ್ಲಿ ಜನರ ಅಭಿಪ್ರಾಯವನ್ನೂ ಸಹ ತಿಳಿಯಬೇಕಾಗಿದೆ. ಈ ದೃಷ್ಟಿಯಿಂದ ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ಈಗಲೂ ಸಮಯ ಮೀರಿಲ್ಲ. ತಾವು ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಲಿಕ್ಕೆ ಹೋಗಬೇಡಿರಿ. ಬೇರೆ ಮಾರ್ಗಗಳು ಇವೆ. ಯಾವ ಅಧಿಕಾರಿ ತಪ್ಪು ಮಾಡಿದ್ದಾನೆ ಅವನನ್ನು ಶಿಕ್ಷೆ ಮಾಡಲಿಕ್ಕೆ ಮ್ಯಾಜಿಸ್ಟ್ರೇಟರ ಕೈಯಲ್ಲಿ ಇದೆ. ಅವರಿಂದ ಶಿಕ್ಷೆ ಚೆನ್ನಾಗಿ ಆಗುತ್ತದೆ, Whether he is a culprit under Section 302 or not, whether he has exceeded his jurisdiction or not. ಆದುದರಿಂದ ತಾವು ಮತ್ತೊಂದು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಲಿಕ್ಕೆ ಹೋಗಬೇಡಿರಿ. ಈ ರೀತಿಯ ವಿಚಾರಣೆಗಳನ್ನು ಮಾಡಿ ನಮ್ಮ ರಾಜ್ಯದ ಬೊಕ್ಕಸವನ್ನು ಬರಿದು ಮಾಡುವುದಕ್ಕೆ ಹೋಗಬೇಡಿರಿ. ರಾಜ್ಯದ ಹಣವನ್ನು ಉಳಿಸಿರಿ. ಯಾರು ತಪ್ಪು ಮಾಡಿದ್ದಾರೆ ಅವರಿಗೆ ಯೋಗ್ಯ ಶಿಕ್ಷೆ ಮಾಡಿರಿ ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಎಸ್.ಕೃಷ್ಣನ್.—ಅಧ್ಯಕ್ಷರೇ, ಶ್ರೀ ಪಂಪಾಪತಿಯವರೂ ಕೂಡ ಇದರ ಬಗ್ಗೆ ಮಾತನಾಡಬೇಕೆಂದಿದ್ದಾರೆ.

ಅಧ್ಯಕ್ಷರು.—ಆಗಲಿ, ನೋಡೋಣ. ಈಗ ಮೊದಲು ಶ್ರೀಮಾನ್ ಬಸವಲಿಂಗಪ್ಪನವರು ಮಾತನಾಡಲಿ. ಅವರು ಮುಗಿಸಲಿ. ತಾವು ೧೦ ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಸನ್ಮಾನ್ಯ ಅಧ್ಯಕ್ಷರೆ, ಈ ಚರ್ಚೆ ಬಹಳ ಒಳ್ಳೆಯದು. ಬಹಳ ಪ್ರಾಮುಖ್ಯವಾದುದು. ಇದರ ಬಗ್ಗೆ ಈಗಾಗಲೇ ಅನೇಕ ವಿಷಯಗಳನ್ನು ಮಾನ್ಯ ಸದಸ್ಯರುಗಳು ತಿಳಿಸಿದ್ದಾರೆ ನಾನು ಅದೇ ವಿಷಯವನ್ನು ಮತ್ತೆ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಈಗ ಒಂದು ವಿಚಾರವನ್ನು ತಮ್ಮ ಮುಂದೆ, ಈ ಸಭೆಯ ಮುಂದೆ ಇಡುತ್ತೇನೆ. ಈಗ್ಗೆ ಸುಮಾರು ಮೂರು ವರ್ಷಗಳಿಂದ ರಾಜ್ಯದ ಆಡಳಿತ ನಡೆಸತಕ್ಕಂಥ ಜನತಾ ಪಕ್ಷ ಯಾವ ರೀತಿಯಾಗಿ ರಾಜ್ಯದ ಆಡಳಿತವನ್ನು ಮಾಡುತ್ತಿದೆ ಎನ್ನುವುದರ ಬಗ್ಗೆ ನಾವು ಹಿಂದೆ ಹಲವಾರು ಬಾರಿ ಹೇಳಿದ್ದೇವೆ. ಈ ಪೋಲೀಸ್ ಆಡಳಿತದಲ್ಲಿ ಇವರ ಆಡಳಿತ, ಇವರ ವೈಖರಿ ಯಾವ ರೀತಿ ಇದೆ ಎನ್ನುವುದನ್ನು ಹೇಳಿದ್ದೇವೆ ಈ ಪೋಲೀಸ್ ಅಧಿಕಾರಿಗಳಲ್ಲಿ ದುರ್ವರ್ತನೆ ಇದೆ ಎಂದು ಹೇಳುವುದಿಲ್ಲ ಆದರೆ ಅತೀವವಾಗಿರತಕ್ಕಂಥ ಅವರ ಕೆಟ್ಟ ಭಾವನೆಗಳು ಏನು ಇವೆ, ಅವನ್ನೇ ಅವರು ಮಾಡಿದ್ದೇ ಸರಿ ಎಂದು ಎಷ್ಟೋ ಸಾರಿ ಸರ್ಕಾರದಿಂದ ಉತ್ತರ ಬಂದಿದೆ. ಅವರು ಮಾಡಿದ್ದೇ ಸರಿ ಎಂದು ನೀವು ರಾಜ್ಯಭಾರ ಮಾಡುತ್ತಾ ಇರುವುದು ಅದರಂತೆ ನಿಮ್ಮ ಭಾವನೆಯನ್ನೂ ಸಹ ವ್ಯಕ್ತಪಡಿಸುತ್ತಾ ಇರುವುದು ಇದರ ಬಗ್ಗೆ ತಮ್ಮಿಂದ ಬಂದಂಥ ಉತ್ತರಗಳನ್ನೂ ಸಹ ನಾವು ಎಷ್ಟೋ ಬಾರಿ ಕೇಳಿದ್ದೇವೆ. ಇತ್ತೀಚೆಗೆ ಮೊದಲನೇಯ ಸಾರಿ ಶ್ರೀಮಾನ್ ರಾಚಯ್ಯನವರು ಮತ್ತು ಶ್ರೀಮಾನ್ ರಾಮಕೃಷ್ಣ ಹೆಗಡೆಯವರೂ ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಿರುವುದನ್ನು ನೋಡಿದ್ದೇವೆ. ಈ ಪತ್ರಿಕೆಗಳಲ್ಲಿ ಹೇಳಿಕೆ ಬಂದಿರುವುದನ್ನು ನೋಡಿದರೆ ಮಾನ್ಯ ಮುಖ್ಯಮಂತ್ರಿಗಳೇ ಈ ಪೋಲೀಸಿನವರ ಆಡಳಿತ ಸರಿಯಿಲ್ಲ ಎನ್ನುವುದನ್ನು ಅವರೇ ನೇರವಾಗಿ ಒಪ್ಪಿಕೊಂಡಿದ್ದಾರೆ ಎನ್ನುವ ಹಾಗೆ ಇದೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರೇ ಈ ಒಂದು ಜವಾಬ್ದಾರಿಯನ್ನು ನಿರ್ವಹಣೆ ಮಾಡಲಿಕ್ಕೆ ಸರಿಯಾಗಿ ಆಗದೆ ಇದು ಸರಿಯಾಗಿಲ್ಲ ಎನ್ನುವುದನ್ನು ಅವರೇ ಒಪ್ಪಿಕೊಂಡಿದ್ದಾರೆ. ಅಲ್ಲಿಗೆ ಏನಾಯಿತು ಎಂದರೆ ಪೋಲೀಸಿನವರು ತಮ್ಮ ಮಾತು ಕೇಳುವುದಿಲ್ಲ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ಈ ಬಗ್ಗೆ ಸರ್ಕಾರದವರು ಯಾವ ಒಂದು ಆದೇಶವನ್ನು ಹೊರಡಿಸುತ್ತಾರೋ ಆ ಆದೇಶವನ್ನು ಈ ಪೋಲೀಸಿನವರು ಸರಿಯಾಗಿ ಪಾಲಿಸುವುದಿಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ. ನಾನು ಕೇಳುತ್ತೇನೆ, ಪೋಲೀಸಿನವರು ಜನರ ರಕ್ಷಣೆ ಮಾಡುವುದನ್ನು ಬಿಟ್ಟು ಇವರಿಗೆ ''ಅರಕ್ಷಕರು'' ಎಂಬಂತೆ ವರ್ತಿಸುತ್ತಿದ್ದಾರೆ ಇವರು

''ಆರಕ್ಷಕರು'' ಎನ್ನುವ ಹೆಸರಿಗೆ ತಕ್ಕಂತೆ ಕೆಲಸ ಮಾಡುವುದಿಲ್ಲ. ''ಆಶ್ರಮ'' ಪದದ ಅರ್ಥ 'ಆ' ಎಂದರೆ ಕಂಪ್ಲೀಟ್, ಶ್ರಮ ಎಂದರೆ 'ಹಾರ್ಡ್‌ಷಿಪ್' ಆಶ್ರಮ ಎಂದರೆ ಪೂರ್ಣ ಶ್ರಮ ಜೀವನ ಎಂದರ್ಥ ಆರಕ್ಷಕರು ೧೦೦ಕ್ಕೆ ೧೦೦ ರಷ್ಟು ಚೆನ್ನಾಗಿ ಕೆಲಸ ಮಾಡಬೇಕೆಂದು ಮಾನ್ಯ ರಾಮಕೃಷ್ಣ ಹೆಗಡೆಯವರು ಸ್ಪಷ್ಟವಾಗಿ ಹೇಳಿದ್ದಾರೆ, ನಿಷ್ಠೆಯಿಂದ ಹೇಳಿದ್ದಾರೆ. ವಿರೋಧಪಕ್ಷದವರು ಈ ವಿಚಾರದಲ್ಲಿ ಆಗಾಗ್ಗೆ ಹೇಳುತ್ತಲೇ ಬಂದಿದ್ದಾರೆ. ಇವರು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ ಈ ಪೋಲಿಸ್ ಅಧಿಕಾರಿಗಳು ಏನು ಇದ್ದಾರೆ ಅವರು ಹಿಂದೆಯೂ ಇದ್ದರು ಮುಂದೆಯೂ ಇರುತ್ತಾರೆ ಈಗ ಇರತಕ್ಕಂಥ ಪೋಲೀಸ್ ಆಡಳಿತ ಸರಿಯಾಗಿಲ್ಲ. ಈ ಪೋಲೀಸ್ ವರ್ಗ ಏನು ಇದೆ, ಯಾರು ಇದರ ಮುಖ್ಯಸ್ಥರು ಇದ್ದಾರೆ ಅವರ ಬಗ್ಗೆ ನಾನು ಒಂದು ಮಾತು ಕೇಳುತ್ತೇನೆ. ಇದು ಸ್ಪಷ್ಟವಾಗಿರತಕ್ಕಂಥ ವಿಚಾರ.

ಈಗ ಈ ಇಲಾಖೆಯಲ್ಲಿ ಮುಖ್ಯಸ್ಥರಾದಂಥ ಅಧಿಕಾರಿಗಳು ಯಾರು ಇದ್ದಾರೆ. ಅವರು ಸರ್ಕಾರದ ಆದೇಶವನ್ನು ನಿಷ್ಠೂರವಾಗಿ ನಿರ್ವಹಣೆ ಮಾಡುವುದರಲ್ಲಿ ಅಸಕ್ತರಾಗಿದ್ದಾರೆಯೋ ಇಲ್ಲವೇ ಸರ್ಕಾರದ ಆದೇಶವನ್ನು ಧಿಕ್ಕಾರ ಮಾಡುತ್ತಿದ್ದಾರೆ ಎಂಬುದು ಸ್ಪಷ್ಟವಾಗಿ ವಿಚಾರ ಮಾಡಬೇಕಾಗುತ್ತದೆ. ಪಾವಗಡದ ಘಟನೆ ಮತ್ತು ಈ ಹಿಂದೆ ಪೋಲೀಸರು ಗುಂಡುಹಾರಿಸಿದಂಥ ಘಟನೆಗಳು ಏನಿವೆ, ಇವು ಸರಿಯಲ್ಲವೆಂದು ಶ್ರೀ ರಾಮಕೃಷ್ಣಹೆಗಡೆಯವರೇ ಹೇಳಿದ್ದಾರೆ, ಹಾಗೆ ನೋಡಿದರೆ ಗುಂಡು ಹಾರಿಸುವಂತಹ ಅಲ್ಲಿ ಪ್ರಮೇಯ ಬರುವುದಿಲ್ಲ, ನಮ್ಮ ಜನರನ್ನು ಹತೋಟಿಗೆ ತರಲು ಗುಂಡು ಹಾರಿಸಬೇಕಾಗಿಲ್ಲ. ಆದರೂ ಇವರು ಈ ಕೆಲಸ ಮಾಡುತ್ತಿದ್ದಾರೆ. ನನ್ನ ಒಂದು ಅನುಭವದಲ್ಲಿ ಹೇಳಬೇಕೆಂದರೆ ಯಾವ ಒಬ್ಬ ಅಧಿಕಾರಿ ಮೂರ್ಖನಾಗಿರುತ್ತಾನೆ, ಯಾವ ಅಧಿಕಾರಿಗೆ ಗರ್ವ ಬಂದಿರುತ್ತದೆ, ಅಂತಹವರು ಮಾತ್ರ ಇಂತಹ ಕೆಲಸ ಮಾಡುತ್ತಾರೆ. ಅಧಿಕಾರದ ಗರ್ವ ಯಾರ ತಲೆಗೆ ಹೋಗುತ್ತದೆ. ಅಂತಹವರು ಈ ರೀತಿ ಮಾಡುತ್ತಾರೆ. ನೂರಕ್ಕೆ ನೂರರಷ್ಟು ಅಧಿಕಾರಿಗಳು ಇಂತಹವರು ಎಂದು ನಾನು ಹೇಳುವುದಿಲ್ಲ. ನಾವು ಈಗ ಅಧಿಕಾರದಲ್ಲಿ ಇಲ್ಲ. ಆದರೆ ಇವರು ಯಾವ ರೀತಿ ವರ್ತನೆ ಮಾಡುತ್ತಿದ್ದಾರೆಂಬುದನ್ನು ನಾನು ಕಳೆದ ಮೂರು ವರ್ಷಗಳಿಂದ ನೋಡುತ್ತಿದ್ದೇನೆ. ಇವರ ಕರ್ತವ್ಯವಾದರೂ ಏನು ? ನಮ್ಮ ಸಮಾಜದಲ್ಲಿ ಶಾಂತಿಯನ್ನು ಸ್ಥಾಪನೆ ಮಾಡುವುದು, ಜನರ ಆಸ್ತಿ ಮತ್ತು ಪ್ರಾಣವನ್ನು ರಕ್ಷಣೆ ಮಾಡುವುದು. ಆದರೆ ಇವರು ಈ ಕೆಲಸ ಮಾಡುವುದನ್ನು ಬಿಟ್ಟು ಜನರನ್ನು ಹೆದರಿಸಿ ಹಣ ವಸೂಲಿ ಮಾಡುತ್ತಾರೆ, ತಮಗೆ ಯಾರು ಆಗುವುದಿಲ್ಲ. ಅಂತಹವರ ಮೇಲೆ ಮೊಕದ್ದಮೆಗಳನ್ನು ಹೂಡುತ್ತಾರೆ. ಇಂತಹ ಒಂದು ಪ್ರವೃತ್ತಿ ಈ ಪೋಲೀಸರಲ್ಲಿ ಬೆಳೆದಿದೆ. ಪೋಲೀಸರಲ್ಲಿ ಬೆಳೆದಿರುವಂತಹ ಈ ಒಂದು ಪ್ರವೃತ್ತಿಯನ್ನು ನೀವು ನಿಯಂತ್ರಣ ಮಾಡದಿದ್ದರೆ ನೀವು ದಕ್ಷರಲ್ಲ, ಅದಕ್ಷರು ಎಂದು ನಾವು ತೀರ್ಮಾನ ಕೈಕೊಳ್ಳಬೇಕಾಗುತ್ತದೆ. ಪಾವಗಡದ ಘಟನೆಯಲ್ಲಿ ಒಬ್ಬ ಹೆಣ್ಣು ಮಗಳಿಗೆ ಬಹಳಷ್ಟು ಚಿತ್ರಹಿಂಸೆಯನ್ನು ಕೊಟ್ಟಿದ್ದಾರೆ. ಈ ಹಿಂದೆ ಬ್ರಿಟಿಷರ ಕಾಲದಲ್ಲಿ ಒಂದು ಮಾತು ರೂಢಿಯಲ್ಲಿತ್ತು. ಅದು ಏನೆಂಬುದು ಇಲ್ಲಿರುವ ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಗೊತ್ತಿಲ್ಲದ ಸದಸ್ಯರಿಗೆ ಹೇಳುತ್ತೇನೆ. ಆಗ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್‌ನವರು ಹೋರಾಟ ಮಾಡುತ್ತಿದ್ದರು. ಆ ಒಂದು ಸಂದರ್ಭದಲ್ಲಿ ಒಬ್ಬ ಹೆಣ್ಣು ಮಗಳು ರೈಲು ಗಾಡಿಯಲ್ಲಿ ಕುಳಿತು ಕೇರಳಾದಿಂದ ಕಾಶ್ಮೀರದವರೆಗೆ ಪ್ರಯಾಣ ಮಾಡಿದರೆ ಯಾರೂ ಸಹ ಆ ಹೆಣ್ಣು ಮಗಳನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಿರಲಿಲ್ಲ ಮತ್ತು ಯಾರೂ ಸಹ ಅವಮಾನ ಮಾಡುತ್ತಿರಲಿಲ್ಲ. ಅಂತಹ ಒಂದು ವಾಡಿಕೆ ಮತ್ತು ನಂಬಿಕೆ ಈಗ ಇಲ್ಲ. ಇದಕ್ಕೆ ಕಾರಣವೇನು ? ಇಂತಹ ಪ್ರಕರಣಗಳು ನಡೆಯಲು ಕಾರಣವೇನು ? ಏನೋ ನ್ಯೂನತೆ ಇರಬೇಕು ? ತಾಯಿ ಸ್ಥಾನದಲ್ಲಿರುವ ಹೆಣ್ಣುಮಕ್ಕಳನ್ನು ಪೋಲೀಸರು ಇಷ್ಟೊಂದು ಅಮಾನುಷ ರೀತಿಯಲ್ಲಿ ನೋಡಲು ಕಾರಣವೇನು ? ಅವರಿಗೆ ಬೇರೆ ಕೆಲಸ ಇಲ್ಲವೇ ? ಹೆಣ್ಣು ಮಕ್ಕಳನ್ನು ಭೋಗ ವಸ್ತುವಿನ ರೀತಿಯಲ್ಲಿ ನೋಡುವಂತಹ ಪೋಲೀಸರು ಯಾರು ಯಾರು ಇದ್ದಾರೆ, ಅಂತಹವರ ವರ್ತನೆಯನ್ನು ನಾವೆಲ್ಲರೂ ಖಂಡನೆ ಮಾಡಬೇಕು ಮತ್ತು ಅಂತಹವರನ್ನು ಸ್ಥಳದಲ್ಲಿಯೇ ಕೆಲಸದಿಂದ ಡಿಸ್‌ಮಿಸ್ ಮಾಡಬೇಕು. You must dismiss such officers on the spot for having acted beyond the comp tence and powers given to them. What are the powers given to these officers ? It is clearly defined in the Indian Penal Code, the Criminal Procedure Code and other rules. If they cross beyond those powers

then we have to deal ith them firmly and sternly. Treat them as ordinary citizens and take action against them under the Indian Penal Code. ಯಾವ ಅಧಿಕಾರಿಯೇ ಆಗಿರಲಿ, ಅವರಿಗೆ ಕೊಟ್ಟಿರುವ ಅಧಿಕಾರ ವ್ಯಾಪ್ತಿಯನ್ನು ಬಿಟ್ಟು ಮುಂದಕ್ಕೆ ಹೋದರೆ, ಒಬ್ಬ ಸಾಮಾನ್ಯ ಮನುಷ್ಯ ತಪ್ಪು ಮಾಡಿದಾಗ ಐ.ಪಿ.ಸಿ. ಪ್ರಕಾರ ಕ್ರಮ ತೆಗೆದುಕೊಳ್ಳುವಂತೆ ಇವರ ಬಗ್ಗೆಯೂ ಕ್ರಮ ತೆಗೆದುಕೊಳ್ಳಬೇಕು. ಆಗ ಸರ್ಕಾರದ ಆಡಳಿತ ತಹಬಂದಿಗೆ ಬರುತ್ತದೆ. ಇಲ್ಲದಿದ್ದರೆ ಬರುವುದಿಲ್ಲ. ಇಂತಹ ಪ್ರಕರಣಗಳು ನಡೆದಾಗ ನಾವು ಯಾರಿಗೆ ಹೇಳಬೇಕು ? ನಾವು ಕಾಂಗ್ರೆಸ್ ಪಕ್ಷದ ಸದಸ್ಯರಾಗಿರುವುದೇ ತಪ್ಪೇನು ? ನಾನು ಸಹ ಹಲವಾರು ಸಲ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಪೋಲೀಸ್ ಇಲಾಖೆ ಮಂತ್ರಿಯಾಗಿ ಸಹ ಕೆಲಸ ಮಾಡಿದ್ದೇನೆ. ನಾವು ಏನು ಹೇಳಿದರೂ ಕೂಡ ಏನೋ ಒಂದು ವಿರುದ್ಧವಾದ ಭಾವನೆ ಮಾಡಿಕೊಂಡು ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುವ ಅಧಿಕಾರಿಗಳು ನಿಮ್ಮ ಸರ್ಕಾರದಲ್ಲಿ ಇಲ್ಲವೇ ? ಕಾಂಗ್ರೆಸ್ ಪಾರ್ಟಿಯವರು ಇರಲೇಬಾರದು ಎನ್ನುವುದು ಇದೆ. ಪ್ರಜಾಪ್ರಭುತ್ವ ಉಳಿಯಬೇಕಾದರೆ ವಿರೋಧ ಪಕ್ಷ ಇರಬೇಕು ಎಂದು ಹೇಳುತ್ತಾರೆ. ನಾವು ಕಾಂಗ್ರೆಸ್ ಪಕ್ಷದವರು ಇವತ್ತು ಇಲ್ಲಿ ವಿರೋಧ ಪಕ್ಷದಲ್ಲಿದ್ದೇವೆ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ನಾವು ಅಧಿಕಾರವನ್ನು ನಡೆಸಿಕೊಂಡು ಬಂದಂಥ ಜನ, ಇವತ್ತು ವಿರೋಧಪಕ್ಷದಲ್ಲಿದ್ದೇವೆ. ಆ ಜನಗಳಿಗೆ ಗೌರವ ಕೊಡಬಾರದು, ನಮ್ಮ ಮಾತಿಗೆ ಬೆಲೆ ಕೊಡಬಾರದು ಎನ್ನುವುದು ಇರಬಾರದು. ನಾವು ಹೇಳುವುದರಲ್ಲಿ ನ್ಯಾಯ ಇದ್ದರೆ ಮಾಡಿ. ನ್ಯಾಯವಿಲ್ಲದೇ ಹೋದರೆ ಮಾಡಬೇಡಿ. ನನಗೆ ಅನುಭವ ಬಹಳ ಕಮ್ಮಿ ಆಗಿರತಕ್ಕಂಥಾದ್ದು ಇದೆ. ನಾವು ನ್ಯಾಯವಾಗಿರುವುದನ್ನು ಹೇಳಿ ಅದಕ್ಕೆ ತದ್ವಿರುದ್ಧವಾಗಿ ಮಾಡಿದರೆ ನಿಮ್ಮನ್ನು ಕೇಳಬೇಕಾಗುತ್ತದೆ ಏನು ಇದು ಭಾವನೆ, ಏನು ಇದು ಅಧಿಕಾರವರ್ಗ ಇವರು ಇಲ್ಲಿ ಅಧಿಕಾರವನ್ನು ಬಹಳ ದುರುಪಯೋಗ ಪಡಿಸಿಕೊಂಡಿದ್ದಾರೆ. "they have got endless powers." ಮಾನ್ಯ ಅಧ್ಯಕ್ಷರೆ, ನಾನು ವಿನಯಪೂರ್ವಕವಾಗಿ ತಮ್ಮನ್ನು ಕೇಳಿಕೊಳ್ಳುತ್ತೇನೆ ಮಾನ್ಯ ರಾಮಕೃಷ್ಣಹೆಗಡೆಯವರು ಬಹಳ ಪಳಗಿದ ಜನ, ಪಳಗಿದವರು ಮನುಷ್ಯರು, ಬಹಳ ದಿವಸಗಳಿಂದ ಮುಖ್ಯಮಂತ್ರಿಯಾಗಿದ್ದಾರೆ ಮಂತ್ರಿಮಂಡಲವನ್ನು ಸರಿಯಾಗಿ ನಡೆಸಿಕೊಂಡು ಹೋಗುವುದು ಅವರ ಜವಾಬ್ದಾರಿ. ಆದರೆ ಈ ವಿಪರೀತ ಕೃತ್ಯಗಳಿಗೆ ಏಕೆ ಮಾಡಿಕೊಟ್ಟರೆ ತಮ್ಮ ತಲೆ ಮೇಲೆ ಈ ಜವಾಬ್ದಾರಿ ಬರುತ್ತದೆ. ಇದಕ್ಕೆ ತಾವು ಉತ್ತರ ಕೊಡಲೇಬೇಕಾಗುತ್ತದೆ ಉತ್ತರ ಕೊಟ್ಟ ಹಾಗೆ ಮಾಡಿದ್ದೀರಿ. ಇದರಿಂದ ನ್ಯೂನತೆಗಳು ಏನಿವೆ ಅವಕ್ಕೆ ಸಗಣಿ ಸಾರಿಸಿದ ಹಾಗೆಆಗುತ್ತದೆ. ಈ ಜವಾಬ್ದಾರಿಯನ್ನು ತಾವು ಹೊತ್ತುಕೊಳ್ಳಬೇಕು. ಇದಕ್ಕೆ ಉತ್ತರ ಕೊಡಲೇಬೇಕು. ಕರ್ನಾಟಕ ರಾಜ್ಯದಲ್ಲಿ ಮೈಸೂರು, ಬೆಂಗಳೂರು, ತುಮಕೂರು, ಗುರುಮಿಟ್ಕಲ್‌ಗಳಲ್ಲಿ ಘಟನೆಗಳು ಆಗಿಹೋಗಿವೆ. ಇಂತಹ ಘಟನೆಗಳು ಆಗದಹಾಗೆ ನೋಡಿಕೊಳ್ಳಲಿಕ್ಕೆ ಅವರಿಗೆ ಸಾಕಷ್ಟು ಬುದ್ಧಿವಂತಿಕೆ ಉಂಟು. ಅಧಿಕಾರವರ್ಗದವರು ಹದ್ದು ಮೀರಿ ನಡೆದುಕೊಂಡಿದ್ದಾರೆ. ಅದನ್ನು ನಿಮಗೆ ಬಿಟ್ಟಿದ್ದೇವೆ. ಯಾರುಯಾರು ಹಾಗೆ ನಡೆದುಕೊಂಡಿದ್ದಾರೆ ಅಂತಹವರ ಮೇಲೆ ಕ್ರಮ ತೆಗೆದುಕೊಂಡರೆ ಆಗ ನಿಮಗೆ ಧೈರ್ಯ ಇದೆ ಎಂದು ಹೇಳುತ್ತೇನೆ, ಅವರಿಗೆ ನಿಜವಾಗಿಯೂ ಆಡಳಿತವನ್ನು ಸರಿಯಾಗಿ ನಡೆಸಿಕೊಂಡು ಹೋಗಲಿಕ್ಕೆ ಶಕ್ತಿ ಇದೆ ಎಂದು ಹೇಳಬೇಕೇ ಹೊರತಾಗಿ ಇಲ್ಲದೇ ಹೋದರೆ ನಾವು ಹೇಳುವುದಕ್ಕೆ ಆಗುವುದಿಲ್ಲ, ಹೇಳುವುದಿಲ್ಲ. ಆಮೇಲೆ ಹೆಣ್ಣು ಮಕ್ಕಳನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗುತ್ತಾರೆ. ಹೆಣ್ಣು ಮಕ್ಕಳು ತಪ್ಪು ಮಾಡುವುದಿಲ್ಲ ಎಂದು ಹೇಳುವುದಿಲ್ಲ, ಮಾಡುತ್ತಾರೆ, ನೀವು ಪೋಲೀಸ್ ಸ್ಟೇಷನ್‌ನಲ್ಲಿ ಹೆಣ್ಣುಮಕ್ಕಳನ್ನು ಇಟ್ಟುಕೊಳ್ಳಬಾರದು ಎಂದು ಆದೇಶ ಕೊಟ್ಟಿದ್ದೀರಿ. It is a wrongful confinement. Charge-sheet those police officers who have wrong fully confined women in the police stations. What action you have taken against them ? Tell me now. Have you moved your little finger to take action against those Police Officers ? I am sorry to say that you have failed in your duties. Either you are not resourcefully thinking to act in your position or you are reluctant to take action against those officers. Police Officers are thinking that they know everothing.

ಶ್ರೀ ಜಿ. ನಾರಾಯಣಕುಮಾರ್.— ಮಾನ್ಯ ಬಸವಲಿಂಗಪ್ಪನವರು ಕನಡದಲ್ಲಿ ಮಾತನಾಡಿದರೆ ನಮಗೂ ಅರ್ಥವಾಗುತ್ತದೆ. ದಯವಿಟ್ಟು ಕನ್ನಡದಲ್ಲಿ ಮಾತನಾಡಿ.

SRI B. BASAVALINGAPPA.— I will speak only in English.

ಶ್ರೀ ಎಂ. ರಘುಪತಿ.— ಅವರಿಗೆ ಅರ್ಥವಾಗುವುದಿಲ್ಲ, ಆದ್ದರಿಂದ ಕನ್ನಡದಲ್ಲಿ ಮಾತನಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಆರ್. ಎನ್. ನಾಯಕ್. -ಮಾನ್ಯ ನಾರಾಯಣಕುಮಾರ್‌ರವರು ಅರ್ಥವಾಗುವುದಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.— ನಾವು ಲಂಡನ್ನಿನಿಂದ ಬರದೇ ಹೋದರೂ ಲಂಡನ್ನಿನಲ್ಲಿ ಇರತಕ್ಕಂಥ ಮಹನೀಯರು ಬರೆದಿರತಕ್ಕಂಥ ಇಂಗ್ಲೀಷ್ ಪುಸ್ತಕಗಳನ್ನು ಓದಿ ಈ ಸ್ಥಾನಕ್ಕೆ ಬಂದಿದ್ದೇನೆ. ಇವರಿಂದ ಬಂದಿಲ್ಲ.

ಅಧ್ಯಕ್ಷರು.— ಮಾನ್ಯ ನಾರಾಯಣಕುಮಾರ್‌ರವರೇ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ,, ಇನ್ನೊಂದು ವಿಚಾರ ಇದೆ, ನಾನು ಕಿವಿಯಿಂದ ಕೇಳಿದ್ದುದು ಕಣ್ಣಿನಿಂದ ನೋಡಿದ್ದು ಮಂಡ್ಯದಲ್ಲಿ ಹಿಂದುಳಿದ ವರ್ಗಗಳ ಗಲಾಟೆಯಾಯಿತು. ಇದು ಸದನಕ್ಕೂ ಗೊತ್ತಿದೆ ಮಂಡ್ಯದಲ್ಲಿ ಓಡಾಡುವ ವಾಹನಗಳನ್ನು ತಡೆಯುವುದು. ಹಿಡಿಯುವುದು, ಹೊಡೆಯುವುದು ಹಾಗೂ ಹಣವನ್ನು ವಸೂಲು ಮಾಡುವುದು ನಾನು ಪೋಲೀಸ್ ದೊಡ್ಡ ಅಧಿಕಾರಿಯೊಬ್ಬರನ್ನು ಕೇಳಿದೆ ಸ್ವಾಮಿ ಪೋಲೀಸಿನವರು ಕೈಹಾಕುವಂತಿಲ್ಲ ಮುಖ್ಯಮಂತ್ರಿಗಳಿಂದ ಆದೇಶ ಬಂದಿದೆ. ಅದಕೋಸ್ಕರ ಹಿಡಿದಿದ್ದೇವೆ ಎಂದು ಅವರು ಹೇಳಿದರು. ರಾಜಕೀಯವಾಗಿ ತಾವು ಈ ರೀತಿ ಕೈಹಾಕುವುದಾದರೆ, ನೀವು ಹಾಕುತ್ತೀರೋ, ಬಿಡುತ್ತೀರೋ ಗೊತ್ತಿಲ್ಲ, ಆದರೆ, ನಿಮ್ಮ ಹೆಸರಿನಲ್ಲಿ ಬೇರೆಯವರು ಕೈಹಾಕಿದ್ದಾರೆ ಪೋಲೀಸಿನವರು ಈ ರೀತಿಯ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ, ಏನು ನ್ಯಾಯ ಸಿಗುತ್ತದೆ ? ೧೫ ದಿವಸ ಮಂಡ್ಯದಲ್ಲಿ ಘಟನೆ ನಡೆದರೂ ಕ್ರಮ ತೆಗೆದುಕೊಳ್ಳಲಿಲ್ಲ. ಬೆಂಗಳೂರಿನಲ್ಲಿ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಮುಂಭಾಗದಲ್ಲಿ ನಡೆದಂಥ ಘಟನೆ ಬಗ್ಗೆ ಅರ್ಧ ಗಂಟೆಯಲ್ಲಿ ಗುಂಡು ಹಾರಿಸಿದಿರಿ. ಘಟನೆಯನ್ನು ನಿಲ್ಲಿಸುವುದಕ್ಕೆ ಪೋಲೀಸಿನವರಿಗೆ ತಾಕತ್ತು ಇರಲಿಲ್ಲವೆ ? ಪ್ರಜ್ಞೆ ಇರಲಿಲ್ಲವೆ ? ಮಾನವೀಯತೆ ಇರಲಿಲ್ಲವೆ ? ಅನುಕಂಪ ಇರಲಿಲ್ಲವೆ ? ಯಾವ ರೀತಿ ವರ್ತನೆ ಮಾಡುತ್ತಾರೆಂದು ಹೇಳುವುದಕ್ಕೆ ಆಗುವುದಿಲ್ಲ ಸಾರ್ವಜನಿಕರ ಪ್ರಾಣ ಆಸ್ತಿ ಕಾಪಾಡತಕ್ಕ ಪೋಲೀಸಿನವರ ವಿಚಾರದಲ್ಲಿ ರಾಜಕೀಯ ಕೈಹಾಕಿದರೆ, ಎಲ್ಲವೂ ನಾಶವಾಗಿ ಹೋಗುತ್ತದೆ. ಸಬ್ ಇನ್ಸ್‌ಪೆಕ್ಟರುಗಳನ್ನು ವರ್ಗಾವಣೆ ಮಾಡುವುದಕ್ಕೆ ಎಸ್ ಪಿ ಗಳು. ಡಿಎಸ್‌ಪಿ ಗಳು ಇದ್ದಾರೆ. ಎಂ ಎಲ್ ಎ ಗಳು ವರ್ಗ ಮಾಡುವುದಕ್ಕೆ ಆಗುತ್ತದೆಯೆ ? ಒಬ್ಬೊಬ್ಬ ಅಧಿಕಾರಿಗಳು ೬-೮-೧೦ ವರ್ಷಗಳಿಂದ ಒಂದೇ ಕಡೆ ಇದ್ದಾರೆ. ಅವರನ್ನು ವರ್ಗ ಮಾಡುವುದಕ್ಕೆ ಹೋಗುವುದಿಲ್ಲ. ಎಂ.ಎಲ್.ಎ ಗಳಿಗೆ ಬೇರೆ ಕೆಲಸ ಇಲ್ಲವೆ ? ಎಂ.ಎಲ್.ಎ. ಗಳು ಹೇಳಿದಂತೆ ವರ್ಗ ಮಾಡಿದರೆ ಆಡಳಿತ ಕುಸಿದುಬಿದ್ದು ಹೋಗುತ್ತದೆ. ಇಲ್ಲಿ ರಾಜಕೀಯ ಕೈಹಾಕುವುದರಿಂದ ಮೇಲಾಧಿಕಾರಿಗಳು ಮಾನ ಮರ್ಯಾದೆ ಅಂಜಿಕೊಂಡು ಸುಮ್ಮನಿರುತ್ತಾರೆ. ವರ್ಗಾವಣೆ ವಿಚಾರದಲ್ಲಿ ಸಂಬಂಧಪಟ್ಟ ಮೇಲಾಧಿಕಾರಿಗಳು ಕ್ರಮ ತೆಗೆದುಕೊಳ್ಳಲಿ ಒಂದೆರಡು ಅನ್ಯಾಯವಾಗಿರತಕ್ಕ ಕೇಸುಗಳು ಬರಬಹುದು. ಇಂಥವುಗಳನ್ನು ಬಿಟ್ಟುಬಿಡಿ. ನಾವು ಇದ್ದಾಗ As a matter of Rule, we were posting only non-lingayat officers to these Bombay Karnataka areas. Here, only Lingayat officers are there. In our time, Brahmin officers will nveer be posted to North Kanara. ಈ ಒಂದು ಪಾಲಿಸಿಯನ್ನು ಇಟ್ಟುಕೊಂಡಿದ್ದೆವು. ಅಲ್ಲಿ ಸಂಬಂಧ ಇಲ್ಲದೇ ಇರತಕ್ಕ ಅಧಿಕಾರಿಗಳನ್ನು ಪೋಸ್ಟು ಮಾಡುತ್ತಿದ್ದೆವು ಮುಸಲ್ಮಾನ್ ಅಧಿಕಾರಿಗಳನ್ನು ಎಲ್ಲೂ ಹಾಕುತ್ತಿರಲಿಲ್ಲ. ಇವತ್ತು ಅವರನ್ನು ಡೈರೆಕ್ಟರ್ ಮಾಡಿದ್ದೀರಿ. ಮೂರು ತಿಂಗಳಲ್ಲಿ ಏನೇನೋ ಆಗುತ್ತದೆಂದು ಹೇಳಿದ್ದೀರಿ, ಏನು ಬೇಕೋ ಅದನ್ನು ಮಾಡಿಕೊಳ್ಳಿ. ಆದರೆ. ಈ ವಿಚಾರದಲ್ಲಿ ರಾಜಕೀಯವಾಗಿ ಕೈಹಾಕದೇ ಇರತಕ್ಕ. ಸಂಬಂಧಪಟ್ಟ ಅಧಿಕಾರಿಗಳನ್ನು ವರ್ಗ ಮಾಡುವ ವಿಚಾರದಲ್ಲಿ ಮರುಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದಲ್ಲಿ ಅಧಿಕಾರ ವರ್ಗ ಇದೆ. ಇವರಿಗೆ ಟ್ರೇಡ್ ಯೂನಿಯನ್ ಸ್ಥಾಪನೆ ಮಾಡಿ ಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ,

ಇದಕ್ಕಿಂತ ಅಧಕ್ಷ ತೀರ್ಮಾನ ನನ್ನ ಜೀವನದಲ್ಲಿ ಕಂಡಿಲ್ಲ. ರಾಜ್ಯಾಂಗದ ಆರ್ಟಿಕಲ್ ೧೯ ಕೂಡ ಇದಕ್ಕೆ ಬೆಂಬಲ ಆಗುತ್ತದೆ ಎನ್ನುವಂಥ ಮಂತ್ರಿಗಳೂ ಇದ್ದಾರೆ. "Reasonable restrictions are to be imposed on the actions of the Government." ಕಾನ್‌ಸ್ಟೇಬಲ್‌ಗಳು, ಸಬ್ ಇನ್ಸ್‌ಪೆಕ್ಟರುಗಳು ಯೂನಿಯನ್ ಮಾಡಿಕೊಂಡಿದ್ದಾರೆ ಡಿ ಸಿ ಗಳು ಮತ್ತು ಡಿ.ವೈ.ಎಸ್.ಪಿ. ಗಳು ಮಾಡಿಕೊಂಡಿದ್ದಾರೆ. ಯಾವ ಅಧಿಕಾರಿಗಳಿಗೇ ಆಗಲೀ ಸಂಘ ಸಂಸ್ಥೆಗಳನ್ನು ಮಾಡುವುದಕ್ಕೆ ಈ ರೀತಿಯ ಅವಕಾಶ ಕೊಡಕೂಡದು. ಅವರು ಎಲ್ಲಿಯವರೆಗೆ ಸರ್ಕಾರಿ ಅಧಿಕಾರಿಗಳಾಗಿ ಇರುತ್ತಾರೋ, ಅಲ್ಲಿಯವರೆಗೆ ಸಂಬಳ ತೆಗೆದುಕೊಂಡು ಕೆಲಸ ಮಾಡಲಿ. ಇವೊತ್ತು ಅವರಿಗೆ ಸಂಘ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ಇದರಿಂದ ಏನಾಗುತ್ತದೆ ಎಂದರೆ ಯಾರು ಯಾರು ದೊಡ್ಡ ಅಧಿಕಾರಿಗಳು ಇರುತ್ತಾರೋ ಅವರ ಕಡೆ ಕೆಳಗಿನ ಅಧಿಕಾರಿಗಳು ಪ್ರತಿಭಟನೆ ಮಾಡತಕ್ಕದ್ದು ನಡೆಯುತ್ತದೆ, ಈ ವಿಚಾರದಲ್ಲಿ ನಾನು ಇಷ್ಟು ಮಾತ್ರ ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಇನ್ನೊಂದು ವಿಚಾರ ಕೊನೆಯದಾಗಿ ಹೇಳಬೇಕೆಂದರೆ ದೇವದಾಸಿಗಳು ಎಂದು ಇದ್ದಾರೆ, ಹೋದ ಎರಡನೆಯ ತಾರೀಖಿನಲ್ಲಿ ಯಲ್ಲಮ್ಮನ ಗುಡ್ಡದಲ್ಲಿ ಎರಡು ಸಾವಿರ ಎಳೆಯ ಹೆಣ್ಣು ಮಕ್ಕಳನ್ನು ಸೋಸಿಯರಾಗಿ ಬಿಟ್ಟಿದ್ದಾರೆ ಇದು ಬಹಳ ದಿವಸಗಳಿಂದಲೂ ನಡೆಯುತ್ತಿದೆ. ಇದನ್ನು ತಡೆಯಲಿಕ್ಕೆ ಪೋಲೀಸರಿಗೆ ಆಗುವುದಿಲ್ಲವೇ ? ಇಮ್ಮಾರಲ್ ಟ್ರಾಫಿಕ್ ಇನ್ ಗರ್ಲ್ಸ್ ಅಂಡ್ ವಿಮೆನ್ಸ್ ಆಕ್ಟ್ ಇಲ್ಲವೇ ? ನಮ್ಮ ದೇಶದ ಕೇಂದ್ರದ ಕಾನೂನು ಇಲ್ಲವೇ, ನಮ್ಮ ರಾಜ್ಯದ ಕಾನೂನು ಇಲ್ಲವೆ ? ಪೋಲೀಸರಿಗೆ ಏನು ಕೆಲಸ ಇದೆ ? ಇದನ್ನು ಪ್ರತಿಬಂಧಕ ಮಾಡಲಿಕ್ಕೆ ಅವರಿಗೆ ವಿವೇಚನೆ ಇಲ್ಲವೆ ? ಇಂಥ ಘೋರವಾಗಿರತಕ್ಕ ಕೃತ್ಯ ಕಸ್ಟಮ್ಸ್, ಏನಿವೆ ಇದನ್ನು ತಡೆಯಲಿಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲವೆ ? ಈ ಕಡೆಗೆ ನಿಮ್ಮ ಗಮನ ಹೋಗುವುದಿಲ್ಲವೆ, ಇದರ ಬಗ್ಗೆ ನಿರ್ವೀರ್ಯರಾಗಿ ನೋಡುತ್ತೀರಾ ! ಇವೊತ್ತು ಹೆಣ್ಣುಮಕ್ಕಳ ಸ್ಥಿತಿ ಯಾವರೀತಿ ಇದೆ ಎನ್ನುವುದನ್ನು ನೋಡಬೇಕು. ನಮ್ಮ ಸಮಾಜ ಸುಧಾರಣೆಯಾಗಬೇಕು, ಸಮಾಜದಲ್ಲಿ ಒಳ್ಳೆಯ ವಾತಾವರಣ ಮೂಡಬೇಕು, ಶಾಂತಿ ಸ್ಥಾಪನೆ ಮಾಡಬೇಕು ಇದಕ್ಕೆ ಭಂಗ ತರತಕ್ಕ ಎಲಿಮೆಂಟ್ಸ್ ಏನು ಇವೆ, ಅದನ್ನು ತಡೆಹಿಡಿಯಲಿಕ್ಕೆ ಪ್ರಯತ್ನ ಮಾಡಿ. ತಾವು ಈ ಕೆಲಸಗಳನ್ನು ಮಾಡಲಿಕ್ಕೆ ಅಸಮರ್ಥರಾಗಿದ್ದೀರಿ. ಇದನ್ನು ರಿಪೇರಿ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಿ, ಇಲ್ಲದೇ ಇದ್ದರೆ ನಮ್ಮ ಕೈಯಲ್ಲಿ ಆಗುವುದಿಲ್ಲ ಎಂದು ಅಸೆಂಬ್ಲಿಗೆ ನಮಸ್ಕಾರ ಮಾಡಿ ಹೋಗಿ.

ಅಧ್ಯಕ್ಷರು.—ಈ ವಿಷಯಕ್ಕೆ ಎರಡು ತಾಸು ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೆ. ಇನ್ನು ಮುಂದೆ ಮಾತನಾಡತಕ್ಕ ಸದಸ್ಯರು ಐದೈದು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ. ಜಿ. ಎಸ್. ಶಿವನಂಜಪ್ಪ.—ತುಮಕೂರು ಜಿಲ್ಲೆಯಲ್ಲಿ ೩೫ ವರ್ಷದಿಂದಲೂ ನಾನು ರಾಜಕೀಯದಲ್ಲಿದ್ದೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ, ಈ ಕಡೆಗೂ ಅವಕಾಶ ಮಾಡಿಕೊಡಬೇಕು,

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಅಧ್ಯಕ್ಷರೆ, ಪಾವಗಡ ತಾಲ್ಲೂಕಿನ ಜನರು ಬಹಳ ಸಂಭಾವಿತರು. ಪೋಲೀಸ್ ಎಂದರೆ, ಕಾನೂನು ಎಂದರೆ, ಸರ್ಕಾರ ಎಂದರೆ ಅಧಿಕಾರಿಗಳು ಎಂದರೆ ಅವರು ಹೆದರಿ ಒಂದು ಮೈಲಿ ದೂರ ಹೋಗುವವರು. ನಾನು ಅಲ್ಲಿಗೆ ಹೋದ ತಕ್ಷಣ ಪದ್ಮಮ್ಮನ ವಿಚಾರವಾಗಿ ಆಕೆ ಏನಾದರೂ ತಪ್ಪುದಾರಿ ಹಿಡಿಯತಕ್ಕ ಹೆಣ್ಣುಮಗಳೇ ಎಂದು ಅಲ್ಲಿದ್ದ ಡಾಕ್ಟರ್‌ಗೆ ಕೇಳಿದೆ. ಅದಕ್ಕೆ ಅವರು ಬಹಳ ಸಂಭಾವಿತ ಹೆಣ್ಣುಮಗಳು ಆಕೆ ಎಂದು ಹೇಳಿದರು. ನಮ್ಮ ವಿರೋಧ ಪಕ್ಷದ ನಾಯಕರವರು ಹೇಳಿದ ಒಂದು ಕಥೆ ಏನಿದೆ ಅದು ನಿಜವಾಗಿಯೂ ಕೂಡ ಸತ್ಯವಾಗಿದೆ. ಇದಕ್ಕೆ ನೇರವಾದ ಜವಾಬ್ದಾರರು ರಾಮಕೃಷ್ಣ ಹೆಗಡೆಯವರು ಎಂದು ಚಾರ್ಜ್ ಮಾಡಬೇಕಾಗಿದೆ. ತುಮಕೂರಿನಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರಿಗೆ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅವರು, ಸಬ್‌ಇನ್ಸ್‌ಪೆಕ್ಟರ್‌ರವರು ಮಾಡಿದಂಥ ತಪ್ಪಿಗೆ ಸಸ್ಪೆಂಡ್ ಮಾಡಿದ್ದರು. ತಾವು ಆ ಸಸ್ಪೆಂಡ್ ಆರ್ಡರ್ ವಜಾ ಮಾಡಿ ಹದಿನೈದು ದಿವಸಗಳಲ್ಲಿ ವಾಪಸ್ಸು ಕಳುಹಿಸಿದಿರಿ. ಆತ ಏನು ಮಾಡಿದ ಮತ್ತೆ ಅದೇ ಜಾಗಕ್ಕೆ ಹೋಗಿ, ನೀನು ಏನು ಮಾಡುತ್ತೀಯಾ, ನಾನು ಇಲ್ಲಿಗೆ ಬಂದಿದ್ದೇನೆ ಎಂದು ಎಸ್.ಪಿ. ಅವರಿಗೆ ಫೋನ್ ಮಾಡಿ ಏಕವಚನದಲ್ಲಿ ಹೇಳಿದ್ದಾನೆ ತುಮಕೂರಿನಲ್ಲಿ ಅದೇ ಜಾಗದಲ್ಲಿ ಪೋಲೀಸರಿಗೂ ಮುಸಲ್ಮಾನರಿಗೂ ಜಗಳ ಆಗಿದ್ದುದ್ದು. ಇಂತಹ ವಿಚಾರಗಳಿಗೆ ನೀವು ಏತಕ್ಕೆ ನೇರವಾಗಿ ಕೈ ಹಾಕುತ್ತಿದ್ದೀರಿ. ಇನ್ನು ಕೊರಟಗೆರೆಯಲ್ಲಿ ೧೫ ಕೊಲೆ ಪ್ರಕರಣಗಳು ನಡೆದಿವೆ. ಇವೆಲ್ಲಾ ಆತ್ಮಹತ್ಯೆ

ಪ್ರಕರಣಗಳು. ನಿಮ್ಮ ಸರ್ಕಾರ ಬಂದ ಮೇಲೆ ಜನರು ನೇಣು ಹಾಕಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಇದರ ಬಗ್ಗೆ ನೀವೇನಾದರೂ ತನಿಖೆ ನಡೆಸಿದ್ದೀರಾ ?

ಸ್ವಾಮಿ, ಈ ಪತ್ರವನ್ನು ತಮಗೆ ಕಳುಹಿಸಿಕೊಡುತ್ತೇನೆ. ದಲಿತ ಸಂಘರ್ಷ ಸಮಿತಿಯವರು ಸುಮಾರು ೨೦ ಅಪಾದನೆಗಳುಳ್ಳ ಒಂದು ಪಟ್ಟಿಯನ್ನು ಸಿದ್ಧಮಾಡಿ ಬಹುಶಃ ನಿಮಗೂ ಕೂಡ ಕಳುಹಿಸಿ ಕೊಟ್ಟಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ನನಗೂ ಕೂಡ ಇದನ್ನು ಏನು ಕಳುಹಿಸಿಕೊಟ್ಟಿದ್ದಾರೆ ಇದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಹರಿಜನರು ಗಿರಿಜನರು, ಮುಸಲ್ಮಾನರು ಆತ್ಮ ಹತ್ಯಾ ಮಾಡಿಕೊಂಡಿರತಕ್ಕ ಪ್ರಕರಣಗಳು ಇದರಲ್ಲಿವೆ. ಅವರು ಸತ್ತಿರತಕ್ಕ ಪ್ರಕರಣಗಳಿವೆ. ಅವರು ಏತಕ್ಕೆ ಈ ರೀತಿ ಮಾಡಿಕೊಂಡರು? ನಿಮ್ಮ ಸರ್ಕಾರದ ನೀತಿಯನ್ನು ನೋಡಿ ಆತ್ಮಹತ್ಯೆಯನ್ನು ಮಾಡಿ ಕೊಂಡಿದ್ದಾರೆಇದನ್ನೇನಾದರೂ ನೀವು ವಿಚಾರಣೆ ಮಾಡಿದ್ದೀರಾ? ನಮ್ಮ ತುಮಕೂರಿಗೆ ಒಬ್ಬ ಸಬ್ ಇನ್ ಸ್ಪೆಕ್ಟರ್‌ನ್ನು ಹಾಕಿದ್ದೀರಿ. ಬೇರೆ ಯಾರೂ ಇಲ್ಲ ಊರಿ ನಿಮಗೆ ಸಿಕ್ಕಲಿಲ್ಲವೇದು ಕಾಣಿಸುತ್ತದೆ. ಸ್ವಾಮಿ, ನಮ್ಮ ಗುಬ್ಬಿ ಪೋಲಿಸ್ ಸ್ಟೇಷನ್‌ಗೆ ಒಬ್ಬ ಸಬ್ ಇನ್‌ಸ್ಪೆಕ್ಟರನ್ನು ತಂದು ಹಾಕಿದ್ದೀರಿ. ಅವನಿಗೆ ಯಾವುದೋ ಕಾರಣದಿಂದ ಬುದ್ಧಿ ಭ್ರಮಣೆಯಾಗಿದೆ. ಅವನನ್ನು ಹೇಗಾದರೂ ವರ್ಗ ಮಾಡಿ ಎಂದು ನಾನು ಕೇಳಿ ಕೊಂಡೆ. ಅವನನ್ನು ಬದಲಾಯಿಸಲು ನೀವು ಒಂದುವರ್ಷವಾಯಿತು. ಇನ್ನೊಬ್ಬ ಸಬ್ ಇನ್‌ಸ್ಪೆಕ್ಟರ್‌ಗೆ ಯಾವ ಕಾನೂನೂ ಗೊತ್ತಿಲ್ಲ ಛಾರ್ಜ್ ಷೀಟ್ ಹಾಕುವುದಕ್ಕೂ ಕೂಡ ಗೊತ್ತಿಲ್ಲ. ನೀವು ಪರೀಕ್ಷೆ ಮಾಡಿ ನೋಡಿ ಅವನಿಗೆ ಛಾರ್ಜ್‌ಷೀಟ್ ಹಾಕುವುದಕ್ಕೆ ಬಂದರೆ (ಗೊತ್ತಿದ್ದರೆ) ನೀವು ಕೇಳಿದ್ದು ಕೊಡುತ್ತೇನೆ ಇಂಥವರನ್ನೆಲ್ಲಾ ನಮಗೆ ತಂದುಹಾಕಿದ್ದೀರಿ. ಶಿರಾಕ್ಕೆ ಒಬ್ಬ ಸಬ್ ಇನ್‌ಸ್ಪೆಕ್ಟರ್‌ನ್ನು ಹಾಕಿದ್ದೀರಿ. ಅವನು ಏನಾದರೂ ಮಾತನಾಡಬೇಕಾದರೆ "ನೀನು ಹೊಡೆದುಬಿಟ್ಟು ಬಾರೋ, ನಾನು ಉಳಿದದ್ದನ್ನು ನೋಡಿಕೊಳ್ಳುತ್ತೇನೆ'' ಎಂದು ಹೇಳುತ್ತಾನೆ. ನಾನು ಅವನ ಬಗ್ಗೆ ಒಂದು ಕಂಪ್ಲೇಂಟ್ ಕೊಟ್ಟೆ. ಆದರೆ ಅವರ ಬಗ್ಗೆ ನೀವು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಈಗ ಅವನು ನನ್ನನ್ನೇ ಹೊಡೆಸು ವುದಕ್ಕೆ ಪ್ರಯತ್ನ ಮಾಡುತ್ತಿದ್ದಾನೆ. ಸ್ವಾಮಿ, ೧೯೮೩ರಲ್ಲಿ ಇವರು ಅಧಿಕಾರಕ್ಕೆ ಬಂದಾಗ ಒಂದು ಮಾತನ್ನು ಏನು ಹೇಳಿದ್ದಾರೆಂದರೆ, ನಾವು ಮೌಲ್ಯಾಧಾರಿತ ರಾಜಕಾರಣವನ್ನು ಮಾಡುತ್ತೇವೆ ಎಂದು ಸ್ವಾಮಿ, ನಾನು ಹಿಂದಿನ ಮುಖ್ಯ ಮಂತ್ರಿಗಳ ಕಾಲದ ಪುಸ್ತಕಗಳನ್ನೆಲ್ಲಾ ತಿರುವಿಹಾಕಿ ನೋಡಿದೆ. ಈ ಹಿಂದೆ ಯಾವ ಮುಖ್ಯ ಮಂತ್ರಿಗಳೂ ಈ ಮಾತನ್ನು ಹೇಳಿಲ್ಲ. ನಾನು ಇವರನ್ನು ೧೯೮೩ನೇ ಇಸವಿಯ ವರೆಗೂ ನೋಡಿದಾಗ ಸ್ವಲ್ಪ ಚೆನ್ನಾಗಿ ಕೆಲಸ ಮಾಡಿದರು ಆದರೆ ಅವರೆಲ್ಲರೂ ನಾನಾ ಆಕೆಯ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನೇ ವ್ಯಕ್ತಪಡಿಸಿದರು. ೧೫ನೇ ತಾರೀಖು ಏನೋಂದು ಘಟನೆ ನಡೆಯಿತು ಇದರ ಬಗ್ಗೆ ಈ ಇಲಾಖೆಯವರು ಯಾರಾದರೂ ಹೋಗಿ ನೋಡಿದ್ದಾರೆಯೇ ? ಯಾರೂ ಹೋಗಿ ನೋಡಿಲ್ಲ. ನಾನು ಹೋಗಿ ನೋಡಿದಾಗ ಮೈತುಂಬಾ ಗಾಯಗಳಾಗಿವೆ. ಕೊರಟಗೆರೆ ಮತ್ತು ತುಮ ಕೂರು ಕ್ಷೇತ್ರದಲ್ಲಿ ಅನೇಕ ಕೊಲೆಗಳು ಮತ್ತು ದರೋಡೆಗಳಾಗಿವೆ. ಅವುಗಳನ್ನು ಪತ್ತೆಮಾಡುವುದಕ್ಕೆ ನಿಮ್ಮ ಇಲಾಖೆಯಿಂದ ಸಾಧ್ಯವಾಗಿಲ್ಲ. ಇಲ್ಲಿ ಈ ಪದ್ಮಮ್ಮ ಎನ್ನುವಾಕೆ ಯಾರೋ ತನ್ನ ಸ್ನೇಹಿತರ ಜೊತೆ ಹೊರಗಡೆ ಬಂದಿದ್ದಾರೆ ಈ ಪೋಲಿಸರು ಆಕೆಯನ್ನು ಅಪಮಾನ ಮಾಡುವುದಕ್ಕೆ ಹೋಗಿ ದ್ದಾರೆ. ಆಕೆ ಶನಿಮಹಾತ್ಮ ದೇವಸ್ಥಾನದ ಚೌಕಕ್ಕೆ ಬಂದಾಗ ಈ ಪೋಲೀಸರು ಹೋಗಿ ಹಿಡಿದಿದ್ದಾರೆ. ಹೊಡೆದಿದ್ದಾರೆ. ಈ ವಿಚಾರ ಆಕೆಯ ಗಂಡನಿಗೆ ಗೊತ್ತಾದಮೇಲೆ ಆತನು ಬಂದು ನನ್ನ ಹೆಂಡತಿಗೆ ಹೀಗೇಕೆ ಮಾಡಿದಿರಿ ಎಂದು ಕೇಳಿದಾಗ ಅವನನ್ನೂ ಹಿಡಿದುಕೊಂಡು ಚೆನ್ನಾಗಿ ಹೊಡೆದಿದ್ದಾರೆ.

ಹತ್ತುವರ್ಷಗಳಕಾಲ ಮಿಲಿಟರಿ ಸೇವೆಯಲ್ಲಿದ್ದಂಥವನು ನನ್ನ ಹೆಂಡತಿಯನ್ನು ಏತಕ್ಕೆ ಕರೆದು ಕೊಂಡು ಹೋಗುತ್ತಿರುವಿರಿ, ಏತಕ್ಕೆ ಹೊಡೆಯುತ್ತೀರಿ ಎಂದು ಕೇಳಿದ ಆ ಅಮಾಯಕನನ್ನು ಚೆನ್ನಾಗಿ ಹೊಡೆದಿದ್ದಾರೆ. ಪೋಲಿಸ್‌ನವರಿಗೆ ಈ ರೀತಿ ಜನರನ್ನು ಹೊಡೆಯಬೇಕಾದರೆ ಅವರಿಗೆ ಸ್ವಲ್ಪವೂ ಕನಿಕರವಿಲ್ಲವೆಂದು ಕಾಣುತ್ತದೆ. ಆತನ ಶರಟನ್ನು ಹರಿದಿರುತ್ತಾರೆ. ನಮ್ಮ ಕಮ್ಯುನಿಸ್ಟ್ ನಾಯಕ ರಾದ ಶ್ರೀ ಎಂ. ಎಸ್. ಕೃಷ್ಣನ್‌ನವರು ಹೇಳಿರತಕ್ಕಂಥದ್ದು ಅಕ್ಷರಶಃ ನಿಜವಿರುತ್ತದೆ. ಅಲಿ ಗೋಲಿ ಬಾರ್ ಮಾಡತಕ್ಕಂಥ ಪ್ರಶ್ನೆಯೇ ಇರಲಿಲ್ಲ. ಅಲ್ಲಿ ಆ ಹಳ್ಳಿಯಲ್ಲಿ ಮಂಡಲ್ ಪಂಚಾಯತ್ ಚುನಾವಣೆ ನಡೆದಾಗ ಸಾವಿರಾರು ಜನರು ಸೇರಿದ್ದರು. ಏನೋ ತಪ್ಪು ಎಣಿಕೆ ನಡೆದಿದೆ ಎಂದು ಗಲಾಟೆ ನಡೆದಾಗ ಟಿಯರ್‌ಗ್ಯಾಸ್ ಶೆಲ್ಸ್ ಸಿಡಿಸಿದಾಗ ೮-೧೦ ಜನರೂ ಕೂಡ ಅಲ್ಲಿರಲಿಲ್ಲ. ಅಲ್ಲಿ ಎಂಥ ಅಧಿಕಾರಿಗಳನ್ನು ಇಟ್ಟಿದ್ದೀರಿ, ಎಂಥ ವಿಚಾರಗಳನ್ನು ಸೃಷ್ಟಿಮಾಡಿಕೊಂಡಿದ್ದಾರೆಂದರೆ, ಒಂದು ಬಂದೂಕು ಮುರಿದಿರು ತ್ತಾರೆ. ಆ ಬಂದೂಕಿಗೆ ಎಲ್ಲಿ ಏಟನ್ನು ಕೊಟ್ಟರೆ ಮುರಿಯುತ್ತದೆಂಬುದು ಅವರಿಗೇನೇ ಗೊತ್ತಿರುತ್ತದೆ,

ಒಂದು ಮೋಟಾರ್ ಬೈಕಿಗೆ ಬೆಂಕಿಯನ್ನು ಇಟ್ಟಿರುತ್ತಾರೆ. ಅದು ನಿಜವಾಗಿಯೂ ಇಟ್ಟಿದ್ದೋ ? ಸೀಮೆ ಎಣ್ಣೆಯನ್ನು ಸುರಿದು ಹಚ್ಚಿರುವುದು ಎಂದು ಚೆನ್ನಾಗಿ ಗೊತ್ತಾಗುತ್ತದೆ. ಪೋಲಿಸ್ ಸ್ಟೇಷನ್ ಒಳಗಡೆ ಟೇಬಲ್ ಮುರಿದುಕೊಂಡಿದ್ದಾರೆ. ನೋಟಿಸ್‌ಬೋರ್ಡ್ ಗಾಜನ್ನು, ಟ್ಯೂಬ್ ಲೈಟನ್ನು ತಾವೇ ಹೊಡೆದುಕೊಂಡಿರುತ್ತಾರೆ. ಜನರು ಕಲ್ಲು ಹೊಡೆದು ಈ ರೀತಿಯೆಲ್ಲಾ ಆಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಕಲ್ಲುಗಳನ್ನು ಹೊಡೆದಿದ್ದರೆ ಗೋಡೆಗಳಿಗೆ ಕಚ್ಚುಗಳಾಗಬೇಕು. ಮುಕ್ಕಾಗಬೇಕು. ಆ ರೀತಿ ಒಂದೂ ಕೂಡ ಅಲ್ಲಿ ಕಂಡುಬರಲಿಲ್ಲ. ಪೋಲಿಸ್‌ನವರಿಗೆ ಒಂದು ಮರ್ಯಾದೆ ಪ್ರಶ್ನೆ, ಮಿಲಿಟರಿಯಲ್ಲಿದ್ದವನ ಹೆಂಡತಿ ಅವರನ್ನು ಕೇಳಿದ್ದುದು ಅಪಮಾನವಾಯಿತು. ಅದಕ್ಕೋಸ್ಕರವಾಗಿ ಇಡೀ ಡಿಪಾರ್ಟ್‌ಮೆಂಟ್ ಇದರ ಹಿನ್ನೆಲೆಯಲ್ಲಿ ಇದ್ದಾರೆ. ಪಾವಗಡದಲ್ಲಿ ಪೋಲಿಸ್‌ನವರಿಂದ ಸುಲಿಗೆ ನಡೆಯುತ್ತಿದೆ ಅಮಾಯಕ ಜನರನ್ನು ಪೋಲಿಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗುವುದು ಸುಲಿಗೆಯನ್ನು ಮಾಡುವುದು. ಇಂಥ ಹೀನ ಕೃತ್ಯ ನಡೆಸುತ್ತಿರುವುದು ನಿಮ್ಮ ಮನಸ್ಸಿಗೆ ಬಂದಿಲ್ಲವೇ ? ಇಂಥ ಹಲವಾರು ಪ್ರಕರಣಗಳು ತುಮಕೂರಿನಲ್ಲಿ ನಡೆದಿರುವ ಬಗ್ಗೆ ದೂರನ್ನು ಎಸ್. ಪಿ. ಯವರಿಗೆ ಕೊಟ್ಟಿದ್ದಾರೆ. ಬೆಂಗಳೂರು ಡಿ. ಐ. ಜಿ. ಕೋದಂಡ ರಾಮಯ್ಯನವರಿಗೆ ಮುಖ್ಯವಾಗಿ ವದಂತಿಗಳನ್ನು ಕೊಟ್ಟಿದ್ದಾರೆ ಈ ಘಟನೆ ನಡೆದಿರುವ ಬಗ್ಗೆ ಹಿನ್ನೆಲೆ ಇದೆ. ಇದು ಒಂದು ಗಂಭೀರವಾದ ಘಟನೆಯಾಗಿದೆ. ನಮ್ಮ ನಾಯಕರು ಹೇಳಿದಹಾಗೆ ನಿಮ್ಮ ಬಲ ಅವರಿಗೆ ಇದೆ. ಸರ್ಕಾರದ ಬೆಂಬಲವಿದೆ.

ಅಧ್ಯಕ್ಷರು.—ಮಾನ್ಯ ಶಿವನಂಜಪ್ಪನವರೇ ಬೇಗನೆ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಬಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ ನಾನು ಕುಳಿತುಕೊಳ್ಳಬೇಕೆಂದು ಹೇಳಿದರೆ ಕುಳಿತುಕೊಂಡುಬಿಡುತ್ತೇನೆ ಆದರೆ ಇದು ಒಂದು ಗಂಭೀರವಾದ ಪ್ರಶ್ನೆಯಾಗಿದೆ. ಇವೊತ್ತಿನದಿವಸ ನನ್ನ ಜೀವನಕ್ಕೆ ತೊಂದರೆಯಾಗಿದೆ. ನಮ್ಮ ತುಮಕೂರು ಜಿಲ್ಲೆಯಲ್ಲಿ ಪೋಲಿಸ್‌ನವರು ನಿಶ್ಕ್ರಿಯರಾಗಿದ್ದಾರೆ. ಶಾಂಕರಾಗಿ ಇವೊತ್ತಿನ ದಿವಸ ನಾವು ಪೋಲಿಸ್ ಸ್ಟೇಷನ್‌ಗೆ ಹೋಗತಕ್ಕಂಥ ಪರಿಸ್ಥಿತಿಯಲಿಲ್ಲ. ಮಾನ್ಯ ರಾಜಯ್ಯನವರಿಗೆ ವಿಷದವಾಗಿ ಹೇಳುತ್ತಿದ್ದೇನೆ, ಜ್ಯುಡಿಷಿಯಲ್ ಎನ್‌ಕ್ವಯರಿ ಮಾಡಿಸುತ್ತೇವೆಂದು ಹೇಳುತ್ತಿರುತ್ತೀರಿ ಜ್ಯುಡಿಷಿಯಲ್ ಎನ್‌ಕ್ವಯರಿ ಏತಕ್ಕೆ ಏತಕ್ಕೆ ಮಾಡಿಸಬೇಕು ? ಫ್ಯಾಕ್ಟ್ ಫೈಂಡಿಂಗ್ ಕಮಿಟಿಯಿಂದ ಘಟನೆ ನಡೆದಿದೆ ಎಂದು ತೀರ್ಮಾನಕ್ಕೆ ಬಂದಿದ್ದೀರಿ. ಘಟನೆ ನಡೆದಿದೆ ಎಂದು ತೀರ್ಮಾನಕ್ಕೆ ಬಂದಮೇಲೆ ತಪ್ಪಿತಸ್ಥರು ಎಂದು ತಿಳಿದುಬಂದ ಮೇಲೆ ಅವರನ್ನು ಡಿಸ್‌ಮಿಸ್ ಮಾಡದೆ ಇನ್ನೂ ಏತಕ್ಕೆ ಇಟ್ಟುಕೊಂಡಿರುತ್ತೀರಿ ? ಸುಪ್ರೀಂಕೋರ್ಟ್ ಡಿಸಿಷನ್ ಇದೆ, ಸುಪ್ರೀಂಕೋರ್ಟ್ ಡಿಸಿಷನ್ ೩೧೧ರ ಪ್ರಕಾರ ನಿಮ್ಮ ಅಧಿಕಾರಿಗಳು ೪-೫ ಜನರ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಮನೆಗೆ ಕಳುಹಿಸಿ. ಅಮಾಯಕ ಜನರು ಸಂತೆಗೆ ಹೋಗಿ ಬರುತ್ತಿದ್ದಂಥ ಜನರ ಮುಂದೆ ಫೈರಿಂಗ್ ನಡೆದಿದೆ. ಪೋಲೀಸ್ ಸ್ಟೇಷನ್‌ಗೆ ಒಂದು ಫರ್ಲಾಂಗ್ ಮುಂದೆ ಫೈರಿಂಗ್ ನಡೆದಿದೆ.

೧೨.೧೫ ಪಿ. ಎಂ.

ಇದು ಅಧಿಕಾರದ ದುರುಪಯೋಗ ಅಲ್ಲವೆ ? ಪೋಲೀಸ್ ಸ್ಟೇಷನ್ ಎದುರಿಗೆ, ಪೋಲೀಸ್ ಸ್ಟೇಷನ್ ಅನ್ನು ಲೂಟಿ ಮಾಡುವುದಕ್ಕೆ ಬಂದರು ಎಂದು ಹೊಡೆದಿದ್ದರೆ ನಾವು, ನೀವು ಒಪ್ಪಿಕೊಳ್ಳಬಹುದಾಗಿತ್ತು. ಪೋಲೀಸ್ ಸ್ಟೇಷನ್ನಿಗೆ ಒಂದು ಕಲ್ಲು ಬಿದ್ದಿರಲಿಲ್ಲ. ತಲೆಗೆ ಏಟು ಬಿದ್ದ ಮನುಷ್ಯ ಪೋಲೀಸ್ ಸ್ಟೇಷನ್‌ನಿಂದ ಒಂದು ಫರ್ಲಾಂಗ್ ದೂರ ಬಿದ್ದಿದ್ದಾನೆ. ಅವನನ್ನು ನಾಯಿ ಎಳೆದುಕೊಂಡು ಬಂದು ತಿನ್ನುತ್ತಿದೆ. ಆತನನ್ನು ರಕ್ಷಣೆ ಮಾಡುವುದಕ್ಕೆ ಪೋಲೀಸರಿಗೆ ಅವಕಾಶ ಇರಲಿಲ್ಲವೆ ? ನಮ್ಮ ತುಮಕೂರು ಜಿಲ್ಲೆಯ ಬಗ್ಗೆ ಬಹಳಷ್ಟು ನಿಮಗೆ ಹೇಳಿದ್ದೇನೆ. ನೀವು ಇದುವರೆಗೆ ಆ ಕಡೆ ಗಮನ ಕೊಡಲಿಲ್ಲ. ಇಲ್ಲಿನ ವಿಚಾರಗಳನ್ನು ನೋಡಿದಾಗ ಕೇವಲ ೪-೫ ಜನ ತುಮಕೂರು ಜಿಲ್ಲೆಯ ಪೋಲೀಸ್ ಅಧಿಕಾರವನ್ನು ಮತ್ತು ಸರ್ಕಾರದ ಅಧಿಕಾರವನ್ನು ನಿಯಂತ್ರಿಸುತ್ತಿದ್ದಾರೆ. ಒಬ್ಬ ಹರಿಜನ ಎಸ್. ಪಿ. ಭಾಸ್ಕರನ್ ಎಂಬುವವರು ಒಳ್ಳೆಯ ಕೆಲಸ ಮಾಡುತ್ತಿದ್ದರು. ಅಂಥ ಅಧಿಕಾರಿಯನ್ನು ನೀವು ಬಂದ ೨೪ ಗಂಟೆಯೊಳಗೆ ವರ್ಗ ಮಾಡಿದಿರಿ. ಏತಕ್ಕಾಗಿ ಆತನನ್ನು ವರ್ಗ ಮಾಡಿದಿರಿ? ಈಗ ಬಂದಿರತಕ್ಕ ಎಸ್. ಪಿ. ಎಲ್ಲಿಂದ ಬಂದವರೋ ಗೊತ್ತಿಲ್ಲ. ಅಲ್ಲಿನ ಜನರು ಕಾಂಗ್ರೆಸ್ ಬೆಂಬಲಿಗರು ಎಂದು ತುಮಕೂರು ಜಿಲ್ಲೆಗೆ ಈ ಅಧಿಕಾರಿಯನ್ನು ಹಾಕಿ ಅವರಿಗೆ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಎಲ್ಲವನ್ನು ನೀವೇ ನಿಯಂತ್ರಿಸುತ್ತಿದ್ದೀರಿ, ನೀವು ವರ್ಗ ಮಾಡಿದ್ದನ್ನು

ಹೆಗಡೆಯವರು ವಜಾ ಮಾಡುತ್ತಿದ್ದಾರೆ. ಹೀಗಾದರೆ ಅಧಿಕಾರಿಗಳು ನಿಮ್ಮ ಮಾತು ಕೇಳುತ್ತಾರೆಯೆ? ನಿಮಗೆ ನಿಮ್ಮ ಖಾತೆಯ ಬಗ್ಗೆ ಜವಾಬ್ದಾರಿ ಇರಬೇಕು, ಇಲ್ಲವಾದರೆ, ಹೆಗಡೆಯವರಾದರೂ ಅದನ್ನು ಇಟ್ಟುಕೊಂಡಿರಬೇಕು. ಹೋಂ ಡಿಪಾರ್ಟ್‌ಮೆಂಟ್‌ನ್ನು ಇಬ್ಬರೂ ಇಟ್ಟುಕೊಳ್ಳುವುದಕ್ಕೆ ಅವಕಾಶ ಇಲ್ಲವಲ್ಲ. ಸರ್ಕಾರಿ ಅಧಿಕಾರಿಗಳನ್ನು ಬಹಳ ದಿನಗಳಿಂದ ನೋಡಿದ್ದೇನೆ. ಇವರ ಅಧಿಕಾರದಲ್ಲಿ ಪೋಲೀಸರದ್ದು ಕಷ್ಟ ಇದೆ ಹಿಂದೆ ಸಿದ್ಧವೀರಪ್ಪನವರು ಹೇಳುತ್ತಿದ್ದರು, ಈಶ್ವರ ಕಾಕಿ ಬಟ್ಟೆ ಹಾಕಿಕೊಂಡು ಬಂದರೂ ಜನ ನಂಬದೆ ಇರತಕ್ಕ ಪರಿಸ್ಥಿತಿ ಇದೆ ಎಂದು. ಈಗ ನೀವು ಬಂದ ಮೇಲೆ ಅದು ಬದಲಾಗಲಿಲ್ಲ. ಅವರು ಈಗ ಒಂದು ರೀತಿ ಬದಲಾಗಿದ್ದಾರೆ, ಅಂದರೆ ಕೆಟ್ಟ ಕುಲಾಕರ್ಮ ಹಿಡಿದಿದ್ದಾರೆ. ಮಾನ್ಯ ವೀರಣ್ಣನವರಿಗೆ ಇಂಥವರು ಬೇಕು, ಶಿವನಂಜಪ್ಪನವರಿಗೆ ಇಂಥವರು ಬೇಕು, ಅವರಿಗೆ ಇವರನ್ನು ಹಾಕಿಕೊಡಿ, ಅವರವರ ಜಾತಿ ಜನರನ್ನು ಹಾಕಿದರೆ ಅವರವರ ಎಂ.ಎಲ್.ಎ. ಮಾತು ಕೇಳುತ್ತಾರೆ ಎಂದು ಮಾಡುವುದು. ಇದನ್ನು ನೀವು ಮಾಡಿದ್ದೀರೋ ಇಲ್ಲವೋ ಗೊತ್ತಿಲ್ಲ ನಾವು ಬರೆದಿರುವುದು, ನೀವು ಮಿನಿಟ್ ಹಾಕಿರುವುದು ಎಲ್ಲಾ ಇದೆ. ಇದನ್ನು ಒಂದು ಉದಾಹರಣೆಯಾಗಿ ಹೇಳಿದೆ ನಿಮ್ಮ ಒಂದು ಅಧಿಕಾರದಲ್ಲಿ ಬಿಗಿ ಕ್ರಮ ಇಲ್ಲ. ಎಲ್ಲರನ್ನು ತೃಪ್ತಿಪಡಿಸುತ್ತೇವೆಂದು ಹೇಳುವುದಾದರೆ ಅದು ನಿಜವಾಗಿ ನಡೆಯದೆ ಇರತಕ್ಕ ಮಾತು, ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಹಿಂದೆ ಮಧುಗಿರಿಯಲ್ಲಿ ಒಂದು ಪ್ರಕರಣ ನಡೆಯಿತು. ರೈತ ಕಾನೂನಿಗೆ ವಿರುದ್ಧವಾಗಿ ಆಲೆಮನೆ ಹಾಕಿದ್ದಾನೆಂದು ಪೋಲೀಸರು, ತಹಶೀಲ್ದಾರರು ಎಲ್ಲರೂ ಹೋದರು. ಜನರಿಗೆ ತೊಂದರೆ ಆಯಿತು, ಗಲಾಟೆ ಆಯಿತು. ಫೈರಿಂಗ್ ಆಯಿತು. ಒಬ್ಬ ಹೆಣ್ಣುಮಗಳಿಗೆ ತೊಂದರೆ ಆಯಿತು. ಆ ಕಾಲದಲ್ಲಿ ವಿರೋಧ ಪಕ್ಷದ ಸದಸ್ಯರು ನಿಲುವಳಿ ಸೂಚನೆಯನ್ನು ತಂದರು, ಸಂಜೆ ನಾಲ್ಕೂವರೆ ಗಂಟೆಯವರೆಗೆ ಚರ್ಚೆಯಾಯಿತು. ಆಡಳಿತ ಪಕ್ಷದವರು ಹೇಳಿದರು, ನಾವು ರಾಜೀನಾಮೆ ಕೊಡುವುದಿಲ್ಲ ಎಂದು. ೪-೩೦ಕ್ಕೆ ಎಂ.ವಿ. ರಾಮರಾಯರು ರಾಜೀನಾಮೆ ಕೊಟ್ಟರು. ಅವರು ಮೌಲ್ಯಾಧಾರಿತ ರಾಜಕಾರಣವನ್ನು ಮಾಡುತ್ತೇವೆಂದು ಹೇಳಿರಲಿಲ್ಲ ಆದರೆ ಅವರಿಗೆ ಪ್ರಜ್ಞೆ ಬಂತು. ನಾವು ಕರ್ತವ್ಯ ಪ್ರಜ್ಞೆಯಲ್ಲಿ ಲೋಪ ಮಾಡಿದ್ದೇವೆ. ನಾನು ಜನರಿಗೆ ರಕ್ಷಣೆ ಕೊಡುವುದರಲ್ಲಿ ವಿಫಲನಾಗಿದ್ದೇನೆಂಬ ನೀತಿಯನ್ನು ಇಟ್ಟುಕೊಂಡು ರಾಜೀನಾಮೆ ಕೊಟ್ಟರು, ಆದ್ದರಿಂದ ಈ ಸಂದರ್ಭದಲ್ಲಿ ಮೊದಲು ಹೆಗಡೆಯವರು ರಾಜೀನಾಮೆ ಕೊಡಬೇಕು. ಏಕೆಂದರೆ ನಿಮ್ಮ ಆಡಳಿತದಲ್ಲಿ ಅವರು ಕೈಹಾಕಿದ್ದಾರೆ. ನೀವು ಎರಡನೆಯದಾಗಿ ರಾಜೀನಾಮೆ ಕೊಡಬೇಕು. ನೀವಿಬ್ಬರೂ ಇಲ್ಲದಿದ್ದರೆ ಪೋಲೀಸ್ ಇಲಾಖೆ ಇರುವುದಿಲ್ಲ. ಮಾನ್ಯ ಹೆಗಡೆಯವರು ಇಲ್ಲದಿದ್ದರೆ ಮುಖ್ಯಮಂತ್ರಿಗಳಾಗುವುದಕ್ಕೆ ಲಾಯಕ್ಕಾದ ಜನ ಇಲ್ಲವೆಂದು ನಿಮಗೆ ೨೦ ಜನ, ಹೆಗಡೆಯವರಿಗೆ ಎಲ್ಲರೂ ಕೈಕಾಲು ಕಟ್ಟಿಕೊಳ್ಳುತ್ತಾರೆ. ಈಗ ನೀವು ತತ್ವಕ್ಕಾದರೂ, ನೀತಿಗಾದರೂ ರಾಜೀನಾಮೆ ಕೊಡಬೇಕು. ಕೊಟ್ಟರೆ ಕರ್ನಾಟಕದ ಜನ ನಿಮ್ಮನ್ನು ಮೆಚ್ಚುತ್ತಾರೆ, ಇಲ್ಲದಿದ್ದರೆ ನಿಮ್ಮ ಅಧಿಕಾರವನ್ನು ಕಳೆದುಕೊಳ್ಳುವ ಕಾಲ ಬಹಳ ಸಮೀಪದಲ್ಲಿದೆ ಎಂದು ಹೇಳುತ್ತೇನೆ. ಇಂಥ ಅಮಾನುಷಕೃತ್ಯ ಎಲ್ಲಿಯೂ ನಡೆಯಬಾರದೆಂದು ಹೇಳಿ. ಅಲ್ಲಿ ಏನೇನು ನಡೆಯಿತು ಎಂದು ಹೇಳುವುದಕ್ಕೆ ನನ್ನ ಬಾಯಲ್ಲಿ ಬರುವುದಿಲ್ಲ. ಅವರು ಯಾವ ಬಾಯಲ್ಲಿ ಹೇಳಿದ್ದಾರೋ ನನಗೆ ಗೊತ್ತಿಲ್ಲ. ಜುಡಿಶಿಯಲ್ ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದೇವೆ. ಪ್ರೊಮೋಷನ್ ಕೊಟ್ಟು ಬೆಂಗಳೂರಿಗೆ ವರ್ಗ ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಯಾರು ಆ ಕೆಲಸ ಮಾಡಿದ್ದಾರೋ ಅವರು ಅಲ್ಲಿಯೇ ಇದ್ದಾರೆ. ಯಾರನ್ನು ಸಸ್ಪೆಂಡ್ ಮಾಡಿದ್ದೇವೆಂದು ಹೇಳುತ್ತಿದ್ದಾರೋ ಅವರು ಅಲ್ಲಿಯೇ ಇದ್ದುಕೊಂಡು ಜನರನ್ನು ಹೆದರಿಸುತ್ತಿದ್ದಾರೆ. ಈ ರೀತಿ ನೀತಿ ನಿಯಮಗಳನ್ನು ಇಟ್ಟುಕೊಂಡು ಕರ್ನಾಟಕದ ೩ ಕೋಟಿ ಜನರಿಗೆ ರಕ್ಷಣೆ ಕೊಡುವುದಕ್ಕೆ ಆಗುತ್ತದೆಯೋ ? ನಿಜವಾಗಿ ಕೂಡ ಈ ತರಹ ಅಡ್ಮಿನಿಸ್ಟ್ರೇಷನ್ ಆದರೆ ನೀವು ಆ ಜಾಗದಲ್ಲಿರುವುದಕ್ಕೆ ನಾಲಾಯಕ್ಕು, ಜನತೆ ನಿಮ್ಮ ಬೆಂಬಲಕ್ಕಿದೆ ಯಾರು ತಪ್ಪು ಮಾಡುತ್ತಾರೋ ಅವರಿಗೆ ಶಿಕ್ಷೆ ಕೊಡಿ. ಇದಕ್ಕೆ ಯಾರು ಹೊಣೆ ? ಸೂಪರಿಂಟೆಂಡೆಂಟ್ ಅವರನ್ನು ಹೊಣೆ ಮಾಡಿದ್ದೀರಾ ? ಡಿ. ಐ. ಜಿ. ಅವರನ್ನು ಹೊಣೆ ಮಾಡಿದ್ದೀರಾ ? ಐ. ಜಿ ಅವರನ್ನು ಹೊಣೆಗಾರಿಕೆ ಮಾಡಿದ್ದೀರಾ ? ಯಾರು ಎಂಬುದೇ ಗೊತ್ತಿಲ್ಲ. ಎಲ್ಲಾ ಇವರಿಬ್ಬರೇ ಇಟ್ಟುಕೊಂಡಿದ್ದಾರೆ, ಎಸ್. ಪಿ. ಯವರನ್ನು ಕೇಳಿದರೆ ಮಾನ್ಯ ರಾಚಯ್ಯನವರನ್ನು ಕೇಳಿ ಎಂದು ಹೇಳುತ್ತಾರೆ. ವರನ್ನು ಕೇಳಿದರೆ ಮಾನ್ಯ ರಾಮಕೃಷ್ಣ ಹೆಗಡೆಯವರು ಏನೋ ಮಾಡಿದ್ದಾರೆ ಎಂದು ಹೇಳುತ್ತೀರಿ. ಆಯಾ ಜಿಲ್ಲೆಯ ಸೂಪರಿಂಟೆಂಡೆಂಟ್ ಅವರಿಗೆ ಅಧಿಕಾರ ಕೊಡಿ. ಅದರಲ್ಲಿ ಅವರು

ವಿಫಲರಾದರೆ ಅವರನ್ನು ತರಾಟೆಗೆ ತೆಗೆದುಕೊಳ್ಳತಕ್ಕ ವ್ಯವಸ್ಥೆ ಮಾಡಬೇಕೇ ಹೊರತು ಈ ರೀತಿ ಪೋಲೀಸರ ಮೂಲಕ ರಾಜಕೀಯ ಮಾಡುವುದಾದರೆ ಇದಕ್ಕಿಂತ ನಾಚಿಕೆಗೇಡಿನ ಪ್ರಸಂಗ ೩೫ ವರ್ಷಗಳಿಂದ ಬಂದಿರಲಿಲ್ಲ. ನಿಮ್ಮ ಕಾಲದಲ್ಲಿ ಇದು ಬಂದಿದೆ. ಪೋಲೀಸರು ರಾಜಕೀಯ ಮಾಡುವುದು...

ಅಧ್ಯಕ್ಷರು.—ತಾವು ದಯವಿಟ್ಟು ಮುಗಿಸಿ. ಇದನ್ನು ಎರಡು ಮೂರು ಸಾರಿ ಹೇಳಿದ್ದೀರಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ಇದು ತುಮಕೂರು ಜಿಲ್ಲೆಯದು.

ಅಧ್ಯಕ್ಷರು.—ಅದನ್ನು ಹೇಳಿದ್ದೀರಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಕೃಪೆ ಮಾಡಿ ಪೋಲೀಸರಲ್ಲಿ ರಾಜಕೀಯ ಮಾಡುವುದು ಬಿಟ್ಟು ಬಿಡಿ. ಅವರ ಪಾಡಿಗೆ ಅವರು ಕರ್ತವ್ಯ ನಿರ್ವಹಿಸುವುದಕ್ಕೆ ಜವಾಬ್ದಾರಿ ಕೊಡಿ. ಇಲ್ಲದಿದ್ದರೆ ಈ ತರಹ ಪ್ರಸಂಗ ಬಂದರೆ ಡಿ. ಜಿ. ಪಿ. ಯವರನ್ನು ಹೊಣೆ ಮಾಡಿ. ಅವರಿಗೂ ಜವಾಬ್ದಾರಿ ಕೊಡುತ್ತಿಲ್ಲ, ಸೂಪರಿಂಟೆಂಡೆಂಟರಿಗೂ ಕೊಡುವುದಿಲ್ಲ. ಸಬ್-ಇನ್‌ಸ್ಪೆಕ್ಟರ್ ಟ್ರಾನ್ಸ್‌ಫರ್ ಮಾಡುವ ಅಧಿಕಾರ ಡಿ. ಐ. ಜಿ. ಅವರಿಗೆ ಇಲ್ಲದೇ ಹೋದರೆ ಏನು ಮಾಡುವುದು ಅಡ್ಮಿನಿಸ್ಟ್ರೇಷನ್ ? ಒಬ್ಬ ಕಾನ್‌ಸ್ಟೇಬಲ್ ಸೂಪರಿಂಟೆಂಡೆಂಟ್ ಮಾತು ಕೇಳುವುದಿಲ್ಲ. ನನ್ನ ಹತ್ತಿರ ಬರುತ್ತಾನೆ. ಹೀಗೆ ಮಾಡಿದ್ದಾರೆ, ಟ್ರಾನ್ಸ್‌ಫರ್ ಮಾಡಿ ಎಂದು ಹೇಳುತ್ತಾನೆ. ನಾನು ಅರ್ಜಿ ಬರೆದುಕೊಡುತ್ತೇನೆ. ನೀವು ಟ್ರಾನ್ಸ್‌ಫರ್ ಮಾಡಿಕೊಡುತ್ತೀರಿ. ಈ ಅಧಿಕಾರ ಏತಕ್ಕೆ ? ಇನ್ನೂ ಮೂರು ವರ್ಷ ಅಧಿಕಾರಾವಧಿ ಇದೆ. ಅಷ್ಟರಲ್ಲಿ ಅಧಿಕಾರದ ಸದುಪಯೋಗ ಮಾಡಿಕೊಳ್ಳಿ. ಅಧಿಕಾರ ಯಾರಿಗೇ ಬರಲಿ. ಎಷ್ಟು ವರ್ಷ ರಾಮಯ್ಯನವರು ಅಧಿಕಾರದಲ್ಲಿದ್ದರು ಎಂಬುದು ಪ್ರಶ್ನೆಯಲ್ಲ. ಹೇಗೆ ಅಧಿಕಾರ ಮಾಡಿದರು ಎಂಬುದು ಮುಖ್ಯ. ಪೂಣಚ್ಚ ಎಂದು ಒಬ್ಬ ಸಬ್-ಇನ್‌ಸ್ಪೆಕ್ಟರ್ ಇದ್ದರು. ಅವರು ತುಮಕೂರಿನಲ್ಲಿ ಮಧುಗಿರಿಯಲ್ಲಿ ಇದ್ದರು. ತುಮಕೂರಿನಲ್ಲಿ ಒಳ್ಳೆಯ ಹೆಸರು ತೆಗೆದುಕೊಂಡಿದ್ದರು. ಅವರನ್ನು ಮಧುಗಿರಿಗೆ ಟ್ರಾನ್ಸ್‌ಫರ್ ಮಾಡಿದರು. ಆದರೆ ಆಕ್ಸಿಡೆಂಟಾಗಿ ಸತ್ತುಹೋದರು. ಆದರೆ ಅವರನ್ನು ನೋಡುವುದಕ್ಕೆ ಎಷ್ಟು ಜನ ಬಂದಿದ್ದರು ಗೊತ್ತೆ ? ಐದಾರು ಸಾವಿರ ಜನ ಹೂವಿನ ಮಾಲೆ ಇಟ್ಟುಕೊಂಡು ಶವಸಂಸ್ಕಾರಕ್ಕೆ ಬಂದರು. ಹಾಗೆ ಒಳ್ಳೆಯ ಕೆಲಸ ಮಾಡಿದರೆ ಜನ ಮೆಚ್ಚುತ್ತಾರೆ. ಒಳ್ಳೆಯ ಕೆಲಸ ಮಾಡಿ ಓಟು ಜಾಸ್ತಿ ತೆಗೆದುಕೊಳ್ಳಿ. ೧೮೩ ಸೀಟು ಬದಲು ೨೦೦ ಸೀಟು ತೆಗೆದುಕೊಳ್ಳಿ. ಚಿಂತೆಯಿಲ್ಲ. ಇನ್ನೂ ಹತ್ತು ವರ್ಷ ಅಧಿಕಾರ ಮಾಡಿ. ಆದರೆ ಅಧಿಕಾರ ಮಾಡುವಾಗ ದುರುಪಯೋಗ ಆಗಬಾರದು. ಬಲಹೀನರಿಗೆ ರಕ್ಷಣೆ ಕೊಡಬೇಕು. ಹರಿಜನಗಿರಿಜನರಿಗೆ ರಕ್ಷಣೆ ಇದೆಯೆ ? ಎಲ್ಲಿ ರಕ್ಷಣೆ ಕೊಟ್ಟಿದ್ದೀರಿ ? ಆದ್ದರಿಂದ ಕೃಪೆಮಾಡಿ ಲೋಪದೋಷಗಳನ್ನು ತಿದ್ದಿ ಅಧಿಕಾರಿಗಳನ್ನು ಜವಾಬ್ದಾರಿ ಮಾಡಿ. ನೀವಂತೂ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ನಿಮಗೆ ವಯಸ್ಸಾಗಿದೆ. ನೀವು ಒಳ್ಳೆಯವರು. ನಿಮ್ಮ ಅಧಿಕಾರ ಸ್ವಲ್ಪ ಬಿಗಿಯಾಗಲಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನಲಂಕರಿಸಿದರು).

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಸನ್ಮಾನ್ಯ ಅಧ್ಯಕ್ಷರೆ, ನಾನು ೧೭ನೇ ತಾರೀಖು ಬೆಳಿಗ್ಗೆ ವೃತ್ತಪತ್ರಿಕೆಯನ್ನು ನೋಡಿದಾಗ ನಮ್ಮ ಜಿಲ್ಲೆಗೆ ಸೇರಿದ ಪಾವಗಡದಲ್ಲಿ ಗೋಲಿಬಾರ್ ಆಗಿದೆ ಎನ್ನತಕ್ಕಂತಹ ವಿಚಾರ ನನಗೆ ತಿಳಿಯಿತು. ಪತ್ರಿಕೆಯಲ್ಲಿ ಗೋಲಿಬಾರ್ ಎನ್ನತಕ್ಕಂತಹ ವಿಚಾರ ಹೊಸದೇನೂ ಆಗಿರಲಿಲ್ಲ. ಅದು ಮಾಮೂಲಿಯಾಗಿ ನಡೆಯುತಕ್ಕಂಥದ್ದೇ. ಈ ಸರ್ಕಾರದಲ್ಲಿ ಅಂತಹ ಉದಾಸೀನ ಭಾವನೆ ಇದ್ದರೂ, ಪತ್ರಿಕೆಯಲ್ಲಿ ಬಂದಂತಹ ವರದಿಯನ್ನು ನೋಡುತ್ತಿದ್ದ ಹಾಗೆ ೭ ಜನರ ಪ್ರಾಣ ಹೋಗಿದೆ ಎನ್ನತಕ್ಕ ವಿಚಾರವನ್ನು ಕೇಳಿದಾಗ ನನಗೆ ಸ್ವಲ್ಪ ಮನಸ್ಸಿಗೆ ನೋವಾಯಿತು. ಜೊತೆಗೆ ಪಾವಗಡ ನನ್ನ ಜಿಲ್ಲೆಯ ಒಂದು ತಾಲ್ಲೂಕು ಆಗಿರುವುದರಿಂದ ಅಲ್ಲಿಗೆ ಹೋಗಿ ಬರಬೇಕು ಎನ್ನತಕ್ಕಂತಹ ದೃಷ್ಟಿಯಿಂದ ನಾನು ಅಲ್ಲಿಗೆ ಹೋಗಿದ್ದೆ. ೧೭ನೇ ತಾರೀಖು ನಾನು ಅಲ್ಲಿಗೆ ಹೋಗುವಾಗ ಮಾನ್ಯ ಗೃಹಸಚಿವರು ಅಲ್ಲಿಗೆ ಹೋಗಿ ವಾಪಸ್ಸು ಬರುತ್ತಾ ಇದ್ದರು. ನಾನು ತುಮಕೂರಿನಿಂದ ಹೋಗುತ್ತಿರಬೇಕಾದರೆ, ಮಡಕಸಿರದಿಂದ ಈಚೆಗೆ ಮೂರು ಮೈಲಿ ದೂರದಲ್ಲಿ ತುಮಕೂರು ಮಾರ್ಗದಲ್ಲಿ ನಮ್ಮ ಎದುರಿಗೆ ಅವರ ಕಾರು ಸಿಕ್ಕಿತು, ಎರಡು ಕಾರುಗಳು ಇದ್ದವು. ಹಿಂದೆ

ದೊಡ್ಡ ಪೋಲೀಸ್ ವ್ಯಾನೇ ಅವರಿಗೆ ರಕ್ಷಣೆಯಾಗಿತ್ತು. ನನಗೆ ಬೇಗ ಗೊತ್ತಾಗಲಿಲ್ಲ. ಕಾರಣ ಅವರ ಕಾರಿನ ಮುಂಭಾಗದಲ್ಲಿ ಅಶೋಕ ಚಕ್ರ ಇರತಕ್ಕಂತಹ ಬಾವುಟ ಲಾಂಛನವಾಗುತ್ತಿರಲಿಲ್ಲ. ಆ ಕಾರಣದಿಂದ ನನಗೆ ಅದು ಬೇಗ ಗೊತ್ತಾಗಲಿಲ್ಲ. ಮಧುಗಿರಿಯ ಜಿಲ್ಲಾ ಪರಿಷತ್ತಿನ ಸದಸ್ಯರು ಹಾಗೂ ನನ್ನ ಸ್ನೇಹಿತರಾದ ಶ್ರೀ ನಾಗರಾಜು ಅವರು ನೋಡಿ ಶ್ರೀಮಾನ್ ರಾಚಯ್ಯನವರು ಹೋಗುತ್ತಿದ್ದಾರೆ ಎಂದು ಹೇಳಿದರು. ಇವರು ಪಾವಗಡಕ್ಕೆ ಹೋಗಬೇಕಾದರೆ, ಕಾರಿನ ಮುಂಭಾಗದಲ್ಲಿ ಭಾವಟವನ್ನೇ ಹಾಕಿಕೊಂಡು ಹೋಗದೆ ಇರತಕ್ಕಂಥದ್ದಕ್ಕೆ ಅಲ್ಲಿನ ಪರಿಸ್ಥಿತಿ ಎಷ್ಟು ಭೀಕರವಾಗಿತ್ತು ಎಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಪೋಲೀಸ್‌ನವರು ಒಬ್ಬ ಸಚಿವರು ತನ್ನ ಕಾರಿಗೆ ಭಾವುಟವನ್ನು ಹಾಕಿಕೊಂಡು ಹೋಗದೆ ಇರುವಂತೆ ಹೇಳಿರಬೇಕಾದರೆ, ಅಲ್ಲಿನ ಪರಿಸ್ಥಿತಿ ಎಷ್ಟು ಗಂಭೀರವಾಗಿತ್ತು ಎಂಬುದನ್ನು ತಾವು ಯೋಚನೆ ಮಾಡಬೇಕು. ಜನ ಬಹಳ ಉದ್ರೇಕಗೊಂಡಿದ್ದಾರೆ, ೭ ಜನರ ಹತ್ಯೆಯಾಗಿದೆ. ವಿನಾಕಾರಣ ಪೋಲೀಸ್‌ನವರಿಂದ, ಆದ್ದರಿಂದ ನೀವು ಕಾರಿಗೆ ಭಾವುಟವನ್ನು ಹಾಕಿಕೊಂಡು ಬಂದರೆ ಇಲ್ಲಿ ರಕ್ಷಣೆ ಮಾಡುವುದು ಕಷ್ಟವಾಗುತ್ತದೆ ಎಂದು ಪೋಲೀಸಿನವರು ಹೇಳಿರುತ್ತಾರೆ ಅವರು ಇವರನ್ನು ವೇಷ ಮರೆಸಿಕೊಂಡು ಬರಬೇಕು ಎಂದು ಸಲಹೆ ನೀಡಿದ್ದರೂ, ಜನತಾ ಸೀರೆಯನ್ನೇ ಉಟ್ಟುಕೊಂಡು ವೇಷ ಮರೆಸಿಕೊಂಡು ಬರುತ್ತಿದ್ದರೋ ಏನೋ;

ಶ್ರೀ ಬಿ. ರಾಚಯ್ಯ.— ಆ ದಿವಸ ನನ್ನ ಕಾರು ರಿಪೇರಿಗೆ ಹೋಗಿದ್ದರಿಂದ ಎಸ್ಕಾರ್ಟ್ ಕಾರು ಏನು ಇತ್ತು ಅದನ್ನೇ ತೆಗೆದುಕೊಂಡು ಹೋಗಿದ್ದೆ. ಅದರಲ್ಲಿ ಭಾವುಟ ಇರಲಿಲ್ಲ.

ಶ್ರೀ ಕೆ. ಮಲ್ಲಪ್ಪ.— ಕೆಲವು ಸಾರಿ ಡಿಟೆಕ್ಟ್ ಮಾಡತಕ್ಕಂತಹ ಸಂದರ್ಭದಲ್ಲಿ ವೇಶವನ್ನು ಬದಲಾಯಿಸುತ್ತಾರೆ.

ಶ್ರೀ ಕೆ.ಎಚ್. ಪಾಟೀಲ್.— ನಿಮ್ಮಂತಹವರು ಇಂತಹದ್ದನ್ನು ಹೇಳಿ ಹೇಳೀ ಇವತ್ತು ಈ ಗತಿ ಬಂದಿದೆ.

ಶ್ರೀ ಆರ್. ಎಲ್. ಜಾಲಪ್ಪ — ಶ್ರೀಮಾನ್ ರಾಚಯ್ಯನವರಿಗೆ ಸೀರೆ ಉಟ್ಟುಕೊಂಡರೆ ಲಂಕಿಣಿಯಾಗಿ ಕಾಣುತ್ತಾರೆ ಶ್ರೀ ಬಿ. ಲಕ್ಕಪ್ಪನವರು ಉಟ್ಟುಕೊಂಡರೆ ಒಳ್ಳೆಯ ಲಕ್ಷಣವಾಗಿ ಕಾಣುತ್ತಾರೆ.

ಶ್ರೀ ಬಿ. ಲಕ್ಕಪ್ಪ — ನನಗೆ ಮೀಸೆ ಇದೆ ಆದ್ದರಿಂದ ನಾನು ಗಂಡಸು ಎಂಬುದಾಗಿ ಗೊತ್ತಾಗುತ್ತದೆ. ಮೀಸೆ ಇಲ್ಲದವರು ಉಟ್ಟುಕೊಂಡರೆ ಚೆನ್ನಾಗಿ ಕಾಣುತ್ತಾರೆ. ಶ್ರೀಮತಿ ಎನ್. ಪದ್ಮಮ್ಮ ಹಾಗೂ ಶ್ರೀ ನಾರಾಯಣಸ್ವಾಮಿಯವರು ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಸೇರಿದ್ದಾಗ ಅವರು ಆಸ್ಪತ್ರೆಯಲ್ಲಿ ಮಲಗಿದ್ದರು. ಅವರ ಹೇಳಿಕೆಗಳನ್ನು ಒಂದೊಂದಾಗಿ ತೆಗೆದುಕೊಂಡಿದ್ದೇನೆ. ಇವರಿಬ್ಬರೂ ಶ್ರೀನಿವಾಸಪುರ ತಾಲ್ಲೂಕು, ಮರಸನಹಳ್ಳಿಗೆ ಸೇರಿದವರು ಆಕೆಗೆ ತಂದೆ ಇಲ್ಲ. ಜೊತೆಯಲ್ಲಿ ತಾಯಿ ಹಾಗೂ ಅವರ ಅಣ್ಣ ಇದ್ದಾರೆ. ಕೋಲಾರದ ಕಾಲೇಜೊಂದರಲ್ಲಿ ಎ.ಎನ್.ಎಂ. ತರಬೇತಿಯನ್ನು ಪಡೆಯುತ್ತಿದ್ದಾಗ, ಶ್ರೀ ನಾರಾಯಣಸ್ವಾಮಿ ಇವರಿಗೂ ವಿಶ್ವಾಸ ಬೆಳೆದು ೧೯೭೮ರಲ್ಲಿ ಮದುವೆ ಮಾಡಿಕೊಂಡವರು.

ಶ್ರೀ ನಾರಾಯಣ ಸ್ವಾಮಿಯವರು ಇದಕ್ಕೆ ವಿರೋಧ ಮಾಡಿದ್ದಾರೆ ಆದರೆ ಧರ್ಮಸ್ಥಳದಲ್ಲಿ ಇವರ ಸ್ನೇಹಿತರುಗಳನ್ನೆಲ್ಲಾ ಕರೆದುಕೊಂಡು ಹೋಗಿ ಧರ್ಮಸ್ಥಳದಲ್ಲಿ ೧೦–೯–೧೯೮೮ರಲ್ಲಿ ಲಗ್ನವಾಗಿ ವಾಪಸ್ಸು ಬಂದಂತಹವರು. ಶ್ರೀ ನಾರಾಯಣಸ್ವಾಮಿಯವರು ತಾತ್ಕಾಲಿಕವಾದ ಗಂಡನಲ್ಲ. ನಿಜವಾಗಿಯೂ ಮದುವೆಯಾಗಿರುವ ಗಂಡ. ೧೮–೧೦–೮೮ರಲ್ಲಿ ಎ.ಎನ್.ಎಂ. ಹುದ್ದೆಗೆ ಗುಜ್ಜನೂರು ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೆಲಸ ಮಾಡುವುದಕ್ಕೆ ಸೇರಿದಂತಹವರು ಕೇವಲ ೫–೬ ತಿಂಗಳಾಗಿವೆ. ಇದಕ್ಕೆ ಹಿನ್ನೆಲೆ ಏನಿದೆ ಎಂದರೆ. ಗೋವಿಂದಪ್ಪ ಎಂಬ ಒಬ್ಬ ಮಾಜಿ ಪಂಚಾಯಿತಿ ಅಧ್ಯಕ್ಷರು ಇದ್ದಾರೆ ಅವರು ಯಾವ ರೀತಿ ಈಕೆಯ ಮೇಲೆ ಪ್ರಯತ್ನ ಮಾಡಿದ್ದಾರೆಂದರೆ, ೧–೧–೧೯೮೭ರ ಎಂದರೆ ಚುನಾವಣೆ ೨ನೇ ತಾರೀಖು ನಡೆಯಿತು ೧–೧–೧೯೮೭ರಂದು ಬೂತುಗಳನ್ನು ತೆಗೆದುಕೊಂಡು ಹೋದಂತಹ ಅಧಿಕಾರಿಗಳಿಗೆ ಔತಣಕೂಟವನ್ನು ಏರ್ಪಡಿಸಿದ್ದರು. ಅದು ಬಿಟ್ಟು ಕೂಡ ಪಾನಮತ್ತರಾದಂತಹ ೪–೫ ಜನರನ್ನು ಕರೆದುಕೊಂಡು ಈ ಎ.ಎನ್.ಎಂ. ಮನೆಯ ಕದ ತಟ್ಟಿದ್ದಾರೆ. ನಾನು ಮಾಜಿ ಛೇರ್ಮನ್ ಬಂದಿದ್ದೀನಿ, ಲೈಟ್ ಹಾಕು, ಕದ ತೆಗಿ ಎಂದು ಹೇಳಿದ್ದಾರೆ. ಕದ ತೆಗಿ ಎಂದು ಬಹಳ ಒತ್ತಾಯ ಮಾಡಿದ್ದಾರೆ. ಕಡೆಗೆ ಆ ಹೆಣ್ಣು ಮಂಗಳ

ಕಿಟಕಿ ತೆಗೆದು ನೋಡಿದಾಗ ೪–೫ ಜನ ಕುಡಿದು ಪಾನಮತ್ತರಾಗಿರುವುದನ್ನು ಕಂಡಾಗ ಕದ ತೆಗೆದಿಲ್ಲ. ಇನ್ನೊಬ್ಬ ಪಾಳೇಗಾರ ಎಂಬುವನು, ಕದ ತೆಗಿ ಎಂಬುದಾಗಿ ಫೋರ್ಸ್ ಮಾಡಿದ್ದಾನೆ. ಇದರ ಬಗ್ಗೆ ಅವರ ಮೇಲಾಧಿಕಾರಿಗಳಿಗೆ ದೂರು ಕೊಟ್ಟಿದ್ದಾರೆ. ಇದರ ಜೊತೆಗೆ ಊರಿನ ಶ್ರೀ ಮೂಡಲಪ್ಪ, ಶ್ರೀ ಉಗ್ರಪ್ಪ. ಹಾಗೂ ಶ್ರೀ ತಿಮ್ಮರಾಯಪ್ಪ ಎಂಬುವರಿಗೆ ಈ ವಿಷಯ ತಿಳಿಸಿ ಆ ದೂರನ್ನು ತೆಗೆದು ಕೊಂಡು ಹೋಗಿ ಡಾಕ್ಟರಿಗೆ ಕೊಟ್ಟಿದ್ದಾರೆ. ಅವರು ಏನೂ ಕ್ರಮ ತೆಗೆದುಕೊಂಡಿಲ್ಲ. ಕೊನೆಗೆ ಒಂದು ದಿವಸ ಆ ಡಾಕ್ಟರು ಆ ಹೆಣ್ಣು ಮಗಳನ್ನು ಕುರಿತು, ನೀನು ನೇರವಾಗಿ ಆ ಗೋವಿಂದಪ್ಪನಲ್ಲಿ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಈ ಕೆಲಸ ಮಾಡುವುದಕ್ಕೆ ಲಾಯಕ್ಕಲ್ಲ ಹೋಗು ಎಂದು ಒತ್ತಾಯ ಮಾಡಿದ್ದಾರೆ. ಆಕೆಯು ಮಾತನ್ನು ಕೇಳುವುದಕ್ಕೆ ಸಿದ್ಧ ಇಲ್ಲ ಎಂದ ಮೇಲೆ, ರಾಜೀನಾಮೆ ಕೊಡಬೇಕು ಎಂದು ಹೇಳಿದಾಗ ಆಕೆ ರಾಜೀನಾಮೆ ಕೊಟ್ಟಿರುತ್ತಾಳೆ. ಆ ನಂತರ ಊರಿನ ಜನರೆಲ್ಲಾ ಸೇರಿ ಆಕೆ ಒಳ್ಳೆಯವಳು, ಆಕೆಯೇ ಬೇಕು ಎಂದು ಹೇಳಿ ಪತ್ರ ಬರೆದ ಮೇಲೆ ಆಕೆಯ ರಾಜೀನಾಮೆ ಪತ್ರವನ್ನು ಹಿಂದಕ್ಕೆ ಕೊಟ್ಟು ಆಕೆಯನ್ನು ಕೆಲಸಕೆ ತೆಗೆದುಕೊಳ್ಳಲಾಗಿದೆ, ಇಂತಹ ಹಿನ್ನೆಲೆ ಇರುವಂತಹ ಕುಟುಂಬ ಅದು. ೧೫ನೇ ತಾರೀಖು ಕೋಲಾರದಲ್ಲಿ ನಾರಾಯಣ ಸ್ವಾಮಿ ಎನ್ನುವವರ ಲಗ್ನಕ್ಕೆ ಈ ಗಂಡಹೆಂಡಿರು ಹೋಗಿ ವಾಪಸ್ಸು ಬರುವಾಗ ರಾತ್ರಿ ೧೦–೧೫ಕ್ಕೆ ಪಾವಗಡಕ್ಕೆ ಬಂದಿದ್ದಾರೆ. ಅಲ್ಲಿ ಅವರು ಉಳಿದು ಕೊಳ್ಳುವುದಕ್ಕೆ ಹೋಟೆಲು ಮತ್ತೊಂದು ಇಲ್ಲ. ಅಲ್ಲೇ ಬೀಡಾ ಅಂಗಡಿ ಇಟ್ಟಿರತಕ್ಕ ತಮ್ಮ ಸ್ನೇಹಿತನ ಅಂಗಡಿಯಲ್ಲಿ ಹೆಚ್ಚಿನ ಲಗೇಜನ್ನು ಇಟ್ಟು ಅಲ್ಲಿ ಕಾವಲಿಗೆ ಒಬ್ಬರು ಇರಬೇಕೆಂದು ಆತ ಅಲ್ಲಿಯೇ ಉಳಿದುಕೊಂಡಿದ್ದಾನೆ. ಆಕೆಯನ್ನು ಮನೆಗೆ ಕಳುಹಿಸುವ ಸಮಯದಲ್ಲಿ ನಾಗರ ಕಟ್ಟೆ ಬಳಿ ಹೋಗುತ್ತಿದ್ದಾಗ ಅಲ್ಲಿಗೆ ಪೋಲೀಸಿನವರು ಬಂದು ಆಕೆಗೆ ಮಾತನಾಡಿಸಿದ್ದಾರೆ. ಮಾತನಾಡುವ ಸಮಯದಲ್ಲಿ ಆ ಪೋಲೀಸಿನವರು ಆಯಮ್ಮನ ಕೆನ್ನೆಗೆ ಹೊಡೆದಿದ್ದಾರೆ. ಆ ಪೋಲೀಸರು ಆ ಸಮಯದಲ್ಲಿ ಪಾನಮತ್ತರಾಗಿದ್ದರೆಂದು ತಿಳಿದುಬರುತ್ತದೆ. ಈ ಪೋಲೀಸ್ ಇಲಾಖೆಯಲ್ಲಿ ಇರತಕ್ಕ ಅಧಿಕಾರಿಗಳು ಮತ್ತು ಪೋಲೀಸರು ಕುಡಿದು ಡ್ಯೂಟಿಗೆ ಹಾಜರಾಗಬಾರದೆಂದು ಆದೇಶವನ್ನೇನಾದರೂ ಸರ್ಕಾರ ಕೊಟ್ಟಿದೆಯೇ? ಡ್ಯೂಟಿಯ ಮೇಲಿರುವ ಅಧಿಕಾರಿಗಳು ಕುಡಿಯುವುದನ್ನು ನಿಲ್ಲಿಸಿದ್ದರೆ ಇಂತಹ ಅನಾಹುತಗಳು ಆಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ: ಮನುಷ್ಯನಿಗೆ ಮಾನವೀಯತೆ ಎಂಬುದು ಇರುತ್ತದೆ. ಪಾನಮತ್ತನಾದವನನ್ನು ಮಾನವೀಯತೆಯನ್ನು ಕಳೆದುಕೊಂಡಿದ್ದರಿಂದ ಇಂತಹ ಅನಾಹುತಗಳಾಗುತ್ತವೆ. ಆಕೆ ಓಡಿಬಂದು ತನ್ನ ಗಂಡನಿಗೆ ವಿಷಯ ತಿಳಿಸಿದಾಗ ಈತ ಹೋಗಿ ಮಾತನಾಡಿದಾಗ ಘರ್ಷಣೆಯಾಗಿ ಆತನಿಗೆ ಹೊಡೆದು ಹಿಂದಕ್ಕೆ ಕೈ ಕಟ್ಟಿ ಶನಿದೇವರ ದೇವಸ್ಥಾನದವರೆಗೆ ಎಳೆದುಕೊಂಡು ಬಂದಿದ್ದಾರೆ. ಆ ವೇಳೆಗೆ ಸಬ್ ಇನ್ಸ್‌ಪೆಕ್ಟರ್ ಹಾಗೂ ೧೦ ಜನ ಪೋಲೀಸರು ಹಾಗೂ ೩೦೦–೪೦೦ ಜನ ಅಲ್ಲಿ ಸೇರಿದ್ದಾರೆ. ಹಾಗೂ ಅಲ್ಲಿ ಲಾಠಿ ಚಾರ್ಜ್ ಕೂಡ ಮಾಡಲಾಗಿದ್ದು ಇವರನ್ನು ಪೋಲೀಸ್ ಸ್ಟೇಷನ್‌ಗೆ ಎಳೆದುಕೊಂಡು ಹೋಗಿದ್ದಾರೆ. ಅಲ್ಲಿಗೆ ಬಂದ ಸಬ್ ಇನ್ಸ್‌ಪೆಕ್ಟರ್ ವಿವೇಚನೆಯಿಂದ ನಡೆದುಕೊಂಡು, ಪೋಲೀಸಿನವನದ್ದು ತಪ್ಪು ಇದೆ ಎಂದು ಹೇಳಿ ಅಲ್ಲಿಯೇ ಎಲ್ಲರಿಗೂ ಸಮಾಧಾನ ಮಾಡಿ ಕಳುಹಿಸಿದ್ದರೆ ಮುಂದೆ ಗೋಲೀಬಾರ್‌ನಿಂದ ೭ ಜನ ಸಾಯುತ್ತಿರಲಿಲ್ಲ. ಅವನು ಬರುತ್ತಿದ್ದ ಹಾಗೇ ಆ ಹೆಣ್ಣು ಮಗಳ ಜಡೆ ಎಳೆದು ಕಾಲ ಕೆಳಕ್ಕೆ ಬೀಳಿಸಿದ್ದಾನೆ. ಸಿನೆಮಾದಲ್ಲಿ ಒಬ್ಬ ರೌಡಿ ರಾಜನ ಕಾಲ ಕೆಳಗೆ ಒಬ್ಬ ಹೆಂಗಸನ್ನು ಎಳೆದುಕೊಂಡು ಬರುವ ರೀತಿಯಲ್ಲಿ ಇಲ್ಲಿ ಎಲ್ಲಾ ನಡೆದಿದೆ. ಹಾಗೂ ಇವರಿಬ್ಬರನ್ನು ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಬಹಳ ಚಿತ್ರಹಿಂಸೆ ಕೊಟ್ಟಿರುತ್ತಾರೆ. ಸ್ಟೇಷನ್‌ನಲ್ಲಿ ನಾರಾಯಣಸ್ವಾಮಿಯನ್ನು ಮನಸ್ಸಿಗೆ ಬಂದ ಹಾಗೆ ಥಳಿಸಿದ್ದಾರೆ. ಅವನ ಬಟ್ಟೆಯನ್ನು ಬಿಚ್ಚಿ ರಕ್ತ ಬರುವ ಹಾಗೆ ಹೊಡೆದು ಬರೀ ಕಾಚದಲ್ಲಿ ಬಿಟ್ಟಿದ್ದಾರೆ. ಆತನಿಗೆ ಪ್ರಜ್ಞೆ ತಪ್ಪುವವರೆಗೆ ಹೊಡೆದು ಲಾಕಪ್‌ನಲ್ಲಿ ಹಾಕಿದ್ದಾರೆ, ಆತನಿಗೆ ರಾತ್ರಿ ೧೧–೩೦ಕ್ಕೆ ಜ್ಞಾನ ಹೋದದ್ದು ಬೆಳಿಗ್ಗೆ ೮ ಗಂಟೆಗೆ ಆತನನ್ನು ಸರ್ಕಲ್ ಇನ್ಸ್‌ಪೆಕ್ಟರ್ ಮುಂದೆ ಎಳೆದುಕೊಂಡು ಹೋಗಿ ನಿಲ್ಲಿಸುವವರೆಗೂ ಜ್ಞಾನವೇ ಇರಲಿಲ್ಲ. ಹಾಗೂ ಆತನ ಹೆಂಡತಿಯು ವಿಷಯವೂ ತಿಳಿದಿರುವುದಿಲ್ಲ. ಈತ ಸರ್ಕಲ್‌ಇನ್ಸ್‌ಪೆಕ್ಟರ್‌ಮುಂದಕ್ಕೆ ನಡೆದುಕೊಂಡು ಹೋಗುವ ಪರಿಸ್ಥಿತಿಯಲ್ಲಿ ಇರಲೇ ಇಲ್ಲ. ಆತನನ್ನು ಇಬ್ಬರು ಹಿಡಿದುಕೊಂಡು ಎತ್ತಿ ನಿಲ್ಲಿಸಬೇಕಾದ ಪರಿಸ್ಥಿತಿ ಆಗ ಇತ್ತು. ಈ ಸ್ಥಿತಿಯಲ್ಲೂ ಕೂಡಾ ಆತನ ಬಗ್ಗೆ ಕನಿಕರವನ್ನು ತೋರದೇ ಪುನಃ ಎದೆಗೆ ಒದ್ದು ಲಾಟಿಯಿಂದ ತಿವಿದು ಗಾಯಗೊಳಿಸಿದ್ದನ್ನು ಈಗಲೂ ನೋಡಬಹುದಾಗಿದೆ. ಅಷ್ಟೇ ಅಲ್ಲದೇ ಆತನ ಹೆಂಡತಿಗೆ ರಾತ್ರಿ ೧೧–೩೦ರಿಂದ ಬೆಳಿಗ್ಗೆ ವರೆಗೆ ಚಿತ್ರ ಹಿಂಸೆ ಕೊಟ್ಟಿದ್ದಾರೆ. ಆಕೆಗೆ ಕೊಟ್ಟ

ಹಿಂಸೆಯ ಬಗ್ಗೆ ಆಕೆ ಜೋರಾಗಿಯೂ ಕೂಡಾ ಹೇಳುವ ಸ್ಥಿತಿಯಲ್ಲಿ ಇಲ್ಲ. ಆಕೆಯ ಹತ್ತಿರ ಮುಖ ತೆಗೆದುಕೊಂಡು ಹೋದಾಗ ಕಿರುಧ್ವನಿಯಲ್ಲಿ ಆಕೆ ಎಲ್ಲವನ್ನೂ ಹೇಳುತ್ತಾಳೆ ಸ್ಪಷ್ಟವಾಗಿ ಎಲ್ಲವನ್ನೂ ಹೇಳುವ ಸ್ಥಿತಿಯಲ್ಲಿ ಆಕೆ ಇಲ್ಲ ಮೈಮೇಲೆಲ್ಲಾ ಏಟನ್ನು ಮಾಡಿದ್ದು ಆಕೆಯ ಮೇಲೆ ಮೂರ್ನಾಲ್ಕು ಜನ ಪೋಲೀಸರು ಅತ್ಯಾಚಾರ ಮಾಡಿದ್ದಾರೆ ಅಷ್ಟೇ ಅಲ್ಲದೆ ಲಾಟಿಯಿಂದ ಮರ್ಮಾಂಗದ ಸುತ್ತ ಕುಚೇಷ್ಟೆ ಮಾಡಿದ್ದಾರೆ. ಆ ಬಗ್ಗೆ ರಕ್ತಸಿಕ್ತವಾದ ಒಟ್ಟೆಯನ್ನು ಅವರು ನಮಗೆ ತೋರಿಸಿದ್ದಾರೆ ಈ ರೀತಿ ಪೋಲೀಸರು ನಡೆದುಕೊಂಡಿರತಕ್ಕದ್ದರ ಬಗ್ಗೆ ಪ್ರಬಲ ಕಾರಣ ಇದೆಯೇ? ಏಕೆಂದರೆ ಇದು ಒಂದು ಸಣ್ಣ ಕಾರಣ. ಈ ನಾಗರೀಕತೆಯಲ್ಲಿ ನಾಗರೀಕನಾಗಿರತಕ್ಕ ಒಬ್ಬ ಮನುಷ್ಯ ತನ್ನ ಜೊತೆಯಲ್ಲಿ ಹೆಂಡತಿಯನ್ನಲ್ಲದೇ ತನ್ನ ತಂಗಿಯನ್ನು ಕರೆದುಕೊಂಡು ಹೋಗಿರಬಹುದು ಅಥವಾ ಸಂಬಂಧೀಕರನ್ನಾರಾದರನ್ನು ಕರೆದುಕೊಂಡು ಹೋಗಿರಬಹುದು ಅಥವಾ ಸ್ನೇಹಿತರು ಯಾರೇ ಜೊತೆಯಲ್ಲಿ ಬರಬಹುದು.
ಅನೇಕ ಕಾರಣಗಳಿಂದ ಒಬ್ಬ ವ್ಯಕ್ತಿಯ ಜೊತೆ ಇನ್ನೊಬ್ಬ ವ್ಯಕ್ತಿ ಹೋಗತಕ್ಕದ್ದು ಇದೆ. ಒಬ್ಬರ ಜೊತೆಯಲ್ಲಿ ಒಬ್ಬರು ಹೋಗಲೇಬೇಕಾಗುತ್ತದೆ ಒಬ್ಬೊಬ್ಬರು ತಿರುಗಾಡುವುದಕ್ಕೆ ಸಾಧ್ಯವಿಲ್ಲ. ಎಲ್ಲಾ ಕಡೆಯೂ ಸಂಬಂಧಿಕರನ್ನು ಕರೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಹಳ್ಳಿಗಳಿಂದ ಹೆಣ್ಣುಮಕ್ಕಳು ಬೆಣ್ಣೆ, ತರಕಾರಿ ಇತರೆ ಸಾಮಾನುಗಳನ್ನು ಮಾರಾಟ ಮಾಡುವುದಕ್ಕೆ ಸಂತೆಗಳಿಗೆ ಬರುತ್ತಾರೆ. ಸಾಯಂಕಾಲ ಆದ ಮೇಲೆ ಹಳ್ಳಿಗಳಿಗೆ ಹೋಗುವುದಕ್ಕೆ ಸಾಧ್ಯವಾಗದೆ ಶಾಲಾ ಕಟ್ಟಡಗಳಲ್ಲಿ ಉಳಿದುಕೊಳ್ಳುತ್ತಾರೆ. ಪೋಲೀಸರು ರಾತ್ರಿಯಲ್ಲಿ ಕುಡಿದು ಬೀಟ್‌ನಲ್ಲಿರುವಾಗ ಸುಲಭವಾಗಿ ಪೊಲೀಸ್ ಸ್ಟೇಶನ್‌ಗೆ ಕರೆದುಕೊಂಡು ಹೋಗುತ್ತಾರೆ. ಇಲ್ಲದಿದ್ದರೆ ಬೇರೆ ವ್ಯವಹಾರಗಳನ್ನು ನಡೆಸುತ್ತಾರೆ. ಇದು ನಡೆಯುತ್ತಾ ಇದೆ ಅನೇಕ ಸಂದರ್ಭಗಳಲ್ಲಿ ಇಂಥದ್ದನ್ನು ನಾವು ನೋಡಿದ್ದೇವೆ. ಪೋಲೀಸರು ಕರ್ತವ್ಯದಲ್ಲಿದ್ದಾಗ ಕುಡಿಯಬಾರದೆಂದು ಕಡಿವಾಣ ಹಾಕದಿದ್ದರೆ ಇದನ್ನೆಲ್ಲಾ ತಪ್ಪಿಸುವುದಕ್ಕೆ ಸಾಧ್ಯವಿಲ್ಲ ಗೋಲಿಬಾರ್ ಮಾಡತಕ್ಕ ಅಗತ್ಯವಿದೆ, ಗೋಲಿಬಾರ್ ಮಾಡಲೇಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮಾಡಬೇಕು, ಯಾರೇ ರಾಜ್ಯಭಾರ ಮಾಡಲಿ ವಿಶೇಷವಾಗಿ ಉಪಯೋಗಿಸತಕ್ಕ ಅಸ್ತ್ರ ಅದು. ಪಾವಗಡದಲ್ಲಿ ಗೋಲಿಬಾರ್ ಮಾಡತಕ್ಕ ಅಗತ್ಯವಿರಲಿಲ್ಲ. ಅಲ್ಲಿ ಕಾನೂನುಬಾಹಿರವಾಗಿ ಗೋಲಿಬಾರ್ ಮಾಡಲಾಗಿದೆ. ಒಬ್ಬ ಹೆಣ್ಣುಮಗಳ ಮೇಲೆ ಅತ್ಯಾಚಾರ ನಡೆದಿದೆ, ಅಮಾನುಷ ರೀತಿಯಲ್ಲಿ ಇವರು ನಡೆದುಕೊಂಡಿದ್ದಾರೆ. ಆಕೆಯ ಗಂಡನಿಗೆ ಹೊಡೆದಿದ್ದಾರೆ ಅದನ್ನು ಪ್ರತಿಭಟಿಸಲಿಕ್ಕೆ ಜನರು ಗುಂಪು ಮಾಡಿದ್ದಾರೆ. ಈ ಒಂದು ಕೃತ್ಯದಲ್ಲಿ ಯಾವ ಪೋಲೀಸರು ಭಾಗಿಗಳಾಗಿದ್ದಾರೆ. ಅವರನ್ನು ಸಸ್ಪೆಂಡ್ ಮಾಡಬೇಕು, ಅವರ ಮೇಲೆ ಕ್ರಮ ತೆಗೆದುಕೊಳ್ಳಿಯೆಂದು ಜನರು ಘೋಷಣೆ ಕೂಗುತ್ತಿದ್ದರೆ ವಿನಹ ಪೊಲೀಸ್ ಸ್ಟೇಶನ್‌ಗೆ ಮುತ್ತಿಗೆ ಹಾಕುತ್ತಿರಲಿಲ್ಲ, ಬರೀ ಘೋಷಣೆಗಳನ್ನು ಕೂಗುತ್ತಿದ್ದರು ಆರೋಗ್ಯ ಇಲಾಖೆಯ ನೌಕರರ ಸಂಘದ ಅಧ್ಯಕ್ಷರು ಮತ್ತಿತರರು ಪಕ್ಕದಲ್ಲಿರತಕ್ಕ ತಾಲ್ಲೂಕು ಕಛೇರಿ ಮುಂದೆ ಧರಣಿ ಕುಳಿತುಕೊಂಡಿದ್ದ ಸಂದರ್ಭದಲ್ಲಿ ಏಕಾಏಕಿ ಗೋಲಿಬಾರ್ ಮಾಡತಕ್ಕ ಸಂದರ್ಭವಿರಲಿಲ್ಲ. ಗುಂಪನ್ನು ಚದುರಿಸಲಿಕ್ಕೆ ಲಾಠಿ ಚಾರ್ಜ್, ಟೀಯರ್ ಗ್ಯಾಸ್ ಗಾಳಿಯಲ್ಲಿ ಗುಂಡು ಹಾರಿಸಿ ಜನರಿಗೆ ಎಚ್ಚರಿಕೆಯನ್ನು ಕೊಡಬೇಕಾಗಿತ್ತು. ಏಕಾಏಕಿ ಗುಂಡನ್ನು ಹಾರಿಸಿದ್ದಾರೆ. ಇವರು ಹಾಕಿರತಕ್ಕ ಗುಂಡು ತಲೆಗೆ, ಎದೆಗೆ ಬಿದ್ದಿದೆ. ಗುಂಡು ಹಾರಿಸಬೇಕಾದರೂ ಸೊಂಟದ ಕೆಳಗೆ ಹಾರಿಸಬೇಕು. ಪೊಲೀಸರು ಗುಂಡನ್ನು ತಲೆಗೆ ಮತ್ತು ಎದೆಗೆ ಹಾರಿಸಿ ತಮ್ಮ ಕರ್ತವ್ಯಲೋಪ ಮಾಡಿದ್ದಾರೆ. ಜೊತೆಗೆ ತುಮಕೂರಿನ ಎಸ್.ಪಿ.ಯವರು ಕರ್ತವ್ಯದಲ್ಲಿ ವಿಫಲರಾಗಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಗೋಲಿಬಾರ್ ಮಾಡುವುದಕ್ಕೆ ನಿಯಮವಿದೆ. ಇದು ಕೊಲೆ ಮಾಡುವುದಕ್ಕೆ ನಡೆದಂತಹ ಘಟನೆ.

ಶ್ರೀ ಬಿ. ಲಕ್ಕಪ್ಪ.—ಬೆಳಿಗ್ಗೆ ೧೧ ಗಂಟೆಗೆ ಎಸ್.ಪಿ.ಯವರಿಗೆ ಮೆಸೇಜ್ ಕೊಟ್ಟಿದ್ದಾರೆ. ಅವರು ಸಾಯಂಕಾಲ ೪ ಗಂಟೆಗೆ ಅಲ್ಲಿಗೆ ಹೋಗಿದ್ದಾರೆ ಅವರು ಅಲ್ಲಿಗೆ ಹೋಗುವ ಹೊತ್ತಿಗೆ ಗೋಲಿಬಾರ್ ಆಗಿ ಆರು ಜನರ ಹತ್ಯೆಯಾಗಿದೆ. ಗಾಯಗೊಂಡಂತಹ ೨೫–೩೦ ಜನರನ್ನು ತುಮಕೂರಿನ ಆಸ್ಪತ್ರೆಗೆ ಸೇರಿಸಲಾಗಿದೆ. ಆರು ಜನರ ಹೆಣ ಅಲ್ಲಿಯೇ ಬಿದ್ದಿವೆ ಹೆಣಗಳನ್ನು ನೋಡುವುದಕ್ಕೆ ಎಸ್.ಪಿ.ಯವರು ಅಲ್ಲಿಗೆ ಹೋಗಿದ್ದಾರೆ. ಮೆಸ್ ಮತ್ತು ಟೀಯರ್‌ಗ್ಯಾಸ್ ಬೇಕೆಂದು ಮೆಸೇಜ್ ಬಂದರೂ ಇವರು ೪ ಗಂಟೆಗೆ ಹೋಗಿದ್ದಾರೆ. ಇವರು ಹೋಗುವಷ್ಟರಲ್ಲಿ ಆರು ಜನ ಸತ್ತಿದ್ದಾರೆ. ಅವರು ಸಕಾಲಕ್ಕೆ ಹೋಗಿ ಅದನ್ನು ತಡೆಗಟ್ಟತಕ್ಕ ಕರ್ತವ್ಯವನ್ನು ಮಾಡಿದ್ದರೆ ಅದು ಇಷ್ಟರ ಮಟ್ಟಿಗೆ ಮುಂದುವರಿಯುತ್ತಿರಲಿಲ್ಲ.

ಅವರು ತಮ್ಮ ಜವಾಬ್ದಾರಿಯನ್ನು ಎಷ್ಟರ ಮಟ್ಟಿಗೆ ನಿರ್ವಹಿಸಿದ್ದಾರೆಂಬುದನ್ನು ನಾವು ನೀವು ಯೋಚನೆ ಮಾಡಬೇಕಾಗುತ್ತದೆ. ಪೊಲೀಸ್‌ನವರು ಇರತಕ್ಕದ್ದು ಜನರಪ್ರಾಣ, ಆಸ್ತಿಪಾಸ್ತಿ, ಮಾನ ರಕ್ಷಣೆ ಮಾಡಲಿಕ್ಕೆ ಜನರು ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಧಕ್ಕೆಯುಂಟು ಮಾಡಿಲ್ಲ, ಬೆಂಕಿ ಹಚ್ಚಿಲ್ಲ, ಮಂತ್ರ ಮಾಡತಕ್ಕ ಜನರೂ ಇಂತಹ ಒಂದು ಕೆಲಸಕ್ಕೂ ಕೈ ಹಾಕಿಲ್ಲ, ಇಂತಹದರಲ್ಲಿ ಗೋಲಿಬಾರ್ ಮಾಡತಕ್ಕ ಪ್ರಮೇಯ ಏನಿತ್ತು? ನಾರಾಯಣಸ್ವಾಮಿ ಪದ್ಮಮ್ಮ ಸರ್ಕಲ್ ಇನ್ಸ್‌ಪೆಕ್ಟರ್ ಕೊಠಡಿಯಲ್ಲಿರುವಾಗಲೇ, ಡಾ. ರಶೀದ್‌ರವರು ಅಲ್ಲಿಯೇ ಇದ್ದಾರೆ, ಆರೋಗ್ಯ ಇಲಾಖೆಯ ನೌಕರರ ಸಂಘದ ಅಧ್ಯಕ್ಷರಾದ ಬಷೀರ್, ತಹಶೀಲ್ದಾರ್‌ರವರು ತಮ್ಮ ಛೇಂಬರ್‌ನಲ್ಲಿರುವಾಗ ಅವರ ಅನುಮತಿಯನ್ನು ಕೇಳಲೇ ಇಲ್ಲ ಗೋಲಿಬಾರ್ ಮಾಡಿದ್ದಾರೆ. ಮೊದಲೇ ಇವರ ಛೇಂಬರ್‌ಗೆ ಕರೆಯಿಸಿ ಕೊಂಡಿದ್ದಾರೆ. ಯಾರ ಮಾತೂ ಕೇಳಿಲ್ಲ. ಧರಣಿ ಕುಳಿತಿದ್ದಂತಹ ಆರೋಗ್ಯ ಇಲಾಖೆಯ ನೌಕರರ ಪ್ರತಿನಿಧಿ ಕರಿಯಪ್ಪ ಮತ್ತು ಹಿರಿಯಣ್ಣ ಅವರನ್ನು ಎಳೆದುಕೊಂಡು ಹೋಗಿದ್ದಾರೆ. ಎಳೆದುಕೊಂಡು ಹೋಗುವಾಗ ಹಿರಿಯಣ್ಣ ಎಂಬುವರ ಕೈ ಮುರಿದಿದೆ ಅವರು ಈಗ ಅಂಗವಿಕಲರಾಗಿದ್ದಾರೆ. ಅಂದರೆ ಒಬ್ಬ ತಾಲ್ಲೂಕು ಮ್ಯಾಜಿಸ್ಟ್ರೇಟ್ ಇದ್ದರೂ ಸಹ ಅವರ ಅನುಮತಿಯನ್ನು ಸಹ ತೆಗೆದುಕೊಂಡಿಲ್ಲ. ಒಳಗಡೆ ಇದ್ದಂಥ ನಾರಾಯಣಸ್ವಾಮಿ ಮತ್ತು ಪದ್ಮಮ್ಮ ಹೇಳಿದ ಪ್ರಕಾರ ೧೦ ಗಂಟೆಯಿಂದಲೇ ಗನ್ನುಗಳನ್ನು ಲೋಡ್ ಮಾಡತಕ್ಕಂಥ ಕೆಲಸವನ್ನು ಪೊಲೀಸರು ಒಳಗಡೆ ಮಾಡುತ್ತಿದ್ದರು. ಸ್ಟೇಷನ್ ಒಳಗಡೆ ಇದ್ದುದರಿಂದ ಅವರಿಗೆ ಇದು ಚೆನ್ನಾಗಿ ಗೊತ್ತಾಯಿತು. ಅಂದರೆ ಅವರು ಬೆಳಿಗ್ಗೆಯಿಂದಲೇ, ಜನರು ಸೇರಿದರೆ ಗೋಲಿಬಾರು ಮಾಡಬೇಕೆಂಬ ತೀರ್ಮಾನಕ್ಕೆ ಬಂದರೇ ವಿನಹ ಶಾಂತಿಯುತ ರೀತಿಯಲ್ಲಿ ಜನರನ್ನು ಚದುರಿಸಬೇಕು, ಪರಿಸ್ಥಿತಿಯನ್ನು ಹತೋಟಿಗೆ ತರಬೇಕೆನ್ನುವ ಅಭಿಪ್ರಾಯ ಪ್ರಾಯಶಃ ಪೊಲೀಸರಿಗೆ ಇರಲಿಲ್ಲ.

ಉಪಾಧ್ಯಕ್ಷರು.—ನೀವು ಬೇಗ ಮುಗಿಸಬೇಕು.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಉಪಾಧ್ಯಕ್ಷರೇ, ನಾನು ಹೇಳತಕ್ಕದು ಇಷ್ಟೆ. ಈ ಕರ್ತವ್ಯ ನಿರ್ವಹಣೆ ಶ್ರೀ ರಾಚಯ್ಯನವರಿಂದ ಸಾಧ್ಯವಾಗುವುದಿಲ್ಲ ಎನ್ನುವುದು ಇಲ್ಲಿ ಬಂದಿದೆ. ಅನೇಕ ಇಂತಹ ಘಟನೆಗಳು ನಡೆದು ಹೋಗಿವೆ. ಪ್ರತಿಸಲವೂ ಎನ್‌ಕ್ವೈರಿ ಮಾಡಿಸುವುದು, ಎನ್‌ಕ್ವೈರಿ ರಿಪೋರ್ಟ್ ಬರುವುದಿಲ್ಲ, ಅದರ ಮೇಲೆ ಕ್ರಮ ತೆಗೆದುಕೊಳ್ಳುವುದೂ ಇಲ್ಲ. ಇಂತಹ ಪರಿಸ್ಥಿತಿ ಮುಂದುವರಿಯುವುದಾದರೆ ಈ ರಾಜ್ಯದಲ್ಲಿ ಪೊಲೀಸ್ ಅಧಿಕಾರ ಇದೆಯೋ, ಅಥವಾ ಜನತೆ ಆಯ್ಕೆ ಮಾಡಿದಂಥ ಜನತಾ ಸರ್ಕಾರ ಇದೆಯೋ ಎಂಬ ಪ್ರಶ್ನೆ ಮೂಡುತ್ತದೆ. ಜನತೆ ಬಹುಮತ ಕೊಟ್ಟು ಕಳುಹಿಸಿದ್ದಾರೆ, ಆದ್ದರಿಂದ ಏನು ಬೇಕಾದರೂ ಮಾಡಬಹುದು ಎಂಬ ಭಾವನೆ ಏನಾದರೂ ಇದ್ದರೆ ಅದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಿಯಾದಂಥ ನಿಲುವು ಅಲ್ಲ, ನಮ್ಮ ರಾಜ್ಯಾಂಗದ ಚೌಕಟ್ಟಿನಲ್ಲಿ ಕಾನೂನು ವ್ಯಾಪ್ತಿಯೊಳಗೆ ಅಧಿಕಾರ ಮಾಡುವುದಕ್ಕೆ ಜನತೆ ನಿಮಗೆ ಬಹುಮತ ಕೊಟ್ಟು ಕಳಿಸಿದ್ದಾರೆಯೇ ವಿನಹ ಆಯ್ಕೆಯಾಗಿ ಬಂದ ಮೇಲೆ ರಾಜ್ಯದಲ್ಲಿರತಕ್ಕಂಥ ಎಲ್ಲಾ ಕಾನೂನನ್ನು ರಕ್ಷಣೆ ಮಾಡತಕ್ಕಂಥ ಜವಾಬ್ದಾರಿಯನ್ನು ಕಳೆದುಕೊಳ್ಳುವ ರೀತಿಯಲ್ಲಿ ಈ ಜವಾಬ್ದಾರಿಯಿಂದ ನುಣುಚಿಕೊಳ್ಳತಕ್ಕಂಥ ರೀತಿಯಲ್ಲಿ ಅಧಿಕಾರ ನಡೆಸಿದರೆ ಅದು ಪ್ರಜಾಪ್ರಭುತ್ವ ತತ್ವಕ್ಕೆ ವಿರುದ್ಧವಾಗುತ್ತದೆ. ಗೋಲಿಬಾರು ಆಗಿರುವುದು ಪತ್ರಿಕೆಯಲ್ಲಿ ಬಂದಿದೆ. ತಾವು ಸಹ ಹೇಳಿದ್ದೀರಿ. ಅಂದರೆ ಯಾರು ಯಾರು ಈ ಗೋಲಿಬಾರು ಮಾಡಿದರು. ಅವರು ವೈಯುಕ್ತಿಕ ಕಾರಣಕ್ಕಾಗಿ ಮಾಡಿದ್ದಾರೆ. ಯಾವುದೇ ಶಾಂತಿ ರಕ್ಷಣೆಗೆ, ಪ್ರಾಣ ರಕ್ಷಣೆಗಾಗಲೀ, ವಿಧಿಯಿಲ್ಲದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಈ ಗೋಲಿಬಾರನ್ನು ಮಾಡಿಲ್ಲ. ಆದ್ದರಿಂದ ೩೦೨ ಸೆಕ್ಷನ್ ಕೆಳಗೇ ಅವರ ಮೇಲೆ ಕೇಸ್ ರಿಜಿಸ್ಟರ್ ಮಾಡಬೇಕು. ಕೇಸ್ ರಿಜಿಸ್ಟರ್ ಮಾಡಿ ಕ್ರಮ ನಡೆಸಬೇಕೇ ವಿನಹ ಬರೀ ಜ್ಯೂಡಿಶಿಯಲ್ ಎನ್‌ಕ್ವೈರಿ ಮಾಡಿದರೆ ಅದರಿಂದ ಪ್ರಯೋಜನ ಆಗುವುದಿಲ್ಲ. ಅವರನ್ನು ತಕ್ಷಣದಿಂದ ಡಿಸ್‌ಮಿಸ್ ಮಾಡಿ ೩೦೨ ಸೆಕ್ಷನ ಪ್ರಕಾರ ಕೇಸ್ ಹಾಕಬೇಕು. ಒಂದು ವೇಳೆ ಇದು ಪುನರಾವರ್ತನೆ ಆಗತಕ್ಕಂಥ ಪರಿಸ್ಥಿತಿ ಇರುವುದರಿಂದ ನಿಮಗೆ ಕೆಟ್ಟ ಹೆಸರು ಬರುತ್ತದೆ. ನೀವು ಒಳ್ಳೆಯವರು ಎಂದು ಎಲ್ಲರೂ ಹೇಳುತ್ತಾರೆ. ನಾವು ಕೂಡ ಅದೇ ಭಾವನೆಯನ್ನು ಇಟ್ಟುಕೊಂಡಿದ್ದೇವೆ ನಿಮ್ಮ ಇಲಾಖೆ ದೊಡ್ಡ ಕುದುರೆ ಇದ್ದ ಹಾಗೆ. ನಿಮಗೆ ವಯಸ್ಸಾಗಿದೆ. ನಿಮಗೆ ಲಗಾಮು ಹಿಡಿಯುವುದಕ್ಕಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನೀವು ಅಧಿಕಾರದಲ್ಲಿ ಕುಳಿತುಕೊಂಡು ಕಾನೂನು ಸುವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಹೋಗಲಾಗದಂಥ ಪರಿಸ್ಥಿತಿಯಲ್ಲಿ ನೀವು ಅಧಿಕಾರದಲ್ಲಿ ಇರತಕ್ಕದ್ದು ಸೂಕ್ತ ಅಲ್ಲ. ಹಿಂದೆ ದಿವಂಗತ ಲಾಲಬಹಾದೂರ್ ಶಾಸ್ತ್ರಿಯವರು ರೈಲ್ವೆ ಅಪಘಾತ ಆಯಿತೆಂದು ಆ ಕಾರಣಕ್ಕಾಗಿ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ

ಯನ್ನು ಕೊಟ್ಟರು. ಹಾಗೆಯೇ ಶ್ರೀ ಎಂ.ಎ. ರಾಮರಾಯರು ಮಧುಗಿರಿಯಲ್ಲಿ ನಡೆದಂಥ ಒಂದು ಘಟನೆಯಲ್ಲಿ ರಾಜೀನಾಮೆಯನ್ನು ಕೊಟ್ಟರು. ಅವರೆಲ್ಲ ಹೃದಯ ಇರತಕ್ಕಂಥ ಜನ. ಪ್ರಜಾಪ್ರಭುತ್ವ ತತ್ವಕ್ಕೆ ಬೆಲೆ ಕೊಟ್ಟಂತಹ ಜನ. ನೀವು ಮೌಲ್ಯಾಧಾರಿತ ರಾಜಕಾರಣವೆಂದು ಹೇಳಿ ಕಾಂಗ್ರೆಸ್ ಸರ್ಕಾರಕ್ಕಿಂತ ಉತ್ತಮ ಆಡಳಿತ ಕೊಡುತ್ತೇವೆ ಎಂದು ಹೇಳಿ ಇವೊತ್ತು ಆ ದಿಸೆಯಲ್ಲಿ ವಿಫಲ ವಾಗಿರುವುದರಿಂದ ತಾವು ಅಧಿಕಾರದಲ್ಲಿ ಇರುವುದಕ್ಕೆ ಲಾಯಕ್ಕಿಲ್ಲ. ಆದ್ದರಿಂದ ನೀವು ರಾಜೀನಾಮೆ ಯನ್ನು ಕೊಡಲೇಬೇಕು. ಮತ್ತು ೩೦೨ನೆ ಪ್ರಕಾರ ಅಧಿಕಾರಿಗಳ ಮೇಲೆ ಕೇಸ್ ಹಾಕದೇ ಹೋದರೆ ನಾವು ಜನತೆಯ ಪರವಾಗಿ ನಿಮ್ಮ ಇಲಾಖೆಯ ನಡವಳಿಕೆಗಳನ್ನು ಪ್ರತಿಭಟಿಸಬೇಕಾಗುತ್ತದೆ ಎಂಬ ಮಾತನ್ನು ಹೇಳಿ ನೀವು ರಾಜೀನಾಮೆಯನ್ನು ಕೊಡಲೇ ಬೇಕು ಮತ್ತು ೩೦೨ರ ಪ್ರಕಾರ ಕೇಸು ಹಾಕುವ ಕ್ರಮ ಜಾರಿಗೊಳಿಸಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೧೪-೪೫ ಪಿ.ಎಂ.

ಶ್ರೀ ಪಂಪಾಪತಿ (ದಾವಣಗೆರೆ).— ಅಧ್ಯಕ್ಷರೇ, ಈಗಾಗಲೇ ಅನೇಕ ಹಿರಿಯ ಸದಸ್ಯರು ಹೇಳಿದ್ದಾರೆ....

ಉಪಾಧ್ಯಕ್ಷರು.—ನೀವು ಐದು ನಿಮಿಷದಲ್ಲಿ ಮುಗಿಸಬೇಕು. ನಿಮ್ಮ ತೀರ್ಮಾನ ಏನೆಂಬುದನ್ನು ಹೇಳಿಬಿಡಿ.

ಶ್ರೀ ಪಂಪಾಪತಿ.—ಅದು ಒಂದೇ ಹೇಳಿದರೆ ಆಗುವುದಿಲ್ಲ. ಪದ್ಮಮ್ಮ ಮತ್ತು ನಾರಾಯಣಸ್ವಾಮಿ ಅವರ ವಿಷಯದ ಬಗ್ಗೆ ಈಗಾಗಲೇ ವಿವರವಾಗಿ ಹೇಳಿದ್ದಾರೆ. ಒಟ್ಟಾರೆ ಪಾವಗಡದಲ್ಲಿ ಪೋಲೀಸರ ದೌರ್ಜನ್ಯ ಅತಿ ಹೆಚ್ಚಾಗಿದೆ. ಈ ಪೋಲೀಸರು ರಾತ್ರಿ ಹೊತ್ತು ಹಿಡಿದು ಅನೇಕ ವಿಧವಾದ ತೊಂದರೆಗಳನ್ನು ಕೊಟ್ಟರೂ ಸಹ ಬೆಳಿಗ್ಗೆ ಬಿಟ್ಟುಬಿಡಬಹುದಾಗಿತ್ತು. ಅದನ್ನು ಮಾಡದೆ ಅವರನ್ನು ಹಿಡಿದಿರುವುದು ಮಾಡಿ, ಮತ್ತೆ ಒಂದು ಗಂಟೆ ನಂತರ ಗೋಲಿಬಾರು ಮಾಡಿದರು. ಏತಕ್ಕೆ ಆ ರೀತಿ ಜನ ಸೇರುವಂಥ ಒಂದು ಪರಿಸ್ಥಿತಿಯನ್ನು ಅಧಿಕಾರಿಗಳು ತಂದುಕೊಂಡರು ? ಮತ್ತು ಮೇಲ್ಪಟ್ಟ ಅಧಿಕಾರಿಗಳಿಗೆ ಈ ವಿಷಯವನ್ನು ಏಕೆ ತಿಳಿಸಲಿಲ್ಲ ? ತಕ್ಷಣ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ? ಗೋಲಿಬಾರ್ ಆಗದೇ ಇರತಕ್ಕ ರೀತಿಯಲ್ಲಿ ಆ ಇಲಾಖೆ ಏಕೆ ಪ್ರಯತ್ನ ಮಾಡಲಿಲ್ಲ ಎನ್ನುವುದು ಬಹಳ ಮುಖ್ಯ. ಇದು ಬಹಳ ಸಣ್ಣ ವಿಷಯ ಹೆಣ್ಣು ಮಕ್ಕಳಿಗೆ ಆಗಿರತಕ್ಕಂಥ ಅತ್ಯಾಚಾರ, ಅನ್ಯಾಯ ಖಂಡಿತವಾಗಿಯೂ ಎಲ್ಲರೂ ಖಂಡಿಸಬೇಕು. ಇದನ್ನು ಯಾವ ಅಧಿಕಾರಿ ಮಾಡಿದರೂ ಕೂಡ, ಆ ಅಧಿಕಾರಿಗೆ ಸರಿಯಾದ ಶಿಕ್ಷೆ ಆಗಲೇಬೇಕು. ಆದ್ದರಿಂದ ಇವರನ್ನು ಬರೀ ಅಮಾನತ್ತಿನಲ್ಲಿ ಇಡುವುದಕ್ಕಿಂತ ಜೈಲಿನಲ್ಲಿ ಹಾಕುವುದು ಅಗತ್ಯ. ಕೊಲೆ ಕೇಸ್ ಹಾಕಿ ಜೈಲಿಗೆ ಕಳುಹಿಸಬೇಕು. ಈ ರೀತಿ ಏನಾದರೂ ಸರ್ಕಾರದವರು ಮಾಡಿದರೆ, ಮುಂದೆ ಈ ರೀತಿ ಗೋಲೀಬಾರ್ ಮಾಡುವುದೇ ಆಗಲೀ, ಸಾರ್ವಜನಿಕರ ಮೇಲೆ ಹಿಂಸೆ ಮಾಡುವುದೇ ಆಗಲಿ ಸ್ವಲ್ಪಮಟ್ಟಿಗೆ ತಪ್ಪಬಹುದು. ಎಲ್ಲಾ ಪೋಲೀಸಿನವರೂ ಒಂದೇ ರೀತಿ ಇರುವುದಿಲ್ಲ. ಅನೇಕರು ಒಳ್ಳೆಯವರೂ ಇದ್ದಾರೆ, ಕೆಲವರು ಕೆಟ್ಟವರೂ ಇದ್ದಾರೆ. ಕೆಲವರು ಮಾಡತಕ್ಕಂಥ ದುಷ್ಕೃತ್ಯದಿಂದ ಈ ಇಲಾಖೆಗೆ ಮತ್ತು ರಾಜ್ಯಕ್ಕೆ ಕೆಟ್ಟ ಹೆಸರು ಬರುತ್ತದೆ. ನಮ್ಮ ರಾಜ್ಯದಲ್ಲಿ ಒಳ್ಳೆಯ ಜನ ಇದ್ದಾರೆ, ಒಳ್ಳೆಯ ವ್ಯವಸ್ಥೆ ಇದೆ, ಅಧಿಕಾರಿಗಳೂ ಒಳ್ಳೆಯವರು ಇದ್ದಾರೆ. ಆದರೆ ಕೆಲವರು ಮಾಡತಕ್ಕಂಥ ದುಷ್ಕೃತ್ಯದಿಂದ ಈ ರಾಜ್ಯಕ್ಕೆ, ಅಧಿಕಾರಿಗಳಿಗೆ ಕೆಟ್ಟ ಹೆಸರು ಬರುತ್ತದೆ.

ಶ್ರೀ ಕೆ. ರಾಮಯ್ಯ.—ಕಮ್ಯುನಿಸ್ಟ್‌ನವರು ಯಾವಾಗಲೂ ಹೀಗೆಯೇ ಹೇಳುವುದು...

ಶ್ರೀ ಪಂಪಾಪತಿ.—ಇವೊತ್ತು ಇವರು ಕಮ್ಯುನಿಸ್ಟ್‌ನವರು ಹೀಗೆಯೇ ಹೇಳುವುದು ಎಂದು ಹೇಳುತ್ತಿದ್ದಾರೆ. ಅವರ ಸರ್ಕಾರದಲ್ಲೂ ಅನೇಕ ಜನರನ್ನು ಗುಂಡಿಕ್ಕಿ ಕೊಂದಿದ್ದಾರೆ ನಾವು ಕಮ್ಯುನಿಸ್ಟ್ ಎನ್ನುವುದನ್ನು ನೀವು ಹೇಳಬೇಕಾಗಿಲ್ಲ. ಮಾನ್ಯ ರಾಮಯ್ಯನವರು ಇನ್ನೂ ಈಗ ಬಂದಿದ್ದಾರೆ. ಹಿಂದೆ ೩೦ ಜನ ರೈತರನ್ನು ಗುಂಡಿಕ್ಕಿ ಕೊಂದಾಗ ರಾಮಯ್ಯನವರು ಎಲ್ಲಿ ಇದ್ದರೋ. ನಾವು ಕಮ್ಯುನಿಸ್ಟರು ಎಂದು ರಾಮಯ್ಯನವರು ಏನೂ ಹೇಳಬೇಕಾಗಿಲ್ಲ.

(ವಿಧಾನ ಸಭಾಧ್ಯಕ್ಷರು, ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವತ್ತು ಅಧಿಕಾರಿಗಳು ಎಲ್ಲರೂ ಕೆಟ್ಟವರು ಎಂದುಹೇಳಿದರೇ ತಪ್ಪಾಗುತ್ತದೆ. ಕೆಲವರು ಒಳ್ಳೆಯವರ ಇದ್ದಾರೆ, ಕೆಲವರು ಕೆಟ್ಟವರುಇದ್ದಾರೆ. ಕೆಟ್ಟವರಮೇಲೆ ತೀವ್ರವಾದ ಕ್ರಮತೆಗೆದುಕೊಳ್ಳಬೇಕು ಎಂಬುದು ನಮ್ಮ ಅಭಿಪ್ರಾಯ. ಅವರು ಪೋಲೀಸಿನವರಾಗಿರಬಹುದು, ದಫೇದಾರ್ ಆಗಿರಬಹುದು, ಸಬ್ ಇನ್ಸ್‌ಪೆಕ್ಟರ್ ಆಗಿರಬಹುದು. ಡಿ.ವೈ.ಎಸ್.ಪಿ. ಇದ್ದೂ ಕೂಡ ಈ ಕೃತ್ಯ ನಡೆದಿದೆ ಎಂದು ಹೇಳಿದರೆ, ಆ ಡಿ.ವೈ.ಎಸ್.ಪಿ. ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರು ಮೇಲಧಿಕಾರಿ, ಹಿರಿಯ ಅಧಿಕಾರಿ, ಜವಾಬ್ದಾರಿ ಅಧಿಕಾರಿ ಇದ್ದೂ ಗೋಲಿಬಾರ್ ಆಗಿದೆ ಎಂದರೆ ಈ ಒಂದು ಕೃತ್ಯದ ಬಗ್ಗೆ ಆ ಅಧಿಕಾರಿಯೇ ಜವಾಬ್ದಾರನಾಗಬೇಕಾಗುತ್ತದೆ. ಆದ್ದರಿಂದ ಅವರನ್ನು ಇವೊತ್ತು ಹೊಣೆಗಾರರನ್ನಾಗಿ ಮಾಡಬೇಕು. ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕು, ಇವೊತ್ತು ಅಲ್ಲಿ ತಾಲ್ಲೂಕು ಮ್ಯಾಜಿಸ್ಟ್ರೇಟ್ ಆದ, ತಹಶೀಲ್ದಾರ್ ಅವರು ಇದ್ದರೂ ಕೂಡ, ಈ ಒಂದು ಕೆಲಸಕ್ಕೆ ಅವರ ಪರ್ಮಿಷನ್ ಕೇಳ ಬೇಕಾಗಿತ್ತು. ಆದರೆ ಇವರು, ಪರ್ಮಿಷನ್ ಕೇಳಲಿಲ್ಲ, ಇವರದು ತಪ್ಪಾಗಿದೆ. ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕು. ಮಾಡಿತಕ್ಕಂಥ ಕೃತ್ಯಕ್ಕೆ ತಕ್ಕ ಶಿಕ್ಷೆ ಆಗಬೇಕು. ಬರೀ ಸಸ್ಪೆಂಡ್ ಮಾಡುವುದರಿಂದ, ಅನಂತರ ವಿಚಾರಣೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಇದರಿಂದ ಅವರು ಮಾಡಿದ್ದೆಲ್ಲಾ ಸರಿ ಎಂದು, ಅವರು ಮನೆಯಲ್ಲಿದ್ದ ಕಾಲದ ಸಂಬಳ ಕೊಟ್ಟು ಬಡ್ತಿ ಕೊಟ್ಟು ಕೆಲಸಕ್ಕೆ ತೆಗೆದುಕೊಳ್ಳತಕ್ಕ ಕೆಲಸ ಆಗಬಾರದು. ವಿಚಾರಣಾ ಕಾಲದಲ್ಲಿ ಸಾವಿರಾರು ಜನ ಸೇರಿರುತ್ತಾರೆ. ಅವರಿಗೆ ಶಿಕ್ಷೆ ಕೊಡಿ ಎಂದು ಹೇಳುವುದಕ್ಕೆ ಹೆದರುತ್ತಾರೆ. ಇದರಿಂದ ವಿಚಾರಣೆಯು ಕೂಡ ಸರಿಯಾಗಿ ಆಗುವುದಿಲ್ಲ ಸರಿಯಾದ ಶಿಕ್ಷೆಯೂ ಅವರಿಗೆ ಸಿಕ್ಕುವುದಿಲ್ಲ. ಈ ರೀತಿ ಮಾಡಿ ಕೊನೆಗೆ ಅವರಿಗೆ ಹಿಂದಿನ ಸಂಬಳ ಎಲ್ಲವನ್ನೂ ಕೊಟ್ಟು ಪುನಃ ಕೆಲಸಕ್ಕೆ ತೆಗೆದುಕೊಳ್ಳತಕ್ಕ ಪ್ರಯತ್ನ ಆಗಬಾರದು. ಅವರನ್ನು ಕೆಲಸದಿಂದ ವಜಾ ಮಾಡಬೇಕು, ಜೈಲಿಗೆ ಹಾಕಬೇಕು. ತಕ್ಕ ಶಿಕ್ಷೆ ಕೊಡಬೇಕು. ಆ ರೀತಿಯಾದರೆ ಮುಂದೆ ಯಾರಾದರೂ ಕೂಡ ಸಾರ್ವಜನಿಕರ ಮೇಲೆ ಇಂತಹ ಒಂದು ಅಚಾತುರ್ಯ ನಡೆಯದಂಥ ರೀತಿಯಲ್ಲಿ ಎಚ್ಚರಿಕೆ ವಹಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಅಭಿಪ್ರಾಯವನ್ನು ಕೊಡುತ್ತೇನೆ. ಎ.ಎನ್.ಎಂ. ಕೆಲಸದಲ್ಲಿ ಹೆಣ್ಣು ಮಕ್ಕಳು ಹಳ್ಳಿಗಳಲ್ಲಿ ಕೆಲಸ ಮಾಡುತ್ತಾರೆ. ಅವರಿಗೆ ಬಹಳ ತೊಂದರೆ ಇದೆ. ಅಂತಹವರಿಗೆ ರಕ್ಷಣೆ ಕೊಡಬೇಕು. ಒಬ್ಬ ಹೆಣ್ಣುಮಗಳಿಗೆ ಏನೋ ತೊಂದರೆಯಾಗಿದೆ ಎಂದು ಅಲ್ಲ, ಅನೇಕ ಹೆಣ್ಣುಮಕ್ಕಳಿಗೆ ಇಂತಹ ತೊಂದರೆಗಳಾಗುತ್ತಿವೆ. ಅವರು ಕಂಪ್ಲೇಂಟ್ ಕೊಟ್ಟರೂ ಸಹ ಕೇಳುವುದಿಲ್ಲ. ಏತಕ್ಕೆಂದರೆ ಅಲ್ಲಿರತಕ್ಕಂಥ ಗೋವಿಂದಪ್ಪ, ಮಾಜಿ ಅಧ್ಯಕ್ಷ ಇಂತಹ ರಾಜಕಾರಣಿಗಳು ಅಥವಾ ಯಾರೋ ಪುಡಾರಿಗಳು ಇವತ್ತು ಅವರಿಗೆ ತೊಂದರೆ ಕೊಡುತ್ತಾ ಇರುತ್ತಾರೆ. ಪೋಲೀಸ್ ಇಲಾಖೆಯವರೂ ಅವರಿಗೆ ಸರಿಯಾದ ರಕ್ಷಣೆ ಕೊಡುವುದಿಲ್ಲ. ಆದುದರಿಂದ ಇಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹೆಣ್ಣುಮಕ್ಕಳು, ಅಬಲೆಯರೂ ಇದ್ದರೆ ಅವರಿಗೆ ಸರಿಯಾದ ರಕ್ಷಣೆ ಕೊಡಬೇಕು. ಸರಿಯಾದ ರಕ್ಷಣೆ ಕೊಟ್ಟರೆ ಅವರು ಕೆಲಸ ಮಾಡುತ್ತಾರೆ. ಅವರು ಸರಕಾರಿ ನೌಕರರು, ಅವರಿಗೆ ಸರಿಯಾದ ರಕ್ಷಣೆ ಕೊಟ್ಟಾಗ ಅವರು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ, ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಪಾವಗಡದಲ್ಲಿ ನಡೆದಿರತಕ್ಕಂಥ ಘಟನೆ ಮಾತ್ರ ಅಲ್ಲ, ರಾಜ್ಯದಲ್ಲಿ ಇತ್ತೀಚೆಗೆ ದರೋಡೆಗಳೂ ಕೂಡಾ ನಡೆಯುತ್ತಿವೆ. ಅನೇಕ ಕಡೆ ದರೋಡೆಗಳು ನಡೆಯುತ್ತಿದೆ. ಇಂತಹವರನ್ನು ಹಿಡಿದು ಸರಿಯಾದಂಥ ಜನರಿಗೆ ಒಂದು ರಕ್ಷಣೆಯ ಭರವಸೆ ಬರತಕ್ಕಂಥ ರೀತಿಯಲ್ಲಿ ಆಡಳಿತ ನಡೆಸಬೇಕಾದಂಥ ಪೋಲೀಸ್ ಇಲಾಖೆ, ತನ್ನ ಕರ್ತವ್ಯದಲ್ಲಿ ವಿಫಲಗೊಂಡಿದೆ ಎಂದು ಹೇಳಿದರೆ ತಪ್ಪಲ್ಲ.

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ.

ಶ್ರೀ ಪಂಪಾಪತಿ.— ಆದುದರಿಂದ ಇಂತಹ ಜನರಿಗೆ ತೊಂದರೆ ಕೊಡತಕ್ಕಂಥ ಜನರನ್ನು ಇವೊತ್ತು ಶಿಕ್ಷಿಸಬೇಕೇ ವಿನಹ, ಈ ರೀತಿ ಯಾರದ್ದೋ ಮಾತು ಕೇಳಿ ಗೋವಿಂದಪ್ಪನ ಮಾತು ಕೇಳಿ ಪೋಲೀಸ್ ಇಲಾಖೆ ಇಂತಹ ದುಷ್ಕೃತ್ಯಕ್ಕೆ ಕಾರಣ ಆಗಬಾರದು. ಆದುದರಿಂದ ಗೋವಿಂದಪ್ಪನನ್ನು ಮೊದಲು ಹಿಡಿದು ಒಳಗಡೆ ಹಾಕಬೇಕು. ಅವನಿಗೆ ಇವೊತ್ತಿನವರೆಗೆ ಏನೂ ಮಾಡಿಲ್ಲ. ಯಾವ ಒಂದು ಮುಖ್ಯ ವ್ಯಕ್ತಿ ಈ ಗೋಲೀಬಾರ್‌ಗೆ ಕಾರಣಕರ್ತನಾಗಿದ್ದಾನೆ, ಅವನ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ಎಂಬುದನ್ನು ಮಾನ್ಯ ಗೃಹ ಮಂತ್ರಿಗಳು ತಿಳಿಸಬೇಕಾಗುತ್ತದೆ.

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ....

ಶ್ರೀ ಪಂಪಾಪತಿ.—ಆದ್ದರಿಂದ ನಾನು ತಮಗೆ ಹೇಳುತ್ತೇನೆ, ಇತ್ತೀಚೆಗೆ ಹುಬ್ಬಳ್ಳಿಯಲ್ಲಿರುವ ಬೊರೂಕಾ ಗಿರಣಿಯಲ್ಲಿ ವಾಚ್‌ಮನ್ ಫೈರ್ ಮಾಡಬೇಕಾಯಿತು. ಪೋಲೀಸರು ಗೋಲೀಬಾರ್ ಮಾಡುತ್ತಾರೆ, ನಾವು ಏತಕ್ಕೆ ಮಾಡಬಾರದು ಎಂದು ಅವರೂ ಕೂಡಾ ಕಾರ್ಮಿಕರ ಮೇಲೆ ಗೋಲೀಬಾರ್ ಮಾಡಿದಂಥ ಘಟನೆ ನಡೆದಿದೆ, ಇಡೀ ರಾಜ್ಯದಲ್ಲಿ ಕೈಗಾರಿಕೆಗಳಲ್ಲಿ ಇರತಕ್ಕಂಥ ವಾಚ್‌ಮನ್‌ಗಳೂ ಕೂಡಾ ಗೋಲೀಬಾರ್ ಮಾಡತಕ್ಕಂಥ ಪರಿಸ್ಥಿತಿ ಬಂದರೆ, ಈ ರಾಜ್ಯದಲ್ಲಿ ಅನೇಕ ರೀತಿಯ ಅನಾಹುತಗಳು ಆದೀತು ಎಂದು ಹೇಳುತ್ತೇನೆ. ಅದನ್ನು ತಡೆಗಟ್ಟುವುದಕ್ಕೆ ನಮ್ಮ ಒಳಾಡಳಿತ ಇಲಾಖೆಯವರು ಮತ್ತು ಮಾನ್ಯ ಮಂತ್ರಿಗಳು ಎಲ್ಲರೂ ಕೂಡಿ ಹೆಚ್ಚು ಜವಾಬ್ದಾರಿ ವಹಿಸಬೇಕು. ಸರಿಯಾದ ರೀತಿಯಲ್ಲಿ ಜನರಿಗೆ ರಕ್ಷಣೆ ಕೊಡತಕ್ಕಂಥ ಒಂದು ಇಲಾಖೆಯಾಗಿ ಇದು ಪರಿಣಮಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಅವಕಾಶ ಕೊಟ್ಟಿದ್ದಕ್ಕೆ......

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ, ಮಾನ್ಯ ಮೂಡಲಗಿರಿಯಪ್ಪನವರು, ಪ್ರಾರಂಭ ಮಾಡಿ.

ಶ್ರೀ ಪಂಪಾಪತಿ.—ಒಂದು ನಿಮಿಷ ತಡೆಯಿರಿ, ನಾವು ಮಾತನಾಡಿದರೆ ನಿಮಗೆ ಏತಕ್ಕೆ ತೊಂದರೆಯಾಗುತ್ತದೆ ? ತಮಗೆ ವಂದನೆಯನ್ನು ಹೇಳುವುದಕ್ಕೂ ಪುರಸೊತ್ತು ಇಲ್ಲವೇ ? ತಾವು ಅವಕಾಶ ಕೊಟ್ಟಿರಿ, ಅದಕ್ಕೆ ತಮಗೆ ಧನ್ಯವಾದಗಳು ಎಂದು ಹೇಳುವುದಕ್ಕೂ ಅವಕಾಶ ಕೊಡದೇ ಹೋದರೆ ಹೇಗೆ ತಮಗೆ ವಂದನೆಯನ್ನು ಅರ್ಪಿಸುತ್ತೇನೆ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಶಿರಾ).—ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ದೇಶದ ಸಂಸ್ಕೃತಿಯನ್ನು ನಾವು ಯಾವರೀತಿಯಾಗಿ ಈ ಪ್ರಪಂಚಕ್ಕೆ ತೋರಿಸಿಕೊಟ್ಟಿದ್ದೇವೆ ಎಂದರೆ, ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ, ಒಬ್ಬ ಪರದೇಶಿ ಹೆಣ್ಣುಮಗಳು ನಗ್ನವಾಗಿ ಪ್ರಯಾಣ ಮಾಡಿದರೂ, ಆಕೆಯ ಶೀಲಕ್ಕೆ ಯಾವ ಒಂದು ಚ್ಯುತಿಯೂ ಕೂಡಾ ಬರುವುದಿಲ್ಲ ಎಂಬ ರೀತಿಯಲ್ಲಿ ನಮ್ಮ ಸಂಸ್ಕೃತಿ ಬಾಳಿ ಬೆಳೆದುಕೊಂಡು ಬಂದಿದೆ ಈ ಪ್ರದೇಶದಲ್ಲಿ, ಆದರಲ್ಲೂ ಕೂಡಾ ಈ ನಮ್ಮ ಕರ್ನಾಟಕ ರಾಜ್ಯದಲ್ಲಿ ಬೆಳೆದುಕೊಂಡು ಬಂದಿದೆ. ಈ ಒಂದು ಖ್ಯಾತಿಗೆ ಈಗ ಚ್ಯುತಿ ಬಂದಿದೆ ಈ ದೇಶದ ಸಂಸ್ಕೃತಿಗೆ ಚ್ಯುತಿ ಬಂದಿದೆ. ಎನ್ನತಕ್ಕಂಥಾದ್ದನ್ನು ಕರ್ನಾಟಕ ಸರಕಾರ ಎತ್ತಿತೋರಿಸಿಕೊಟ್ಟಿದೆ.

ಸನ್ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರು ಈಗಾಗಲೇ ಈ ಇನ್ಸಿಡೆಂಟ್ ಬಗ್ಗೆ ಬಹಳ ವಿವರಗಳನ್ನು ಕೊಟ್ಟಿದ್ದಾರೆ. ಈ ಇನ್ಸಿಡೆಂಟ್ ಬಗ್ಗೆ ನಾನು ಹೆಚ್ಚು ವಿವರಗಳನ್ನು ಹೇಳುವುದಕ್ಕೆ ಬಯಸುವುದಿಲ್ಲ. ಈ ವಿಷಯದ ಹಿನ್ನೆಲೆಯನ್ನು ಇಟ್ಟುಕೊಂಡು ನಾನು ಈ ಸದನದ ಮುಂದೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನಾನು ಹಲವಾರು ಪಾವಗಡ ವಾಸಿಗಳನ್ನು ಭೇಟಿ ಆಗಿದ್ದೆ ಈ ರೀತಿ ಭೇಟಿ ಮಾಡಿದಂಥ ಸಂದರ್ಭದಲ್ಲಿ ಆ ಪಾವಗಡ ವಾಸಿಗಳು ಹೇಳಿದರು. ಈ ಇನ್ಸಿಡೆಂಟ್, ಈ ರೀತಿ ಯಾದಂಥ ದುರ್ಘಟನೆ ಯಾವಾಗಲೋ ನಡೆಯಬೇಕಾಗಿತ್ತು, ಇದುವರೆಗೆ ಈ ಘಟನೆ ನಡೆಯದೇ ಇದ್ದುದೇ ದುರಾದೃಷ್ಟಕರ ಎಂದು ಹೇಳಿದರು. ಪಾವಗಡ ಶನಿದೇವರ ಒಂದು ಪುಣ್ಯ ಕ್ಷೇತ್ರ. ಈ ಪುಣ್ಯ ಕ್ಷೇತ್ರಕ್ಕೆ ಹಲವಾರು ಹೆಣ್ಣುಮಕ್ಕಳು ಬಂದು ಹೋಗುತ್ತಿರುತ್ತಾರೆ. ಪುಣ್ಯ ಸ್ಥಾನಕ್ಕೆ ಹಲವಾರು ಹೆಣ್ಣು ಮಕ್ಕಳು ಬಂದು ಹೋಗುತ್ತಾರೆ. ದೇವರಿಗೆ ಸೇವೆಯನ್ನು ಸಲ್ಲಿಸುವುದಕ್ಕೋಸ್ಕರ ಅಲ್ಲಿ ಒಂದು ದಿವಸ ತಂಗಿ ಸೇವೆಯನ್ನು ಸಲ್ಲಿಸಿ ಮರುದಿವಸ ಹೋಗತಕ್ಕಂಥ ಒಂದು ಸನ್ನಿವೇಶ ಇದೆ. ದೇವರಿಗೆ ಸೇವೆಯನ್ನು ಸಲ್ಲಿಸಲು ಬರುವಂತಹ ಹೆಣ್ಣು ಮಕ್ಕಳನ್ನು ಪೋಲೀಸಿನವರು ಅತ್ಯಂತ ಕೆಟ್ಟ ದೃಷ್ಟಿಯಲ್ಲಿ ನೋಡುತ್ತಿದ್ದಾರೆಂದು ಈ ಹಿಂದೆಯೇ ಆ ಹಳ್ಳಿಯವರು ದೂರುಗಳನ್ನು ಸಲ್ಲಿಸಿದ್ದಾರೆ. ಹೆಣ್ಣು ಮಕ್ಕಳು ದೇವರಿಗೆ ಸೇವೆಯನ್ನು ಸಲ್ಲಿಸಲು ಬಂದು ಅಲ್ಲಿ ಒಂದು ದಿವಸ ವಸತಿ ಮಾಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಅನೇಕ ಸಾರಿ ಹೆಣ್ಣು ಮಕ್ಕಳಿಗೆ ಕಿರುಕುಳ ಕೊಟ್ಟಿರುವ ನಿದರ್ಶನಗಳು ಪಾವಗಡ ತಾಲ್ಲೂಕಿನ ಜನರ ಅನುಭವಕ್ಕೆ ಬಂದಿವೆ. ಪೋಲೀಸಿನವರ ದೃಷ್ಟಿಯಲ್ಲಿ ಎಲ್ಲಾ ಹೆಣ್ಣು ಮಕ್ಕಳು ಕೂಡ ವೇಶ್ಯೆಯರೇ. ಇವೊತ್ತು ಪಾವಗಡದಲ್ಲಿ ಪೋಲೀಸಿನವರು ನಡೆದುಕೊಂಡಿರುವ ರೀತಿ ನೀತಿ ಗಳನ್ನು ನೋಡಿದರೆ ನಾವು ಮತ್ತು ನೀವೆಲ್ಲರೂ ಸಹ ತಲೆ ತಗ್ಗಿಸಬೇಕಾದಂಥ ಪರಿಸ್ಥಿತಿ ಬಂದಿದೆ. ಈ ಒಂದು ಘಟನೆಯ ಹಿನ್ನೆಲೆಯಲ್ಲಿ ಸುಮಾರು ೭ ಜನರ ಪ್ರಾಣಹಾನಿಯಾಯಿತು. ಮನುಷ್ಯರು ಮನುಷ್ಯರನ್ನೇ ಕೊಲ್ಲುವುದೆಂದರೆ ಅರ್ಥವಿದೆಯೇ ? ಪೋಲೀಸಿನವರೆಂದರೆ ಜನರ ರಕ್ಷಣೆ

ಮಾಡತಕ್ಕವರು ಆ ರಕ್ಷಕನೆ ಇವತ್ತು ಕೊಲ್ಲುವ ಮಟ್ಟಕ್ಕೆ ಇಳಿದಿದ್ದಾನೆ. ಮನುಷ್ಯನಿಗೆ ಆಶ್ರಯ ಕೊಡಬೇಕಾದಂಥ ಮನುಷ್ಯನೇ ಕೊಲ್ಲುವ ಪರಿಸ್ಥಿಗೆ ಹೋಗಿದ್ದಾನೆ. ಹಳ್ಳಿಯಲ್ಲಿ ವಾಸ ಮಾಡತಕ್ಕಂಥ ಮುಗ್ಧ ಜನ ಪೋಲೀಸಿನವರನ್ನು ನೋಡಿದ ಕೂಡಲೇ ಆ ಜನ ಹಸನ್ಮುಖರಾಗುತ್ತಿರಬೇಕು. ಆದರೆ ಆ ಒಂದು ಪರಿಸ್ಥಿತಿ ಇವತ್ತು ನಮ್ಮ ರಾಜ್ಯದಲ್ಲಿ ಇಲ್ಲ. ಪೋಲೀಸಿನವರನ್ನು ನೋಡಿದರೆ ರಾಕ್ಷಸರೋ ಅಥವಾ ನರಭಕ್ಷಕರೋ ಎನ್ನುವ ಒಂದು ಭೀತಿಯ ವಾತಾವರಣವುಂಟಾಗಿದೆ. ಈ ರೀತಿಯಾದರೆ ಸಾಮಾನ್ಯ ಜನರ ರಕ್ಷಣೆಯನ್ನು ಯಾರು ಮಾಡುತ್ತಾರೆ ? ಈ ರಾಜ್ಯದಲ್ಲಿ ಸರ್ಕಾರವಿದೆಯೋ ? ಇದನ್ನು ತಾವೇ ಯೋಚನೆ ಮಾಡಬೇಕು. ಇವೊತ್ತಿನ ದಿವಸ ಪೋಲೀಸಿನವರು ಆ ಹೆಣ್ಣು ಮಗಳನ್ನು ಮತ್ತು ಶ್ರೀ ನಾರಾಯಣಸ್ವಾಮಿಯವರನ್ನು ರಾಂಗ್‌ಫುಲ್ ಕನ್‌ಫೈನ್‌ಮೆಂಟ್‌ನಲ್ಲಿಟ್ಟಿದ್ದಾರೆ. ಇದು ಸರಿಯೋ ? ಅಲ್ಲಿನ ಎಸ್. ಪಿ. ಯವರು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಏನು ಹೇಳಿದ್ದಾರೆಂದರೆ ಅದು ಈ ರೀತಿ ಇದೆ.

> "Mr. A. R Infant, Superintendent of Police, Tumkur District told Deccan Herald over telephone that the voilance was sparked off following an assault on an Auxillary Nurse and Midwife (AM) and her maternal uncle, by three constables late last night".

ಆ ಹೆಣ್ಣು ಮಗಳನ್ನು ಮತ್ತು ಶ್ರೀ ನಾರಾಯಣಸ್ವಾಮಿಯವರನ್ನು ಆ ರಾತ್ರಿ ಟೈಮ್‌ನಲ್ಲಿ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ರಾಂಗ್‌ಫುಲ್ ಕನ್‌ಫೈನ್‌ಮೆಂಟಿನಲ್ಲಿಟ್ಟು ಅವರಿಗೆ ಶಿಕ್ಷೆಯನ್ನು ಕೊಟ್ಟಿದ್ದಾರೆ. ಇದನ್ನು ಕೇಳುವವರು ಯಾರು ಸ್ವಾಮಿ ? ತಾವೇ ಯೋಚನೆ ಮಾಡಿ. ಆ ಹೆಣ್ಣು ಮಗಳು ಮಲಗಲು ಜಾಗವಿಲ್ಲದೆ ಇದ್ದಂತಹ ಪರಿಸ್ಥಿತಿಯಲ್ಲಿ ಬೇರೆಯವರ ಮನೆಗೆ ಮಲಗಲು ಆಶ್ರಯ ಕೇಳಿ ಹೋಗುವಂತಹ ಸಂದರ್ಭದಲ್ಲಿ ಅವರನ್ನು ಪೋಲೀಸಿನವರು ಕರೆದುಕೊಂಡು ಹೋಗಿ ಅವರ ಮೇಲೆ ಅತ್ಯಾಚಾರ ಮಾಡಿ, ತದನಂತರ ಲಾಕಪ್‌ನಲ್ಲಿಟ್ಟಿದ್ದು ಸರಿಯೋ ಎನ್ನುವುದನ್ನು ತಾವೇ ಯೋಚನೆ ಮಾಡಿ. ಆ ಹೆಣ್ಣು ಮಗಳನ್ನು ರಾತ್ರಿ ವೇಳೆಯಲ್ಲಿ ಪೋಲೀಸ್ ಠಾಣೆಯಲ್ಲಿಟ್ಟುಕೊಳ್ಳಬಾರದೆನ್ನುವ ನಿಯಮವಿದ್ದರೂ ಸಹ ಯಾವ ಗ್ರೌಂಡ್ಸ್ ಮೇಲೆ ಅವರನ್ನು ಲಾಕಪ್‌ನಲ್ಲಿಟ್ಟುಕೊಂಡರು ? ಈ ಬಗ್ಗೆ ಮಾನ್ಯ ಮಂತ್ರಿಗಳಾದಂಥ ಶ್ರೀಮಾನ್ ರಾಚಯ್ಯನವರೇ ನಿರ್ಧಾರ ತೆಗೆದುಕೊಳ್ಳಬೇಕು. ಪೋಲೀಸ್ ಆಕ್ಟ್ ಪ್ರಕಾರ ಪೋಲೀಸಿನವರ ಕರ್ತವ್ಯವೇನು ? ಅವರ ಕರ್ತವ್ಯವೇನೆಂದರೆ ಅದು ಈ ರೀತಿ ಇದೆ. Collection of intelligence, detention of crimes, and prevention of crimes. ಅವರು ಈ ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕು. ಅವರು ಜನರನ್ನು ಹೆದರಿಸಬೇಕು. ಅದು ಯಾವ ಸಂದರ್ಭದಲ್ಲಿ ಎಂದರೆ ಯಾವ ವ್ಯಕ್ತಿಯೇ ಆಗಲಿ ನಿಜವಾಗಿಯೂ ತಪ್ಪು ಮಾಡಿದ್ದಾನೆಂದು ಗೊತ್ತಾದ ಮೇಲೆ ಹೆದರಿಸಬೇಕು. ಅದೂ ಏತಕ್ಕೆ ಹೆದರಿಸಬೇಕೆಂದರೆ ಆತನಿಂದ ಏನಾದರೂ ಮಾಹಿತಿಯನ್ನು ಸಂಗ್ರಹಣೆ ಮಾಡುವ ಸಲುವಾಗಿ ಹೆದರಿಸಬೇಕೆ ಹೊರತು ಬೇರೆ ಯಾವ ಕಾರಣಕ್ಕೂ ಹೆದರಿಸಬಾರದು. ನಾರ್ಮಲ್ ಸ್ಟೇಟಸ್‌ನಲ್ಲಿರುವಾಗ ಯಾವ ರೀತಿಯಲ್ಲಿ ಕರ್ತವ್ಯ ನಿರ್ವಹಿಸಬೇಕು ಎನ್ನುವುದು ಸಹ ಇದೆ. ಪೋಲೀಸಿನವರು ಕ್ರೈಮ್ಸ್‌ನ್ನು ಪ್ರಿವೆಂಟ್ ಮಾಡಬೇಕು. ಪೋಲೀಸ್ ಇಂಟಲಿಜೆನ್ಸಿ ವಿಭಾಗದವರು ಇಂತಹ ಕ್ರೈಮ್ಸ್‌ಗಳನ್ನು ಮೊದಲೇ ಕಲೆಕ್ಟ್ ಮಾಡಿದರೆ ಅದನ್ನು ಪ್ರಿವೆಂಟ್ ಮಾಡಲು ಅನುಕೂಲವಾಗುತ್ತದೆ. ಅದು ಬಿಟ್ಟು ಪೋಲೀಸಿನವರು ಗುಂಡು ಹಾಕುವುದಲ್ಲ. ನಮ್ಮ ಭಾರತ ದೇಶಕ್ಕೆ ಒಂದು ಒಳ್ಳೆಯ ಸಂಸ್ಕೃತಿ ಇದೆ. ನಾವು ಯುದ್ಧಕ್ಕೆ ಹೋದರೂ ಸಹ ಒಂದು ನಿಯಮವನ್ನು ಇಟ್ಟುಕೊಂಡಿದ್ದೇವೆ. ಯಾವ ರೀತಿಯಲ್ಲಿ ಯುದ್ಧ ಮಾಡಬೇಕು ? ಯಾವ ನಿಯಮಗಳನ್ನು ಅನುಸರಿಸಬೇಕೆಂಬುದನ್ನು ರಾಷ್ಟ್ರಗಳೇ ಪಾಲಿಸುತ್ತವೆ. ಒಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರವು ಬಾಂಬ್ ಹಾಕಬೇಕಾದರೂ ಇಂಟರ್‌ನ್ಯಾಶನಲ್ ಲೆವೆಲ್‌ನಲ್ಲಿ ಒಂದು ಕಾನೂನು ಇದೆ. ಆದರೆ, ಇಲ್ಲಿ ಯಾವ ನಿಯಮ ಇದೆ ? ಅಣ್ಣ ತಮ್ಮಂದಿರನ್ನು ಕೊಲ್ಲತಕ್ಕಂತಹ ದುರ್ನಡತೆಗೆ ಯಾವ ರೀತಿಯಾದಂಥ ಶಿಕ್ಷೆ ಕೊಡಬೇಕು ಎಂಬುದನ್ನು ತಾವೇ ಯೋಚನೆ ಮಾಡಿ? ಆದ್ದರಿಂದ ಇವರಿಗೆ ಸಿ.ಆರ್.ಪಿ.ಸಿ. ಮತ್ತು ಐ.ಪಿ.ಸಿ.ನ ರೂಲ್ ೧೪೯ ಮತ್ತು ೩೦೨ರ ಪ್ರಕಾರ ಇವರಿಗೆ ಪನಿಶ್‌ಮೆಂಟ್ ಮಾಡಬೇಕೆಂದು ಮನವಿಯನ್ನು ಸಲ್ಲಿಸುತ್ತಾ, ಇವತ್ತು ಮಾನ್ಯ ರಾಚಯ್ಯನವರು ಒಂದು ದೊಡ್ಡ ಖಾತೆಯನ್ನು ಹೊಂದಿದ್ದಾರೆ. ಇವರು ಈ ಸದನದಲ್ಲಿ ಹಲವಾರು ಮೌಲ್ಯಾಧಾರಿತ ಮಾತುಗಳನ್ನು

ಹೇಳಿದ್ದಾರೆ. ನನ್ನ ಪಕ್ಷದವರೇ ಆಗಲೀ ಅಥವಾ ಯಾರೇ ಆಗಲೀ ತಪ್ಪು ಮಾಡಿದಾಗ ನಿಷ್ಪಕ್ಷಪಾತವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇನೆಂದು ಹೇಳಿದ್ದರು. ನಿಜವಾಗಿ ಇವರಿಗೆ ನೈತಿಕ ಮಟ್ಟ ಇದ್ದರೆ, ನೈತಿಕ ಜವಾಬ್ದಾರಿ ಇದ್ದಿದ್ದೇ ಆದರೆ, ಈ ದೇಶದ ಹೆಣ್ಣು ಮಕ್ಕಳೆಲ್ಲಾ ನನ್ನ ಅಕ್ಕ ತಂಗಿಯರು ಮತ್ತು ತಾಯಂದಿರು ಎಂದು ನಿಜವಾಗಿ ಇವರಿಗೆ ಅನಿಸಿದಲ್ಲಿ ಇವರು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ್ (ಭಟ್ಕಲ್).— ಸನ್ಮಾನ್ಯ ಅಧ್ಯಕ್ಷರೇ, ಈಗ ಇಲ್ಲಿ ಮಾತನಾಡಿದ ಎಲ್ಲಾ ಮಾನ್ಯ ಸದಸ್ಯರು. ಅಷ್ಟೇ ಅಲ್ಲ ಶ್ರೀಮಾನ್ ಲಕ್ಕಪ್ಪನವರು ಅಲ್ಲಿ ನಡೆದ ಘಟನೆ ಬಗ್ಗೆ ವಿವರವಾಗಿ ಹೇಳಿದ್ದಾರೆ. ನಾನು ಮತ್ತೆ ಮತ್ತೆ ಅದರ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಇಲ್ಲಿ ಬಹಳ ಮುಖ್ಯವಾದ ವಿಚಾರವನ್ನು ನಾನು ಪ್ರಸ್ತಾಪ ಮಾಡಬೇಕೆಂದು ಇದ್ದೇನೆ. ಶ್ರೀಮಾನ್ ರಾಚಯ್ಯನವರು, ಈ ವಿಷಯಕ್ಕೆ ಸಂಬಂಧಪಟ್ಟಂತೆ ಏನು ಉತ್ತರ ಕೊಡಬೇಕೆಂದು ಐಡಿಯಾ ಹಾಕಿಕೊಂಡು ಕುಳಿತಿದ್ದಾರೆ ಎನ್ನುವ ಬಗ್ಗೆ ನನ್ನ ಆಲೋಚನೆ ಇದೆ. ಇದರಲ್ಲಿ ನನಗೆ ಎರಡು ರೀತಿಯ ಸಂಶಯ ಕಾಣಬರುತ್ತಿದೆ, ಒಂದನೇಯದು, ನಾವು ಈಗಾಗಲೇ ಈ ಪ್ರಕರಣವನ್ನು ತನಿಖೆ ಮಾಡಲು ನ್ಯಾಯಾಂಗಕ್ಕೆ ಒಪ್ಪಿಸಿದ್ದೇವೆ ಒಪ್ಪಿಸುವ ಬಗ್ಗೆ ಸರ್ಕಾರದ ಆದೇಶವನ್ನೂ ಕೊಟ್ಟಿದ್ದೇವೆ ಯಾದ್ದರಿಂದ ಇನ್ನು ಮಾತನಾಡುವುದು ಪ್ರಯೋಜನ ಇಲ್ಲವೆಂದು ಹೇಳಬಹುದು. ಎರಡನೆಯದು ಎಂದರೆ, ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು ಹೋಗಿ ಬಿಡುವ ಸಾಧ್ಯತೆಯೂ ಇದೆ. ಏಕೆಂದರೆ, ಇಷ್ಟು ಹೊತ್ತು ಮಾತನಾಡಿದರೂ ಅವರು ಕೂಳಿತುಕೊಂಡು ಬಹಳ ನೋವಿನಿಂದ ಕೇಳುತ್ತಿದ್ದಾರೆ. ಈ ಮೇಲಿನ ವಿಷಯ ನನ್ನ ಮನಸ್ಸಿನಲ್ಲಿ ಸಂಶಯ ಮೂಡಿಸಿದೆ. ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಅವರ ಮನಸ್ಸಿಗೆ ಬಿಟ್ಟ ವಿಚಾರ. ಆಮೇಲೆ, ಇಲ್ಲಿ ಪೋಲೀಸಿನವರು ಹೇಗೆ ನಡೆದುಕೊಳ್ಳುತ್ತಾರೆ ಎನ್ನುವ ಬಗ್ಗೆ ನಾವು ನೀವು ಮತ್ತು ಎಲ್ಲರೂ ವಿಚಾರ ಮಾಡಬೇಕಾದ ಸಂದರ್ಭ ಹಿಂದೆಯೂ ಬಂದಿತ್ತು. ಮುಂದೆಯೂ ಬರಬಹುದು. ಇಲ್ಲಿ ಶ್ರೀಮತಿ ಪದ್ಮಮ್ಮನವರು ತಮ್ಮ ಗಂಡನ ಜೊತೆಯಲ್ಲಿ, ಗಂಡನ ಸ್ನೇಹಿತರ ಮನೆಯಲ್ಲಿ ಉಳಿದುಕೊಳ್ಳುವುದಕ್ಕೆ ಹೋಗುತ್ತಿದ್ದರು ಗೌರವ ಯುತವಾಗಿ ಹೋಗುವವರ ಮೇಲೆ ನಮ್ಮ ಪೋಲೀಸಿನವರಿಗೆ ಯಾವಾಗಲೂ ಸಂಶಯ ಬಂದು ಬಿಡುತ್ತದೆ. ಅದೇ ಬೀದಿಯಲ್ಲಿ ದುರ್ವ್ಯವಹಾರ ಮಾಡುವವರನ್ನು ಇವರು ಹಿಡಿಯುವುದಿಲ್ಲ. ಅವರು ಮಾಡುವ ವ್ಯವಹಾರವೆಲ್ಲಾ ಪೋಲೀಸರಿಗೆ ಗೊತ್ತಿರುತ್ತದೆ ಆದರೆ ಅವರನ್ನು ಮಾತ್ರ ಹಿಡಿಯುವುದಿಲ್ಲ. ಏಕೆಂದರೆ, ಅವರು ಆ ರೀತಿ ಮಾಡುವುದರಿಂದ ಇವರಿಗೂ ಲಾಭ ಇರುತ್ತದೆ. ಅದರ ಬಗ್ಗೆ ಇವರು ಚಿಂತೆ ಮಾಡುವುದಿಲ್ಲ ಗೌರವಸ್ಥ ಹೆಣ್ಣು ಮಕ್ಕಳ ಮೇಲೆ ಇವರಿಗೆ ಸಂಶಯ ಬರುವುದು. ಜಾಸ್ತಿ ಇದೆ. ಇವರಿಗೆ, ಆ ಸಂಶಯ ಏಕೆ ಬಂತು ಎನ್ನುವುದನ್ನು ನಾವು ವಿಚಾರ ಮಾಡಬೇಕು.

ಅಧ್ಯಕ್ಷರು.— ನೀವು ಐದು ಮಿನಿಟ್‌ನಲ್ಲಿ ಮುಗಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರು ಸೀರಿಯಸ್ ಆಗಿ ವಿಚಾರ ಮಾಡುತ್ತಿದ್ದಾರೆ.

ಶ್ರೀ ಆರ್. ಎನ್, ನಾಯಕ್.— ಇಲ್ಲಿ ಏನಾಗಿದೆ, ಇವರ ಮೇಲೆ, ರೈಫಲ್ ತುಂಬಾ ಕಬ್ಬಿಣದ ಗುಂಡು ತುಂಬಿಕೊಂಡು ಜನರ ತಲೆಗೆ ಮತ್ತು ಎದೆಗೆ ಗುರಿ ಇಟ್ಟು ಹೊಡೆದಿದ್ದಾರೆ. ಬಹುಶಃ ಗೋಲಿಬಾರ್ ಮಾಡುತ್ತಾರೆಂದು ಜನಕ್ಕೆ ಗೊತ್ತಾಗಿದ್ದಿದ್ದರೆ, ಪದ್ಮಮ್ಮನನ್ನು ಅಲ್ಲ ಅವರನ್ನು ಕೊಲೆಮಾಡಿದ್ದರೂ ಜನ ಅಲ್ಲಿಗೆ ಹೋಗುತ್ತಿರಲಿಲ್ಲ. ಜನರಲ್ಲಿ ಜನತಾ ಸರ್ಕಾರದವರು ಒಂದು ಸಂಶಯವನ್ನು ಉದ್ಭವ ಮಾಡಿದ್ದಾರೆ. ಜನತಾ ಸರ್ಕಾರ ಆಡಳಿತಕ್ಕೆ ಬಂದ ಮೇಲೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಜನರು ಪುಳಕಗೊಳ್ಳುವಂತೆ ಮಾತನಾಡುತ್ತಾರೆ. ಆದರೆ ಇವರು ಮಾತನಾಡುವುದು ಬೇರೆ, ಮಾಡುವುದು ಬೇರೆ. ಅಂದರೆ ಹೇಳುವುದು ಶಾಸ್ತ್ರ, ತಿನ್ನುವುದು ಬದನೆಕಾಯಿ ಎಂಬ ಹಾಗೆ. ಗ್ರಾಲಕಿನೇ ಇಸವಿಯಲ್ಲಿ ರಾಜ್ಯದಲ್ಲೆಲ್ಲಾ ಹೇಳಿದರು, ನಾವುಗಳು ಎಲ್ಲಿಯಾದರೂ ಗಲಾಟೆ ಆದರೆ ಕಬ್ಬಿಣದ ಗುಂಡುಗಳನ್ನು ಹಾರಿಸುವುದಿಲ್ಲ, ಬದಲಾಗಿ ಅನಿವಾರ್ಯ ವಾದಲ್ಲಿ ರಬ್ಬರ್‌ಗುಂಡುಗಳನ್ನು ಹಾರಿಸುತ್ತೇವೆ ಎಂದು ಹೇಳಿದರು. ಇವರ ಮಾತುಗಳನ್ನು ಕೇಳಿ ಜನರು ಬಹಳ ಖುಷಿಪಟ್ಟರು, ಸಂತೋಷಪಟ್ಟರು, ಏಕೆಂದರೆ. ರಬ್ಬರ್ ಗುಂಡುಗಳನ್ನು ಹಾರಿಸಿದಾಗ ಅವುಗಳು ಮೆತ್ತಗೆ ಮೈಗೆ ತಾಗಿದರೆ ಒಂದು ರೀತಿಯ ಹೊಸ ಅನುಭವ ಆಗುತ್ತದೆ ಎಂದು ಜನರು ಖುಷಿಯಾದರು. ಆದರೆ ಜನರ ಸಂತೋಷ ಹಾಗೂ ಖುಷಿಯ ಅನುಭವ ಅವರು ತಿಳಿದುಕೊಂಡಂತೆ

ಆಗಲಿಲ್ಲ, ರಬ್ಬರ್ ಎಂದು ಹೇಳಿ ಕಬ್ಬಿಣದ ಗುಂಡುಗಳನ್ನು ಹಾರಿಸಿದರು, ಜನರ ಪ್ರಾಣ ತೆಗೆದುಕೊಂಡರು. ಈ ರೀತಿಯಲ್ಲಿ ನಿಮ್ಮ ಕೆಲಸ ನಡೆದಿದೆ ಇವರು ಹೇಳಿದಂತೆ ನಡೆದುಕೊಂಡಿಲ್ಲ. ಆಚಾರವನ್ನು ಜನರಿಗೆ ಹೇಳಿದಿರಿ ರಬ್ಬರ್‌ಗುಂಡುಗಳಿಂದ ಪುಳಕಿತಗೊಳಿಸುತ್ತೇವೆ ಎಂದು. ಆದರೆ ಕಬ್ಬಿಣದ ಗುಂಡುಗಳನ್ನು ಹಾರಿಸಿ ಜನರ ಪ್ರಾಣ ತೆಗೆದಾಗ ಜನರಿಗೆ ತಿಳಿದಿರಬೇಕು ನಿಮ್ಮ ವಾಗ್ದಾನ. ನಾನು ಇದನ್ನು ಗಂಭೀರವಾಗಿ ಹೇಳುತ್ತಿದ್ದೇನೆ. ಈ ರೀತಿಯಾಗಿ ಏಕೆ ನಡೆಯುತ್ತಿದೆ ಎಂಬುದನ್ನು ನಾವೆಲ್ಲರೂ ಕುಳಿತು ವಿಚಾರ ಮಾಡತಕ್ಕಂಥ ಗಂಭೀರ ಸಮಸ್ಯೆಯಾಗಿದೆ, ನಮ್ಮ ಗೃಹ ಸಚಿವರಾದ ಮಾನ್ಯ ರಾಚಯ್ಯನವರು ಏನು ಮಾಡುತ್ತಾರೆ ಎಂದರೆ ಯಾರೇ ಎಷ್ಟು ಹೇಳಿದರೂ ಸುಮ್ಮನೇ ಕುಳಿತುಕೊಂಡು ಕೇಳುತ್ತಾ ಇರುತ್ತಾರೆ. ಅವರಿಂದ ಯಾರ ಮಾತಿಗೂ ಸರಿಯಾದ ಪ್ರತಿಕ್ರಿಯೆ ವ್ಯಕ್ತವಾಗುವುದಿಲ್ಲ. ಪ್ರತಿಕ್ರಿಯೆ ಮಾಡುವ ಅಭ್ಯಾಸ ಅವರಿಗೆ ಬಹಳ ಕಡಿಮೆಯಾಗಿದೆ. ಆ ಮೇಲೆ ಏನಾದರೂ ಹೇಳಿ ಬಿಡುವುದು. ವಿರೋಧ ಪಕ್ಷದವರು ಹಾಗೆ ಮಾತನಾಡುತ್ತಾರೆ, ಹೀಗೆ ಮಾತನಾಡು ತ್ತಾರೆ ಎಂದು ಹೇಳಿ ಸುಲಭವಾಗಿ ಜಾರಿಕೊಂಡು ಬಿಡುವುದು ಅವರ ಅಭ್ಯಾಸವಾಗಿದೆ. ಇಂತಹ ಜಾರಿ ಕೊಳ್ಳುವ ಅವರ ಜಾಯಮಾನ ಸಮಂಜಸವಾದುದಲ್ಲ. ಹೀಗೆ ಸುಲಭವಾಗಿ ಜಾರಿಕೊಂಡು ಹೋಗು ವುದು ಈ ವಿಚಾರದಲ್ಲಿ ಆಗುವುದಿಲ್ಲ.

ಜನತಾ ಸರ್ಕಾರದ ಆಡಳಿತ ನಡೆಸುವವರ ಕಣ್ಣು ಸದಾ ಕಾಲವು ಮಹಿಳೆಯರ ಮಾನ ಭಂಗ ಮಾಡುವ ವಿಚಾರದಲ್ಲಿ, ತೊಡಗಿರುತ್ತದೆ. ಇದಕ್ಕೆ ಬಹಳಷ್ಟು ಉದಾಹರಣೆಗಳು ಇವೆ. ಈ ಹಿಂದೆ ಇಲ್ಲಿ ಒಬ್ಬ ಸ್ವಾಮಿಯವರು—ಶಾಮೀಲಾಗಿದ್ದ ಮಾನಭಂಗದ ಪ್ರಕರಣದಲ್ಲಿ ನಾವೆಲ್ಲರೂ ಸಾಕಷ್ಟು ಬೆಳಕು ಚೆಲ್ಲಿದ್ದೆವು. ನೀವುಗಳು ಗೌರವ ಸ್ವಭಾವದವರು, ನಿಮಗೆ ಮಹಿಳೆಯರ ಬಗ್ಗೆ ಅನುಕಂಪ, ಆದರಗಳು ಇಲ್ಲ ಎಂದು ಹೇಳಿದ್ದೇವೆ. ನಿಮ್ಮನ್ನು ಮಹಿಳೆಯರ ಮಾನ ಕಾಪಾಡುವ ಬಗ್ಗೆ ಎಚ್ಚರಿಸಿದ್ದೇವೆ. ಆದರೂ ನಡೆಯುವುದು ನಡೆಯುತ್ತಾ ಇದೆ. ನೀವುಗಳು ಹಾಗೆಯೇ ಇದ್ದೀರಿ. ಹೀಗೆ ಈ ರೀತಿಯಲ್ಲಿ ನಡೆಯುತ್ತಾ ಇರುವಾಗ, ಅಶಾಂತಿ ಇರುವಾಗ ಗೃಹ ಸಚಿವರು ತಮ್ಮ ಸ್ಥಾನದಲ್ಲಿ ಇನ್ನೂ ಏತಕ್ಕೆ ಕುಳಿತುಕೊಳ್ಳಬೇಕು ? ಈ ಖಾತೆ ತಮ್ಮ ಕೈಯಲ್ಲಿ ಆಗದಿದ್ದರೆ ಇದನ್ನು ಬಿಟ್ಟು, ಬೇರೆ ಖಾತೆಗಳಿಗೆ ಹೋಗಬೇಕು. ಅದೂ ಆಗದಿದ್ದರೆ ತಮ್ಮ ಸ್ಥಾನವನ್ನೇ ಬಿಟ್ಟುಕೊಟ್ಟು ಗೌರವವಾಗಿ ಹೋಗಬೇಕು. ನಮಗಂತೂ ಇವರು ಇಲ್ಲಿ ಸುಮ್ಮನೆ ಕುಳಿತುಕೊಂಡಿರುವುದನ್ನು ನೋಡಿದರೆ ವ್ಯಥೆ ಯಾಗುತ್ತದೆ. ನಮ್ಮ ಟೀಕೆಗಳನ್ನು ಕೇಳಿಕೊಂಡು ಸುಮ್ಮನೇ ಇರುತ್ತಾರೆ. ಆದರೆ ನಾವು ಇಲ್ಲಿ ಮಾತನಾಡಬಾರದು ಎಂದು ಭಾವನೆ ಅವರ ಬಗ್ಗೆ ಬಂದರೂ ಕೂಡ ನಮಗೆ ಮಾತನಾಡದೆ ಬೇರೆ ಗತಿ ಇಲ್ಲದಾಗಿದೆ. ನಾವು ಮಾತನಾಡಲೇ ಬೇಕಾಗುತ್ತದೆ. ಆದರೆ ಒಂದು ಮಾತನ್ನು ಸತ್ಯ ಎಂದು ಹೇಳ ಬೇಕು ಇಲ್ಲಿ ಸುಮ್ಮನೇ ಇದ್ದರೂ ಹೊರಗೆ ಜನರ ಮೇಲೆ ಗುಂಡುಗಳನ್ನು ಹಾರಿಸುವುದನ್ನು ಮಾತ್ರ ಬಿಡುವುದಿಲ್ಲ. ಆ ಬಗ್ಗೆ ಅವರಿಗೆ ಎಚ್ಚರಿಕೆ ಕೊಡುವುದಕ್ಕೆ ಇಲ್ಲಿ ಮಾತನಾಡಬೇಕಾಗುತ್ತದೆ. ನನಗೆ ಅನ್ನಿಸುತ್ತದೆ, ಮನುಷ್ಯನ ಜೀವನ ಇಷ್ಟು ಮಟ್ಟಿಗೆ ದೈನ್ಯವಾಗಿರಬಾರದು ಎಂದು. ಇಂತಹ ಒಂದು ಪರಿಸ್ಥಿತಿಯನ್ನು ಅವರು ತಂದುಕೊಳ್ಳಬಾರದು ಎಂದು ನಮ್ಮ ಕಳಕಳಿಯಾಗಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ತಮ್ಮ ಮಾತುಗಳಿಂದ ಜನರನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ರಾಮಕೃಷ್ಣ ಹೆಗಡೆಯವರು ಒಳ್ಳೆಯವರು, ಅವರು ಹಾಗೆ ಹೇಳಿದರು, ಹೀಗೆ ಹೇಳಿದರು ಎಂದು ಜನರು ಆಡಿಕೊಳ್ಳುವ ಹಾಗೆ ಮಾಡುವುದು, ಜನರು ತಪ್ಪನ್ನು ಪೋಲೀಸರ ಮೇಲೆ ಹೊರಿಸುವಂತಹ ಅಭಿಪ್ರಾಯವನ್ನು ಮಾತಾಡುವುದು, ತಾವುಗಳು ಮಾತ್ರ ಪ್ರಾಮಾಣಿಕರು ಎಂಬಂತೆ ನಡೆದುಕೊಳ್ಳುತ್ತಿದ್ದಾರೆ. ಕಬ್ಬಿಣದ ಗುಂಡಿನ ಬದಲು ರಬ್ಬರ್ ಗುಂಡು ಎಂದು ಹೇಳು ವಂತಹ ಮಾತುಗಳಿಂದ ಜನರನ್ನು ಪುಳಕಿತಗೊಳಿಸುವುದು, ತಮ್ಮ ಕೆಲಸವನ್ನು ತಾವು ಮಾಡುವುದು ಇದರಲ್ಲಿ ಅವರು ತೊಡಗಿದ್ದಾರೆ. ಈ ಭಾಷಾ ಶೈಲಿಯನ್ನು ಅವರು ಬಿಡಬೇಕು ಮಾನ್ಯ ರಾಚಯ್ಯ ನವರು ಈ ಎಲ್ಲಾ ವಿಷಯಗಳಲ್ಲಿಯೂ ಸುಮ್ಮನೇ ಕುಳಿತಿರುತ್ತಾರೆ. ಅವರು ಏಕೆ ಹಾಗೆ ಸುಮ್ಮನೆ ಕುಳಿತಿರಬೇಕು ಎಂದು ನಾನು ಕೇಳುತ್ತಿದ್ದೇನೆ. ನಾವುಗಳು ಇಲ್ಲಿ ಮಾತನಾಡುವಾಗ, ಟೀಕೆ ಮಾಡು ವಾಗ ಬೈಯುವಾಗ, ಅವರ ಯಾವ ಪ್ರತಿಕ್ರಿಯೆಯೂ ಇಲ್ಲವಾಗಿದೆ, ಏಕೆಂದರೆ ನಮ್ಮ ಮಾತುಗಳಿಗೆ ಅವರಲ್ಲಿ ಸೂಕ್ತವಾದ ಉತ್ತರವಿಲ್ಲ. ನಮ್ಮ ಟೀಕೆಗಳನ್ನು ಎದುರಿಸಿ ಮಾತನಾಡಲು ಅವರಲ್ಲಿ ನೈತಿಕ ಧೈರ್ಯವೂ ಅವರಿಗೆ ಇಲ್ಲ......

ಅಧ್ಯಕ್ಷರು.— ಮಾನ್ಯ ನಾಯಕರೇ ತಮ್ಮ ಭಾಷಣವನ್ನು ಮುಗಿಸಬೇಕು. ಈಗಾಗಲೇ ಮೂರು ಗಂಟೆಗಳ ಕಾಲಾವಕಾಶವನ್ನು ಕೊಟ್ಟಿದ್ದೇನೆ......

ಶ್ರೀ ಆರ್. ಎನ್. ನಾಯ್ಕ್.— ನಾನು ಮೂರು ಕಾರಣಗಳನ್ನು ತಮ್ಮ ಮುಂದೆ ಇಡುತ್ತೇನೆ. ಒಂದನೇಯದು, ನಾನು ಅವರನ್ನು ರಾಜೀನಾಮೆ ಕೊಡಿ ಎಂದು ಕೇಳುವುದಿಲ್ಲ. ಆ ಧೈರ್ಯವೂ ನನಗೆ ಇಲ್ಲ. ಏಕೆಂದರೆ, ನಾನು ಹೇಳಿದ್ದಕ್ಕೆ ಅವರು ರಾಜೀನಾಮೆ ಕೊಟ್ಟುಬಿಟ್ಟರೆ ಕಷ್ಟವಾಗುತ್ತದೆ. ಅವರು ರಾಜೀನಾಮೆ ಕೊಡುವುದು ಒಳ್ಳೆಯದೆಂದು ಕಾಣುತ್ತದೆ ಏಕೆಂದರೆ ನಾವು ಇಲ್ಲಿ ಮಾತ ನಾಡುತ್ತಾ ಇರುವುದು, ಅವರು ಅದನ್ನು ಕೇಳುತ್ತಾ ಸುಮ್ಮನೇ ಕುಳಿತಿರುವುದು ಆಗುತ್ತದೆ.

ಅಧ್ಯಕ್ಷರು — ತಾವುಗಳು ಮುಗಿಸಿ......

ಶ್ರೀ ರಾಮನಾರಾಯಣ ನಾಯಕ.—ನೀವು ರಾಜೀನಾಮೆ ಕೊಡುವ ಚಾನ್ಸಸ್ ಇದೆ. ಆದ್ದರಿಂದ ರಾಜೀನಾಮೆ ಕೊಡಿ.

ಶ್ರೀ ಬಸವನಗೌಡ ಡಿ.ಜಿ.—ನೀವಾಗಿದ್ದರೆ ರಾಜೀನಾಮೆ ಕೊಡುತ್ತಿರಲಿಲ್ಲ.

ಶ್ರೀ ಆರ್. ಎನ್. ನಾಯಕ —ಅಲ್ಲಿ ಹೆಣದ ತಲೆಯಿಂದ ಹೊರಬಂದಿದ್ದ ಮೆದುಳನ್ನು ಹದ್ದು ನಾಯಿಗಳು ನೆಕ್ಕುತ್ತಿದ್ದುದನ್ನು ನೋಡಿದ್ದರೆ ನೀವು ಈ ಮಾತಾಡುತ್ತಿರಲಿಲ್ಲ. ನಾನು ಆ ತಕ್ಷಣವೇ ರಾಜೀನಾಮೆ ಕೊಟ್ಟು ಹೋಗುತ್ತಿದ್ದೆ. ಆದ್ದರಿಂದ ಗೌರವವಾಗಿ ರಾಜೀನಾಮೆ ಕೊಟ್ಟು ಕರ್ನಾಟಕದ ಜನವೂ ಗೌರವವಾಗಿ ಬಾಳುವಂತೆ ಮಾಡಿ ನೀವೂ ಗೌರವವಾಗಿ ಇರಿ ಎಂದು ಹೇಳುತ್ತಾ ನನ್ನ ಮಾತು ಗಳನ್ನು ಮುಗಿಸುತ್ತೇನೆ.

ಶ್ರೀ ಉಸ್ತಾದ್ ಮೆಹಬೂಬ್ ಪಟೇಲ್ ಲಾಡ್ಲೆ ಪಟೇಲ್ (ಬಿಜಾಪುರ).—ಸನ್ಮಾನ್ಯ ಅಧ್ಯಕ್ಷರೇ ೧೬ನೇ ತಾರೀಖು ನಡೆದ ಈ ಘಟನೆ ಬಗ್ಗೆ ನಮ್ಮ ಪಕ್ಷದ ನಾಯಕರು ವಿಸ್ತಾರವಾಗಿ ವಿವರಣೆಯೊಂದಿಗೆ ಹೇಳಿದ್ದಾರೆ. ಹೋದ ಸಲ ಬೆಂಗಳೂರು ಮೈಸೂರು ಕೋಲಾರ ಮತ್ತು ತುಮಕೂರುಗಳಲ್ಲಿ ಗೋಲಿಬಾರ್ ನಡೆದ ಬಗ್ಗೆ ಚರ್ಚೆ ನಡೆಯುವಾಗ ಗೃಹಸಚಿವರಿಗೆ ನಾನು ಹೇಳಿದ್ದೆ ನಿಮ್ಮ ಮಾತನ್ನು ಒಬ್ಬ ಕಾನ್ಸ್ಟೇಬಲೂ ಕೇಳೋಲ್ಲ. ಸುಮ್ಮನೆ ರಾಜೀನಾಮೆ ಕೊಡಿ ಎಂದು. ಇವೊತ್ತಿನದಿವಸ ಗೃಹ ಮಂತ್ರಿಗಳು, ಮುಖ್ಯಮಂತ್ರಿಗಳು ಎಷ್ಟೇ ಸ್ಟೇಟ್‌ಮೆಂಟ್ ಕೊಟ್ಟರೂ ಅವರಿಗೆ ಪೋಲೀಸ್ ಡಿಪಾರ್ಟ್ ಮೆಂಟ್ ಮೇಲೆ ಸ್ವಲ್ಪವೂ ಹತೋಟಿ ಇಲ್ಲ. ಈ ರಾಜ್ಯದಲ್ಲಿ ಸರ್ಕಾರ ಇದೆಯೋ ಇಲ್ಲವೋ ಎಂದು ಸಂಶಯ ಬರಲಿಕ್ಕೆ ಹತ್ತಿದೆ ಯಾವುದೇ ರಾಜ್ಯದಲ್ಲಿ ಯಾವ ಪಾರ್ಟಿಯ ಸರ್ಕಾರವೇ ಇರಬಹುದು ಆದರ. The first and foremost duty of the Government is to protect the life and property of the people. That is foremost duty. ಅನಂತರ ಡೆವಲಪ್‌ಮೆಂಟು, ಅದೂ ಇದೂ ಬರುವುದು. ಆದರೆ ಆ ಸರ್ಕಾರ to protect the life and property of the people ಫೇಲ್ ಆದರೆ ಆ ಸರ್ಕಾರಕ್ಕೆ ಸರ್ಕಾರ ನಡೆಸಲು ನೈತಿಕ ಜವಾಬ್ದಾರಿ ಇರುವುದಿಲ್ಲ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಹೋದ ಸಲ ರಾಚಯ್ಯನವರಿಗೆ ನಿಮ್ಮ ಮಾತು ಪೇದೆ ಕೂಡ ಕೇಳೋಲ್ಲ ಎಂದು ಹೇಳಿದಾಗ ಅವರು ಸಿಟ್ಟಿನಿಂದ ಮಾತಾಡಿದರು. ಆದರೆ ಈಗ ಘಟಾಯಿಸಿರುವ ಘಟನೆ ನೋಡಿದರೆ ನೀವೂ ಒಪ್ಪಿಕೊಂಡಿದ್ದೀರಿ ಮಾನ್ಯ ಮುಖ್ಯಮಂತ್ರಿಗಳೂ ಒಪ್ಪಿ ಕೊಂಡಿದ್ದಾರೆ ಡಿಪಾರ್ಟ್‌ಮೆಂಟಿನಲ್ಲಿ ಏನೂ ಹತೋಟಿ ನಿಮಗಿಲ್ಲ. ಹೀಗೆ ನಡೆಯುತ್ತಾ ಹೋದರೆ ಜನರ ಪ್ರತಿನಿಧಿಗಳಾದ ನಾವೂ ಕೂಡ ಹೆದರುವ ಪರಿಸ್ಥಿತಿ ಕೂಡ ಬರುತ್ತದೆ. ಪಂಜಾಬಿನಲ್ಲಿ ಇವತ್ತಿನ ದಿವಸ ಜನರ ಜೀವ ರಕ್ಷಣೆ ಮಾಡಿಕೊಳ್ಳುವ ಸಲುವಾಗಿ ಅವರಿಗೆ ಬಂದೂಕು ಕೊಡಬೇಕೆನ್ನುವುದನ್ನು ಪೇಪರಲ್ಲಿ ಏನು ಓದುತ್ತಿದ್ದೇವೆ ಅದೇ ಪ್ರಕಾರ ಇಲ್ಲಿಯೂ ಪೋಲೀಸರ ವಿರುದ್ಧ ಬಂದೂಕು ಇಟ್ಟು ಕೊಳ್ಳುವ ಪರಿಸ್ಥಿತಿ ಬರುತ್ತದೆ. ಅಷ್ಟೇ ಅಲ್ಲ ಪೋಲಿಸ್ ಡಿಪಾರ್ಟ್‌ಮೆಂಟಿನವರೇ ಈ ಸೆಷನ್‌ನಲ್ಲಿ ನಾವು ಇಲಾಖೆಯನ್ನು ಖಂಡಿಸಿ ಮಾತಾಡಿದಾಗ ನಮಗೇ ಧಮಕಿ ರೀತಿಯಲ್ಲಿ ಹಾಕಲಿಕ್ಕೆ ಹತ್ತಿದ್ದಾರೆ. ನಾನು ಹೇಳುತ್ತೇನೆ ರಾಚಯ್ಯನವರೇ ತಾವು ಮಂತ್ರಿಸ್ಥಾನವನ್ನು ಬಿಟ್ಟುಬಿಡಿ. ನಿಮ್ಮ ಫೇಸ್ ನೋಡಿದರೆ ಯಾವ ಪೇದೆನೂ ಹೆದರುವುದಿಲ್ಲ.

೧–೧೫ ಪಿ.ಎಂ.

ಪದೇ ಪದೇ ಹೇಳುತ್ತೇನೆ ನೀವು ಬಿಟ್ಟು ಬಿಡಿ ಯುವಕರಿದ್ದಾರೆ, ಮಾನ್ಯ ಸಿಂಧ್ಯಾರವರು ಇದ್ದಾರೆ ಅವರಲ್ಲಿ ಯಾರಾದರೂ ಈ ಜವಾಬ್ದಾರಿಯುತವಾದ ಖಾತೆಯನ್ನು ವಹಿಸಿಕೊಳ್ಳುತ್ತಾರೆ ಅಂತಹವರಿಗೆ ಬಿಟ್ಟು ಬಿಡಿ ನೀವೇ ಇರಬೇಕೆಂದು ಏನು ಇದೆ? ಎಷ್ಟೋ ಮಂದಿ ಹೇಳಿದರು ಮಾನ್ಯ ರಾಚಯ್ಯನವರು ಬಹಳ ಸಂಭಾವಿತರು, ಒಳ್ಳೆಯವರೆಂದು ಕಳೆದ ಸಲ ೧೬ನೇ ತಾರೀಖಿನ ದಿವಸ ವಿಧಾನ ಸಭೆ ಮುಗಿಯಿತು ಆ ಸಂಜೆ ಮೈಸೂರಿನ ಪೋಲೀಸರು ಇಬ್ಬರು ವ್ಯಕ್ತಿಗಳನ್ನು ಹೊಡೆದಿದ್ದಾರೆ ಅವರಿಗೆ ನಡೆಯಲಿಕ್ಕೂ ಆಗದು ಆ ರೀತಿ ಹೊಡೆದಿದ್ದಾರೆ. ಆಗ ವಿಧಾನ ಪರಿಷತ್ತು ನಡೆಯುತ್ತಿತ್ತು ಆಗ ನಾನು ಮತ್ತು ಶ್ರೀ ಉಮರಬ್ಬ, ರೋಷನ್ ಬೇಗ್ ಹಾಗೂ ಶ್ರೀಮತಿ ಮುಕ್ತರುನ್ನಿಸಾ ಬೇಗಂರವರು ಹೋಗಿ ಅವರನ್ನು ಭೇಟಿ ಮಾಡಬೇಕೆಂದು ತಿಳಿಸಿದ್ದಕ್ಕೆ ವಿಧಾನ ಪರಿಷತ್ತು ಮುಗಿದ ನಂತರ ಅವಕಾಶ ಕೊಡುತ್ತೇನೆಂದು ಹೇಳಿದರು. ವಿಧಾನ ಪರಿಷತ್ತು ಮುಗಿದ ನಂತರ ನಾನು ಬರುವುದಿಲ್ಲ, ನಾನು ನೋಡುವುದಿಲ್ಲವೆಂದು ಹೇಳಿದರು ಇಂತಹ ಒರಟುತನದಿಂದ ಮಾತನಾಡುವುದು ಸರಿಯಲ್ಲ ನನ್ನ ಕಣ್ಣಿನಲ್ಲಂತೂ ನೀವು ಸಂಭಾವಿತರು ಅಲ್ಲವೇ ಅಲ್ಲ. ಬೇರೆ ಶಾಸಕರ ಕಣ್ಣಿಗೆ ನೀವು ಸಂಭಾವಿತರಾಗಿ ಕಾಣಬಹುದು. ಆ ದಿವಸ ಟ್ಯಾಕ್ಸಿಯಲ್ಲಿ ಬಂದಿದ್ದರು ಅಷ್ಟೇ ಅಲ್ಲ ಡಿ.ವೈ.ಎಸ್.ಪಿ. ಯವರು ಫಾಲೋ ಅಪ್ ಮಾಡಿ ೫೦,೦೦೦ ರೂಪಾಯಿಗಳನ್ನು ಕೊಡುತ್ತೇವೆ ಶಾಸಕರನ್ನು, ಮಂತ್ರಿಗಳನ್ನು ಭೇಟಿ ಮಾಡ ಬೇಡಿ ಎಂದು ಹೇಳಿದ್ದಾರೆ. ವಿಧಾನ ಪರಿಷತ್ತು ನಡೆಯುತ್ತಿದ್ದಾಗ ಹೊರಗೆ ಬಂದು ಅವರನ್ನು ಭೇಟಿ ಮಾಡಿ ಎಂದು ಹೇಳಿದರೆ ಬರುವುದಿಲ್ಲವೆಂದು ಹೇಳಿದರು ನಂತರ ನಾವು ಡಿ.ಜಿ.ಪಿ. ಹತ್ತಿರ ಕರೆದುಕೊಂಡು ಹೋಗಿ ತೋರಿಸಿದೆವು. ಇಂತಹ ಘಟನೆ ನಿಮ್ಮ ಜಿಲ್ಲೆಯಾದಂತಹ ಮೈಸೂರಿನಲ್ಲಿ ನಡೆದಿದ್ದರೂ ಅದನ್ನು ನೋಡುವುದಕ್ಕೆ ತಯಾರಿಲ್ಲವೆಂದು ಇವರು ಹೇಳಿದರೆ ಆ ಜಾಗದಲ್ಲಿ ನೀವು ಇರುವುದಕ್ಕೆ ಅಸಮರ್ಥರು.

(ಗೊಂದಲ)

ಶ್ರೀ ಬಿ. ರಾಚಯ್ಯ.—ಅವರು ಯಾರನ್ನು ಕರೆದುಕೊಂಡು ಬಂದಿದ್ದರು ಆ ವ್ಯಕ್ತಿಯ ಹಿಸ್ಟರಿಯನ್ನು ಎಲ್ಲಾ ಕೇಳಿಕೊಂಡಿದ್ದೀರಾ?

(ಗೊಂದಲ)

ಶ್ರೀ ಎಂ. ಎಲ್. ಉಸ್ತಾದ್.—ಅವರ ಹಿಸ್ಟರಿ ಹೇಳುತ್ತೇವೆ

ಶ್ರೀ ಬಿ. ರಾಚಯ್ಯ.—ಆ ವಿಷಯವನ್ನು ಕೇಳಿಕೊಂಡಿರದಿದ್ದರೆ ನಾನು ಈ ಸ್ಥಾನದಲ್ಲಿ ಇರುವುದಿಲ್ಲ

(ಗೊಂದಲ)

ಶ್ರೀ ಎಂ. ಎಲ್. ಉಸ್ತಾದ್.—ನಿಮ್ಮಲ್ಲಿ ಇಂಟಲಿಜೆನ್ಸ್ ಮುಂತಾದವುಗಳೆಲ್ಲ ಇಲ್ಲವೇ ?

(ಗೊಂದಲ)

ಶ್ರೀ ಬಿ. ರಾಚಯ್ಯ.—ಅವರು ಯಾರನ್ನು ಕರೆದುಕೊಂಡು ಬಂದಿದ್ದರು ಅವರ ಹಿಸ್ಟರಿ ಏನು ಎಂಬುದು ಗೊತ್ತಿದೆ ಡಿ.ಜಿ.ಪಿ. ಹತ್ತಿರ ಹೋಗಿ ವಿಷಯವನ್ನು ಹೇಳಿ ಅವರು ನೋಡಿದ ಮೇಲೆ ನಾನು ನೋಡುತ್ತೇನೆಂದು ಹೇಳಿದರೆ ಇಲ್ಲ ಈಗಲೇ ಬರಬೇಕು ಎಂದು ಹೇಳಿದರೆ ಹೇಗೆ? ೮ ಗಂಟೆಯಾಗಿದೆ ಈಗಲೇ ಬರಬೇಕೆಂದರೆ ಹೇಗೆ, ನನಗೆ ಫೋರ್ಸ್ ಮಾಡುತ್ತೀರಾ? ನನಗೂ ಮಾನವೀಯತೆ ಇದೆ, ಯಾರನ್ನು ಕಂಡರೆ ಮಾನವೀಯತೆಯಿಂದ ಇರಬೇಕೆಂಬುದು ಗೊತ್ತಿದೆ ಆದರೆ ನಿಮ್ಮಂತಹವರ ಜೊತೆಯಲ್ಲಿ ಇರುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಒಂದು ಇಲಾಖೆಯನ್ನು ಸರಿಯಾಗಿ ನಡೆಸಲು ನಿಮ್ಮ ಕೈಯಿಂದ ಸಾಧ್ಯವಾಗಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಿಮ್ಮಂತಹವರ ಜೊತೆಯಲ್ಲಿರುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ಏನು? ಒಬ್ಬ ಶಾಸಕರು ಅವರ ಮಾತನ್ನು ಕೇಳದಿದ್ದರೆ ತಾವು ಯಾರ ಮಾತನ್ನು ಕೇಳುತ್ತೀರಿ ಅವರೂ ಕೂಡ ಜನರಿಂದ ಆರಿಸಿ ಬಂದಿರತಕ್ಕಂತಹವರು ಅವರಿಗೂ ರೆಸ್ಪಾನ್ಸಿಬಲಿಟಿ ಇಲ್ಲವೇ?

(ಗೊಂದಲ)

ಶ್ರೀ ಬಿ. ರಾಚಯ್ಯ.—ಅವರು ಯಾರನ್ನು ಕರೆದುಕೊಂಡು ಬಂದಿದ್ದರು

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರಿಗಾದರೂ ಅನ್ಯಾಯವೇ ಆಗಿದ್ದು ಶಾಸಕರ ಗಮನಕ್ಕೆ ಬಂದರೆ ಅದನ್ನು ತಂದು ಇಲ್ಲಿ ಹೇಳಿ ಆದಂತಹ ಅನ್ಯಾಯವನ್ನು ತೋರಿಸತಕ್ಕಂತಹ ಕರ್ತವ್ಯ ಶಾಸಕರಿಗೆ ಇಲ್ಲವೇ?

ಶ್ರೀ ಬಿ. ರಾಚಯ್ಯ.—ಎಲ್ಲಿ ತೋರಿಸಬೇಕು?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಏಕೆ ತೋರಿಸಬಾರದು ನಿಮ್ಮ ಚೇಂಬರ್‌ನಲ್ಲಿ ಇಲ್ಲವೇ ಮನೆಯಲ್ಲಿ, ಎಲ್ಲಿ ಸಮಯ ಸಿಗುತ್ತದೆ ಅಲ್ಲಿ

ಶ್ರೀ ಬಿ. ರಾಚಯ್ಯ.—ಈಗಲೇ ಬರಬೇಕೆಂದು ಹೇಳಿದರೆ ಹೇಗೆ? ಯಾರು ಇವರಲ್ಲ ಹೇಳಿದ್ದುದು ಈ ದೇಶದಲ್ಲಿ ಈ ಗಲಾಟೆಗಳು, ದರೋಡೆಗಳು ನಡೆಯುತ್ತವೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಿ.

ಅಧ್ಯಕ್ಷರು.—ಆಯಿತು ಕುಳಿತುಕೊಳ್ಳಿ.

ಶ್ರೀ ಕೆ. ಲಕ್ಕಪ್ಪ.—ಅಧ್ಯಕ್ಷರೇ, ಶಾಸಕರು ಅವರನ್ನು ಕರೆದುಕೊಂಡು ಬಂದಿದ್ದರೆ......

ಶ್ರೀ ಬಿ. ರಾಚಯ್ಯ.—ಅವರೇ ನನ್ನ ಜಿಲ್ಲೆಯಲ್ಲಿರತಕ್ಕಂಥ ಜನರನ್ನು ನೋಡಿಕೊಳ್ಳಲಿ. ಬಹುಶಃ ಆಗ ಗೊತ್ತಾಗುತ್ತದೆ. ಯಾರ್ಯಾರಿಗೋ ಸಪೋರ್ಟ್ ಮಾಡುತ್ತಾರೆ ಎಂದರೆ ಅರ್ಥ ಏನು ? ಸರ್ಕಾರ ನಡೆಸಬೇಕೇ ಬೇಡವೇ ? ಕೊಲೆ ಮಾಡಿದವನನ್ನು ಬಿಟ್ಟುಬಿಡಿ, ಖೂನಿ ಮಾಡಿದವನನ್ನು ಬಿಟ್ಟುಬಿಡಿ, ವ್ಯಭಿಚಾರ ಮಾಡಿದವನನ್ನು ಬಿಟ್ಟುಬಿಡಿ ಎಂದರೆ ಏನರ್ಥ ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರು ತಮಗೆ ಬಿಟ್ಟುಬಿಡಿ ಎಂದು ಹೇಳಿದ್ದಾರು.

(ಗೊಂದಲ)

ಅದನ್ನು ಬಿಟ್ಟು ನಿಮ್ಮ ಮಾತೇ ಕೇಳುವುದಿಲ್ಲ ಎಂದು ಹೇಳಿದರೆ ಹೇಗೆ ?

(ಗೊಂದಲ)

SRI G. MADEGOWDA.—I rise to a point of order.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶಾಸಕರು ತಮ್ಮಲ್ಲಿಗೆ ಬಂದಮೇಲೆ ಗೌರವವಾಗಿ ಕೇಳಿ ಇದು ಸರಿಯಾಗಿಲ್ಲ, ಇದು ಸರಿ ಇದೆ ಎಂದು ಹೇಳಿ. ಅದು ಬಿಟ್ಟು ಯಾರೋ ನಮ್ಮಲ್ಲಿಗೆ ಏತಕ್ಕೆ ಬರಬೇಕು ಎಂದು ಹೇಳಿದರೆ ನೀವು ಏತಕ್ಕೆ ಇದ್ದೀರಿ ?

ಅಧ್ಯಕ್ಷರು.—ಅವರ ಬಗ್ಗೆ ಹೇಳಲಿಲ್ಲ. ಅವರು ಬೇರೆಯವರ ಬಗ್ಗೆ ಹೇಳಿದ್ದುದು.

(ಗೊಂದಲ)

ಶ್ರೀ ಬಿ. ರಾಚಯ್ಯ.— ಡಿ. ಜಿ. ಪಿ. ಇದ್ದಾರೆ, ಅವರ ಹತ್ತಿರ ಕರೆದುಕೊಂಡು ಹೋಗಿ ತೋರಿಸಿ ಎಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೆ......

ಅಧ್ಯಕ್ಷರು.—ಅವರು ಮುಕ್ತಾಯದ ಹಂತದಲ್ಲಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಿ. ಮಾದೇಗೌಡ.—ಐ ರೈಸ್ ಟು ಎ ಪಾಯಿಂಟ್ ಆಫ್ ಆರ್ಡರ್ ಮಾನ್ಯ ಮಂತ್ರಿಗಳು ಏತಕ್ಕೋ ಇತ್ತೀಚೆಗೆ ಬಹಳ ಸಹನೆ ಕಳೆದುಕೊಂಡು ಮಾತನಾಡುತ್ತಿದ್ದಾರೆ.

ಅಧ್ಯಕ್ಷರು.—ಅವರು ಮುಗಿಸುವುದಕ್ಕೆ ಹತ್ತಿದ್ದಾರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ, ಅವರು ಒಂದು ಪದವನ್ನು ಉಪಯೋಗಿಸಿದ್ದಾರೆ. ಅದು ರೆಕಾರ್ಡ್‌ಗೆ ಹೋಗಿದೆ. ....

ಅಧ್ಯಕ್ಷರು.—ಯಾವ ಪದವನ್ನು ಉಪಯೋಗ ಮಾಡಿದ್ದಾರೆ, ನಾನು ಅದನ್ನು ನೋಡುತ್ತೇನೆ. ಯಾವ ಪದ ಎನ್ನುವುದನ್ನು ನೋಡುತ್ತೇನೆ.

ಶ್ರೀ ಜಿ. ಮಾದೇಗೌಡ.—ಯಾವ ಪದ ಎಂದು ಹೇಳುತ್ತೀರಿ ?

(ಗೊಂದಲ)

ಅಧ್ಯಕ್ಷರು.—ನಾನು ಅದನ್ನು ತರಿಸಿಕೊಂಡು ನೋಡುತ್ತೇನೆ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಜಿ. ಮಾದೇಗೌಡ.—ನಾನು ಏನು ಹೇಳುತ್ತೇನೆ ಎನ್ನುವುದನ್ನು ಒಂದು ನಿಮಿಷ ಕೇಳಿ ಸ್ವಾಮಿ.

ಅಧ್ಯಕ್ಷರು.—ಆ ಪದವನ್ನು ತರಿಸಿ ನೋಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವ ಪದ ಎಂದು ತೆಗೆಯುತ್ತೀರಿ ?

ಅಧ್ಯಕ್ಷರು.—ನಾನು ಅದನ್ನು ತರಿಸಿನೋಡುತ್ತೇನೆ.

SRI M. MALLIKARJUNA KHARGE.—Honb'le Member will not take more than a minute. ಯಾವ ಪದ ತೆಗೆಸಿ ನೋಡುತ್ತೀರಿ ?

ಅಧ್ಯಕ್ಷರು.—ತಮ್ಮ ಪಾಯಿಂಟ್ ಆಫ್ ಆರ್ಡರ್ ಇರಲಿ, ಇಲ್ಲದಿರಲಿ, ನಾನು ಆ ಪದವನ್ನು ತರಿಸಿನೋಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಾದೇಗೌಡರು ಏನು ಹೇಳುತ್ತಾರೋ ದಯಮಾಡಿ ಕೇಳಿ ಸ್ವಾಮಿ.

ಅಧ್ಯಕ್ಷರು.—ಅವರು ಎಕ್ಸ್‌ಪಂಜ್ ಮಾಡಿ ಎಂದು ಹೇಳಿದ್ದಾರೆ. ಆ ಪದವನ್ನು ನಾನು ತರಿಸಿನೋಡುತ್ತೇನೆ.

ಶ್ರೀ ಜಿ. ಮಾದೇಗೌಡ.—ನನ್ನ ಪಾಯಿಂಟ್ ಆಫ್ ಆರ್ಡರ್ ಏನು ಎಂದು ಕೇಳುವುದಕ್ಕೆ ಸಹನೆ ಅಧ್ಯಕ್ಷರಲ್ಲಿ ಇಲ್ಲ ಎಂದು ಹೇಳಿದರೆ ನಾವು ಇಲ್ಲಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ನಾನು ಹೇಳುವಂಥದ್ದನ್ನು ಕೇಳದೇ ಹೋದರೆ ಏನು ತರಿಸಿ ನೋಡುತ್ತೀರಿ. ಮಾನ್ಯ ಗೃಹಮಂತ್ರಿಗಳು ಈ ದೇಶದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥವರು, ಈ ದೇಶದ ಜನಗಳ ಮಾನ ಮರ್ಯಾದೆಯನ್ನು ಕಾಪಾಡತಕ್ಕಂಥವರು ಏತಕ್ಕೋ ಇಂದು ಸಹನೆಯನ್ನು ಕಳೆದುಕೊಂಡು ಮಾತನಾಡುತ್ತಿದ್ದಾರೆ. ''ನಿಮ್ಮಂಥ ಜನಗಳ ಮಾತನ್ನು ಕೇಳುವುದಕ್ಕೆ ನಾನು ತಯಾರಿಲ್ಲ''. ಮಾನ್ಯ ಸದಸ್ಯರುಗಳನ್ನು ಈ ಮನೆಯ ಸದಸ್ಯರನ್ನು ಉದ್ದೇಶಿಸಿ ನಿಮ್ಮಂಥವರ ಮಾತನ್ನು ಕೇಳಿಕೊಂಡು ಕೆಲಸ ಮಾಡುವುದಕ್ಕೆ ತಯಾರಿಲ್ಲ ಎಂದು ಹೇಳಿದರೆ ತಾವು ಇನ್ನಾರ ಮಾತನ್ನು ಕೇಳಿಕೊಂಡು ಇದನ್ನು ಮಾಡುತ್ತೀರಿ. ಪೋಲೀಸರು ತಮ್ಮ ಮಾತು ಕೇಳುವುದಿಲ್ಲ. ಪೋಲೀಸರ ಮಾತು ಕೇಳುವುದಿಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಮಾದೇಗೌಡರು ಹೇಳತಕ್ಕಂಥ ಮಾತು ನನಗೆ ಗೊತ್ತು, ಅವರು ಬಹಳ ಹಳೆಯ ಸದಸ್ಯರು ಅವರು ಸಾದಾಸೀದಾ ಮನುಷ್ಯರು. ಅವರು ಏನು ಎಂದು ನಾನು

ಮೊದಲಿನಿಂದಲೂ ತಿಳಿದುಕೊಂಡಿದ್ದೇನೆ. ಅವರ ಬಗ್ಗೆ ಗೌರವ ಇರುತ್ತದೆ. ಆದರೆ ಆ ದಿವಸ ಎಂಟು ಗಂಟೆಯಾಗಿದೆ, ಕೌನ್ಸಿಲನ್ನು ಮುಗಿಸಿಕೊಂಡು ಬರುತ್ತಿದ್ದಾಗ ದಾರಿಯಲ್ಲಿ ಇಲ್ಲಿಯೇ ಬನ್ನಿ ಎಂದು ಹೇಳಿದಾಗ ಅವರು ಜೊತೆಯಲ್ಲಿ ಬಂದಂಥವರನ್ನು ನೋಡಿದಾಗ ದಾರಿಯಲ್ಲಿ ನನಗೆ ಅಟ್ಯಾಕ್ ಮಾಡ ಬಹುದು ಎಂದು ನಾನು ನೋಡುವುದಿಲ್ಲ ಎಂದು ಹೇಳಿದೆ. ನಾನು ಈಗ ಬಂದು ನೋಡುವುದ ಕ್ಕಾಗುವುದಿಲ್ಲ, ಡಿ. ಜಿ. ಪಿ. ಇದ್ದಾರೆ. ಅವರಿಗೆ ಫೋನ್ ಮಾಡಿ ಹೇಳುತ್ತೇನೆ ಎಂದು ಹೇಳಿದೆ.

ಶ್ರೀ ಬಿ. ಎ. ಉಮರಬ್ಬ.—ಅವರ ಹತ್ತಿರ ನಾವು ಪ್ರಥಮತಃ ಹೋಗಿ ನೋಡಿದಾಗ ಅವರನ್ನು ಗೌರವದಿಂದಲೇ ಕಂಡಿದ್ದೇವೆ. ಅವರನ್ನು ನಾವು ಕೇಳಿದೆವು ಸ್ವಲ್ಪ ಇವರನ್ನು ನೋಡಿ ಬನ್ನಿ ಎಂದು. He said, "I will not see anyboby" ಅಲ್ಲಿ ರೋಷನ್ ಬೇಗ್‌ರವರೂ ಇದ್ದರು. ಅದಕ್ಕೆ ಸಾಕ್ಷಿನೂ ಇದೆ.

ಶ್ರೀ ಬಿ. ರಾಚಯ್ಯ.—ಏನಾದರೂ ಒಂದು ವಿಷಯ ಹೇಳಬೇಕಾಗಿದ್ದರೂ ಕೂಡ ಅದಕ್ಕೆ ಒಂದು ರೀತಿ ನೀತಿ ಇರಬೇಕು. ಅವರು ಯಾರನ್ನು ಹೇಳಿದ್ದರು ಅವರನ್ನು ಬಂಧನದಲ್ಲಿ ಇಟ್ಟಿದ್ದರು. ನಾನು ಅವರ ಚರಿತ್ರೆ ಏನು ಎಂದು ತಿಳಿದುಕೊಳ್ಳಬೇಕಾಗಿತ್ತು. ಅವರ ವಿಷಯ ಏನು ಎಂದು ತಿಳಿದುಕೊಳ್ಳ ಬೇಕಾಗಿತ್ತು. ಅಷ್ಟುಹೊತ್ತಿಗೆ ಇವರು ಬಂದು ಅವರನ್ನು ನೋಡಿ ಬನ್ನಿ ಎಂದು ಹೇಳಿದರು.

ಶ್ರೀ ಬಿ. ಎ ಉಮರಬ್ಬ.—ನೀವು ಬಂದು ನೋಡಿದ್ದರೆ ಏನಾಗುತ್ತಿತ್ತು ? ನಮ್ಮ ಟೋನ್ ಹಾಗಿರಲಿಲ್ಲ ಅವರನ್ನು ನೋಡಿ ಬನ್ನಿ ಸಾರ್ ಎಂದು ಹೇಳಿದ್ದೇವೆ. ಹಾಗೆ ಹೇಳಿದ್ದುದು ಅಟ್ಯಾಕ್ ಮಾಡುವಂಥ ಟೋನ್ ಅಲ್ಲ. ಅಷ್ಟಾದರೂ ನೀವು ಬರಲಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ. ಅವರು "ನಿಮ್ಮಂತಹ ಸದಸ್ಯರನ್ನು ಎಂದು ಹೇಳಿದ್ದಾರೆ" ಅದನ್ನು ವಿತ್‌ಡ್ರಾ ಮಾಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ನಿಮ್ಮಂತಹವರು ಅಂದಿದ್ದಾರೆ. ಅಲ್ಲಿ ಉಮರಬ್ಬ ನವರು, ಉಸ್ತಾದ್‌ರವರು, ರೋಷನ್‌ಬೇಗ್‌ರವರು ಮತ್ತು ಮುಕ್ತಾರುನ್ನೀಸಾಬೇಗಂ ಅವರು ಇದ್ದರು. ಹಾಗಾದರೆ ಇವರೆಲ್ಲಾ ನಿಮ್ಮ ಮೇಲೆ ಅಟ್ಯಾಕ್ ಮಾಡುತ್ತಿದ್ದಾರೆ ಎನ್ನುವ ಅರ್ಥವೇ ? ಹಾಗಾದರೆ ಪರಿಸ್ಥಿತಿ ಏನಾಯಿತು ? ಈ ಶಾಸಕರೆಲ್ಲಾ ಗೂಂಡಾಗಳು ಎಂತಲೇ ನಿಮ್ಮ ಅರ್ಥ ? The Hon'ble Minister has to with draw his words. ಅವರು ಹೇಳಿದ ಪದವನ್ನು ವಿತ್‌ಡ್ರಾ ಮಾಡಬೇಕು.

(ಗೊಂದಲ)

ಅಧ್ಯಕ್ಷರು.—ನಾನು ಅದನ್ನು ರೆಕಾರ್ಡ್ ತೆಗೆಸಿ ನೋಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ತಮಗೂ ಗೊತ್ತಿದೆ, ಶಾಸಕರ ಜೊತೆಯಲ್ಲಿ ಒಳ್ಳೆಯವರೂ ಇರುತ್ತಾರೆ, ಕೆಟ್ಟವರೂ ಇರುತ್ತಾರೆ. ಆದರೆ ಶಾಸಕರು ಹೇಳುವುದನ್ನು ಒಮ್ಮೆಲೇ ಸರಿಯಿಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ. ಅದನ್ನು ಮೊದಲು ಪರಿಶೀಲನೆ ಮಾಡಿ ನಂತರ ಸರಿಯಿಲ್ಲ ಎಂದು ಹೇಳಲಿ. ಅದು ಬಿಟ್ಟು ಅವರ ಚರಿತ್ರೆ ಹಾಗೆ ಇದೆ, ಹೀಗೆ ಇದೆ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ.

ಶ್ರೀ ಬಿ. ರಾಚಯ್ಯ.—ನಾನು ಈಗ ನೋಡುವುದಕ್ಕಾಗುವುದಿಲ್ಲ ಎಂದು ಹೇಳಿದೆ. ಅದಕ್ಕೆ ಅವರು ಈಗಲೇ ಬನ್ನಿ ಎಂದರು......

ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಲೆಜಿಸ್ಲೇಟೀವ್ ಕೌನ್ಸಿಲ್‌ನಲ್ಲಿ ಪ್ರಸ್ತಾಪವಾದಾಗ ಕೌನ್ಸಿಲ್ ಮುಗಿದ ತಕ್ಷಣ ಅವರನ್ನು ಹೋಗಿ ಮೀಟ್ ಮಾಡುತ್ತೇ ವೆಂದು ಹೇಳಿದರು, ಅವರನ್ನು ವಿಚಾರಿಸುತ್ತೇವೆಂದು ಹೇಳಿದರು. ಆ ಪ್ರಕಾರ ನಾವು ೫ ಮಂದಿ ಶಾಸಕರು ಆ ದಿವಸ ಕೌನ್ಸಿಲ್ ಮುಕ್ತಾಯವಾಗುವವರೆಗೂ ನಾವು ಅಲ್ಲೇ ಕುಳಿತಿದ್ದೆವು. ಈಗ

ಅವರು ಹಿಸ್ಟರಿ ಬಗ್ಗೆ, ಅವನ ಚರಿತ್ರೆ ಬಗ್ಗೆ ತಿಳಿದುಕೊಳ್ಳಬೇಕಾಗಿತ್ತು ಎಂದು ಹೇಳುತ್ತಾ ಇದ್ದಾರೆ......

ಅಧ್ಯಕ್ಷರು.--ತಾವು ಪಾವಗಡದ ವಿಷಯದ ಬಗ್ಗೆ ಮಾತ್ರ ಹೇಳಿ. ಮತ್ತೆ ಬೇರೆ ಯಾವುದಕ್ಕೋ ಹೋಗಬೇಡಿ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಈಗ ಈ ಮನೆಯಲ್ಲಿ ರೂಲು ೬೯ರ ಪ್ರಕಾರ ಚರ್ಚೆ ನಡೆಯುತ್ತಾ ಇದೆ. ಈ ಬಗ್ಗೆ ಪಾವಗಡಕ್ಕೆ ಸಂಬಂಧಪಟ್ಟದ್ದುದು ಮಾತ್ರ ಹೇಳಬೇಕಾಗಿದೆ. ಅದು ಬಿಟ್ಟು ಬೇರೆ ಯಾವುದಾದರೂ ಹೇಳಬೇಕಾದರೆ ಮುಂದೆ ಡಿಮ್ಯಾಂಡ್ಸ್ ಬರುತ್ತವೆ. ಆ ಸಂದರ್ಭದಲ್ಲಿ ಬಿಜಾಪುರದ್ದು, ಬೆಂಗಳೂರಿನದು, ಮೈಸೂರಿನದು ಈ ಎಲ್ಲಾ ವಿಚಾರವನ್ನೂ ಪ್ರಸ್ತಾಪ ಮಾಡಬಹುದು. ಈ ಸಂದರ್ಭದಲ್ಲಿ ಪಾವಗಡಕ್ಕೆ ಸಂಬಂಧಪಟ್ಟದ್ದು ಮಾತ್ರ ಹೇಳಬೇಕೆಂದು ನಾನು ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.--ಮಾನ್ಯ ಸದಸ್ಯರು ಹೇಳಿದ್ದುದು ಸರಿ. ಆದುದರಿಂದ ತಾವು ಪಾವಗಡಕ್ಕೆ ಸಂಬಂಧಪಟ್ಟಂತೆ ಇರುವುದನ್ನು ಮಾತನಾಡಿ. ಬೇರೆ ಯಾವುದರ ಬಗ್ಗೆಯೂ ಈಗ ಮಾತನಾಡಬೇಡಿ.

ಶ್ರೀ ಎಂ. ಎಲ್. ಉಸ್ತಾದ್.--ನಾನು ಪಾವಗಡಕ್ಕೆ ಸಂಬಂಧಪಟ್ಟಂತೆ ಇರುವ ವಿಷಯವನ್ನೇ ಹೇಳುತ್ತೇನೆ. ಆದರೆ ಅವರು "ನಿಮ್ಮಂತಹವರು" ಅಂದಿದ್ದಾರೆ ಅದನ್ನು ವಿತ್‌ಡ್ರಾ ಮಾಡಬೇಕು.

ಅಧ್ಯಕ್ಷರು.—ಇಲ್ಲಿರುವ ಎಲ್ಲಾ ಮಾನ್ಯ ಸದಸ್ಯರಿಗೂ ರಕ್ಷಣೆ ಕೊಡುವುದು ನನ್ನ ಕರ್ತವ್ಯ. ಆದ್ದರಿಂದ ನಾನು ಅದನ್ನು ರೆಕಾರ್ಡ್ ತರಿಸಿ ನೋಡುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ನಿಮ್ಮಂಥವರ ಹತ್ತಿರ ಮಾತನಾಡುವುದಕ್ಕೆ ಸಾಧ್ಯವಿಲ್ಲ ಎಂದು ಮಾನ್ಯ ಮಂತ್ರಿಗಳು ಏನು ಹೇಳಿದರು, ಅದನ್ನು ಅವರು ಮೊದಲು ವಿತ್‌ಡ್ರಾ ಮಾಡಬೇಕು.

(ಗೊಂದಲ)

ಶ್ರೀ ಎಂ. ರಘುಪತಿ.—ವಿಷಯಾಂತರ ಮಾಡಿ ಗೃಹಮಂತ್ರಿಗಳನ್ನು ಈ ಸಂದರ್ಭದಲ್ಲಿ ಪೇಚಿಕೆ ಸಿಕ್ಕಿಸುವುದು ಸರಿಯಲ್ಲ.

ಅಧ್ಯಕ್ಷರು.—ನಾನು ಅದನ್ನು ತರಿಸಿ ನೋಡುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ಈ ಕಡೆ ಕೈತೋರಿಸಿ ಆ ರೀತಿ ಹೇಳುವುದು ಸರಿಯೇ ? ಅವರೇನು ಗೂಂಡಾಗಳೇ ? ಆದ್ದರಿಂದ ಅವರು ಹೇಳಿದ್ದನ್ನು ವಿತ್‌ಡ್ರಾ ಮಾಡಿದ್ದೇನೆಂದು ಹೇಳಬೇಕು.

ಅಧ್ಯಕ್ಷರು.— ನಾನು ರೆಕಾರ್ಡ್ ತರಿಸಿ ನೋಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರು ಈ ಕಡೆ ಕೈಮಾಡಿ ತೋರಿಸಿದ್ದಾರೆ. ಅವರು ಕೈಮಾಡಿ ತೋರಿಸಿದ್ದು ರೆಕಾರ್ಡಿನಲ್ಲಿರುತ್ತದೆಯೇ ?

ಶ್ರೀ ಎಂ. ಎಲ್. ಉಸ್ತಾದ್.—ಪೋಲೀಸರನ್ನು ಹಚ್ಚಿ ಕೊಲೆ ಮಾಡಿಸುವಂತಹ ನಿಮ್ಮಂತಹ ಜನರು ಅಧಿಕಾರ ಸ್ಥಾನದಲ್ಲಿರಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್).—ಮಾನ್ಯ ಅಧ್ಯಕ್ಷರೇ, ಈ ದಿವಸ ತುಮಕೂರು ಜಿಲ್ಲೆಯ ಪಾವಗಡದಲ್ಲಿ ನಡೆದಂಥ ಘಟನೆಯ ಬಗ್ಗೆ ಈಗ ಚರ್ಚೆ ನಡೆಯುತ್ತಿದೆ. ತುಮಕೂರು ಜಿಲ್ಲೆಯ ಈ ಪಾವಗಡ ತಾಲ್ಲೂಕ್ ಅನೇಕ ರೀತಿಯಲ್ಲಿ ಭಿನ್ನವಾಗಿದೆ. ಮೊದಲನೆಯದಾಗಿ ಇದು ಆಂಧ್ರದ ಒಳಗಡೆ ಸೇರಿರುವಂಥ ಭಾಗವಾಗಿದೆ. ಆಂಧ್ರದಿಂದ ಸುತ್ತುವರೆದ ಈ ಪ್ರದೇಶ ಬಹಳ ಹಿಂದುಳಿದ ಭಾಗವಾಗಿದೆ. ಇಲ್ಲಿರುವ ಮುಖ್ಯವಾದ ಲಕ್ಷಣಗಳು ಎಂದರೆ ಶೋಷಣೆ ಮತ್ತು ಬಡತನ. ಇವು ಎರಡೂ ಇಲ್ಲಿ ಎದ್ದು ಕಾಣುತ್ತವೆ. ನಮ್ಮ ಅದೃಷ್ಟವೋ ಅಥವಾ ದುರಾದೃಷ್ಟವೊ ಗೊತ್ತಿಲ್ಲ, ಈ ತಾಲ್ಲೂಕ್‌ನಲ್ಲಿ ಒಂದಲ್ಲ ಒಂದು ಸುದ್ದಿಯನ್ನು ಮಾಡುವಂತಹ ಪ್ರಸಂಗಗಳು ನಡೆಯುತ್ತಿವೆ. ಕಳೆದ ಮೂರು ವರ್ಷಗಳಿಂದ ಈ ಭಾಗದ ಜನರು ಬರಗಾಲವನ್ನು ಎದುರಿಸಿದರು. ಈ ವರ್ಷ ಕಡಲೆಕಾಯಿ

ಯನ್ನು ಬೆಳೆದು ಜನರು ಸ್ವಲ್ಪ ಸಮೃದ್ಧಿಯಿಂದ ಇರುವಾಗಲೇ ಈ ಸಂದಿಗ್ಧ ಬಂದಿದೆ. ಈ ಹಿಂದೆ ತೋಳಗಳ ಕಾಟ ಇತ್ತು. ನಂತರ ಅಲ್ಲಿಂದ ಆರಿಸಿ ಬಂದಿದ್ದ ಶಾಸಕರ ಕಾಟವಿತ್ತು. ಈಗ ಪೋಲೀಸರ ಕಾಟ ಪ್ರಾರಂಭವಾಗಿದೆ. ಹೀಗೆ ಇದೊಂದು ವಿಚಿತ್ರ ಘಟನೆಗಳು ನಡೆಯುತ್ತಿರುವಂತಹ ವಿಭಿನ್ನವಾದ ತಾಲ್ಲೂಕ್ ಆಗಿದೆ. ಈ ಒಂದು ಘಟನೆ ನಡೆದ ಮೇಲೆ ನಾನು ಅಲ್ಲಿಗೆ ಹೋಗಿ ನೋಡಲೇ ಬೇಕು ಎಂಬ ಜವಾಬ್ದಾರಿ ನನ್ನ ಮೇಲೆ ಇಲ್ಲದಿದ್ದರೂ ಸಹ ನಾನು ಒಬ್ಬ ಸಾಮಾನ್ಯ ಮಾನವನಾಗಿ ಹೋಗಿ ಬಂದಿದ್ದೇನೆ. ನಾನು ಹೋದ ದಿವಸ ಶ್ರೀಮತಿ ನಾಗರತ್ನಮ್ಮನವರು ಸಹ ಹೋಗಿ ಬಂದಿದ್ದರು. ಈ ಒಂದು ಘಟನೆ ಏನು ನಡೆಯಿತು, ಈ ಘಟನೆಗೆ ಕಾರಣವೇನು? ಇದಕ್ಕೆ ಹಿನ್ನೆಲೆ ಏನಿತ್ತು ಎನ್ನುವುದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಮಾತ್ರ ಅವಕಾಶವಿದೆ. ಅಲ್ಲಿ ನಡೆದ ಗೋಲಿಬಾರ್‌ನ್ನು ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಆದಿಯಾಗಿ ಈ ಸದನದ ಎಲ್ಲಾ ಮಾನ್ಯ ಸದಸ್ಯರು ಏನು ಖಂಡನೆ ಮಾಡಿದ್ದಾರೆ. ಆ ಖಂಡನೆಗೆ ನಾನೂ ಸಹ ಧ್ವನಿಗೂಡಿಸುತ್ತೇನೆ. ಇದಕ್ಕೆ ಕಾರಣವಿಷ್ಟೆ, ಗೋಲಿಬಾರ್ ಮಾಡುವಂತಹ ಪ್ರಸಂಗ ಏನಿದೆ. ಇದು ಕೊನೆಯ ಅಸ್ತ್ರವಾಗಬೇಕು. ನಾವು ಅನೇಕ ವರದಿಗಳನ್ನು ಮತ್ತು ಅನೇಕ ಕಾನೂನುಗಳನ್ನು ತೆರೆದು ನೋಡಿದಾಗ, ಎಂತಹ ಸಂದರ್ಭಗಳಲ್ಲಿ ಗೋಲಿಬಾರ್ ಮಾಡಬಹುದೆಂದರೆ, ಶಾಂತಿಭಂಗ ಆಗುವುದನ್ನು ಬೇರೆ ಮಾರ್ಗಗಳಿಂದ ತಡೆಗಟ್ಟುವುದು ಸಾಧ್ಯವಾಗದಿದ್ದಾಗ ಮಾತ್ರ ಕೊನೆಯ ಅಸ್ತ್ರವಾಗಿ ಗೋಲಿಬಾರ್ ಮಾಡಬೇಕಾಗುತ್ತದೆ.

ಇತ್ತೀಚೆಗೆ ನಮಗಂತೂ ಏನೂ ಅರ್ಥವಾಗುತ್ತಿಲ್ಲ. ದಿನನಿತ್ಯ ದರೋಡೆ ಕೋರರು ಮನೆಗೆ ನುಗ್ಗಿ ನಮ್ಮ ಶಾಂತಿಯುತ ವ್ಯವಸ್ಥೆಯನ್ನೇ ಅಸ್ತವ್ಯಸ್ತ ಮಾಡುತ್ತಾ ಇರುವ ಸಂದರ್ಭದಲ್ಲಿ ಒಬ್ಬನೇ ಒಬ್ಬ ಡಕಾಯಿತನಿಗೆ ಗುಂಡಿಕ್ಕುವುದಕ್ಕೆ ಆಗದೇ ಇರತಕ್ಕಂಥ ನಮ್ಮ ಪೋಲೀಸರು ಅಮಾಯಕ ಜನಗಳ ಎದೆಗೆ ಏಕೆ ಗುಂಡು ಹಾಕುತ್ತಿದ್ದಾರೆ ಎನ್ನುವುದರ ಬಗ್ಗೆ ಮುಖ್ಯ ಮಂತ್ರಿಗಳಿಂದ ಹಿಡಿದು ನಮ್ಮಗಳವರೆ ಒಂದು ಅನುಮಾನಕ್ಕೆ ಅಥವಾ ನಮ್ಮ ವ್ಯವಸ್ಥೆಯಲ್ಲಿ ಏನಾದರೂ ದೋಷವಿದೆಯೋ ಏನೋ ಎನ್ನುವುದರ ಬಗ್ಗೆ ಚಿಂತೆ ಮಾಡುವಂಥ ಸ್ಥಿತಿಗೆ ನಾವು ಬಂದಿದ್ದೇವೆ. ಇದನ್ನು ಯಾವುದೇ ವಿಧವಲ್ಲಿ ಜಸ್ಟಿಫೈಡ್ ಮಾಡಿಕೊಳ್ಳಲಿಕ್ಕೆ ನಾವು ಯಾರೂ ಸಿದ್ಧರಿಲ್ಲ. ಪಂಜಾಬಿನಲ್ಲಿ ದಿನಾ ಜನರನ್ನು ಕೊಂದು ಹಾಕುತ್ತಾರೆ ಅದರಿಂದ ನಾವೂ ಕೊಂದು ಹಾಕುತ್ತೇವೆ ಎಂದು ಸಮರ್ಥನೆ ಮಾಡಿಕೊಳ್ಳಲಿಕ್ಕೆ ನಾವು ಸಿದ್ಧರಿಲ್ಲ. ಮಾನ್ಯ ಗುಂಡೂರಾಯರ ಕಾಂಗ್ರೆಸ್ ಸರ್ಕಾರ ಇದ್ದಾಗ ೧೨೫ ಜನರನ್ನು ಗುಂಡಿಕ್ಕಿ ಕೊಂದಿದ್ದಾರೆ, ಅದರಿಂದ ನಾವೂ ಗುಂಡಿಕ್ಕಿ ಕೊಲ್ಲಬೇಕು ಎಂದು ಸಮರ್ಥನೆ ಮಾಡಿಕೊಳ್ಳಲಿಕ್ಕೆ ಸಿದ್ಧವಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತಾ ಇದ್ದೇನೆ. ಇನ್ನೊಂದು ಯಾವುದೋ ಊರಿನಲ್ಲಿ ಕಾಂಗ್ರೆಸ್‌ನವರು ಆಳುತ್ತಿರುವ ರಾಜ್ಯದಲ್ಲಿ ಉತ್ತರ ಪ್ರದೇಶದಲ್ಲಿ ಜನ ಸಾಯುತ್ತಾ ಇದ್ದಾರೆ ಆದ್ದರಿಂದ ನಾವೂ ಗುಂಡಿಕ್ಕಿ ಕೊಲ್ಲಬೇಕು ಎಂದು ಹೇಳಲಿಕ್ಕೆ ಸಿದ್ಧನಿಲ್ಲ. ಆ ಘಟನೆ ಏನು ನಡೆಯಿತು ಎನ್ನುವುದರ ಬಗ್ಗೆ ಒಂದೇ ಒಂದು ನನಗೆ ತಿಳಿದುಬಂದಂಥ ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಗಂಡ ಹೆಂಡತಿಯೋ ಅಥವಾ ಅಣ್ಣ ತಂಗಿಯೋ ಅದು ನಮಗೆ ಬೇಕಾಗಿಲ್ಲ. ಆಕೆ ಒಳ್ಳೆಯ ನಡತೆಯವಳೋ ಅಥವಾ ಕೆಟ್ಟ ನಡತೆಯವಳೋ ಅದೂ ನಮಗೆ ಬೇಕಾಗಿಲ್ಲ. ಅವರು ಯಾರದೋ ಮನೆಗೆ ಹೋಗುತ್ತಿದ್ದರು. ಆಗ ಪೋಲೀಸರು ಹೋಗಿ ಅವರನ್ನು ಕೆಣಕಿದರು. ಕೆಣಕಿದಾಗ ಆಯಮ್ಮ ಬಹಳ ಕೇಳಿಕೊಂಡಿದ್ದಾಳೆ. ನಿಮಗೆ ಅಣ್ಣ ತಮ್ಮಂದಿರು, ಅಕ್ಕತಂಗಿಯರಿಲ್ಲವೆ, ನಮ್ಮ ಮೈಮೇಲೆ ಏಕೆ ಹರಿದು ಬರುತ್ತೀರಿಯಾ ಎಂದು. ಆಗಲೂ ಕೂಡ ಕುಡಿದು ಮತ್ತಿನಲ್ಲಿದ್ದ ಪೋಲೀಸರು ಕೇಳದೇ ಹೋದಾಗ ಮೆಟ್ಟಿನಲ್ಲಿ ಹೊಡೆದಿದ್ದಾಳೆ, ಇದು ನಿಜವಾಗಿ ನಡೆದಿರುವ ಸ್ಥಿತಿ, She has no atternative.

(ಇಂಟರಪ್‌ಷನ್)

ಪೋಲೀಸರು ೩ ಜನ ಆಕೆಯ ಮೈಮೇಲೆ ಬಂದು ಬೀಳುವಂಥ ಪರಿಸ್ಥಿತಿಯಲ್ಲಿ ಆಕೆ ಮಾಡಿರುವಂಥದ್ದನ್ನು ಗ್ರಹಿಸಲಿಕ್ಕೆ ಯಾರಿಗೂ ಸಾಧ್ಯವಿಲ್ಲ ಆಕೆ ಎಕ್ಕಡ ತೆಗೆದುಕೊಂಡು ಹೊಡೆದಿದ್ದಾಳೆ. ಚೆನ್ನಾಗಿ ಬಾರಿಸಿದ್ದಾಳೆ ಬಾರಿಸಿ ಆದಮೇಲೆ ಇವರಿಗೆ ಸಿಟ್ಟು ಬಂದಿದೆ. ಅಷ್ಟರಲ್ಲಿ ಗಂಡ ಬಂದಿದ್ದಾನೆ. ಅಷ್ಟರಲ್ಲಿ ಪೋಲೀಸರನ್ನು ಕರೆದುಕೊಂಡು ಬಂದಿದ್ದಾನೆ. ಪೋಲೀಸ್ ಜೀಪ್, ಸಬ್ ಇನ್ಸ್‌ಪೆಕ್ಟರ್ ಎಲ್ಲಾ ಬಂದಿದ್ದಾರೆ. ಆತನನ್ನು ಮತ್ತು ಆಕೆಯನ್ನು ಅಲ್ಲೂ ಹೊಡೆದಿದ್ದಾರೆ ಮತ್ತು ಪೋಲೀಸ್ ಸ್ಟೇಷನ್‌ನಲ್ಲೂ ಹೊಡೆದಿದ್ದಾರೆ. ನಾನೂ ಕೂಡ ಆಕೆಯ ಜೊತೆಯಲ್ಲಿ ಮಾತನಾಡಿದೆ. ಆದರೆ ಆಯಮ್ಮ ಒಂದು ಮಾತು ಹೇಳಿದರು. ಹಿರಿಯರಾದಂಥ ಶ್ರೀಮಾನ್ ಕೆ. ಹೆಚ್. ಪಾಟೀಲರು ಆಕೆಯನ್ನು ಟ್ರಾನ್ಸ್‌ಫರ್ ಮಾಡಿದರು ಎಂದು ಹೇಳಿದ್ದರಿಂದ ನಾನು ಈ ಮಾತನ್ನು ಹೇಳುತ್ತಾ ಇದ್ದೇನೆ. ಆಕೆ ಹೇಳಿದರು, ''ಸ್ವಾಮಿ, ಅವತ್ತು

ಆಗುತ್ತಿದ್ದ ಹಿಂಸೆಗಿಂತ ಈಗ ಆಗುತ್ತಿರುವ ಹಿಂಸೆ ಜಾಸ್ತಿ'' ಎಂದು ಹೇಳಿದಳು. ಏಕೆ ಎಂದು ಕೇಳಿದಾಗ ''ದಿನನಿತ್ಯ ಕೋತಿ ಕುಣಿತ ನೋಡುವುದಕ್ಕೆ ಬರುವ ಹಾಗೆ ನೂರಾರು ಜನರು ನನ್ನನ್ನು ನೋಡಲಿಕ್ಕೆ ಬರುತ್ತಾರೆ, ನನಗೆ ನರಹಿಂಸೆಯಾಗಿಹೋಗಿದೆ ದಯಮಾಡಿ ನನ್ನನ್ನು ಇಲ್ಲಿಂದ ಎಲ್ಲಿಗಾದರೂ ಟ್ರಾನ್ಸ್‌ಫರ್‌ಮಾಡಿಸಿ''ಎಂದು ಆಯಮ್ಮ ಹೇಳಿದರು. ಬಹುಶಃ ಸರ್ಕಾರಕ್ಕೂ ಈ ವದಂತಿ ಇದೆ ಎಂದು ಕಾಣುತ್ತದೆ. ಇದರಿಂದ ನಾನೂ ಕೂಡ ನಿಮ್ಮೆಲ್ಲರ ಜೊತೆಯಲ್ಲಿ ಸರ್ಕಾರವನ್ನು ಒತ್ತಾಯಪಡಿಸುವುದಕ್ಕೆ ಇಷ್ಟಪಡುತ್ತೇನೆ. ಆಯಮ್ಮನನ್ನು ಈಗಾಗಲೇ ತುಮಕೂರಿಗೆ ಕಳುಹಿಸಿದ್ದಾರೆ ಎಂದು ತಿಳಿದು ಬಂದಿದೆ. ತುಮಕೂರಿನಲ್ಲೂ ಬೇಡಿ, ಮಧುಗಿರಿಯಲ್ಲೂ ಬೇಡಿ ಆಯಮ್ಮ ಕೇಳಿದ ಸ್ಥಳಕ್ಕೆ ವರ್ಗಾಯಿಸುವುದರಿಂದ ಅಲ್ಲಿ ಟೆನ್‌ಷನ್ ಏನಿದೆ ಅದನ್ನು ರಿಲೀಸ್ ಮಾಡಲಿಕ್ಕೆ ಒಂದು ಅನುಕೂಲವಾಗುತ್ತದೆ. ಪೋಲೀಸ್ ಸ್ಟೇಷನ್ನಿನಲ್ಲಿ ಏನೇನು ನಡೆದಿದೆ ಎನ್ನುವುದನ್ನು ರಿಪೀಟ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಕೆಲವು ನಡೆದಿರಬಹುದು, ಕೆಲವು ನಡೆಯದೇ ಇರಬಹುದು. ಏಕೆಂದರೆ, ನಾವು ಯಾರೂ ಪ್ರತ್ಯಕ್ಷದರ್ಶಿಗಳಲ್ಲ ಅನೇಕ ವಿಷಯಗಳನ್ನು ಪತ್ರಿಕೆಗಳನ್ನು ಓದುವುದರಿಂದ ಜನಗಳ ಮಾತನ್ನು ಕೇಳುವುದರಿಂದ, ನಮ್ಮದೇ ಆದಂಥ ರಾಜಕೀಯಕ್ಕೆ ಬೇಕಾದಂಥ ನಮಗೆ ಅನುಕೂಲವಾಗಿ ನಾವು ಸೃಷ್ಟಿಸಿಕೊಳ್ಳಬಹುದು.

(ಇಂಟರಪ್‌ಷನ್)

ಆಯಮ್ಮ ಹೇಳಿದ್ದುದು ಸುಳ್ಳು ಎಂದು ಹೇಳುವುದಿಲ್ಲ, ನೀವು ಹೇಳಿದ್ದು ಸುಳ್ಳು ಎಂದು ಹೇಳುವುದಿಲ್ಲ ಘಟನೆ ನಡೆದಿದೆ. ಘಟನೆ ನಡೆದ ಸಂದರ್ಭದಲ್ಲಿ ಒಂದಂತೂ ನನಗೆ ಅರ್ಥವಾಗಲಿಲ್ಲ, ರಾತ್ರಿ ಅಷ್ಟೊಂದು ಗಲಾಟೆಯಾಗಿದೆ. ಬೆಳಿಗ್ಗೆ ಸಾವಿರಾರು ಜನ ಬಂದಿದ್ದಾರೆ. ನಾನೂ ಆ ಕ್ಷೇತ್ರದ ಶಾಸಕರು ನಮ್ಮ ಕೆಲಸಕ್ಕಾಗಿ ನಮ್ಮ ಮುಖ್ಯ ಮಂತ್ರಿಗಳ ಆಫೀಸಿನಲ್ಲಿ ೩ ಗಂಟೆಯವರೆಗೆ ಕುಳಿತುಕೊಂಡಿದ್ದೆವು. ಶಾಸಕರು ಇದ್ದಾರೆ, ಇಲ್ಲಿ ಒಂದು ಸರ್ಕಾರ ಇದೆ. ಅಲ್ಲಿ ಯಾವುದೇ ಒಬ್ಬ ಅಧಿಕಾರಿ ಅದನ್ನು ಸಂಬಂಧಪಟ್ಟವರಿಗೆ ತಿಳಿಸುವಂಥ ಒಂದು ಪ್ರಯತ್ನ ಕೂಡ ಮಾಡಲಿಲ್ಲ. ೧೨-೪೫ರವರೆಗೆ ನನಗೆ ತಿಳಿದಮಟ್ಟಿಗೆ ತುಮಕೂರು ಜಿಲ್ಲೆಯ ಜಿಲ್ಲಾ ಮುಖ್ಯಸ್ಥರಾದ ಪೋಲೀಸರಿಗೂ ಇದು ತಿಳಿದುಬಂದಿಲ್ಲ. ಏಕೆ ಹೀಗೆ ಆಯಿತು, ಏನು ಹೀಗೆ ಆಯಿತು ಎನ್ನುವುದು ನಮಗಂತೂ ಗೊತ್ತಿಲ್ಲ. ಈ ಪೋಲೀಸರ ನಡತೆಯ ಬಗ್ಗೆ ಇವರಿಗೆ ಯಾರ ಕುಮಕ್ಕು ಇದೆ ಎನ್ನುವುದರ ಬಗ್ಗೆ ಇವರು ನಡೆದುಕೊಳ್ಳತಕ್ಕಂಥ ನಡವಳಿಕೆಯ ಬಗ್ಗೆ ಯಾರಾದರೂ ಬೆಂಬಲ ಕೊಡುತ್ತಾರೆ ಎನ್ನುವುದರ ಬಗ್ಗೆ ಅತ್ಯಂತ ನೋವನ್ನು ತರುವಂಥ ಒಂದು ಮಾತನ್ನು ನಮ್ಮ ಸ್ನೇಹಿತರಾದಂಥ ಶ್ರೀಮಾನ್ ವೆಂಕಟ ರಾಮಯ್ಯನವರು ಹೇಳಿದರು ರಾಮಯ್ಯನವರು ಏನೋ ಅಧಿಕಾರಿಗಳನ್ನು ಆರಿಸಿಕೊಂಡಿದ್ದಾರಂತೆ ಎಂದು. ಅವರಿಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಗರುಡಾಚಾರ್‌ರವರು ಇವತ್ತಿಗೂ ಬದುಕಿದ್ದಾರೆ ಸತ್ತಿಲ್ಲ. ಅವರನ್ನು ತಾವು ಕೇಳಬಹುದು ನನ್ನ ಕ್ಷೇತ್ರಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಯಾರನ್ನು ಹಾಕಲಿ ಎಂದು ಕೇಳಿದಾಗ ನಾನು ಅವರಿಗೆ ಒಂದು ಮಾತು ಹೇಳಿದ್ದೆ ''ನಾನು ಏನಾದರೂ ಕಾನೂನಿಗೆ ವಿರುದ್ಧವಾಗಿ ಯಾವುದಾದರೂ ಒಂದು ಕೆಲಸವನ್ನು ಮಾಡಬೇಕು ಎಂದು ಹೇಳಿದಾಗ ಏನು ಸ್ವಾಮಿ ಶಾಸಕರಾಗಿ ಇಂತಹ ಮಾತನ್ನು ಹೇಳುತ್ತೀರಿ ಎಂದು ಹೇಳುವಂಥ ತಾಕತ್ತು ಇರುವಂಥ ಪೋಲೀಸ್ ಅಧಿಕಾರಿ ನಿಮ್ಮ ಇಲಾಖೆಯಲ್ಲಿ ಇದ್ದರೆ ಹಾಕಿ'' ಎಂದು ಹೇಳಿದೆ. ಇದನ್ನು ದಯಮಾಡಿ ಮಾನ್ಯ ವೆಂಕಟರಾಮಯ್ಯನವರು ತಿಳಿದುಕೊಳ್ಳಬೇಕು. ಆದುದರಿಂದ ಅಲ್ಲಿ ನಡೆದಿರುವಂಥ ಘಟನೆಯಲ್ಲಿ ಏನು ಗುಂಡು ಹಾರಿಸಿದ್ದಾರೋ ಅದಕ್ಕೆ ಜಸ್ಟಿಫಿಕೇಷನ್ ಇಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಸ್ನೇಹಿತರಾದ ಲಕ್ಕಪ್ಪನವರು ಹೇಳಿದಹಾಗೆ ಗುಂಡು ಹಾಕಿಸುವುದಕ್ಕೆ ಮೊದಲು ಪೋಲಿಸಿನವರು ಪರಿಪಾಲಿಸಲೇ ಬೇಕಾದಂಥ ಕೆಲವು ನಿಯಮಗಳಿವೆ. ನಾನು ಆಗಲೇ ಹೇಳಿದಹಾಗೆ ''ಇಟ್ ಈಸ್ ಎ ಲಾಸ್ಟ್ ರಿಸಾರ್ಟ್'' ಮೊದಲು ಗಾಳಿಯಲ್ಲಿ ಗುಂಡು ಹೊಡೆಯಬೇಕು, ಲಾಠಿ ಚಾರ್ಜ್ ಮಾಡಬೇಕು, ಟಿಯರ್‌ಗ್ಯಾಸ್ ಹೊಡೆಯಬೇಕು ಅಲ್ಲೇ ಒಂದು ೧೦-೧೫ ಅಡಿ ದೂರದಲ್ಲಿ ತಾಲ್ಲೂಕು ಮ್ಯಾಜಿಸ್ಟ್ರೇಟ್ ಆಫೀಸ್ ಇದೆ. ಆ ತಾಲ್ಲೂಕು ಮ್ಯಾಜಿಸ್ಟ್ರೇಟ್ ಆಫೀಸಿಗೆ ೧ ಗಂಟೆ ೪೫ ನಿಮಿಷಕ್ಕೆ ಇವರು ಪರ್ಮಿಷನ್ ಕೇಳಿದ್ದಾರೆ.

ನನಗೆ ತಿಳಿದ ಮಟ್ಟಿಗೆ ಗೋಲಿಬಾರು ಆದಮೇಲೆ ಪರ್ಮಿಷನ್ ಕೇಳಿದ್ದಾರೆ. They have not exercised the minimum commonsense. ಏತಕ್ಕೆ ? ಏನು ? ಏನಾಯಿತು ಎನ್ನ

ವುಗಳ ಬಗ್ಗೆ ನನಗೆ ಗೊತ್ತಿಲ್ಲ. ಸ್ವಾಮಿ, ಶಿಕ್ಷೆ ಕೊಡುವುದರ ಬಗ್ಗೆ ಹೇಳುವುದಾದರೆ, ಈ ದೇಶದಲ್ಲಿ ಅನ್ನ ಕೊಡುವಂಥ ದಾತರನ್ನು ಆಳುವಂಥ ಜನ ನೋಡಿಕೊಳ್ಳುವಂಥ ಸ್ಥಿತಿಗೆ ಇದು ಉದಾಹರಣೆ ಯಾಗಿದೆ. ಆದ್ದರಿಂದ ಈ ದೇಶದಲ್ಲಿ ಜನತೆಯಿಂದ ಗೆದ್ದು ಹೋದಂಥ ರಾಜಕಾರಣಿ, ಐದು ವರ್ಷಗಳು ತಿರುಗಿ ನೋಡದಿದ್ದರೆ, ಸಾರ್ವಜನಿಕ ಜೀವನದಲ್ಲಿರುವವರು ಭ್ರಷ್ಟರಾದರೆ, ಅನ್ನ ಕೊಡುವಂಥ ದಾತರ ಮೇಲೆ ಗುಂಡು ಹಾಕಿದರೆ, ಅಂಥವರಿಗೆ ನೇಣು ಹಾಕುವಂಥ ಕಾನೂನು ತರುವುದಾದರೆ ಅದನ್ನು ನಾನು ಒಪ್ಪುತ್ತೇನೆ. ಇಲ್ಲಿ ಏನಿದೆ ತಪ್ಪು ಮಾಡಿದ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದು, ಅಷ್ಟು ಮಾತ್ರ ಎಂದರೆ, ವಜಾ ಮಾಡುವುದು ಕೂಡ ಕಷ್ಟ. ಸಸ್ಪೆಂಡ್ ಮಾಡಿದ ಅಧಿಕಾರಿ ೧೦ ಪರ್ಸೆಂಟ್ ಸಂಬಳ ಕಡಿಮೆ ತೆಗೆದುಕೊಂಡು ನಂತರ ಪ್ರಮೋಷನ್ ತೆಗೆದುಕೊಂಡು ಬರುತ್ತಾರೆ. ಆದ್ದರಿಂದ ಇವರು ಮಾಡುವಂಥ ಕೆಲಸ ಏನಿದೆ ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿಲ್ಲ. ನನ್ನ ಸ್ನೇಹಿತರಾದ ಮಾನ್ಯ ಶಿವನಂಜಪ್ಪನವರು ಒಂದು ಮಾತು ಹೇಳಿದ್ದರಿಂದ ನಾನು ಈ ಮಾತನಾಡಬೇಕಾಯಿತು. ತುಮಕೂರು ಜಿಲ್ಲೆಯಲ್ಲಿ ಪೋಲೀಸಿನವರು ನಿಷ್ಕ್ರಿಯರಾಗಿದ್ದಾರೆಂದು ಹೇಳಿದರು. ನಾನು ಅದನ್ನು ಒಪ್ಪುವುದಕ್ಕೆ ಸಿದ್ಧನಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.— ತಾವು ಅಧಿಕಾರದಲ್ಲಿದ್ದೀರಿ ನಿಮ್ಮ ಮಾತು ನಡೆಯುತ್ತದೆ. ಅದಕ್ಕೆ ನೀವು ಒಪ್ಪುವುದಕ್ಕೆ ತಯಾರಿಲ್ಲ.

ಶ್ರೀ ವೈ. ಕೆ. ರಾಮಯ್ಯ.— ಪೋಲೀಸ್ ಸಕ್ರಿಯವಾಗಿದೆ. ನಮ್ಮ ಊರಿನಲ್ಲಿ ಚುನಾವಣೆಯಾದ ಮೇಲೆ ಒಂದು ಘಟನೆ ನಡೆಯಿತು. ಒಬ್ಬ ಹರಿಜನ ಕೋಮಿಗೆ ಸೇರಿದ ಒಬ್ಬ ವ್ಯಕ್ತಿಯ ಕಿವಿಯನ್ನು ಕಿತ್ತುಹಾಕಿದ. ಠಾಣೆಯ ಸಬ್‌ಇನ್ಸ್‌ಪೆಕ್ಟರ್, ೩೨೩ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿದ್ದಾನೆ. ಇದನ್ನು ೩೨೬ರ ಪ್ರಕಾರ ಏತಕ್ಕೆ ರಿಜಿಸ್ಟರ್ ಮಾಡಿದೆ ಎಂದು ಕೇಳಿದರೆ medical ರಿಪೋರ್ಟ್ ಬೇಕು ಅದಕ್ಕೆ ಕೇಳಿದ್ದೇನೆಂದು ಹೇಳುತ್ತಾನೆ. It is a permanent disfigurement. It can be seen with our own eyes. ಇದು ಪರ್ಮನೆಂಟ್ ಡಿಸ್ಫಿಗರ್‌ಮೆಂಟ್ ಆಗುತ್ತದೆ. ೩೨೩–೩೨೬ರ ಪ್ರಕಾರ ಕೇಸು ರಿಜಿಸ್ಟರ್ ಮಾಡಿ, ನಾನ್ ಬೇಲಬಲ್ ಅಪರಾಧ ಕೋರ್ಟ್ ಮುಂದೆ ಪ್ರೊಡ್ಯೂಸ್ ಮಾಡಬೇಕೆಂದು ಹೇಳಿದೆ. ಆತನಿಗೆ ಮಿನಿಮಮ್ ನಾಲೆಡ್ಜ್ ಇತ್ತೋ, ಇಲ್ಲವೋ ? ಅಥವಾ ಉದ್ದೇಶ ಪೂರ್ವಕವಾಗಿ ಮಾಡಿದ್ದನೋ ಗೊತ್ತಿಲ್ಲ. ಅಂಥ ಪೋಲೀಸಿನವರು ಇದ್ದಾರೆ, ಇಲ್ಲ ಎಂದು ನಾನು ಹೇಳು ವುದಿಲ್ಲ. ಅವರು ಏನೇನು ಮಾಡುತ್ತಾರೆ ಅದನ್ನು ಜಸ್ಟಿಫಿಕೇಷನ್ ಮಾಡುವುದಕ್ಕೆ ನಾನು ಹೋಗುತ್ತಿಲ್ಲ. ಆದರೆ, ಮಾನ್ಯ ಶಿವನಂಜಪ್ಪನವರು ಮಾತನಾಡುತ್ತಾ, ಅವರವರಿಗೆ ಬೇಕಾದ ಅಧಿಕಾರಿಗಳನ್ನು ಹಾಕಿಸಿ ಕೊಂಡಿದ್ದಾರೆಂದು ಹೇಳಿದರು. ನನ್ನ ಜಿಲ್ಲೆಯನ್ನು ಕುರಿತು ಹೇಳಿದ್ದರಿಂದ ನಾನು ಈ ಕೆಲವು ವಿಷಯ ಗಳನ್ನು ಹೇಳಲೇಬೇಕಾಗಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ.— ನಾನು ಕೊರಟಗೆರೆಯನ್ನು ಉದಾಹರಣೆ ಕೊಟ್ಟು ಹೇಳಿದ್ದೇನೆ. ನಿಮ್ಮ ಬಗ್ಗೆ ಹೇಳಲಿಲ್ಲ ಹೇಳಬೇಕೆಂದರೆ ಹೇಳುತ್ತೇನೆ. ಅದರಲ್ಲಿ ಮುಚ್ಚುಮರೆ ಇಲ್ಲ.

ಶ್ರೀ ವೈ. ಕೆ. ರಾಮಯ್ಯ.— ತುಂಬಾ ಸಂತೋಷ, ಅವರವರಿಗೆ ಬೇಕಾದವರನ್ನು ಹಾಗೂ ಜಾತೀ ಯವರನ್ನು ಹಾಕಿಸಿಕೊಂಡಿದ್ದಾರೆಂದು ಹೇಳಿದರು. ನನ್ನ ತಾಲ್ಲೂಕಿನ ಅಧಿಕಾರಿಗಳ ಪಟ್ಟಿಯನ್ನು ಕೊಡುತ್ತೇನೆ. ಕುರುಬ ಜಾತಿಗೆ ಸೇರಿದವರು ತಹಶೀಲ್ದಾರ್, ಕೊರಚರ ಜಾತಿಗೆ ಸೇರಿದವರು ಬಿ.ಡಿ.ಓ. ಇದು ತಮಗೂ ಗೊತ್ತಿದೆ. ಕೂರ್ಗಿಯವರು ಒಬ್ಬರು ಸರ್ಕಲ್ ಇನ್ಸ್‌ಪೆಕ್ಟರ್ ಇದ್ದಾರೆ. ಬ್ರಾಹ್ಮಣರು ಒಬ್ಬರು ಎಕ್ಸಿಕ್ಯೂಟೀವ್ ಇಂಜಿನಿಯರ್ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧಿಕಾರಿಗಳನ್ನು ಹಾಕಿದರೋ, ಹಾಕಿಸಿಕೊಂಡರೋ ?

(ಗೊಂದಲ)

ಶ್ರೀ ಜಿ. ಎಸ್. ಶಿವನಂಜಪ್ಪ.— ಬೇಕಾದ ಅಧಿಕಾರಿಗಳನ್ನು ನೀವು ಹಾಕಿಸಿಕೊಂಡು ಬೇಡವಾದ ಅಧಿಕಾರಿಗಳನ್ನು ನನ್ನ ಕ್ಷೇತ್ರಕ್ಕೆ ಹಾಕಿದ್ದಾರೆ

ಶ್ರೀ ವೈ. ಕೆ. ರಾಮಯ್ಯ.— ನಾನು ನಿಮಗೆ ಋಣಿಯಾಗಿದ್ದೇನೆ. ತಾವು ಹೇಳಿದಂಥಾದ್ದು ಸರಿಯಲ್ಲ, ಅದನ್ನು ತಾವು ಮರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ನನ್ನ ಕೋರಿಕೆ ಇಷ್ಟೆ. ಇವತ್ತು ಒಬ್ಬ ಹೆಣ್ಣುಮಕ್ಕಳ ಮಾನದ ರಕ್ಷಣೆ ವಿಚಾರ, ರಾಷ್ಟ್ರಕ್ಕೆ ಅನ್ನ ಕೊಡುವಂಥ ದಾತರನ್ನು

ರಕ್ಷಣೆ ಮಾಡುವ ವಿಚಾರದಲ್ಲಿ ನಾವುಗಳೆಲ್ಲರೂ ಚಾಂಪಿಯನ್ನರು. ಇದು ನಮ್ಮ ಧರ್ಮ. ಆದರೆ, ಪಾವಗಡದಲ್ಲಿ ನಡೆದಂಥ ಘಟನೆ ಏನಿದೆ ಅದು ನಾಗರೀಕ ಸಮಾಜಕ್ಕೆ ಒಳ್ಳೆಯ ಹೆಸರು ತರುವುದಿಲ್ಲ. ನಾನು ಕೂಡ ನನ್ನ ಸ್ನೇಹಿತರ ಜೊತೆಯಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುವುದು ಇಷ್ಟೆ. ಆ ಅಧಿಕಾರಿಗಳನ್ನು ಯಾರೇ ಹಾಕಿಸಿಕೊಂಡಿರಲಿ ಯಾವ ಜಾತಿಗೆ ಸೇರಿದವನಾಗಿರಲಿ, ಎಂಥ ಉನ್ನತಮಟ್ಟದ ಅಧಿಕಾರಿಯೇ ಆಗಿರಲಿ, ಕಾನೂನು ಚೌಕಟ್ಟಿನಲ್ಲಿ ಎಂಥ ಕಠಿಣ ಶಿಕ್ಷೆ ಕೊಡುವುದಕ್ಕೆ ಸಾಧ್ಯವೋ ಅಂಥ ಶಿಕ್ಷೆಯನ್ನು ಕೊಡಬೇಕು. ಜೊತೆಗೆ ಇಂಥ ಘಟನೆ ಮುಂದೆ ನಡೆಯದಂಥ ರೀತಿಯಲ್ಲಿ ಸರ್ಕಾರ ಮುನ್ನೆಚ್ಚರಿಕೆ ವಹಿಸಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

೫–೦೦ ಪಿ.ಎಂ.

ಶ್ರೀ ಸೋಮ್ಲಾನಾಯಕ್ (ಪಾವಗಡ).— ಮಾನ್ಯ ಅಧ್ಯಕ್ಷರೇ, ಈ ಒಂದು ಘಟನೆಯ ಬಗ್ಗೆ ಇದುವರೆಗೂ ನಮ್ಮ ಹಿರಿಯ ಮಿತ್ರರೆಲ್ಲರೂ ಮಾತನಾಡಿದ್ದಾರೆ. ನಾನು ಈ ಒಂದು ದುರ್ಘಟನೆ ನಡೆದಂಥ ಸ್ಥಳದಿಂದ ಆರಿಸಿ ಬಂದಿದ್ದೇನೆ. ಇದುವರೆಗೂ ಸದಸ್ಯರು ಹೇಳಿದ್ದೆಲ್ಲಾ ನಿಜವಾಗಿ ನಡೆದಿರತಕ್ಕ ಸಂಗತಿಯಾಗಿರುತ್ತದೆ. ಶ್ರೀಮತಿ ಪದ್ಮಮ್ಮ ನನ್ನ ಮುಂದೆ ಮತ್ತು ಗೃಹ ಸಚಿವರ ಮುಂದೆ ಹೇಳಿಕೆ ನೀಡಿರುತ್ತಾಳೆ. ನಮ್ಮ ವಿರೋಧಪಕ್ಷದ ನಾಯಕರು ಮತ್ತು ವಿಧಾನಪರಿಷತ್ತಿನ ನಾಯಕರು ಬಂದಾಗ, ಅವರನ್ನು ವರ್ಗಾವಣೆ ಮಾಡಿಕೊಡುತ್ತೇವೆಂದು ಹೇಳಿ ಕೇಳಿದಾಗ ಆಕೆ ಕೋಲಾರದ ಪಕ್ಕದ ಟೌನ್‌ಗೆ ವರ್ಗಮಾಡಿಸಿಕೊಡಬೇಕೆಂದು ಕೇಳಿದರು. ಆ ಪ್ರಕಾರದಿಂದ ವರ್ಗವಾಗಿದೆಯೋ ಹೊರತು, ನಾವು ಯಾರೂ ಅದನ್ನು ಮಾಡಿಲ್ಲ ಎಂದು ಈ ಮುಖೇನ ಹೇಳುತ್ತಿದ್ದೇನೆ. ಈ ದುರ್ಘಟನೆ ನಡೆಯಲಿಕ್ಕೆ ಯಾವ ಪೋಲೀಸರು ಕಾರಣಕರ್ತರಾಗಿದ್ದಾರೆ ಅವರ ಮೇಲೆ ತಕ್ಷಣವೇ ಉಗ್ರ ಕ್ರಮವನ್ನು ತೆಗೆದುಕೊಳ್ಳಬೇಕು. ಈ ಘಟನೆಯಲ್ಲಿ ಮಡಿದಂಥ ಅಮಾಯಕ ಜನರ ಕುಟುಂಬದವರಿಗೆ ತಕ್ಷಣ ಹೆಚ್ಚಿನ ಪರಿಹಾರವನ್ನು ಕೊಡಬೇಕು. ಈ ಘಟನೆಯಲ್ಲಿ ಹೆಚ್ಚಿನ ರೀತಿಯಲ್ಲಿ ಗಾಯಾಳುಗಳಾಗಿ ಆಸ್ಪತ್ರೆಯಲ್ಲಿರತಕ್ಕವರಿಗೂ ಸಹ ತಕ್ಷಣ ಸರ್ಕಾರದ ವತಿಯಿಂದ ಪರಿಹಾರ ಕೊಡಬೇಕು. ಇಂತಹ ಘಟನೆ ಇನ್ನುಮುಂದೆ ಕರ್ನಾಟಕ ರಾಜ್ಯದಲ್ಲಿ ಎಲ್ಲಿಯೂ ಸಹ ನಡೆಯದ ರೀತಿಯಲ್ಲಿ ಸರ್ಕಾರ ಮುನ್ನೆಚ್ಚರಿಕೆ ವಹಿಸಬೇಕು. ಅಲ್ಲದೆ, ತಪ್ಪಿತಸ್ಥರಿಗೆ ಕಾನೂನು ರೀತ್ಯಾ ಶಿಕ್ಷೆ ಕೊಟ್ಟು, ಈ ಘಟನೆಯಲ್ಲಿ ತೊಂದರೆಗೊಳಗಾದವರಿಗೆ ತಕ್ಷಣ ಪರಿಹಾರ ಕೊಡಬೇಕೆಂದು ಸರ್ಕಾರದಲ್ಲಿ ಒತ್ತಾಯಮಾಡಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಈಗ ಮಂತ್ರಿಗಳಿಂದ ಉತ್ತರ.

ಶ್ರೀ ಜಿ. ಮಾದೇಗೌಡ.— ಅಧ್ಯಕ್ಷರೆ,...

ಅಧ್ಯಕ್ಷರು.— ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೆ, ಅವರು ಐದು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.— ನಾನು ಮೊದಲು ಎರಡುತಾಸು ಅವಕಾಶ ಕೊಡುತ್ತೇನೆಂದು ಹೇಳಿ, ಸುಮಾರು ಮೂರುಕಾಲು ತಾಸುವರೆಗೆ ಮಾತನಾಡಲಿಕ್ಕೆ ತಮಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೆ, ಇಬ್ಬರು ಸಿಗ್‌ನೆಟರೀಸ್ ಇದ್ದಾರೆ, ಅವರು ಮಾತ್ರ ಮಾತನಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.— ನಾನು ನಿಮ್ಮ ಮಾತೇ ಕೇಳಬೇಕೆ. ನಮ್ಮ ಮಾತು ನೀವು ಕೇಳುವುದು ಬೇಡವೆ ? ಈಗ ಸಾಧ್ಯವಿಲ್ಲ, ದಯವಿಟ್ಟು ಸಹಕಾರ ಕೊಡಿ, ನಾನು ನಿಮಗೆ ಸಹಕಾರ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಸಿಗ್‌ನೆಟರೀಸ್ ಮಾತ್ರ ಮಾತನಾಡಲಿ.

ಅಧ್ಯಕ್ಷರು.—ಎರಡು ತಾಸು ಅವಕಾಶ ಕೊಡುತ್ತೇನೆಂದು ಹೇಳಿ ಮೂರುಕಾಲು ತಾಸು ಅವಕಾಶ ಕೊಟ್ಟಿದ್ದೇನೆ. ದಯಮಾಡಿ ತಾವು ಕುಳಿತುಕೊಳ್ಳಬೇಕು. ಸೋಮವಾರ ನಾನು ಅವಕಾಶ [illegible]ೇನೆ, ಈಗ ದಯಮಾಡಿ ಕುಳಿತುಕೊಳ್ಳಬೇಕು, ಈಗ ಮಂತ್ರಿಗಳು ಉತ್ತರ ಹೇಳಲಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೆ, ಈಗ ಇಬ್ಬರು ಸಿಗ್ನೆಟರೀಸ್ ಮಾತ್ರ ಮಾತನಾಡಲಿ.

(ಗೊಂದಲ)

ಶ್ರೀ ಎಂ. ರಘುಪತಿ.— ಲೋಕಸಭೆಯಲ್ಲಿ ಮೂರುಜನರ ಮೇಲೆ ಮಾತನಾಡುವುದಿಲ್ಲ...

(ಗೊಂದಲ)

ಶ್ರೀಮತಿ . ಕೆ. ಎಸ್. ನಾಗರತ್ನಮ್ಮ.— ಹೊಸದು ಏನಾದರೂ ಮಾಡುವುದು ಇದ್ದರೆ ಮಾಡೋಣ...

(ಗೊಂದಲ)

ಶ್ರೀ ಎಂ. ರಘುಪತಿ.— ಲೋಕಸಭೆಯಲ್ಲಿ ೬೦ ಜನ ಸಿಗ್ನೆಟರೀಸ್ ಇರುತ್ತಾರೆ, ಅಷ್ಟು ಜನರು ಮಾತನಾಡಲಿಕ್ಕೆ ಆಗುತ್ತದೆಯೋ, ತಾವು ಅಧ್ಯಕ್ಷರಾಗಿದ್ದವರು ತಾವೇ ಹೇಳಿ.

ಶ್ರೀಮತಿ ಕೆ, ಎಸ್. ನಾಗರತ್ನಮ್ಮ.— ನಮಗೂ ಗೊತ್ತಿದೆ ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೆ, ಅವರು ಒಂದೇ ಒಂದು ರೆಫರೆನ್ಸ್ ಮಾಡುತ್ತಾರೆ.

(ಗೊಂದಲ)

ಅಧ್ಯಕ್ಷರು.— ಅವರು ಅನಂತರ ಕ್ಲಾರಿಫಿಕೇಷನ್ ಕೇಳಲಿ. ದಯಮಾಡಿ ಈಗ ಕುಳಿತುಕೊಳ್ಳಬೇಕು.

ನಾನು ಮೊದಲೇ ಹೇಳಿದ್ದೇನೆ. ೨ ತಾಸು ಚರ್ಚೆಗೆ ಅವಕಾಶ ಕೊಡುತ್ತೇನೆಂದು ಆದರೂ ಸುಮಾರು ಮೂರೂಕಾಲು ಗಂಟೆಕಾಲ ಅವಕಾಶವನ್ನು ಕೊಟ್ಟಿದ್ದೇನೆ. ಸೋಮವಾರದ ದಿವಸ ಮಾನ್ಯ ಸದಸ್ಯರಾದ ಉಮರಬ್ಬನವರು ಎಷ್ಟು ಹೊತ್ತು ಬೇಕಾದರೂ ಮಾತನಾಡಲಿ. ಮಾನ್ಯ ಮಂತ್ರಿಗಳನ್ನು ಈಗ ಉತ್ತರ ಹೇಳುವುದಕ್ಕೆ ಕರೆದಿದ್ದೇವೆ. ಅವರು ಉತ್ತರವನ್ನು ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಏತಕ್ಕೆ ಹಾಗೆ ಡಿಫೆಂಡ್ ಮಾಡುತ್ತಿದ್ದೀರಿ ?

ಅಧ್ಯಕ್ಷರು.—ಮಾನ್ಯ ಖರ್ಗೆಯವರೆ, ಈಗ ಮಾನ್ಯ ಉಮರಬ್ಬನವರಿಗೆ ಅವಕಾಶವನ್ನು ಕೊಟ್ಟರೆ ಬೇರೆ ಸದಸ್ಯರಿಗೂ ಕೊಡಬೇಕಾಗುತ್ತದೆ. ಬೇರೆಯವರೂ ಕೇಳುತ್ತಾರೆ. ಆದ್ದರಿಂದ ನಾನು ಯಾರಿಗೂ ಅವಕಾಶವನ್ನು ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ತಮ್ಮ ಡಿಸ್ಕ್ರಿಷನ್‌ಗೆ ಬಿಟ್ಟಿದ್ದು. ಯಾರ್ಯಾರಿಗೆ ಎಷ್ಟೆಷ್ಟು ಅವಕಾಶ ಕೊಡುತ್ತೀರೋ ಕೊಡಿ.

ಅಧ್ಯಕ್ಷರು.—ಅದು ಸಾಧ್ಯವೇ ಇಲ್ಲ. ಈಗ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ ಕೇಳಿ.

ಶ್ರೀ ಬಿ. ರಾಚಯ್ಯ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕಿಯವರು ಪಾವಗಡದಲ್ಲಿ ನಡೆದಂಥ ಹೀನ ಕೃತ್ಯದ ವಿಚಾರದಲ್ಲಿ ಸಭೆಯ ಗಮನವನ್ನು ಸೆಳೆಯತಕ್ಕ ಸಂದರ್ಭದಲ್ಲಿ ಈ ದೇಶದಲ್ಲಿ, ಅದರಲ್ಲೂ ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಒಬ್ಬ ಹೆಣ್ಣುಮಗಳ ಮೇಲೆ ನಡೆದಂಥ ಅತ್ಯಾಚಾರದ ಬಗ್ಗೆ, ಅನ್ಯಾಯದ ಬಗ್ಗೆ ಅತ್ಯಂತ ಗಂಭೀರವಾಗಿ, ಘನತೆಯಿಂದ ಸಭೆಯ ಗಮನಕ್ಕೆ ತಂದಿದ್ದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಬಹುಶಃ ಇಂಥ ಘಟನೆಗಳು ನಡೆಯದ ರೀತಿಯಲ್ಲಿ ನೋಡಿಕೊಳ್ಳಬೇಕೆಂಬ ದೃಷ್ಟಿಯಿಂದ ಈ ವಿಷಯವನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ನಾನು ಈ ವಿಷಯಕ್ಕೆ ಸಂಬಂಧಪಟ್ಟಂತೆ ಸುಮಾರು ೧೦–೧೨ ಜನ ಮಾನ್ಯ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಕೇಳಿದ್ದೇನೆ. ಇದರ ಬಗ್ಗೆ ಎಷ್ಟು ಹೇಳಬೇಕು ಮತ್ತು ಎಷ್ಟರಮಟ್ಟಿಗೆ ಈ ಸಭೆಯ ಒಂದು ಗಾಂಭೀರ್ಯತೆಯನ್ನು ಉಳಿಸಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು ಅದರ ಪ್ರಕಾರ ಸಾಧ್ಯ

ವಾದಷ್ಟೂ ಪ್ರಯತ್ನ ಮಾಡುತ್ತೇನೆ ಮಾನ್ಯ ಸದಸ್ಯರೂ ಕೂಡ ಅದೇ ರೀತಿಯಲ್ಲಿ ಮಾತನಾಡಿದ್ದಾರೆ. ಅದರಲ್ಲಿಯೂ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವಾಗ ಪತ್ರಿಕೆಗಳಲ್ಲಿ ವರದಿಯಾಗಿರತಕ್ಕ ವಿಚಾರ ಸರಿಯೇ ಎನ್ನತಕ್ಕ ರೀತಿಯಲ್ಲಿ ಕೂಡ ಹೇಳಿದ್ದಾರೆ. ಈ ಘಟನೆ ನಡೆದ ಸಂದರ್ಭದಲ್ಲಿ ಅಂದರೆ ೭ನೇ ತಾರೀಖು ನಾನೂ ಮತ್ತು ಆ ಜಿಲ್ಲೆಯ ಮಂತ್ರಿಗಳಾದ ಶ್ರೀಮಾನ್ ವೀರಣ್ಣನವರೂ ಬೇರೆ ಒಂದು ಕಾರಿನಲ್ಲಿ ಆ ಸ್ಥಳಕ್ಕೆ ಧಾವಿಸಿ ನೋಡಿದಾಗ ಅಲ್ಲಿಯ ಪರಿಸ್ಥಿತಿ ಉಲ್ಬಣವಾಗಿತ್ತು. ಅಲ್ಲಿಯ ಜನರು ಯಾರೂ ಸಮಾಧಾನಕರವಾಗಿರಲಿಲ್ಲ. ನಾನು ಹೋದಕೂಡಲೇ ಸುಮಾರು ೧ ಸಾವಿರಕ್ಕಿಂತ ಹೆಚ್ಚು ಜನರು ಅಲ್ಲಿಯ ಅತಿಥಿ ಗೃಹದೊಳಕ್ಕೆ ಬಂದು ನಮ್ಮ ಹೇಳಿಕೆಯನ್ನು ತಾವು ಕೇಳಬೇಕೆಂದು ಹೇಳಿದ ಸಂದರ್ಭದಲ್ಲಿ ನಾನು ಅವರಿಗೆ ಹೇಳಿದೆ, ನೀವು ಸ್ವಲ್ಪ ಸಮಯ ಇರಿ, ನಾನು ಮೊದಲು ಗಾಯಾಳುಗಳನ್ನೂ, ಪದ್ಮಮ್ಮನನ್ನೂ ಮತ್ತು ಆಕೆಯ ಗಂಡನನ್ನೂ ನೋಡಿಕೊಂಡು ಬರುತ್ತೇನೆ ಅನಂತರ ನೀವು ಹೇಳುವುದನ್ನು ಕೇಳುತ್ತೇನೆಂದು ಎಷ್ಟು ಹೇಳಿದರೂ ಅವರು ಅದಕ್ಕೆ ಅವಕಾಶವನ್ನು ಕೊಡದೆ ಈಗಲೇ ನಮ್ಮ ಮಾತನ್ನು ಕೇಳಬೇಕೆಂದು ಹಠ ಹಿಡಿದರು. ಈಘಟನೆಯ ಬಗ್ಗೆ ಆ ಜನರು ತಮ್ಮ ತೀವ್ರ ಆತಂಕವನ್ನು ವ್ಯಕ್ತಪಡಿಸಿದ್ದರಿಂದ ಮತ್ತು ತೀವ್ರ ಪ್ರತಿಭಟನೆಯನ್ನು ಮಾಡಿದ್ದರಿಂದ ನಾನು ಆ ಜನಗಳ ಮುಂದಾಳುಗಳನ್ನು ಕರೆದು ನೀವು ಈ ಜನರನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು ನನ್ನ ಜೊತೆ ಮಾತನಾಡುವುದಾದರೆ ಆಗಬಹುದೆಂದು ಹೇಳಿದೆ ಅವರು ಅದಕ್ಕೆ ಒಪ್ಪಿದಾಗ ಅವರು ಹೇಳಿದ್ದನ್ನೆಲ್ಲಾ ನಾನೂ ಮತ್ತು ವೀರಣ್ಣನವರೂ ಕೇಳಿದೆವು. ಈ ಘಟನೆಯ ಬಗ್ಗೆ ವಿವರವನ್ನು ತಿಳಿದಾಗ ಮತ್ತು ಅಲ್ಲಿನ ಪರಿಸ್ಥಿತಿಯನ್ನು ನಾನು ಗಮನಿಸಿದಾಗ ನನಗೆ ಏನು ಅನಿಸಿತು ಎಂದರೆ ಮೇಲ್ನೋಟಕ್ಕೇ ಈ ಪೊಲೀಸರು ಬಹಳ ದುಡುಕಿದ್ದಾರೆ, ಅವರು ಗೋಲಿಬಾರನ್ನು ಮಾಡಬಾರದಿತ್ತು, ಮಾಡಿದ್ದಾರೆ, ಇದರಿಂದಾಗಿ ಜನರು ಸತ್ತಿದ್ದಾರೆ, ಅದಕ್ಕೋಸ್ಕರ ಈ ಜನರು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿದ್ದಾರೆ ಎಂದು ನನಗೆ ಮನದಟ್ಟಾಯಿತು. ನನಗೂ ಕೂಡ ಮಾನವೀಯತೆ ಮತ್ತು ಹೃದಯ ಇರುವುದರಿಂದ ಆ ಜನರು ವ್ಯಕ್ತಪಡಿಸಿದ ಅಭಿಪ್ರಾಯ ಸರಿ ಎಂದು ತಿಳಿದುಕೊಂಡೆ ಏಕೆಂದರೆ ನನಗೂ ಕೂಡ ಮಾನವೀಯತೆ ಎಂಬುದು ಇದೆ, ಹೃದಯ ಇದೆ, ನಾನೂ ಕೂಡ ಬಂಧು ಬಳಗದಲ್ಲಿ ಬೆಳೆದಿದ್ದೇನೆ. ಆದ್ದರಿಂದಲೇ ಆ ಜನರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ಬಹುಶಃ ಅವರು ಕೇಳಿದಂಥ ರೀತಿಯಲ್ಲಿ ಅವತ್ತೇ ನಾನು ಉತ್ತರ ಹೇಳಿದ್ದೇನೆ. ಅವೊತ್ತು ಗೋಲಿಬಾರ್ ಆಗಬಾರದಾಗಿತ್ತು. ಗೋಲಿಬಾರ್ ನಡೆದಿರುವ ವಾತಾವರಣದಲ್ಲಿ ಸಂಬಂಧಪಟ್ಟವರನ್ನು ಅಮಾನತ್ತಿನಲ್ಲಿ ಇಡಿ ಎಂದು ಹೇಳಿದರು. ಅದನ್ನು ನಾನು ಒಪ್ಪಿಕೊಂಡೆ, ನ್ಯಾಯಾಂಗ ತನಿಖೆ ಮಾಡಬೇಕೆಂದು ಹೇಳಿದರು, ಅದನ್ನು ಒಪ್ಪಿಕೊಂಡೆ, ನೊಂದವರ ಕುಟುಂಬದವರಿಗೆ ಪರಿಹಾರವನ್ನು ಕೊಡಬೇಕೆಂದು ಕೇಳಿದರು, ಅದನ್ನೂ ಕೂಡ ಒಪ್ಪಿಕೊಂಡೆ. ಸಾರ್ವಜನಿಕರು ಬೇರೆ ಬೇರೆ ವರ್ಗದವರು ಯಾರು ಯಾರು ಇದ್ದರು ಅವರೆಲ್ಲರೂ ಸೇರಿದ್ದಂಥ ಸಭೆಯಲ್ಲಿ ಬಹುಶಃ ಈ ವಿಷಯದ ಹಿನ್ನೆಲೆ ಎಲ್ಲವನ್ನು ಕೇಳಿದ್ದೇನೆ. ಅದಾದಮೇಲೆ ಕೃಷಿ ಭವನದಲ್ಲಿಯೂ ಕೂಡ ವಿವರವಾಗಿ ಅಲ್ಲಿರ ತಕ್ಕಂಥವರು ಯಾರು ಯಾರು ಇದ್ದರು ಅವರೆಲ್ಲರನ್ನು ಕೇಳಿ ವಿಚಾರಿಸಿಕೊಂಡು ಬಂದಿದ್ದೇನೆ. ಎಷ್ಟರಮಟ್ಟಿಗೆ ಸತ್ಯಾಂಶ ಇದೆ, ಯಾರು ತಪ್ಪು ಮಾಡಿದ್ದಾರೆ, ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಪೊಲೀಸ್ ಸ್ಟೇಷನ್‌ಗೆ ಹೋಗಿ ಅಲ್ಲಿ ಬಿದ್ದಿರತಕ್ಕಂಥ ಕಲ್ಲುಗಳನ್ನು ಮತ್ತು ಪೊಲೀಸ್ ಸ್ಟೇಷನ್ ಹಿಂಭಾಗದಲ್ಲಿ ಬಿದ್ದಿರುವ ಒಂದು ಮೋಟಾರ್ ಬೈಕನ್ನು ನೋಡಿದ್ದೇನೆ ಪೊಲೀಸ್ ಸ್ಟೇಷನ್ ಸಿಬ್ಬಂದಿವರ್ಗ, ಅವರು ತಮ್ಮ ಕಷ್ಟಸುಖಗಳನ್ನು ಹೇಳಿಕೊಂಡದ್ದು ಮತ್ತು ಗೋಲಿಬಾರ್‌ನಿಂದ ಸತ್ತ ಜನರು, ಅವರ ಕುಟುಂಬ ವರ್ಗದವರನ್ನು ಎಲ್ಲರನ್ನೂ ವಿಚಾರಿಸಿಕೊಂಡು ಬಂದಿರುತ್ತೇನೆ ಈ ದೃಷ್ಟಿಯಿಂದ ಪೊಲೀಸ್ ಇಲಾಖೆ ಏನು ಇದೆ ಅದು ಏನೂ ತಪ್ಪು ಮಾಡಿಲ್ಲ, ಅದು ಮಾಡಿದ್ದೆಲ್ಲ ಸರಿ ಎಂದು ಹೇಳುತ್ತಿಲ್ಲ. ಎಲ್ಲಾ ವಿಧದಲ್ಲೂ ನಾನು ಅವರನ್ನು ಡಿಫೆಂಡ್ ಮಾಡುವುದಕ್ಕೆ ಹೋಗುವುದಿಲ್ಲ. ಎಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ, ಅಲ್ಲಿ ಸರಿಯಾದ ರೀತಿಯಲ್ಲಿ ಪ್ರೋತ್ಸಾಹವನ್ನು ಕೊಟ್ಟುಕೊಂಡು ಬಂದಿದ್ದೇವೆ. ಎಲ್ಲಿ ತಪ್ಪು ಮಾಡಿರುತ್ತಾರೆ, ಎಲ್ಲಿ ತಪ್ಪು ದಾರಿಯಲ್ಲಿ ನಡೆದಿರುತ್ತಾರೆ, ಎಲ್ಲಿ ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಬಂದಿದ್ದಾರೆ ಅಂಥವರ ನಡತೆಯನ್ನು ತಿದ್ದಬೇಕಾದದ್ದು ನಮ್ಮ ಕರ್ತವ್ಯವೆಂದೂ ಕೂಡ ಹೇಳಿ ಬಂದಿದ್ದೇನೆ. ಇಂಥ ಒಂದು ಘಟನೆ ನಡೆದಂಥ ಸಂದರ್ಭದಲ್ಲಿ ನ್ಯಾಯಾಂಗ ತನಿಖೆಯಾಗಬೇಕೆಂದು ಜನರು ಹೇಳಿದ್ದರಿಂದ ಅದನ್ನು ಕೂಡ ಒಪ್ಪಿಕೊಂಡು ಬಂದಿರುತ್ತೇನೆ. ಬಹುಶಃ ಒಪ್ಪಿಕೊಂಡು ಬರದಿದ್ದರೆ ನ್ಯಾಯಾಂಗ ತನಿಖೆ ಏಕೆ ಮಾಡಲಿಲ್ಲವೆಂದು ಇಲ್ಲಿರತಕ್ಕಂಥ ವಿರೋಧಪಕ್ಷದ ಸದಸ್ಯರು ಮತ್ತು

ವಿರೋಧಪಕ್ಷದ ನಾಯಕರು ಹೇಳುತ್ತಿದ್ದರು. ಆದ್ದರಿಂದ ನ್ಯಾಯಾಂಗ ತನಿಖೆಯನ್ನು ಮಾಡಿಸುವುದಾಗಿ ಒಪ್ಪಿಕೊಂಡು ಬಂದಿದ್ದೇನೆ. ಅಲ್ಲಿ ಉಲ್ಬಣ ಸ್ಥಿತಿ ಏತಕ್ಕೆ ಬಂದಿತು ಎಂಬುದರ ಬಗ್ಗೆ ವಿವರವಾಗಿ ಹೇಳುತ್ತೇನೆ. ಅಲ್ಲಿ ಒಂದು ಶನಿಮಹಾತ್ಮಾದೇವರ ದೇವಸ್ಥಾನವಿದೆ. ಅದಕ್ಕೆ ಹಲವಾರು ಮುಖಂಡರುಗಳು ಇದ್ದಾರೆ. ಬೇರೆ ಬೇರೆ ಜನರು ಬರುತ್ತಾರೆ ಹೋಗುತ್ತಾರೆ. ಅಲ್ಲಿ ಎಷ್ಟೋ ದುಡ್ಡು ವಸೂಲಾಗುವುದು ಇದೆ. ಇದರ ಬಗ್ಗೆಯೂ ಕೇಳಿದ್ದಾರೆ. ಅಲ್ಲಿ ಜೂಜುಕಟ್ಟೆ ಜಾಸ್ತಿ ನಡೆಯುತ್ತಿದ್ದು, ಎಸ್.ಬಿ. ಓಗಳು ಕೂಡ ಜೂಜುಕಟ್ಟೆ ಮಾಡತಕ್ಕಂಥ ಸಂದರ್ಭ ಇತ್ತು, ಪೋಲೀಸ್‌ನವರು ಹೇಳತಕ್ಕಂಥ ರೀತಿಯಲ್ಲಿ ಇದನ್ನು ಬಂದೋಬಸ್ತು ಮಾಡುವುದಕ್ಕೆ ಹೊರಟಿದ್ದೆವು ಎಂದು ಹೇಳಿದ್ದಾರೆ. ಅವರ ಹೇಳಿಕೆ ಹೀಗಿದ್ದರೂ ಪೋಲೀಸ್‌ನವರ ವಿರುದ್ಧವಾಗಿ ದೂರು ಹೊರಗಡೆಯಿಂದ ಬರುವ ಸಂದರ್ಭವೂ ಕೂಡ ಇದೆ.

ಶ್ರೀ ಕೆ.ಎಚ್. ಪಾಟೀಲ್.—ಅಂದರೆ ಅವರನ್ನು ಮೇಲ್‌ಮಾಡಿ ಅವರಿಗೆ ಎನ್‌ಕರೇಜ್ ಮಾಡುತ್ತಿದ್ದೀರಾ ಹೇಳಿ ? ಜೂಜುಕಟ್ಟೆ ಎಲ್ಲಿಲ್ಲ. ವಿಧಾನಸೌಧ ಲೆಜಿಸ್ಲೇಟರ್ ಹೋಮ್‌ನಲ್ಲಿ ಇಲ್ಲವೇ ? ಅದನ್ನು ಬಂದ್‌ಮಾಡಿ, ನಿಮಗೆ ಅಧಿಕಾರ ಇದೆ, ಹಿಡಿದುಹಾಕಿ.

ಶ್ರೀ ಬಿ. ರಾಚಯ್ಯ.—ಏನು ಮಾಡುವುದು ಒಬ್ಬರು ಹೆಂಡತಿಯನ್ನು ಮಾಡಿಕೊಂಡಿರುವಾಗ ಎರಡನೇ ಹೆಂಡತಿಯನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೂ ಏನು ಮಾಡಲಿ ಸ್ವಾಮಿ ಈಗ ನಾನು ಸರಿಯಾಗಿ ಇರಬೇಕೆಂದು ಹೇಳುವಾಗ ಎಲ್ಲರೂ ಸರಿಯಾಗಿ ಇರಬೇಕು. ವಿಧಾನ ಸೌಧ, ಶಾಸಕರ ಭವನ ತಮ್ಮ ಆಡಳಿತದಲ್ಲಿಯೂ ಇತ್ತು. ನೀವು ಈಗ ಇದೆಲ್ಲ ಮಾಡಿ ಎಂದು ಹೇಳಿದರೆ ನಾನು ಮಾಡಲಿಕ್ಕೆ ತಯಾರಾಗಿದ್ದೇನೆ. ನನ್ನನ್ನು ವಾಪಸ್ ಕಳುಹಿಸಿದರೂ ಚಿಂತೆ ಇಲ್ಲ. ನಾನು ತಯಾರಾಗಿದ್ದೇನೆ.

ಶ್ರೀ ಕೆ.ಎಚ್, ಪಾಟೀಲ್.—ಅದು ನಿಮ್ಮ ಕಕ್ಷೆಯಲ್ಲಿಯೇ ಇರುತ್ತದೆ. ಏನುಬೇಕಾದರೂ ಮಾಡಿ.

ಶ್ರೀ ಬಿ. ರಾಚಯ್ಯ.—ಗುಪ್ತ ದಳವನ್ನು ಇಟ್ಟರೆ ಏತಕ್ಕೆ ಇಟ್ಟಿದ್ದೀರಿ ಎಂದು ಕೇಳುತ್ತಾರೆ. ನಾನಾರೀತಿ ಇರುತ್ತದೆ. ನಾವು ಸ್ವತಂತ್ರವಾಗಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅಡ್ಡಿ ಇದೆ ಎನ್ನುವ ವಿಷಯ ಈಗಾಗಲೇ ಇಲ್ಲಿ ಪ್ರಸ್ತಾಪವಾಗಿರುತ್ತದೆ.

ನಮ್ಮ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅಡ್ಡಿ ಬರುತ್ತಾರೆಂಬ ವಿಷಯ ಹಿಂದಿನ ಸಭೆಯಲ್ಲಿ ಇಲ್ಲಿ ಪ್ರಸ್ತಾಪವಾಗಿದೆ.

ಶ್ರೀ ಎಂ.ಎಸ್. ಕೃಷ್ಣನ್.—ಅವರು ಮಾಡಿ ಅನ್ನುತ್ತಾರೆ. ಮಾಡಿ ಎಂದರೆ ಮಾಡುತ್ತೇವೆ ಅನ್ನಿ. ಅವರು ಮಾಡಿ ಎಂದು ಹೇಳಿದರೂ. ನೀವು ಮಾಡುವುದಿಲ್ಲವೇ ?

ಅಧ್ಯಕ್ಷರು.—ಅಂಥದ್ದು ನಡೆಯುತ್ತಿದ್ದರೆ.........

ಶ್ರೀ ಬಿ. ರಾಚಯ್ಯ.—ಇಂಥ ಕಡೆ ಇದೆ ಎಂದು ಹೇಳಿದರೆ ಮಾಡುವುದಕ್ಕೆ ಸಾಧ್ಯ ಇದೆ.

ಶ್ರೀ ಎಂ.ಎಸ್. ಕೃಷ್ಣನ್.—ನಡೆಯುತ್ತಿದ್ದರೆ ಬಂದೋಬಸ್ತ್ ಮಾಡಿ.

ಶ್ರೀ ಬಿ. ರಾಚಯ್ಯ.—ಆ ಕಡೆ ಕುಳಿತಿರತಕ್ಕ ವಿರೋಧ ಪಕ್ಷದ ನಾಯಕಿಯವರ ಬಗ್ಗೆ ನಾನು ಅತ್ಯಂತ ಗೌರವ ಇಟ್ಟುಕೊಂಡು ಬಂದಿರುವವನು.

ಶ್ರೀ ಕೆ.ಹೆಚ್. ಪಾಟೀಲ್.—ಈ ಕಡೆ ಇದ್ದವರು ತಪ್ಪು ಮಾಡಿದರೆ ಕ್ರಮ ಮಾಡಲಿ, ಆ ಕಡೆಯವರು ಮಾಡಿದರೆ ಕ್ರಮ ಮಾಡುವುದು ಬೇಡವೆಂದರೆ ಹೇಗೆ ? ಅವರಿಗೆ ಎದೆಗಾರಿಕೆ ಇದ್ದರೆ ಆ ಕಡೆಯವರು ತಪ್ಪು ಮಾಡಿದಾಗಲೂ ಕ್ರಮ ಮಾಡಲಿ,

ಶ್ರೀ ಬಿ. ರಾಚಯ್ಯ.—ಯಾರು ತಪ್ಪು ಮಾಡಿದರೂ ಕ್ರಮ ಮಾಡಬೇಕು. ಶಾಸನಸಭಾ ಸದಸ್ಯರು ಎಲ್ಲರೂ ಒಟ್ಟಾಗಿ ಸೇರಿದಾಗ ಈ ಕೆಲಸ ಮಾಡುವುದಕ್ಕೆ ಸಾಧ್ಯ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆಯೇ ಹೊರತು ಅವರು ತಂದಿರತಕ್ಕ ವಿಷಯ ಗಂಭೀರವಾದ ವಿಷಯ, ಬಹಳ ಮನನೊಂದು ತಂದಿದ್ದಾರೆ. ಅದಕ್ಕೋಸ್ಕರ ಇಂಥ ಗಂಭೀರವಾದ ಸಂದರ್ಭದಲ್ಲಿ ನಾನು ಹೋಗಿ ಪ್ರತ್ಯಕ್ಷನಾಗಿ ನೋಡಿ ಜನರಿಂದ ಮಾಹಿತಿ ಸಂಗ್ರಹ ಮಾಡಿಕೊಂಡು ಬಂದಿದ್ದೇನೆ. ಬರೀ ಪೋಲೀಸ್ ವರದಿ ತರಿಸುವುದ

ರಿಂದ ಇದು ಹದ್ದುಬಸ್ತು ಆಗುವುದಿಲ್ಲವೆಂದು ನಾನು ಹೋಗಿ ನೋಡಿ ಬಂದಿದ್ದೇನೆ. ಆ ಹೇಳಿಕೆಯನ್ನು ಕೊಟ್ಟೆ. ಮಾನ್ಯ ಮುಖ್ಯ ಮಂತ್ರಿಗಳು ಪೋಲೀಸ್ ಆಫೀಸರ್ಸ್ ಕಾನ್‌ಫರೆನ್ಸ್‌ನಲ್ಲಿ ಹೇಳಿದರು, ಕಳೆದ ವರ್ಷ ನೀವು ಮಾಡಿರತಕ್ಕ ಕೆಲಸಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೆ, ಆದರೆ ಆ ಈಗ ಒಂದು ಪರಿಸ್ಥಿತಿಯಲ್ಲಿ ಇಲ್ಲ ಎಂದು. ಅಲ್ಲಿ ನಡೆದಿರತಕ್ಕ ಘಟನೆಯನ್ನು ನೋಡಿದಾಗ ಬಹಳ ದುಃಖವಾಗುತ್ತದೆ. ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ ೧೨೭-೨ರ ಪ್ರಕಾರ ಇಂಥ ಉದ್ರಿಕ್ತ ಸಂದರ್ಭಗಳಲ್ಲಿ ಪರಿಸ್ಥಿತಿಯನ್ನು ತಹಬಂದಿಗೆ ತರುವುದಕ್ಕೆ ಕೊನೆಯ ಅಸ್ತ್ರವಾಗಿ ಗುಂಡನ್ನು ಹಾರಿಸತಕ್ಕ ಅವಕಾಶ ಪೋಲೀಸ್ ಅಧಿಕಾರಿಗೆ ಇದೆ. ಆದರೆ ಸಾಧ್ಯವಾದ ಮಟ್ಟಿಗೆ ಈ ಒಂದು ಅಧಿಕಾರ ಇದೆ ಎಂದು ಉಪಯೋಗಿಸಬೇಡಿ, ಕೊನೆಯ ಅಸ್ತ್ರವಾಗಿ ಇದನ್ನು ಉಪಯೋಗಿಸಿ ಎಂದು ಹೇಳಿಕೊಂಡು ಬಂದಿದ್ದೇವೆ. ಅನಿವಾರ್ಯವಾಗಿ, ನಾವು ಕಡಿಮೆ ಸಂಖ್ಯೆಯಲ್ಲಿದ್ದೆವು, ಹೆಚ್ಚು ಕಲ್ಲು ತೂರಾಟವಾಯಿತು, ಹೇಳಿದರೂ ಕೇಳಲಿಲ್ಲ. ಕೊನೆಗೆ ನಮ್ಮ ಪ್ರಾಣ ಸಂರಕ್ಷಣೆ ಮಾಡಿಕೊಳ್ಳುವುದಕ್ಕೆ ಗುಂಡು ಹಾರಿಸಿದ್ದೇವೆಂದು ಪೋಲೀಸರು ಹೇಳಿದ್ದಾರೆ, ಅಲ್ಲಿ ಗುಂಡು ಹಾರಿಸಿ, ಜನರು ಅದಕ್ಕೆ ಬಲಿಯಾಗಿದ್ದಾರೆ. ಅದನ್ನು ನೋಡಿದ ಬಳಿಕ ನನಗೆ ಆ ವಿಷಯದಲ್ಲಿ ಕರುಣೆ ಬರಲಿಲ್ಲ. ನಾನು ಅದನ್ನು ಜನಗಳ ಹತ್ತಿರ ಹೇಳಿದೆ. ಚಂದ್ರಗುತ್ತಿಯಲ್ಲಿ ಬಟ್ಟೆ ಬಿಚ್ಚಿದವರಿಗೆ ಪ್ರಾಣವನ್ನಾದರೂ ಉಳಿಸಿದರು, ಇಲ್ಲಿ ಅಷ್ಟರಮಟ್ಟಿಗಾದರೂ ಮಾಡಬೇಕಾಗಿತ್ತು ಎಂದು. ಮನನೊಂದು ಹೇಳಿದ್ದೇನೆ. ಹೆಣ್ಣುಮಕ್ಕಳ ಬಗ್ಗೆ ಈ ರೀತಿ ನಡೆದುಕೊಂಡಿದ್ದಾರೆಂದು ಹೇಳಿದರು. ಅವರಿಗೆ ಹೊಡೆದಿರತಕ್ಕದ್ದು ಸರಿಯಲ್ಲ. ಯಾರೇ ಆಗಿರಲಿ, ಅವರು ಒಳ್ಳೆಯವರೋ, ಕೆಟ್ಟವರೋ, ಹೆಣ್ಣು ಮಕ್ಕಳನ್ನು ೬ ಗಂಟೆಯ ನಂತರ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಬರಬಾರದು. ನಾವು ಗಂಡ ಹೆಂಡಿರು ಎಂದರೂ ಹಿಂಸೆ ಕೊಟ್ಟಿದ್ದಾರೆ. ಅಲ್ಲಿದ್ದ ಕಾನ್‌ಸ್ಟೇಬಲ್‌ಗಳು ಮಾಡಿದ್ದಲ್ಲದೆ ಸಬ್ ಇನ್ಸ್‌ಪೆಕ್ಟರ್ ಕೂಡ ಹೊಡೆದಿದ್ದಾರೆ, ಇನ್ಸ್‌ಪೆಕ್ಟರ್ ಕೂಡ ಅದೇ ರೀತಿ ಹಿಂದುಮುಂದು ನೋಡದೆ ಹೊಡೆದಿದ್ದಾರೆ. ಇಬ್ಬರು ಹಿರಿಯ ಅಧಿಕಾರಿಗಳು ಇದ್ದುಕೊಂಡು ಡಿವೈಎಸ್‌ಪಿ. ಗಾಗಲಿ, ಎಸ್ ಪಿ.ಗಾಗಲಿ ಈ ರೀತಿ ನಡೆಯುತ್ತಿದೆ, ನಮಗೆ ಬೆಂಬಲ ಬೇಕೆಂದು ತಿಳಿಸಲಿಲ್ಲ. ಬಹುಶಃ ಇವರು ಕುಡಿದ ಅಮಲಿನಲ್ಲಿ ಈ ರೀತಿ ಮಾಡಿದ್ದುದಾಗಿ ಎಂದು ಅನ್ನಿಸುತ್ತದೆ, ಹೆಣ್ಣು ಮಗಳನ್ನು ಗಂಡ ಇದ್ದಾರೆ ಎಂದರೂ ತಳಿಸಿರತಕ್ಕದ್ದು ನೋಡಿದಾಗ ಅವರು ಕಾನೂನು ಬಿಟ್ಟು ಹೋಗಿದ್ದಾರೆ. ತಮ್ಮಲ್ಲಿ ಅಸ್ತ್ರ ಇದೆ ಎಂದು ಈ ರೀತಿ ನಡೆದುಕೊಂಡಿರತಕ್ಕದ್ದು ಸರ್ವಥಾ ಸರಿಯಲ್ಲವೆಂದು ಅವರ ಹೇಳಿಕೆಗಳನ್ನು ಒಪ್ಪದೆ ನೀವು ಮಾಡಿರುವುದು ತಪ್ಪಾಗಿದೆ ಎಂದು ಹೇಳಿದ್ದೇನೆ. ನಾವು ಮಾಡುವ ಕೆಲಸವನ್ನು ನೀವು ಏತಕ್ಕೆ ಮಾಡಿದ್ದೀರೆಂದರೆ ಅದು ನನ್ನ ತಪ್ಪಲ್ಲ, ವಿರೋಧ ಪಕ್ಷದಲ್ಲಿರುವವರು ಹೇಳಿದ ಮೇಲೆ ಒಪ್ಪಿಕೊಳ್ಳಬಹುದೆಂದು ಹೇಳುವುದು ನನ್ನಲ್ಲಿ ಇಲ್ಲ, ಅಧಿಕಾರಿಗಳು ಯಾರು ಯಾರು ತಪ್ಪು ಮಾಡಿದ್ದಾರೆ ಅವರನ್ನೆಲ್ಲಾ ಸಸ್ಪೆಂಡ್ ಮಾಡಿದ್ದೇವೆ. ಅವರನ್ನು ಏತಕ್ಕೆ ಸಸ್ಪೆಂಡ್ ಮಾಡಿದಿರಿ ಎಂದು ಪಾವಗಡದಲ್ಲಿ ಕೆಲವು ಜನರು ಕೇಳಿದರು.

ಈ ಪೋಲೀಸ್ ಆಫೀಸರ್ಸ್ ಸಾಧ್ಯವಾದಮಟ್ಟಿಗೆ ಹಣ ಸುಲಿಗೆ ಮಾಡುವ ಕೃತ್ಯ ಮಾಡಿದ್ದಾರೆ ಎಂದು ಅಲ್ಲಿಯ ಜನರು ಹೇಳಿದರು. ಮಡಕಶಿರಾ ಮತ್ತಿತರ ಕಡೆಗಳಿಂದ ಸಂತೆಗೆ ಜನ ಬರುತ್ತಾರೆ. ಅವರ ಹತ್ತಿರ ಒಂದಲ್ಲ ಒಂದು ರೀತಿಯಲ್ಲಿ ಪೋಲೀಸರು ಹಣ ಸುಲಿಗೆ ಮಾಡುತ್ತಾರೆ ಎಂದು ಹೇಳಿದರು. ಆದ್ದರಿಂದ ಅವರ ಮನೆಯನ್ನು ಶೋಧನೆ ಮಾಡಬೇಕು ಎಂದು ಅವತ್ತು ಹೇಳಿದರು, ನಾನು ಅದಕ್ಕೆ ಶೋಧನೆ ಮಾಡಬೇಕೆಂದು ಐ.ಜಿ.ಯವರಿಗೆ ಹೇಳಿದ್ದೇನೆ. ಕೆಲವು ಬುದ್ಧಿವಂತರು ಬೀಗ ಹಾಕಿ ಶಾಸಕರು ಯಾರುಯಾರು ಬೆಂಬಲ ಕೊಡುತ್ತಾರೆ ಅವರನ್ನು ಕೇಳುವುದಕ್ಕೆ ಇಲ್ಲಿಗೆ ಬಂದರು. ಜನ ಆ ಕೆಲಸ ಮಾಡಬೇಕೆಂದು ಹೇಳುವಾಗ ನಾನು ಹಿಂದುಮುಂದು ನೋಡದೆ ಮಾಡಿ ಎಂದು ಹೇಳಿದ್ದೇನೆ ಸೆಕ್ಷನ್ ೩೦೭ರ ಪ್ರಕಾರ ಕೇಸ್ ಏತಕ್ಕೆ ದಾಖಲೆ ಮಾಡಲಿಲ್ಲ, ಡಿ.ವೈ. ಎಸ್.ಪಿ ಯವರನ್ನು ಸಸ್ಪೆಂಡ್ ಏತಕ್ಕೆ ಮಾಡಲಿಲ್ಲ ಎಂದು ಕೇಳಿದರು ಮಾನ್ಯ ವೆಂಕಟರಾಮಯ್ಯನವರು ಲಾಯರ್ ಮಾಡತಕ್ಕ ವಾದವನ್ನೇ ಇಲ್ಲೂ ಮಾಡುತ್ತಿದ್ದಾರೆ. ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಮರ್ಡರ್ ಮಾಡಿದ್ದರೆ ಯಾರಾದರೂ ಅಂಥ ಕಕ್ಷಿದಾರರ ಕೇಸ್ ತೆಗೆದುಕೊಂಡು ಅವರು ಮರ್ಡರ್ ಮಾಡಿಲ್ಲ ಎಂದು ಹೇಳುತ್ತಾರೆ. ಆದರೆ ಇಲ್ಲೂ ಕೂಡ ಪೇಪರ್‌ನಲ್ಲಿ ಬಂದಿದ್ದನ್ನು ನೋಡಿಕೊಂಡು ವೆರಿಫೈ ಮಾಡದೆ ಹೇಳಿದ್ದಾರೆ. ನನ್ನ ಪಿ.ಎ.ಯನ್ನು ನಾನು ಕರೆದುಕೊಂಡು ಹೋಗಿದ್ದೆ. ಒಳ್ಳೆಯ ಹುಡುಗ ಅವನು. ಅವನ ಹತ್ತಿರ ಸರಿಯಾಗಿ ಹೇಳಿಕೆ ತೆಗೆದುಕೊಳ್ಳಪ್ಪ ಎಂದು ಹೇಳಿ ತೆಗೆಸಿಕೊಂಡಿದ್ದೇನೆ. ಶ್ರೀಮಾನ್ ಲಕ್ಕಪ್ಪನವರು ಕೆಲವು ವಿಷಯಗಳನ್ನು ಸತ್ಯವಾಗಿ ತಿಳಿಸಿದ್ದಾರೆ. ಇರತಕ್ಕದ್ದನ್ನು ವಿಕೃತಗೊಳಿಸಿ ಹೇಳುವುದಕ್ಕೆ ಹೋದಾಗ ಅದು ಪರಿಸ್ಥಿತಿಯನ್ನು

ಇನ್ನೂ ಹದಗೆಡಿಸುತ್ತದೆ. ಆದ್ದರಿಂದ ಮಾನ್ಯ ವೆಂಕಟರಾಮಯ್ಯನವರಲ್ಲಿ ಕೇಳಿಕೊಳ್ಳುತ್ತೇನೆ. ತಾವು ಬಹಳ ಒಳ್ಳೆಯ ಅಡ್ವೋಕೇಟಾಗಿ ಕೆಲಸ ಮಾಡಿದ್ದೀರಿ, ಇಲ್ಲೂ ಕೂಡ ಶಾಸಕರಾಗಿ ಚೆನ್ನಾಗ ಕೆಲಸ ಮಾಡುತ್ತಿದ್ದೀರಿ. ಇಂಥ ಪರಿಸ್ಥಿತಿ ಬಂದಾಗ ಪ್ರಮಾಣಿಸಿ ನೋಡಿ. ಎಂ ಎಸ್. ಕೃಷ್ಣನ್ ಅವರನ್ನು ಕೇಳಿದ್ದರೆ ಅವರಾದರೂ ಹೇಳುತ್ತಿದ್ದರು. ಹೆಣ್ಣುಮಕ್ಕಳ ಬಗ್ಗೆ ಇಷ್ಟು ಜಾಸ್ತಿ ಹೇಳುವಾಗ ನನಗೂ ಕೂಡ ನೋವಾಗಿದೆ. ಇದನ್ನು ಹೇಳುವುದರಿಂದ ಅವರಿಗೆ ಆಪ್ಯಾಯಮಾನವಾಗಿದೆಯೋ ಏನೋ ಗೊತ್ತಿಲ್ಲ. ಏತಕ್ಕೆ ಇದನ್ನು ಹೇಳುತ್ತಿದ್ದೇನೆ ಎಂದರೆ ಈ ದೇಶದಲ್ಲಿ ಶತಮಾನಗಳಿಂದ ಹೆಣ್ಣು ಮಕ್ಕಳಿಗೆ ಅತ್ಯಂತ ಗೌರವ ಸ್ಥಾನ ಕೊಟ್ಟು ಕಾಡಿಸಿದ್ದೇವೆ. ನಮ್ಮ ತಾಯಿಯನ್ನು ಅತ್ಯಂತ ಗೌರವ ದಿಂದ ಕಾಣುತ್ತಿದ್ದೇವೆ. ನಮ್ಮ ಹೆಂಡತಿಯನ್ನು ಅತ್ಯಂತ ಸಂತೋಷದಿಂದ ಗೌರವದಿಂದ ನೋಡುತ್ತಿದ್ದೇವೆ. ಅಕ್ಕತಂಗಿಯನ್ನೂ ಅದೇರೀತಿ ನೋಡುತ್ತಿದ್ದೇವೆ. ಈ ಸಂಸ್ಕೃತಿ ಹಿಂದಿನಿಂದ ನಡೆದುಕೊಂಡು ಬಂದಿದೆ. ಇಂಥ ಘಟನೆ ನಡೆದಾಗ ಏನೋ ನಡೆಯಿತೆಂದು ಶಾಸನಸಭೆಯಲ್ಲಿ, ಹೊರಗಡೆ ಪತ್ರಿಕೆಯಲ್ಲಿ ಪ್ರಚಾರ ಮಾಡಿ ಇನ್ನೂ ಇಂಥದ್ದನ್ನು ಹೆಚ್ಚು ಮಾಡಿದಪಕ್ಷದಲ್ಲಿ ಒಳ್ಳೆಯದನ್ನು ಬಯಸುವು ದಕ್ಕಾಗುವುದಿಲ್ಲ. ಸಾಧ್ಯವಾದ ಮಟ್ಟಿಗೆ ಇಂಥದ್ದನ್ನು ಕಡಿಮೆ ಮಾಡಿ ಸತ್ಯಾಸತ್ಯತೆಯನ್ನು ನೋಡಿ ಕೊಂಡು ಕೆಲಸ ಮಾಡಬೇಕೇ ವಿನಃ ಈ ರೀತಿ ಮಾಡಿದರೆ ಆಗುವುದಿಲ್ಲ. ಆಮೇಲೆ ಒಂದೊಂದಾಗಿ ವಿಷಯಗಳನ್ನು.........

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ.........

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಬಿ. ರಾಚಯ್ಯ.—ನಾನು ಓದಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಸಂಧ್ಯಾ ಸಂಗಾತಿಯಲ್ಲಿ ಬರೆದಿದ್ದಾರೆ.

ಶ್ರೀ ಬಿ. ರಾಚಯ್ಯ.—ಆ ಯಮ್ಮ ಹೇಳಿಕೆ ಕೊಟ್ಟಿರುವುದರಲ್ಲಿ ಹೇಳಿಕೆಗೂ ಕೆಳಗೆ ರುಜು ಹಾಕಿರುವುದಕ್ಕೂ ವ್ಯತ್ಯಾಸ ನೋಡಿ. ಹ್ಯಾಂಡ್‌ರೈಟಿಂಗ್ ನೋಡಿ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಅದನ್ನು ಎಗ್ಸಾಮಿನ್ ಮಾಡಿಸಿ. ಹೆಣ್ಣುಮಕ್ಕಳ ಬಗ್ಗೆ ನಿಮಗಿರುವಷ್ಟೇ ಗೌರವ ನಮಗೂ ಇದೆಯೆಂಬುದನ್ನು ತಿಳಿದುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಇರುವುದನ್ನು ಹೇಳಿದರೆ ಅವರು ಕೋಪ ಮಾಡಿ ಕೊಳ್ಳುತ್ತಾರೆ.

ಶ್ರೀ ಆರ್. ಎನ್. ನಾಯಕ್.—ಪತ್ರಿಕೆಯಲ್ಲಿ ಬಂದಿರುವುದು ಸರಿಯಿದ್ದರೆ ಕ್ರಮ ತೆಗೆದುಕೊಳ್ಳಿ

ಶ್ರೀ ಬಿ. ರಾಚಯ್ಯ.—೩೦೨ರ ಪ್ರಕಾರ ಕೇಸ್ ಹಾಕಬೇಕೆಂದು ಹೇಳಿದ್ದಾರೆ. ಅದನ್ನು ಮಾಡುವುದಕ್ಕೆ ಪ್ರಿಲಿಮಿನರಿ ವಿಚಾರಣೆ ಮಾಡಬೇಕಾಗುತ್ತದೆ. ಎದುರುಗಡೆ ಕೊಲೆ ಮಾಡಿದ್ದರೂ ಅವರನ್ನು ಗಲ್ಲಿಗೇರಿಸುವುದಕ್ಕಾಗುವುದಿಲ್ಲ. ಪ್ರೊಸೀಜರ್ ಪ್ರಕಾರ ಆಗಬೇಕು. ೯೯ ಜನರನ್ನು ಬಿಟ್ಟರೂ ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು ಎಂದು ಜ್ಯುರಿಸ್‌ಪ್ರುಡೆನ್ಸ್ ಹೇಳುತ್ತದೆ. ಆ ದೃಷ್ಟಿಯಿಂದ ವಿಚಾರಣೆ ಮಾಡಿಸಿ ಪ್ರಿಲಿಮಿನರಿಯಾಗಿ ತಪ್ಪಿದೆ ಎಂದು ಗೊತ್ತಾದರೆ ಕೇಸ್ ಹಾಕುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ. ಉಡುಪಿ ತಾಲ್ಲೂಕಿನಲ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ಇಂಥವರು ಹೊಡೆದು ಸಾಯಿಸಿದರು ಎಂದು ಹೇಳಿದಾಗ ಶಾಸನಸಭೆಯಲ್ಲಿ ಆಶ್ವಾಸನೆ ಕೊಟ್ಟಿದ್ದೆ. ಅದರಂತೆ ವಿಚಾರಣೆ ಮಾಡಿಸಿ ೩೦೨ರ ಪ್ರಕಾರ ಕೇಸ್ ಹಾಕಿಸಿ ಕೋರ್ಟಿಗೆ ಹಾಕಿಸಿದ್ದೇವೆ. ನಮ್ಮವರು ತಪ್ಪು ಮಾಡಿದರೆ, ಪೋಲೀಸರು ಕೊಲೆ ಮಾಡಿದರೆ ಯಾವ ಸಂದರ್ಭದಲ್ಲಿ ಕೊಲೆ ಮಾಡಿದರು ಎಂದು ಹೇಳಿದರೆ ವಿಚಾರಣೆ ಮಾಡಿಸಬಹುದು. ನ್ಯಾಯಾಂಗ ತನಿಖೆ ಮಾಡುವುದಕ್ಕೆ ಆಜ್ಞೆ ಮಾಡಿದ್ದೇವೆ. ನ್ಯಾಯಾಂಗ ತನಿಖೆಯಲ್ಲಿ ಒಂದೇ ವಿಷಯ ಬರುವುದಿಲ್ಲ.

ಬಹುಶಃ ಇಂತಹ ಪರಿಸ್ಥಿತಿ ಬರುವುದಕ್ಕೆ ಏನೇನೋ ಕಾರಣಗಳಿವೆ. ಅದನ್ನೆಲ್ಲಾ ಸ್ಟಡಿ ಮಾಡಿ ನಮಗೆ ವರದಿಯನ್ನು ಕೊಡುತ್ತಾರೆ. ಆದರ ಜೊತೆಗೆ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಬೇಕಾ ಗುತ್ತದೆ. ಕೆಲವು ಮಾನ್ಯ ಸದಸ್ಯರು ಈಗಲೇ ಅವರನ್ನು ಡಿಸ್‌ಮಿಸ್ ಮಾಡಿ ಎಂದು ಹೇಳಿದರು.

ಅದಕ್ಕಾಗಿ ಕಾಯಿದೆಗಳು ಇವೆ. ನ್ಯಾಯಾಲಯಗಳು ಇವೆ ತಪ್ಪು ಮಾಡಿದಂತಹವರಿಗೆ, ಯಾವರೀತಿ ತಪ್ಪು? ಹಾಗೂ ಯಾವುದೇ ವಿಚಾರಣೆ ಇಲ್ಲದೆ ಶಿಕ್ಷೆ ಮಾಡಿದರೆ ನಾಳೆ ಅವರು ಕೋರ್ಟಿಗೆ ಹೋಗುತ್ತಾರೆ ಕೋರ್ಟಿನಲ್ಲಿ ಬಹುಶಃ ನಮ್ಮ ವೆಂಕಟರಾಮಯ್ಯನವರಂತಹವರು ಇರುತ್ತಾರೆ ಅವರು ಹೋಗಿ ಬಿಡುಗಡೆ ಮಾಡಿಸಿಬಿಡುತ್ತಾರೆ. ಅವರು ಎಷ್ಟೋ ಜನ ಮರ್ಡರ್ ಮಾಡಿದಂತಹವರನ್ನೂ ಕೂಡ ಬಿಡಿಸಿದ್ದಾರೆ. ನಾನೂ ಕಾನೂನು ಪದವಿಯನ್ನು ಪಡೆದ ಮೇಲೆ ಕೆಲಸ ಮಾಡಿದ್ದರೂ ಅವರಷ್ಟು ಜನರನ್ನು ರಕ್ಷಣೆ ಮಾಡುವುದಕ್ಕಾಗಿಲ್ಲ ಎಲ್ಲರ ಮನಸ್ಸಿನಲ್ಲೂ ಇದೊಂದು ಅತ್ಯಂತ ಹೀನ ತರವಾದ ಘಟನೆ ಆ ಕೆಲಸ ವನ್ನು ಅಲ್ಲಿರುವ ಪೋಲೀಸ್‌ನವರು ಮಾಡಿದ್ದಾರೆ. ಎಲ್ಲ ಪೋಲೀಸ್‌ನವರು ಅಲ್ಲ ಅವರನ್ನು ನಾನು ಬಯ್ದಿದ್ದೇನೆ. ಇಡೀ ಪೋಲೀಸ್‌ನವರನ್ನು ಬೈಯ್ದಿಲ್ಲ. ಒಳ್ಳೆಯ ಜನರೂ ಇದ್ದಾರೆ. ಭಕ್ಷರೂ ಇದ್ದಾರೆ ಮೊದಲಿನಿಂದಲೂ ಕರ್ನಾಟಕ ರಾಜ್ಯದಲ್ಲಿ ಹೆಸರು ಪಡೆದ ಅಧಿಕಾರಿಗಳೂ ಕೂಡ ಇದ್ದಾರೆ. ಆದ್ದರಿಂದ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂತಹವರಿಗೆ ಇದು ಅನ್ವಯವಾಗುವುದಿಲ್ಲ. ಎಲ್ಲರಿಗೂ ಕೋವಿಯನ್ನು ಹಿಡಿದುಕೊಳ್ಳುವುದಕ್ಕೆ ಕೊಡುವುದಿಲ್ಲ. ಪರಿಸ್ಥಿತಿಯನ್ನು ನೋಡಿಕೊಂಡು ಅತ್ಯಂತ ವಿಚಕ್ಷಣೆಯಿಂದ ಜನರ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ರಾಜಕೀಯ ಕೈವಾಡ ಬಹಳ ಜಾಸ್ತಿ ಇದೆ. ಅದನ್ನು ಸ್ವಲ್ಪ ಕಡಿಮೆ ಮಾಡಿ.

ಶ್ರೀ ಜಿ. ಮಾದೇಗೌಡ.—ಪ್ರಾಮಾಣಿಕರು ಅಪ್ರಾಮಾಣಿಕರು ಎಂಬುದಕ್ಕೆ ವ್ಯತ್ಯಾಸ ಏನ ಎಂಬುದನ್ನು ರೆಕಗ್ನೈಸ್ ಮಾಡುತ್ತಿಲ್ಲವಲ್ಲ ಅಪ್ರಮಾಣಿಕ ಅಧಿಕಾರಿಗಳಿಗೂ ರಕ್ಷಣೆ ಕೊಡುತ್ತಿದ್ದೀರಿ

ಶ್ರೀ ಬಿ. ರಾಚಯ್ಯ.—ಅವರನ್ನು ಹಿಡಿದುಕೊಂಡು ಹೊಡೆಯುವುದಕ್ಕಾಗುತ್ತದೆಯೇ ?

ಶ್ರೀ ಜಿ. ಮಾದೇಗೌಡ.—ಅದಕ್ಕೆ ಈ ಪರಿಸ್ಥಿತಿ ಬಂದಿರುವುದು.

ಶ್ರೀ ಬಿ. ರಾಚಯ್ಯ.—ಇವರು ಹೇಳಿದರು ಎಂದು ಅವರ ಕೆನ್ನೆಗೆ ಹೊಡೆಯುವುದಕ್ಕಾಗುತ್ತದೆಯೇ ? ನಾಳೆ ಇವರೇ ಅವರ ಕೆನ್ನೆಗೆ ಹೊಡೆದರು ಎಂದು ಇಲ್ಲಿ ಹೇಳುತ್ತಾರೆ. ಎಷ್ಟೇ ತಪ್ಪುಗಳ ಗಿದ್ದರೂ ಕೂಡ ಅದನ್ನು ನೋಡುವುದಕ್ಕೆ ಈ ದೇಶದ ಕಾನೂನುಗಳು ಇರುತ್ತವೆ. ಅದರ ಪ್ರಕಾರ ವಿಚಾರಣೆ ಮಾಡಲೇಬೇಕಾಗುತ್ತದೆ. ವಿಚಾರಣೆ ಮಾಡಿ ತಪ್ಪಿತಸ್ಥರಿಗೆ ಇಂತಹ ಶಿಕ್ಷೆ ಕೊಡಿ ಎಂದು ಹೇಳುತ್ತಾರೆ. ಈ ಒಂದು ದುರ್ಘಟನೆ ಆಗಬಾರದಾಗಿತ್ತು. ಮಾಡಿರುವ ಪೋಲೀಸ್‌ನವರನ್ನು ಸಸ್ ಪೆಂಡ್ ಮಾಡಿದ್ದೇನೆ ಸಸ್‌ಪೆನ್ಸನ್ ಈಸ್ ನಾಟ್ ಎ ಪನಿಸ್‌ಮೆಂಟ್ ಎಂಬುದು ನನಗೂ ಗೊತ್ತಿದೆ. ಅವರು ಅಲ್ಲೇ ಇರುವುದರಿಂದ ವಿಚಾರಣೆ ಕೂಡ ಸರಿಯಾಗಿ ಆಗುವುದಿಲ್ಲ ಎಂಬುದನ್ನು ತಿಳಿದುಕೊಂಡೇ ಸಸ್‌ಪೆಂಡ್ ಮಾಡಿದ್ದರೂ ಅವರು ಅಲ್ಲಿರಕೂಡದು ಎಂದು ಕೂಡ ಮಾಡಿದ್ದೇವೆ. ಆದ್ದರಿಂದ ಬೇರೆ ಯವರೂ ಕೂಡ ತಕ್ಷಣ ಅಲ್ಲಿಗೆ ಹೋಗಿದ್ದಾರೆ. ಅಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿಲ್ಲ ಎಲ್ಲವನ್ನೂ ನಾನೂ ಹಾಗೂ ಮುಖ್ಯಮಂತ್ರಿಗಳೇ ಇಟ್ಟುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಯಾರ್ಯಾರನ್ನು ಯಾರ್ಯಾರು ವರ್ಗಾವಣೆ ಮಾಡಬಹುದೆಂಬುದಕ್ಕೆ ಸರ್ಕಾರಿ ಆಜ್ಞೆಯನ್ನೇ ಮಾಡಿದ್ದೇವೆ. ಯಾರಾದರೂ ಶಾಸಕರು ಬಂದು ವಿಷಯ ಹೇಳಿದರೆ ೩ ವರ್ಷಕ್ಕಿಂತ ಕಡಿಮೆ ಆಗಿರುವಂತಹ ಸಂದರ್ಭದಲ್ಲಿ ಮಾಡ ಬೇಕಾಗುತ್ತದೆ. ಆ ರೀತಿ ಆ ಕಡೆಯವರೂ ಕೇಳಿದ್ದಾರೆ. ಈ ಕಡೆಯವರೂ ಕೇಳಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ನಾನು ಕೇಳಿದ್ದೇನೆಯೇ ?

ಶ್ರೀ ಬಿ. ರಾಚಯ್ಯ.—ಅವರೇ ಕೇಳಿದ್ದಾರೆ ಯಾರ್ಯಾರು ಕೇಳಿದ್ದಾರೆಂಬುದನ್ನು ಬರೆದಿಟ್ಟು ಕೊಂಡಿದ್ದೇನೆ ಶಾಸಕರು ಯಾರಾದರೂ ಒಬ್ಬ ಕರಪ್ಟ್ ಆಫೀಸರ್ ಇದ್ದರೂ ಇಂತಹವರನ್ನು ಕೊಡಿ ಎಂದು ಕೇಳಿದಾಗ ಅಂದರೆ ಅದು ಅವರಿಗೆ ಗೊತ್ತಿಲ್ಲದೆ ಕೇಳಿದಾಗ ನಾವು ಹಾಕಿದ್ದೇವೆ. ಆದರೆ ಅವರನ್ನು ಪೋಸ್ಟ್ ಮಾಡಿದ ಕೆಲವು ದಿವಸಗಳಾದ ಮೇಲೆ ಅವನು ಮಾಡುವಂತಹ ತಪ್ಪನ್ನು ತಿಳಿದುಕೊಂಡ ಮೇಲೆ ಬಹಳ ಕೆಟ್ಟವನು ಎಂದು ಹೇಳುತ್ತಾರೆ. ಅದನ್ನೂ ಕೂಡ ವಿಚಾರಣೆ ಮಾಡಬೇಕಾಗುತ್ತದೆ. ಒಂದು ವೇಳೆ ಆ ರೀತಿ ಹೇಳಿದರೂ ೬-೬ ತಿಂಗಳಿಗೆ ವರ್ಗ ಮಾಡುವುದಕ್ಕಾಗುವುದಿಲ್ಲ ಡಿ.ಐ.ಜಿ.ಯವರಿಗೆ ಎಸ್. ಐ.ಗಳನ್ನು ಆಯಾ ಸಬ್ ಡಿವಿಜನ್‌ಗಳಲ್ಲಿ ವರ್ಗ ಮಾಡತಕ್ಕ ಅಧಿಕಾರವನ್ನು ಕೊಟ್ಟಿದ್ದೇವೆ ನಂತರ ಎಸ್.ಪಿ.ಯವರಿಗೆ ಆ ಜಿಲ್ಲೆಯೊಳಗೆ ವರ್ಗ ಮಾಡತಕ್ಕ ಅಧಿಕಾರವನ್ನು ಕೊಟ್ಟಿದ್ದೇವೆ. ಡಿ.ಜಿ.ಪಿ.

ಯಾವರಿಗೆ ರಾಜ್ಯಮಟ್ಟದ ಅಧಿಕಾರಿಗಳನ್ನು ವರ್ಗ ಮಾಡತಕ್ಕ ಅಧಿಕಾರವನ್ನು ಕೊಟ್ಟಿದ್ದೇವೆ. ಶಾಸಕರು ಅನೇಕ ಸಂದರ್ಭದಲ್ಲಿ ಬಂದು ಹೇಳುತ್ತಾರೆ. ಶಾಸಕರಿಗೆ ವಿರೋಧ ಮಾಡತಕ್ಕ, ನಾಳೆ ದಿವಸ ಅವರಿಗೆ ಕಿರುಕುಳ ಕೊಡತಕ್ಕಂತಹ ಸಂದರ್ಭದಲ್ಲಿ ನಾನು ಪ್ರವೇಶ ಮಾಡಿ ಕೈಹಾಕಬಾರದು ಎಂದು ಹೇಳಿದರೆ, ಅದು ಪ್ರಜಾಪ್ರಭುತ್ವವಾಗಲಾರದು ಉದಾಹರಣೆಗಾಗಿ ಹೇಳುವುದಾದರೆ, ಶಾಸಕರನ್ನೇ ಕೇಳುವ ಮಟ್ಟಕ್ಕೆ ಬಂದಾಗ, ಶಾಸಕರಿಗೆ ಅವಮಾನವಾಗುವ ರೀತಿಯಲ್ಲಿ ಹೋದಾಗ ಬಹುಶಃ ಪ್ರಜಾ ಪ್ರತಿನಿಧಿಗಳಾಗಿ ಬಂದಾಗ ಅವರು ಹೇಳತಕ್ಕ ವಿಷಯಗಳನ್ನು ಕೇಳಿ ಸತ್ಯಾಸತ್ಯತೆಯನ್ನು ತಿಳಿದುಕೊಂಡು ಮಾಡಿದರೆ ತಪ್ಪಾಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಂ. ರಾಮಪ್ಪ.—ಅವರು ಏನೋ ಹೇಳಿದರು, ಮಾಡಬಾರದಾಗಿತ್ತು ಮಾಡಿದ್ದಾರೆ ಎಂದು ಆದರೆ ನನ್ನನ್ನು ಇವತ್ತಿನವರೆವಿಗೂ ಕೋರ್ಟಿಗೆ ತಿರುಗಿಸುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಮಾನ್ಯ ರಾಮಪ್ಪನವರು ಎಲ್ಲಿಯೋ ಬಿದ್ದುಬಿಟ್ಟಿದ್ದಾರೆ. ಪೋಲೀಸ್ ನವರು ಅವರ ತಂಟೆಗೆ ಹೋಗುತ್ತಾ ಇಲ್ಲ.

ಶ್ರೀ ಎಂ. ರಾಮಪ್ಪ.—ನನ್ನನ್ನು ಬೀಳಿಸುವುದಕ್ಕೆ ನಿಮ್ಮ ಕೈಯಲ್ಲೂ ಆಗುವುದಿಲ್ಲ, ನಿಮ್ಮ ಪಾರ್ಟಿಯವರ ಕೈಯಲ್ಲೂ ಆಗುವುದಿಲ್ಲ. ನಾನು ಗಟ್ಟಿ ಇದ್ದೇನೆ ಸ್ವಾಮಿ.

ಶ್ರೀ ಜಿ. ನಾರಾಯಣ ಕುಮಾರ್.—ಅವರ ಶರೀರ ನೋಡುವುದಕ್ಕೆ ದಪ್ಪ ಇರಬಹುದು ಆದರೆ ಒಳಗಡೆ ಏನೂ ಇಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಶಿವನಂಜಪ್ಪನವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಬಹುಶಃ ಅವರು ಅನೇಕ ಸಂದರ್ಭಗಳಲ್ಲಿ ಆಗಿರತಕ್ಕದ್ದನ್ನು ಹೇಳಿದ್ದಾರೆ. ಕೊರಟಗೆರೆಯಲ್ಲಿ ಇಂತಹವರು ಇದ್ದಾರೆ ಎಂದು ಹೇಳಿದ್ದಾರೆ. ಅಲ್ಲಿ ಕೆಲವರ ಮೇಲೆ ಸಿ.ಒ.ಡಿ. ವರದಿ ತರಿಸಿ ನೋಡಿದ್ದೇನೆ. ಅಲ್ಲಿ ಆಕಸ್ಮಿಕ ಮರಣ ಎಂದು ಹೇಳಿದ್ದಾರೆ. ಇದರ ಮೇಲೆ ಏನು ಮಾಡಬೇಕೋ ಗೊತ್ತಿಲ್ಲ. ಜನತೆ ಅದಕ್ಕೆ ಉತ್ತರವನ್ನು ಕೊಡುತ್ತಾರೆ ನಾನೇ ತಪ್ಪು ಮಾಡಲಿ ಅಥವಾ ವೀರಣ್ಣನವರೇ ತಪ್ಪು ಮಾಡಲಿ ನಾನು ವಿಚಾರಣೆ ಮಾಡಿಲ್ಲ ಎಂದಲ್ಲ. ಅದಕ್ಕೆ ನಾನು ಉತ್ತರ ಕೊಡುತ್ತಿದ್ದೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ನಾನು ನೀತಿಯ ಬಗ್ಗೆ ಕೇಳಿದೆ ಅಷ್ಟೇ.

ಶ್ರೀ ಬಿ. ರಾಚಯ್ಯ.—ನೀತಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ನಿವಾರಿಸುವುದಕ್ಕೆ ಆಸೆಪಡುತ್ತೇವೆ ಆಡಳಿತದಲ್ಲಿ ಸಾಕಷ್ಟು ಹಸ್ತಕ್ಷೇಪ ಆಗದಹಾಗೆ ಶಾಸಕರು ಮಂತ್ರಿಗಳು ಒಬ್ಬರಿಗೊಬ್ಬರು ಹಸ್ತಕ್ಷೇಪ ಮಾಡದಹಾಗೆ ಮಾನ್ಯ ಮುಖ್ಯಮಂತ್ರಿಗಳು ನೋಡಿಕೊಳ್ಳುತ್ತಿದ್ದಾರೆ. ನಾನು ಏನು ಮಾಡಿದರೂ ಜವಾಬ್ದಾರಿ ಇಬ್ಬರಿಗೂ ಇರುವುದರಿಂದ, ಇದು ಬೇಡ. ನಿಮ್ಮ ಜಿಲ್ಲೆಗೆ ಇದು ಬೇಡ, ಆ ರೀತಿ ಮಾಡಿದರೆ ಸರಿಹೋಗುತ್ತದೆಂದು ಒಂದು ರೀತಿಯ ನೀತಿ ನಿಯಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ ಮೊದಲ ಎರಡು ವರ್ಷಗಳು ಬಿಗಿ ಇದ್ದದ್ದು 2 ವರ್ಷಗಳ ನಂತರ ಅದು ಕಡಿಮೆ ಆಯಿತು ಎಂದು ಹೇಳುತ್ತಿದ್ದಾರೆ. ೮೫ರಲ್ಲಿ ಚುನಾವಣೆಯಾದ ಮೇಲೆ ಸ್ವಲ್ಪ ಕಡಿಮೆ ಆದರೂ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯಿತಿ ಆದಮೇಲೆ ಕಿರುಕುಳ ಸ್ವಲ್ಪ ಜಾಸ್ತಿಯಾಗಿದೆ. ಅದು ನಿಮ್ಮ ಪಕ್ಷದಿಂದಲೇ ಇರಬಹುದು ಅಥವಾ ನಮ್ಮ ಪಕ್ಷದವರಿಂದಲೇ ಇರಬಹುದು. ಇವತ್ತು ಬಿ.ಜೆ.ಪಿ. ಯವರಾಗಲೀ, ಸಿ.ಪಿ.ಐ. ಸಿ.ಪಿ.ಎಂ. ನವರಾಗಲೀ, ಇವರಿಗೆ ಇವತ್ತು ಏನಾಗಿದೆ ಎಂದರೆ, ಚುನಾವಣೆ ನಡೆದಂತಹ ಕಾಲದಲ್ಲಿ ಆಯಾಯ ಪಕ್ಷವನ್ನು ಬಲಪಡಿಸುವುದಕ್ಕೆ ಅವರವರ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ಆ ಸಂದರ್ಭದಲ್ಲಿ ಸಂಘರ್ಷ ನಡೆಯುವುದು ಸ್ವಾಭಾವಿಕ ಹಳ್ಳಿಗಳಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಗೆದ್ದು ಬಂದಿಲ್ಲ. ಅಂತಹ ಕಡೆ ಬೇರೆಯವರು ಗೆದ್ದುಬಂದಿದ್ದಾರೆ. ಸಾಧ್ಯವಾದಷ್ಟು ಮಟ್ಟಿಗೆ ಇಂತಹ ಘರ್ಷಣೆಗಳನ್ನು ಹತ್ತಿಕ್ಕುತ್ತೇವೆ.

ಶ್ರೀ ಕೆ. ಎಚ್. ಪಾಟೀಲ್.—ಇದನ್ನೆಲ್ಲಾ ಹೇಳುವ ಬದಲು ನಮ್ಮ ಕೈಗೂ ವೆಪನ್ ಕೊಡಿ. ಅವರ ಕೈಯಲ್ಲೂ ವೆಪನ್ಸ್ ಇರುತ್ತವೆ. ಆಗ ನಾವು ನಮ್ಮ ರಕ್ಷಣೆ ಮಾಡಿಕೊಳ್ಳುತ್ತೇವೆ. ನಮಗೆ ರಕ್ಷಣೆ ಕೊಡುವ ಗೃಹಮಂತ್ರಿಗಳೇ ಹೀಗೆ ಹೇಳಿದರೆ ಹೇಗೆ ? ಘರ್ಷಣೆ ಆಗಬಹುದು, ಹೋಗಬಹುದು ಎಂದು ಹೇಳಿದರೆ ಹೇಗೆ ?

ಶ್ರೀ ಬಿ. ರಾಚಯ್ಯ.—ಕೆ. ಎಚ್. ಪಾಟೀಲರು ನಿಂತುಕೊಂಡರೇ ನನಗೆ ಹೆದರಿಕೆಯಾಗುತ್ತದೆ. ಇವತ್ತು ಗೋಲೀಬಾರ್ ಆಗಬಾರದು ಎಂದು ಹೇಳುತ್ತಾರೆ ಇದು ಪತ್ರಿಕೆಗಳಲ್ಲೂ ಕೂಡಾ ಬಂದಿದೆ. ಇವತ್ತು ಹಸ್ತಕ್ಷೇಪ ಬೇಡ ಎಂದು ಹೇಳುತ್ತಿದ್ದಾರೆ. ಬಹುಶಃ ಎಲ್ಲರಿಗೂ ಇದು ತಿಳಿದಿರಬಹುದು. ಅಲ್ಲಲ್ಲಿ ಅಲ್ಪ ಸ್ವಲ್ಪ ಮೂರ್ಖರು ಇದ್ದಾರೆ. ಅವರನ್ನು ಕೇಳತಕ್ಕ ಶಕ್ತಿ ನನಗಿದೆ.

ಕಾನೂನು ಪ್ರಕಾರ ಅವರನ್ನು ಯಾವರೀತಿ ಶಿಕ್ಷೆ ಮಾಡಬೇಕು, ಶಿಕ್ಷೆ ಮಾಡಬೇಕಾದರೂ ಸುಮ್ಮನೆ ನನಗೆ ಆಗಲಿಲ್ಲವೆಂದು ಮಾಡುವುದಲ್ಲ. ಯಾರ ಮೇಲೆಯೂ ಹೊಟ್ಟೆ ಕಿಚ್ಚು ಇಟ್ಟುಕೊಂಡು ಶಿಕ್ಷೆ ಮಾಡುವುದಲ್ಲ. ಕಾಯಿದೆ ಪ್ರಕಾರ ಶಿಕ್ಷೆ ಮಾಡತಕ್ಕದ್ದು ಇದೆ ಆ ವ್ಯವಸ್ಥೆ ಪ್ರಕಾರ ಮಾಡೋಣ. ಮಾನ್ಯ ನಾಯಕರ ಹಾಗೆ ಎದ್ದು ಕುಣಿಯುವುದಕ್ಕೆ ಕಷ್ಟವಾಗುತ್ತದೆ, ಓಡುವುದಕ್ಕೆ ಆಗುವುದಿಲ್ಲ. ಆದರೂ ಕುದುರೆ ಓಡಿಸಬಲ್ಲೆ. ನೀವು ಓಡಿಸಿದ ಕುದುರೆ ಮೊದಲು ಎಲ್ಲೆಲ್ಲಿ ಹೋಗಿ ನಿಂತುಕೊಳ್ಳುತ್ತಿತ್ತೋ ಅಲ್ಲೆಲ್ಲಾ ನಿಂತುಕೊಳ್ಳುತ್ತದೆ. ಅದನ್ನು ಚಾವಟಿಯಿಂದ ಹೊಡೆದು ಸರಿ ಮಾಡಬೇಕಾಗುತ್ತದೆ. ಓಡತಕ್ಕ ಕುದುರೆ ಎಲ್ಲೆಲ್ಲಿ ಹೋಗುತ್ತದೆಂದು ಮಾನ್ಯ ಪಟೇಲ್‌ರವರು ಹೇಳಿದ್ದಾರೆ.

ಶ್ರೀ ಆರ್. ಎನ್. ನಾಯಕ್.— ನಮ್ಮ ಕುದುರೆ ಚಲ್ಲಾಡುವುದಿಲ್ಲ, ಕುದುರೆ ಚಲ್ಲಾಡಿಸುವವರು ನೀವೇ.

ಶ್ರೀ ಬಿ. ರಾಚಯ್ಯ.— ಮಾನ್ಯ ವಿರೋಧಪಕ್ಷದ ಉಪ ನಾಯಕರಾದ ಖರ್ಗೆಯವರು ಗುರುಮಿಠಕಲ್‌ನ ವಿಷಯದಲ್ಲಿ ಅವರು ಹೇಳಿದಂತಹ ವಿಷಯವನ್ನು ತಿಳಿದುಕೊಂಡು ನಾವು ಕ್ರಮ ತೆಗೆದುಕೊಂಡಿದ್ದೇವೆ, ಅವರೇ ಇದೇ ವಿಧಾನಸಭೆಯಲ್ಲಿ, ಗೂಂಡಾಗಿರಿ ಮಾಡುತ್ತಿದ್ದಾರೆಂದು ಹೇಳಿದರು, ಈ ಸಂದರ್ಭದಲ್ಲಿ ಯಾರು ಒಳ್ಳೆಯವರೆಂದು ಹೇಳುತ್ತಿದ್ದಾರೆ ಅವರು ಸೇರಿಕೊಂಡು ಬಿಟ್ಟಿದ್ದಾರೆ. ಇದನ್ನೆಲ್ಲಾ ಏತಕ್ಕೆ ಹೇಳುತ್ತಿದ್ದೇನೆಂದರೆ ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಯಾರು ಯಾವ ಸಂದರ್ಭದಲ್ಲಿ ಹೇಳಿದ್ದಾರೆ, ನಾನು ಯಾವಾಗ ಹೇಳಿದ್ದೇನೆ ಅದೆಲ್ಲಾ ಬೇಡ. ನಿಮ್ಮ ಹತ್ತಿರ ಗೂಂಡಾಗಿರಿ ಮಾಡುವವರ ಲಿಸ್ಟ್ ಇದೆ, ಅದನ್ನು ಬಿಟ್ಟು ಎಲೆಕ್ಟೆಡ್ ಪ್ರೆಸಿಡೆಂಟ್, ವೈಸ್‌ಪ್ರೆಸಿಡೆಂಟ್ ಅವರುಗಳನ್ನು ಆಫ್ ನೇಕೆಡ್ ಮಾಡಿ, ಪೆರೆಡ್ ಮಾಡುವುದು, ಹೊಡೆಯುವುದು ಸರಿಯೇ ? ಕಾನೂನು ಪ್ರಕಾರ ಪಟ್ಟಿಯಲ್ಲಿ ಯಾರ ಹೆಸರು ಇತ್ತು, ಯಾರ ಮೇಲೆ ರಿಪೋರ್ಟ್ ಇತ್ತು ಯಾರ ಮೇಲೆ ಪೊಲೀಸ್‌ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಇತ್ತು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಯಾರ ಸಬ್‌ಇನ್ಸ್‌ಪೆಕ್ಟರ್‌ರವರಿಗೆ ಹೊಡಿದಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ನಿಮ್ಮ ಆರ್ಗ್ಯುಮೆಂಟ್ ಸಮರ್ಥನೆ ಮಾಡಿಕೊಳ್ಳಿ, ನೀವು ಹೇಳಿದ್ದೀರಿ, ಕಳೆದ ವಿಧಾನಸಭೆಯಲ್ಲಿ ನೀವೇ ಹೇಳಿದ್ದೀರಿ ಅಂದರೆ ಇದರ ಅರ್ಥ ಏನೆಂದರೆ ತಾವು ಮಾಡಿದ ತಪ್ಪನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ನಮ್ಮನ್ನು ಉಪಯೋಗಿಸಿ ಕೊಳ್ಳಬೇಡಿ. ಸಮರ್ಥನೆ ಮಾಡಿಕೊಳ್ಳುತ್ತೇವೆಂದರೆ, ಚುನಾಯಿತ ಪ್ರತಿನಿಧಿಗಳನ್ನು ಆಫ್ ನೇಕೆಡ್‌ನಲ್ಲಿ ಮೆರವಣಿಗೆ ಮಾಡಿರುವುದನ್ನು ಸಮರ್ಥನೆ ಮಾಡಿಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.— ಇಲ್ಲ. ಚುನಾಯಿತ ಪ್ರತಿನಿಧಿಗಳ ಹೆಸರು ಗೂಂಡಾಗಿರಿ ಮಾಡುವವರ ಹೆಸರಿನ ಜೊತೆಯಲ್ಲಿ ಸೇರಿದ್ದರಿಂದ ಅವರಿಗೆ ಶಿಕ್ಷೆ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಗೂಂಡಾಗಿರಿ ಮಾಡುವವರ ಹೆಸರಿನ ಪಟ್ಟಿಯ ಜೊತೆಯಲ್ಲಿ ಇವರ ಹೆಸರು ಇತ್ತು ಅಂದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ. ಇಲ್ಲದಿದ್ದ ನೀವು ರಾಜೀನಾಮೆಯನ್ನು ಕೊಡುತ್ತೀರಾ ?

ಅಧ್ಯಕ್ಷರು.— ಇಬ್ಬರೂ ರಾಜೀನಾಮೆ ಕೊಡುವುದು ಬೇಡ.

ಶ್ರೀ ಬಿ. ರಾಚಯ್ಯ.— ಹೆಸರು ಸೇರಿದ್ದರಿಂದ ಶಿಕ್ಷೆಯಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಸುತ್ತಿ ಬಳಸಿ ಅಲ್ಲಿಗೆ ಬರುತ್ತೀರಿ, ಸಂದರ್ಭಕ್ಕನುಸಾರವಾಗಿ ತಾವು ಮಾತನಾಡಬೇಕು. ನಿಮಗೆ ಯಾವಾಗ ಬೇಕೋ ಆಗ ಉಪಯೋಗ ಮಾಡಿಕೊಳ್ಳುವುದು ಬೇಡವಾದಾಗ ಬಿಡುವುದು ಅದು ಬೇಡ, ಆ ಕೆಲಸ ಮಾಡಬೇಡಿ,

ಶ್ರೀ ಬಿ. ರಾಚಯ್ಯ.— ತಾವೇನು ಮಾಡುತ್ತೀರಿ ? ಹಸ್ತ ಕ್ಷೇಪ ಮಾಡುತ್ತಾರೆಂದರೆ ಈ ಕಡೆಯವರು ಮಾಡುತ್ತಾರೆ ಆ ಕಡೆಯವರು ಮಾಡುವುದಿಲ್ಲವೆಂದೇ, ಶಾಸಕರು ಹೇಳುತ್ತಾರೆ, ನಾವು

ಕೇಳಲೇಬೇಕಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತಾ ಪ್ರತಿನಿಧಿಗಳಾದ ಶಾಸಕರು ಹೇಳಿದರೆ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ನನಗೆ ಸೇರಿರತಕ್ಕದ್ದು. ಆದ್ದರಿಂದ ಒಂದು ಕಡೆ ಮಾಡುತ್ತೇವೆಂದು ಹೇಳುವುದಕ್ಕೆ ಬದಲಾಗಿ ಸಂದರ್ಭಾನುಸಾರವಾಗಿ ತೀರ್ಮಾನ ತೆಗೆದುಕೊಳ್ಳ ಬೇಕಾಗುತ್ತದೆ, ಆ ದೃಷ್ಟಿಯಿಂದ ಹೇಳುತ್ತಿದ್ದೇನೆಯೇ ವಿನಹ ಬೇರೇನು ಅಲ್ಲ.

ಶ್ರೀ ಎಂ. ರಾಮಪ್ಪ.— ಮಾನ್ಯ ಅಧ್ಯಕ್ಷರೆ.......

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ತಮ್ಮ ಭಾಷಣವನ್ನು ಮುಕ್ತಾಯ ಮಾಡುತ್ತಾರೆ ತಾವು ಕುಳಿತುಕೊಳ್ಳಿ.

ಶ್ರೀ ಎಂ. ರಾಮಪ್ಪ.— ಮಾನ್ಯ ಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕೆಂದು ಕೇಳುತ್ತೇನೆ, ಅದರ ಬಗ್ಗೆ ಹೇಳಬೇಕು ನಮಗೆ ಅವರ ಹರಿಕಥೆ ಬೇಡ. ರಾಜೀನಾಮೆ ಕೊಡುತ್ತೀರೋ ಇಲ್ಲವೋ ಅದನ್ನು ಹೇಳಿ ನಿಮ್ಮ ಹರಿಕಥೆ ನಮಗೇನು ಬೇಕಾಗಿದೆ ?

ಶ್ರೀ ಬಿ. ರಾಚಯ್ಯ.— ಮಾನ್ಯ ರಾಮಪ್ಪನವರು ಬಂದಾಗಿನಿಂದಲೂ ರಾಜೀನಾಮೆ ಕೇಳುತ್ತಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್.— ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕೆಂದು ಅವರದೇ ಪ್ರಚೋದನೆ ಇದೆ.

ಶ್ರೀ ಬಿ. ರಾಚಯ್ಯ.— ರಾಜೀನಾಮೆಯನ್ನು ಕೊಡಬೇಕೆಂದು ಕೇಳುತ್ತೀದ್ದಾರೆ. ಲಾಲ್‌ಬಹದ್ದೂರ್ ಶಾಸ್ತ್ರಿಯವರು ಇದ್ದಂಥಹ ಕಾಲದಲ್ಲಿ ಅವರ ಕಾಲ ಆದಮೇಲೆ ಎಷ್ಟೋ ರೈಲ್ವೆ ಅಪಘಾತಗಳು ಆಗಿವೆ. ಬಹಳ ಜನ ಮಂತ್ರಿಗಳು ಬಂದರೂ ಹೋದರೂ, ಆದರೆ ಶಾಸ್ತ್ರಿಯವರ ರೀತಿ ಯಾರೂ ಮಾಡಲಿಲ್ಲ.

(ಗೊಂದಲ)

ಶ್ರೀ ಬಿ. ರಾಚಯ್ಯ.— ಎಲ್ಲರೂ ಶಾಸ್ತ್ರಿಯವರು ಆಗಲಾರರು. ರಾಮರಾಯರ ವಿಷಯದಲ್ಲಿ ಹೇಳುವುದಾದರೆ, ರಾಮರಾಯರು ಸತ್ತಾಗ ಅವರ ಶವ ನೋಡುವುದಕ್ಕೆ ಎಷ್ಟು ಜನ ಹೋಗಿದ್ದರೋ ನನಗೆ ಗೊತ್ತಿಲ್ಲ.

ಶ್ರೀ ಎಂ. ರಾಮಪ್ಪ.— ಸ್ವಾಮಿ ನೀವು ರಾಜೀನಾಮೆ ಕೊಟ್ಟು, ಪುನಃ ಆರಿಸಿ ಬನ್ನಿ ಮಂತ್ರಿಗಳಾಗಿ.

ಶ್ರೀ ಬಿ. ರಾಚಯ್ಯ.— ರಾಜೀನಾಮೆ ಕೊಡಬೇಕೆಂದು ಹೇಳಿದರೆ, ಅವತ್ತು ಜನ ಆರಿಸಿ ಕಳುಹಿಸಿ ಕೊಟ್ಟಿದ್ದಾರೆ, ಅವರಿಗೆ ಮೋಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಜನರಿಗೆ ಗುಂಡು ಹಾಕುತ್ತೀರಾ ?

ಶ್ರೀ ಬಿ. ರಾಚಯ್ಯ.— ನನ್ನ ರಾಜೀನಾಮೆಯಿಂದ ಈ ದೇಶದಲ್ಲಿ ನಡೆಯುತಕ್ಕ ಅಪರಾಧಗಳು ಹೀನಕೃತ್ಯಗಳು ಏನಿವೆ ಅವುಗಳು ನಿಲ್ಲುತ್ತವೆ ಎನ್ನುವ ಗ್ಯಾರಂಟಿ ಇದೆಯೇ ?

ಶ್ರೀ ಬಿ. ಲಕ್ಕಪ್ಪ.— ರಾಜೀನಾಮೆ ಕೊಟ್ಟು ನೋಡಿ ?

ಅಧ್ಯಕ್ಷರು.— ಮಾನ್ಯ ಲಕ್ಕಪ್ಪನವರೇ ತಾವು ಸ್ವಲ್ಪ ಕೂಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ.— ಇನ್ನು ಮುಂದೆ ಇದು ಆಗಬಾರದು. ನೀವು ಇನ್ನು ಕೊಂಡು ಇದು ಆಗುತ್ತದಲ್ಲವೆಂದು ಅವರ ಆಕ್ರೋಶ, ವೈಯಕ್ತಿಕವಾದ ವಿರೋಧವಿಲ್ಲ, ಹೆಣ್ಣುಮಕ್ಕಳ ಬಗ್ಗೆ ಮಾನವೀಯತೆ ಇಲ್ಲವೆಂದು ಹೇಳಿದರು. ನನಗೆ ಹೆಣ್ಣುಮಕ್ಕಳೇ ಜಾಸ್ತಿ ಇರುವುದರಿಂದ ನನಗೆ ಜಾಸ್ತಿ ಅನುಕಂಪ ಮಾನವೀಯತೆ ಇದೆ ಸ್ವಾಮಿ.

ಆದರೆ ನನ್ನ ನಡವಳಿಕೆಗಳಾಗಲೀ, ನಾನು ತೆಗೆದುಕೊಂಡ ತೀರ್ಮಾನಗಳು ಕಾನೂನುಬದ್ಧವಾಗಿ ಮಾಡಬೇಕೇ ವಿನಹ, ಇಲ್ಲದಿದ್ದರೆ ಅನೇಕ ತೀರ್ಮಾನಗಳು ಹೈಕೋರ್ಟಿಗೆ ಹೋಗುತ್ತವೆ. ಬಹುಶಃ ಅನೇಕ ತೀರ್ಮಾನಗಳನ್ನು ಹೈಕೋರ್ಟಿನವರು ಎತ್ತಿಹಿಡಿದಿದ್ದಾರೆ. ಅದನ್ನು ನೋಡಿಕೊಂಡು ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಬ್ಬ ಆರ್ಡಿನರಿ ಸಿಟಿಜನ್..........

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ ಅವರು ಮುಕ್ತಾಯ ಮಾಡಲಿ. ಆಮೇಲೆ ನೀವು ಕೇಳಿ.

ಶ್ರೀ ಬಿ. ರಾಚಯ್ಯ.—ಇಷ್ಟು ಜನ ಮಾತನಾಡಿದ್ದಾರೆ. ಅವರ ಮೊದಲನೇ ಪಾಯಿಂಟು 'ರಾಜೀನಾಮೆ ಕೊಡು' ಎಂದು. ಅಲ್ಲವೇ ಸ್ವಾಮಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಬ್ಬ ಸಾಮಾನ್ಯ ಪ್ರಜೆ ಕೊಲೆ ಮಾಡಿದರೆ ೩೦೨ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡುತ್ತಾರೆ. ಅದನ್ನು ಮಾಡಿ.

ಶ್ರೀ ಬಿ. ರಾಚಯ್ಯ.—ತಾವು ಸ್ವಲ್ಪ ಕೇಳಬೇಕು. ಜುಡಿಶಿಯಲ್ ಎನ್‌ಕ್ವೈರಿ ಮಾಡುವ ಉದ್ದೇಶ ಏನು ? ಆ ಸಂದರ್ಭ ಏನಿತ್ತು, ಬೇರೆಲ್ಲಾ ಮಾಹಿತಿಯೂ ಈಚೆಗೆ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ........

ಅಧ್ಯಕ್ಷರು.—ಶ್ರೀ ಖರ್ಗೆಯವರೇ ಅವರಿಂದ ಉತ್ತರ ಬೇಕೋ ಬೇಡವೋ ಹೇಳಿ. ಇಲ್ಲದಿದ್ದರೆ ಮುಕ್ತಾಯ ಮಾಡಿಬಿಡುತ್ತೇನೆ.

ಶ್ರೀ ಬಿ. ರಾಚಯ್ಯ.—ಈಗ ಬಸವಲಿಂಗಪ್ಪನವರು ಮಾತನಾಡಿದ್ದಾರೆ. ಅವರಿಗೆ ಈ ಕಾಯಿದೆ ಪ್ರಕಾರ ನೀವು ಕನ್‌ಫೈನ್‌ಮೆಂಟ್‌ನಲ್ಲಿ ಇಟ್ಟಿರಲ್ಲ ಅವರ ಮೇಲೆ ಏಕೆ ಆ್ಯಕ್ಷನ್ ತೆಗೆದುಕೊಳ್ಳಬಾರದು ಎಂದು ಹೇಳಿದ್ದಾರೆ. ೩೦೨ರ ಪ್ರಕಾರ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಈ ವಿಷಯವನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಬಹುಶಃ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಕೂಡ ಮಾಡುತ್ತಿದ್ದೇವೆ. ಬಹುಶಃ ಅವರು ನಿರೀಕ್ಷೆ ಮಾಡಿದ ಮಟ್ಟದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಹಾಗೆಯೇ ಡಿವೈಎಸ್‌ಪಿ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಿದ್ದಾರೆ. ಅವರು ಕೊಟ್ಟ ಎಕ್ಸ್‌ಪ್ಲನೇಷನ್ ಪ್ರಕಾರ, ಅದರನ್ನು ಇನ್ನೂ ಅಮಾನತ್ತಿನಲ್ಲಿ ಇಟ್ಟಿಲ್ಲ. ಡಿ. ಜಿ ಗೆ ಅಧಿಕಾರ ಕೊಟ್ಟಮೇಲೆ ಅವರು ಇನ್ನೂ ಇಟ್ಟಿಲ್ಲ. ಆದ್ದರಿಂದ ಎನ್‌ಕ್ವೈರಿ ಆದಮೇಲೆ ಅವರು ತಪ್ಪಿತಸ್ಥರಾದರೆ ಕ್ರಮತೆಗೆದುಕೊಳ್ಳದೇ ಬಿಡುವುದಿಲ್ಲ. ನನ್ನ ಕೈಯಿಂದ ಕೂಡ ಇಬ್ಬರು–ಮೂವರು ಡಿ. ಎಸ್. ಪಿ. ಗಳು ಇಂತಹ ಕೇಸುಗಳಿಗೆ ಸಿಕ್ಕಿಸಿ ಇವತ್ತು ಅವರು ಕೋರ್ಟಿನಲ್ಲಿ ಹೋಗಿ ಫೇಸ್ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದ ಇವೊತ್ತು ಅವರು ಯಾರೂ ಒಂದು ಗುಂಪಿಗೆ ಸೇರಿದವರು, ಸಂಬಂಧಪಟ್ಟಿದ್ದವರು ಎಂಬುದು ಮುಖ್ಯವಲ್ಲ, ಇವತ್ತು ದೇಶದ ಜನತೆಯ ಪ್ರಾಣ ಮಾನ ಮತ್ತು ಆಸ್ತಿಪಾಸ್ತಿಗಳನ್ನು ಕಾಪಾಡತಕ್ಕಂಥ ಜವಾಬ್ದಾರಿಯನ್ನು ಈ ಇಲಾಖೆ ಮೇಲೆ ಕೊಟ್ಟಿರುವುದರಿಂದ, ಬಹುಶಃ ಈ ಇಲಾಖೆಯನ್ನು ಒಂದೇ ದಿಕ್ಕಿನಲ್ಲಿ ತೆಗೆದುಕೊಂಡು ಹೋಗತಕ್ಕಂಥ ವ್ಯವಸ್ಥೆ ಮಾಡಬೇಕಾಗಿದೆ. ಇಂಥ ಕ್ರಮ ತೆಗೆದುಕೊಂಡಾಗ ಪೋಲೀಸ್ ಅಧಿಕಾರಿಗಳಲ್ಲಿ ಅಸಂತೃಪ್ತಿ ಇರತಕ್ಕದ್ದು ಸ್ವಾಭಾವಿಕ. ಕೆಲವು ಸಂದರ್ಭಗಳಲ್ಲಿ ಕೆಲವರಿಗೆ ಪ್ರಮೋಶನ್ ಸಿಕ್ಕಿರುತ್ತದೆ, ಇನ್ನು ಕೆಲವರಿಗೆ ಸಿಕ್ಕಿರುವುದಿಲ್ಲ ಎನ್ನುವ ಭಾವನೆ ಇಟ್ಟುಕೊಂಡಿರುತ್ತಾರೆ. ಅದ್ದರಿಂದ ನಿಯಮಾವಳಿಯ ಪ್ರಕಾರ ಮಾಡತಕ್ಕದ್ದು ಸರಿಯಾಗಿದೆ. ಈ ದೃಷ್ಟಿಯಿಂದ ನೋಡಿದರೆ ಇವರು ಪೋಲೀಸ್ ಇಲಾಖೆ ಹಿಂದೆ ಇದ್ದಂಥ ರೀತಿಯಲ್ಲಿ ನಡೆದುಕೊಂಡಿರುವ ಹಾಗೆ ಕಾಣುವುದಿಲ್ಲ. ಬೇರೆ ರೀತಿಯ ಪೋಲೀಸ್ ಆರ್ಗನೈಸೇಶನ್ ಎಂದು ಮಾಡಿಕೊಂಡು ಸರ್ಕಾರವನ್ನು ರೆಬೆಲ್ ಮಾಡತಕ್ಕಂಥ ಸಂದರ್ಭವನ್ನು ಕೂಡ ನಾನು ನೋಡಿದ್ದೇನೆ. ಆದ್ದರಿಂದ ಅಂತಹ ಸಂದರ್ಭಬಾರದು ರೀತಿಯಲ್ಲಿ ಅವರ ಕುಂದುಕೊರತೆಗಳನ್ನು ಕೂಡ ಕೇಳಿ ಬಹುಶಃ ಎಷ್ಟರಮಟ್ಟಿಗೆ ಸರಿಪಡಿಸಬೇಕು, ಅದನ್ನು ಮಾಡಿಕೊಂಡು ಈ ಕೆಲಸವನ್ನು ಮಾಡಬೇಕಾಗಿದೆ. ಈ ದೃಷ್ಟಿಯಿಂದ ಇವೊತ್ತು ಡಕಾಯತಿಯಾಗಲೀ, ರಾಬರಿಯಾಗಲೀ, ಕೊಲೆಗಳಾಗಲೀ, ಹೆಣ್ಣುಮಕ್ಕಳ ಮೇಲೆ ಆಗತಕ್ಕಂಥ ಹೀನಾಯ ಕೃತ್ಯಗಳಾಗಲೀ. ಇವುಗಳ ಬಗ್ಗೆ ಒಂದು ಪಟ್ಟಿ ಇದೆ. ಈ ಪಟ್ಟಿಯನ್ನು ನನ್ನ ಇಲಾಖೆಯ ಬೇಡಿಕೆ ಮೇಲೆ ಚರ್ಚೆಯಾಗತಕ್ಕಂಥ ಕಾಲದಲ್ಲಿ ಪೂರ್ಣ ವಿವರ ಕೊಡುವುದಕ್ಕೆ ಸಮಯವನ್ನು ಉಪಯೋಗಿಸಿ ಕೊಳ್ಳುತ್ತೇನೆ. ಇಷ್ಟು ಮಾತ್ರ ಹೇಳಬಲ್ಲೆ. ಇವತ್ತು ಈ ಪೋಲೀಸ್ ಗೋಲಿಬಾರ್ ಮಾಡಿರತಕ್ಕದ್ದು ವೈಯಕ್ತಿಕವಾಗಿ ಮತ್ತು ಮುಖ್ಯಮಂತ್ರಿಗಳ ದೃಷ್ಟಿಯಿಂದೆ ಕೂಡ ಇದು ಆಗಬಾರದಾಗಿತ್ತು. ಇದು ಮಾಡಿದ್ದುದು ಖಂಡನೀಯ ಎಂದು ಬಹಿರಂಗವಾಗಿ ಕೂಡ ಒಪ್ಪಿಕೊಂಡಿದ್ದೇವೆ. ಕೆಲವು ಪೋಲೀಸ್ ಅಧಿಕಾರಿಗಳು ನಾವು ಏನೇ ಮಾಡಿದರೂ ಕೂಡ ನ್ಯಾಯಾಂಗ ತನಿಖೆಗೆ ಒಳಪಡಿಸುತ್ತಾರೆ ಎಂದು ಭಾವಿಸಿದರೆ, ಕೆಲವರಿಗೆ ಇದು ಮಾಡಿರುವುದು ಸರಿ ಎಂದು ಹೇಳುವ

ಪರಿಸ್ಥಿತಿ ಇದೆ. ಆದ್ದರಿಂದ ಚೊಕ್ಕದಾದ, ಶುದ್ಧವಾದ ಆಡಳಿತವನ್ನು ನಡೆಸಬೇಕಾಗಿದ್ದರೆ ಎಲ್ಲವೂ ಸರಿಯಾಗುವುದಿಲ್ಲ. ನಡೆದುಕೊಂಡು ಬಂದಿರತಕ್ಕದ್ದನ್ನು ನೋಡಿದಾಗ ಪಕ್ಷಾತೀತವಾಗಿ ಇದನ್ನು ಮಾಡಬೇಕೆಂದು ಹೊರಟಾಗ ಯಾರಾದರೂ ಒಬ್ಬ ಅಧಿಕಾರಿಗಳಿಗೆ ಶಿಕ್ಷೆ ಕೊಟ್ಟುಬಿಟ್ಟರೆ ಮಂತ್ರಿಗಳು ರಾಜೀನಾಮೆ ಕೊಡಬೇಕಾಗಿಲ್ಲ.

ಪ್ರಜಾಪ್ರಭುತ್ವದಲ್ಲಿ ಬಹುಶಃ ಅದಕ್ಕೆ ಹೊಣೆಗಾರರಾಗತಕ್ಕಂಥವರು ನಾವು. ಉತ್ತರ ಕೊಡತಕ್ಕಂಥವರು ನಾವು ಯಾರು ತಪ್ಪು ಮಾಡಿದ್ದಾರೆ, ಯಾರು ಕಾನೂನು ಪ್ರಕಾರ ಮೀತಿಮೀರಿದ್ದಾರೆ ಎನ್ನುವುದನ್ನು ನೋಡುವ ಸ್ಥೈರ್ಯ ನಮ್ಮಲ್ಲಿ ಇರಬೇಕು. ಆ ದೃಷ್ಟಿಯಲ್ಲಿಯೇ ನಾವು ಮಾಡಿಕೊಂಡು ಬರುತ್ತಿದ್ದೇವೆ. ಇವೊತ್ತು ದಾರಿಯಲ್ಲಿ ಹೋಗುವ ಹೆಣ್ಣುಮಕ್ಕಳಿಗೆ ಈ ರೀತಿ ಮಾಡಿದರು ಎಂದು ಹೇಳುವುದಲ್ಲ. ನಾನು ಇವತ್ತೂ ಕೂಡ ಹೇಳುತ್ತೇನೆ, ರಾಜಿನಾಮೆ ಕೊಡಿ ಎಂದು ಹೇಳುತ್ತಿದ್ದಾರೆ. ನಾನು ಈವರೆಗೆ ಎಷ್ಟೋಸಾರಿ ರಾಜಿನಾಮೆ ಕೊಟ್ಟಿದ್ದೇನೆ, ಎಷ್ಟೋ ಸಾರಿ ಬಿಟ್ಟಿದ್ದೇನೆ. ಅದು ಬೇರೆ ವಿಚಾರ. ಶ್ರೀಮತಿ ನಾಗರತ್ನಮ್ಮನವರು ಮುಖ್ಯಮಂತ್ರಿಗಳಾಗುವುದಾದರೆ ನಾನು ಕೊಡುತ್ತೇನೆ. ಏಕೆಂದರೆ ಒಂದುಸಾರಿ ಅವರನ್ನು ಮುಖ್ಯಮಂತ್ರಿಗಳಾಗಿ ನೋಡಬೇಕೆಂಬ ಆಸೆ.

ಶ್ರೀ ಜಿ. ಮಾದೇಗೌಡ.—ಅವರ ಬಗ್ಗೆ ನಿಮಗೆ ವಿಶ್ವಾಸ ಇದ್ದರೆ ನೀವೆಲ್ಲರೂ ರಾಜಿನಾಮೆ ಕೊಡಿ, ನಾವು ಅವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ನಾನು ವಿವರವಾಗಿ ಒಬ್ಬೊಬ್ಬ ಮಾನ್ಯ ಸದಸ್ಯರು ಮಾತನಾಡಿದ ವಿಷಯದಲ್ಲಿ ಉತ್ತರ ಕೊಡುವುದಕ್ಕಾಗುವುದಿಲ್ಲ. ನಾಲ್ಕಾರು ವಿಷಯಗಳ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಇಂತಹ ಘಟನೆಗಳು ಮತ್ತೆ ಆಗದರೀತಿ ಕಠಿಣವಾದ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಬಹುಶಃ ಯಾವ ಪಕ್ಷ ಮತ್ತು ಜಾತಿ ನನ್ನ ಮುಂದೆ ಬರುವುದಿಲ್ಲ. ಎಲ್ಲಿಯವರೆಗೆ ಈ ಕೆಲಸ ನನಗೆ ಸರಿ ಎಂದು ಕಾಣುತ್ತದೋಯೋ ಅಲ್ಲಿಯವರೆಗೆ ಇರುತ್ತೇನೆ. ಎಂದು ನನಗೆ ಸರಿ ಎಂದು ಕಾಣುವುದಿಲ್ಲ, ಆ ದಿನ ನಾನು ಬಿಡುತ್ತೇನೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ಸಮಾಧಾನವಾಗಿ ಕೇಳಿದ್ದೇವೆ. ಅವರ ಈಗ್ಗೆ ಮೂರು ವರ್ಷಗಳಿಂದ ಉತ್ತರ ಕೊಟ್ಟಿದ್ದಕ್ಕೂ, ಈಗ ಕೊಟ್ಟಿರುವುದಕ್ಕೂ ಏನೂ ವ್ಯತ್ಯಾಸ ಇಲ್ಲ. ಅದೇ ಭಾಷೆ, ಅದೇ ಶೈಲಿ, ವ್ಯತ್ಯಾಸ ಏನೂ ಇಲ್ಲ. ನಾವು ಇಲ್ಲಿಂದ ಪ್ರಕಾಶ ಬೀರತತ್ಕಂಥದ್ದು ಒಂದು. ಮೂರು ವರ್ಷಗಳಿಂದ ಆಗಿರತಕ್ಕಂಥ ಆಡಳಿತ ಹೇಗಿತ್ತು? ಈಗ ಹೇಗಿದೆ, ಏನು ಮಾಡುತ್ತೀರಿ ಎಂದು ಕೇಳಿದ್ದೆವು, ಅದಕ್ಕೆ ಉತ್ತರ ಕೊಟ್ಟಿಲ್ಲ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿದ್ದಾರೆ.

ಅಧ್ಯಕ್ಷರು.— ಮಾನ್ಯ ಬಸವಲಿಂಗಪ್ಪನವರೇ, ಕ್ಲಾರಿಫಿಕೇಷನ ಮಾತ್ರ ಕೇಳಿ......

ಶ್ರೀ ಬಿ. ಬಸವಲಿಂಗಪ್ಪ.— ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ.

"The Chief Minister Ramakrishna Hegde today lashed out at the State police for their trigger happy, attitude and asked them to refrain from using the people as 'firing targets' He said, policemen must be friend, philospher and guide of the commonman. He told the officers tha firing should be the last measure and that too with extrem restiaint, He said, the recent police firing in Bangalor Tumkur, and Mysore could havebeen avoided if the poli had handled the situation properly" ಇದು ಪತ್ರಿಕೆಯಲ್ಲಿ ಪ್ರಕ ಮಾನ್ಯ ಸದಸ್ಯರೂ ಇದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಮಾನ್ಯ ರಾಮಯ್ಯನವರೂ ಸರಿಯಾಗಿ ಹೇಳಿದ್ದಾರೆ. ನಿಮ್ಮ ಅನಿಸಿಕೆ ಏನಿದೆ, ಪೋಲೀಸ್ ಆಡಳಿತ ಸರಿಯಿಲ್ಲ ಎಂದು ಸ್ಪಷ್ಟ ಹೇಳಿದ್ದೀರಿ ಮಾನ್ಯ ಹೆಗಡೆಯವರೇ ಈ ಒಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಇವೊತ್ತು ಅವರ

ಜವಾಬ್ದಾರಿ ಇದೆ, ನಿಮ್ಮದೂ ಜವಾಬ್ದಾರಿ ಇದೆ ಎಂದು ಹೇಳುತ್ತೇವೆ. ಪಾವಗಡದ ವಿಷಯ ತೆಗೆದು ಕೊಂಡು ಏನು ಉತ್ತರ ಕೊಟ್ಟರೂ ಸಮಾಧಾನವಾಗುವುದಿಲ್ಲ ನಿಮ್ಮ ಆಡಳಿತ ಏನಿದೆ ಅದು ದಾರಿ ತಪ್ಪಿದೆ ನಿಮ್ಮ ಪೋಲೀಸ್ ಆಫೀಸರ್ಸ್ ಮೇಲೆ ಹಿಡಿತ ಇ . ಪೋಲೀಸಿನವರು ಮಾಡಿದ್ದೇ ಮಾಡುತ್ತಾರೆ. ಮಾಡಬಾರದದ್ದೂ ಮಾಡುತ್ತಾರೆಂದು ಮಾನ್ಯ ರಾಮಕೃಷ್ಣ ಹೆಗಡೆಯವರೇ ಹೇಳಿದ್ದಾರೆ ಆದ್ದರಿಂದ ಇದರ ಬಗ್ಗೆ ಅವರ ಮನಸ್ಸಿನ ಹಿನ್ನೆಲೆಯಲ್ಲಿ ಅವರಿಂದ ವಿವರಣೆ ಬರಬೇಕಾಗುತ್ತದೆ. ಅವರಿಂದ ವಿವರಣೆ ಬರಬೇಕೆಂದು ನಾನು ಕೇಳುತ್ತೇನೆ.

ಅಧ್ಯಕ್ಷರು.— ತಾವು ಉತ್ತರ ಕೊಡುತ್ತೀರಾ ?......

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ — ಈ ಘಟನೆಯಾದ ಮೇಲೆ, ಮುಖ್ಯ ಮಂತ್ರಿಗಳು, ಪೋಲೀಸ್ ಆಫೀಸರ್ಸ್ ಸಮ್ಮೇಳನದಲ್ಲಿ ಕಾಮೆಂಟ್ಸ್ ಮಾಡಿದ್ದಾರೆ. ಹಿರಿಯ ಅಧಿಕಾರಿಗಳೂ ಕೆಲವು ವಿಷಯಗಳನ್ನು ರಿಟ್ ಮಾಡಿ ಪ್ರಕ್ರಿಯ ಮಾಡಿದ್ದಾರೆ. ಕೆಲವು ಸಂದರ್ಭದಲ್ಲಿ, ರಾಜಕಾರಣದಲ್ಲಿ ಜನರಲ್ ಅಡ್ಮಿನಿಸ್ಟ್ರೇಷನ್ ಹೊತ್ತಿರತಕ್ಕಂಥವರ ಮೇಲೂ ಜವಾಬ್ದಾರಿ ಇರುತ್ತದೆ ಪ್ರಿ ಮೆಚೂರ್ ಟ್ರಾನ್ಸ್‌ಫರ್ ಮಾಡುವವರು ಚೀಫ್ ಮಿನಿಸ್ಟರು, ಹೋಂ ಮಿನಿಸ್ಟರ್ ಆರ್ಡರ್ ಮಾಡಿದರೆ, "ಸ್ಟೇ" ಕೊಡುವವರೂ ಇವರೇ. ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆಗೂ, ಗೃಹಮಂತ್ರಿಗಳ ಹೇಳಿಕೆಗೂ ವ್ಯತ್ಯಾಸವಾಗುತ್ತದೆ ಆದುದರಿಂದ ಈ ಬಗ್ಗೆ ಅವರಿಂದ ಉತ್ತರ ಬಂದಿಲ್ಲ... ..

ಅಧ್ಯಕ್ಷರು.— ಮಾನ್ಯ ಖರ್ಗೆಯವರೇ ಕ್ಲಾರಿಫಿಕೇಷನ್ ಕೇಳಿ,, ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಕೇಳಿದ್ದಕ್ಕೆ ಏನೂ ಉತ್ತರ ಬಂದಿಲ್ಲವಲ್ಲ.

ಅಧ್ಯಕ್ಷರು.— ಮಾನ್ಯ ಬಸವಲಿಂಗಪ್ಪನವರು ಏನು ಕೇಳಿದ್ದಾರೆ ಅದಕ್ಕೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ ಅವರು ಉತ್ತರ ಹೇಳಲಿ......

ಅಧ್ಯಕ್ಷರು.— ಅದಕ್ಕೆ ಉತ್ತರ ಹೇಳಲು ರಾಚಯ್ಯನವರೇ ಎದ್ದುನಿಂತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ರಾಚಯ್ಯನವರು ಉತ್ತರ ಹೇಳಿದ್ದಾರೆ, ಅದನ್ನು ಕೇಳಿದ್ದೇವೆ. ಅದಕ್ಕೆ ಏನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳುತ್ತೇವೆ.

ಶ್ರೀ ಬಿ. ರಾಚಯ್ಯ.—ಪತ್ರಿಕೆಯಲ್ಲಿ ವರದಿಯಾಗತಕ್ಕಂಥ ವಿಷಯವನ್ನು ಮಾನ್ಯ ಬಸವಲಿಂಗಪ್ಪನವರು ಹೇಳಿದ್ದಾರೆ. ಪತ್ರಿಕೆಯಲ್ಲಿ ಅದಂಥ ಕಾಮೆಂಟ್ಸ್ ಕೂಡಾ ಹೇಳಿದ್ದಾರೆ. ಪತ್ರಿಕೆಯವರು ಯಾರು ಯಾರನ್ನು ಕೋಟ್ ಮಾಡಿದ್ದರು, ಅವರು ಏನು ಹೇಳಿದ್ದಾರೆ, ಅವರ ಬಗ್ಗೆ ಕಾಮೆಂಟ್ಸ್ ಕೊಟ್ಟಿದ್ದಾರೆ. ನಾನು ಇಷ್ಟು ಮಾತ್ರ ಹೇಳಬಲ್ಲೆ. ಪಾವಗಡದಿಂದ ಮೊದಲು ಬಂದು ಮಾತನಾಡಿದವನು ನಾನು. ಮಾನ್ಯ ಮುಖ್ಯ ಮಂತ್ರಿಗಳು ದೂರದಿಂದ ಈ ವಿಷಯವನ್ನು ವ್ಯಕ್ತಪಡಿಸಿದ್ದಾರೆ. ಅನೇಕ ಡಕಾಯಿತರನ್ನು ಹಿಡಿದಿದ್ದಕ್ಕೋಸ್ಕರ ಅನೇಕ ರೌಡಿಗಳನ್ನು ಹಿಡಿದಿದ್ದಕ್ಕೋಸ್ಕರ ಪೋಲೀಸರನ್ನು ಕಾಂಪ್ಲಿಮೆಂಟ್ ಮಾಡಿದ್ದೇನೆ, ಆದರೆ ಈ ವರ್ಷ ಆ ಸ್ಥಿತಿಯಲ್ಲಿ ಇಲ್ಲ ಎಂದು ಅವರು ಹೇಳಿದ್ದಾರೆ. ತಪ್ಪು ಮಾಡಿದಾಗ ನಾನು ಆ ರೀತಿ ಮಾಡಲು ಆಗುವುದಿಲ್ಲ ಎಂದು ಹೇಳಿದ್ದಾರೆ ಆಗ ಪಾವಗಡದ ವಿಷಯ ಹೇಳಿದ್ದಾರೆ. ಅಂದ ಮಾತ್ರಕ್ಕೆ ಸರಕಾರದಲ್ಲಿ ಆಡಳಿತ ಹಿಡಿದುಕೊಂಡಿರತಕ್ಕಂಥವರು ಪೋಲೀಸರಿಗೆ ಮಾರ್ಗದರ್ಶನ ಮಾಡಬೇಕು. ಅದು ಅವರ ಕರ್ತವ್ಯ, ಆ ಕೆಲಸವನ್ನು ಅವರು ಮಾಡಿದ್ದಾರೆ. ಬಹುಶಃ ನಾವು ವಿರೋಧ ಪಕ್ಷದವರು ಹೇಳಿದ್ದೆಲ್ಲ ಸರಿಯಲ್ಲ ಎಂದು ಪೋಲೀಸರನ್ನು ಡಿಫೆಂಡ್ ಮಾಡುವುದಾಗಿದ್ದ ಪಕ್ಷದಲ್ಲಿ ಅದು ನಿಜವಾದ ಆಡಳಿತ ಆಗುವುದಿಲ್ಲ. ನಮ್ಮವರೇ ತಪ್ಪು ಮಾಡಿರಲಿ, ನಾವು ಆಡಳಿತ ನಡೆಸುವವರೇ ಆಗಿರಲಿ, ಬಹಿರಂಗವಾಗಿ ಟೀಕೆ ಮಾಡಿದ್ದೇವೆ. ಯಾರು ಒಳ್ಳೆಯ ಕೆಲಸ ಮಾಡಿದ್ದಾರೆ ಅವರನ್ನು ಬಹಿರಂಗವಾಗಿ ಕಾಂಪ್ಲಿಮೆಂಟ್ ಮಾಡಿದ್ದೇವೆ. ಮಾನ್ಯ ಬಸವಲಿಂಗಪ್ಪನವರೂ ಡೆಪ್ಯೂಟಿ ಹೋಂ ಮಿನಿಸ್ಟರ್ ಆಗಿ ಆಡಳಿತ ನಡೆಸಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.— ಆಗ ನಾವು ಸರಿಯಾಗಿ ಉತ್ತರ ಹೇಳಿದ್ದೇವೆ. ಈಗ ನೀವು ಹೇಳಿ ಎಂದು ಕೇಳುತ್ತಿದ್ದೇವೆ.

ಶ್ರೀ ಬಿ. ರಾಚಯ್ಯ.— ಆಗ ನಾನೂ ಇದ್ದೆ ನೀವು ಡೆಪ್ಯುಟಿ ಹೋಮ್ ಮಿನಿಸ್ಟರ್ ಆಗಿ ಬಂದಾಗ ಚಾಮರಾಜನಗರದ ವಿಷಯ ಬಂದಾಗ ಏನು ನಡೆಯಿತು ಎಂದು ಗೊತ್ತು. ಆಗ ನಾನೂ ಇದ್ದೆ, ಈಗ ಪೋಲೀಸ್ ಅಧಿಕಾರಿಗಳಿಂದ ನಾನು ಪಕ್ಷಕ್ಕೇ ಆಗಲಿ, ಏತಕ್ಕೇ ಆಗಲಿ, ಒಂದು ಪೈಸೆ ಲಂಚ ಹೊಡೆದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ಅದನ್ನು ಯಾರು ಹೇಳಿದರು ?

ಶ್ರೀ ಬಿ. ರಾಚಯ್ಯ.— ಅವರು ಏನು ಹೇಳಿದರು ಎಂದು ಗೊತ್ತಿದೆಯೋ ? ಪೋಲೀಸ್ ಆಫೀಸರ್ಸನ್ನು ಸಮಯ ಬಂದಾಗ ಉಪಯೋಗಿಸಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ, ಅದೂ ಒಂದು ಸೆಂಟೆನ್ಸ್ ಬಂದಿದೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅದು ನ್ಯೂಸ್ ಪೇಪರ್‌ನಲ್ಲಿ ಬಂದಿರತಕ್ಕ ಸೆಂಟೆನ್ಸ್, ಅವರು ಹೇಳಿದ್ದೇ. ದುಡ್ಡು ಹೊಡೆಯುತ್ತಾರೆ ಎಂದು ಅಲ್ಲ. ಬೇರೆ ರೀತಿಯಿಂದ ಯಾರಿಗೆ ಹೊಡೆಸಬೇಕು ಹೊಡೆಸುವುದು, ಅದೆಲ್ಲಾ ಮಾಡುತ್ತಾರೆ ಎಂದು...

(ಗೊಂದಲ)

ಶ್ರೀ ಬಿ. ರಾಚಯ್ಯ.— ರಾಜಕಾರಣಿಗಳು ಪೋಲೀಸರಿಂದ ದುಡ್ಡು ಹೊಡೆಯುತ್ತಾರೆ ಎಂದು ಹೇಳುವಾಗ್ಗೆ, ನಾನು ಎಲ್ಲರಿಗೂ ಜವಾಬ್ದಾರನಾಗಿ ಹೇಳುವುದಕ್ಕೆ ಆಗುವುದಿಲ್ಲ. ವೈಯುಕ್ತಿಕವಾಗಿ ಹೇಳಬೇಕು. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾನು ಯಾವ ಹೆಂಗಸರನ್ನೂ ಕೂಡಾ ಕೆಡಿಸಿಲ್ಲ. ಸುಮ್ಮನೆ ನನ್ನ ಸಹನೆಯನ್ನು ಪರೀಕ್ಷೆ ಮಾಡುವುದಕ್ಕೆ ಪ್ರಯತ್ನ ಮಾಡುವುದು ಬೇಡ, ನಾನು ಲೂಟಿ ಹೊಡೆದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹೆಂಗಸರನ್ನು ಕೆಡಿಸಿದ್ದಾರೆ ಎಂದು ಯಾರು ಅಂದರು. ನಮ್ಮ ಆಪಾದನೆ ಏನೆಂದರೆ you are inefficinet to manage, you answer give for that. You are not able to deliver the goods (including the Chief Minister) You have failed in your duty. Why are you diverting. please do ot divert the issue. It has appeared in newspapers and your officers themselves have told that. ಅದನ್ನು ಡಿಫೆಂಡ್ ಮಾಡಿಕೊಳ್ಳಿ. ಹೆಣ್ಣು ಮಕ್ಕಳನ್ನು ಕೆಡಿಸಿದ್ದಾರೆ ಎಂದು ಯಾರು ಚಾರ್ಜ್ ಮಾಡಿದರು ದುಡ್ಡು ತಿಂದಿದ್ದಾರೆ ಎಂದು ಯಾರು ಚಾರ್ಜ್ ಮಾಡಿದರು. ನಾವು ಪ್ರಶ್ನೆ ಕೇಳುವುದು ಒಂದು ಅವರು ಉತ್ತರ ಕೊಡುವುದು ಒಂದು

(ಗೊಂದಲ)

ಬೇಕಾದಾಗ ನಮ್ಮನ್ನು ಉಪಯೋಗ ಮಾಡಿಕೊಳ್ಳುತ್ತಾರೆ, ಬೇರೆ ಸಮಯದಲ್ಲಿ ನಮ್ಮನ್ನು ಕೈ ಬಿಡುತ್ತಾರೆ ಎಂದು ಕೆಲವು ಪೋಲೀಸ್ ಅಧಿಕಾರಿಗಳೇ ಹೇಳಿದ್ದಾರೆ.

ಶ್ರೀ ಬಿ. ರಾಚಯ್ಯ.— ಪೋಲೀಸ್ ಅಧಿಕಾರಿಗಳನ್ನು ಏತಕ್ಕೂ ಉಪಯೋಗಿಸಿಕೊಂಡಿಲ್ಲ. ಅದನ್ನು ಇವತ್ತು ನಾನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಒಂದು ವಿಷಯ......

ಅಧ್ಯಕ್ಷರು.— ಸ್ವಲ್ಪ ತಾವು ತಡೆಯಿರಿ, ಅವರು ಮುಕ್ತಾಯ ಮಾಡಲಿ...

ಶ್ರೀ ಬಿ. ರಾಚಯ್ಯ.— ಪ್ರಾಮಾಣಿಕತೆ ಎಂದು ಹೇಳಿದರೆ, ಯಾವ ಪ್ರಾಮಾಣಿಕತೆ ಇದೆ ದೇಶದಲ್ಲಿ. ನಾನು ಪ್ರಾಮಾಣಿಕವಾಗಿಯೇ ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಒಂದು ನಿಮಿಷ ತಾವು ಅವಕಾಶ ಕೊಟ್ಟರೆ ಹೇಳುತ್ತೇನೆ ನಾನು ಕೂಡಾ ರಾಜೀನಾಮೆ ಕೊಡಬೇಕೆಂದು ಹೇಳಿದೆ. ಇಬ್ಬರೂ ರಾಜೀನಾಮೆ ಕೊಡಬೇಕೆಂದು ನಾನು ಹೇಳಿದ್ದುದು ಎದ್ದು ಹೋಗುವ ಮಾತು ಬಿದ್ದು ಹೋಗಲಿ ಎಂದು ಅಲ್ಲ......

(ಗೊಂದಲ)

ಅಧ್ಯಕ್ಷರು.— ಏನಾದರೂ ವಿವರ ಕೇಳುವುದು ಇದ್ದರೆ ಕೇಳಿರಿ...

ಶ್ರೀ ಎಂ.ಎಸ್. ಕೃಷ್ಣನ್ —.ಮಾನ್ಯ ನಾರಾಯಣ ಕುಮಾರ್ ಅವರಿಗೆ ನಾವು ಓಟು ಕೊಟ್ಟೆವಲ್ಲ ನಾವು ಏನು ಪಾಪ ಮಾಡಿದ್ದೆವು ಎಂದು ಜನ ಪರಿತಪಿಸುತ್ತಿದ್ದಾರೆ.

ಶ್ರೀ ಜಿ. ನಾರಾಯಣ ಕುಮಾರ್.—ಎಂ.ಎಸ್. ಕೃಷ್ಣನ್ ಅವರ ಕೈಲಿ ಪ್ರಚಾರ ಮಾಡಿಸಿಕೊಂಡ ಗೆದಿದ್ದರೆ ನಾನು ಈಗಲೇ ರಾಜೀನಾಮೆ ಕೊಡುತ್ತೇನೆ. ಅವರು ಸವಾಲನ್ನು ತೆಗೆದುಕೊಳ್ಳುತ್ತಾರೆಯೇ? ಮಾನ್ಯ ರಾಮಕೃಷ್ಣ ಹೆಗಡೆಯವರ ಕೈಯಲಿ ಪ್ರಚಾರ ಮಾಡಿಸಿಕೊಂಡು ಅವರು ಗೆದ್ದಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.— ಕಂಡಿದ್ದೇವೆ ಕುಳಿತುಕೊಳ್ಳಿ, ಬೆಂಗಳೂರಿನಲ್ಲಿ ನಾವು ನಿಮ್ಮನ್ನು ಕಂಡಿದ್ದೇವೆ

ಸಾಕು ಸುಮ್ಮನೆ ಕುಳಿತುಕೊಳ್ಳಿ. ನಾನು ನಿಮ್ಮನ್ನು ಬೆಂಗಳೂರಿನಲ್ಲಿ ಬಹಳ ದಿವಸಗಳಿಂದ ಕಂಡಿದ್ದೇನೆ. ನಾನು ಹೇಳುತ್ತಿರುವುದು ಬೇರೆ ದೃಷ್ಟಿಯಿಂದ........

(ಗೊಂದಲ)

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರೇ, ತಾವು ಪ್ರಶ್ನೆ ಕೇಳಿ.

ಶ್ರೀ ಎಂ, ಎಸ್. ಕೃಷ್ಣನ್.—ಮಾನ್ಯ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಮಾತನಾಡಿದ್ದುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಆದ್ದರಿಂದ ಆ ಬಗ್ಗೆ ಅವರೇ ವಿವರಣೆಯನ್ನು ಕೊಡಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆಯನ್ನು ಮಾನ್ಯ ಬಸವಲಿಂಗಪ್ಪನವರು ಓದಿದ್ದನ್ನು ನೋಡಿದರೆ ನಮಗೆಲ್ಲಾ ಭಯವಾಗುತ್ತದೆ......

ಅಧ್ಯಕ್ಷರು.—ತಾವು ಪ್ರಶ್ನೆ ಕೇಳಿ. ವಿವರಣೆ ಕೊಡುವುದಕ್ಕೆ ಹೋಗಬೇಡಿ.

SRI M. S KRISHNAN.—Pavagada Lockup Incident – Mr. Hegde said, it is a matter of shame and it has shaken the confidence of the people in the Police Force;

...He blamed the Police because they don't conduct regular inspection of Police Stations.

> ... 'Mr. Ramakrishna Hegde said, it become an established fact that whenevre women goes to the Police Station. she does not return safe''.

That means, there is no control. There is total de-control.

ಅಧ್ಯಕ್ಷರು.—ಈ ಮಾತನ್ನು ಎರಡನೇ ಸಲ ತಾವು ಹೇಳುತ್ತಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಆಮೇಲೆ. On the other side, they said there is total demoralisation in the police force. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ನಾನು ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇನೆ. Therefore. the Hon'ble Chief Minister should have stand up and said that he has not said like that and he should have clarified the position about the demoralisation of police force and all that.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ನಿರೀಕ್ಷೆ ಮಾಡಿದ್ದಕ್ಕಿಂತ ದೀರ್ಘವಾಗಿ ಈ ವಿಷಯದ ಮೇಲೆ ಚರ್ಚೆಯಾಗಿದೆ. ನನ್ನ ದೃಷ್ಟಿಯಲ್ಲಿ ಇಷ್ಟು ದೀರ್ಘವಾದ ಚರ್ಚೆಯ ಅವಶ್ಯಕತೆ ಇರಲಿಲ್ಲ. ಏತಕ್ಕೆಂದರೆ ಇದರ ಬಗ್ಗೆ ಈಗಾಗಲೇ ಎನ್‌ಕ್ವೈರಿ ಕಮಿಷನ್‌ಅನ್ನು ನೇಮಕ ಮಾಡುತ್ತೇವೆಂದು ಹೇಳಿದ್ದೇವೆ. ಅದು ಇಲ್ಲದಿದ್ದರೆ ಈ ಚರ್ಚೆ ಅಗತ್ಯವಿತ್ತು. ಅದನ್ನು ನಾನು ಸಹ ಒಪ್ಪಿಕೊಳ್ಳುತ್ತೇನೆ. ಒಂದನೆಯದಾಗಿ ರಾಜೀನಾಮೆ ಕೊಡಬೇಕೆಂದು ತಾವು ಕೇಳುತ್ತಿದ್ದೀರಿ. ರಾಜೀನಾಮೆ ಕೊಡಬೇಕೆಂದು ಕೇಳುವುದು ನಿಮ್ಮ ಹಕ್ಕು ಅದನ್ನು ನೀವು ಕೇಳಿ. ಆದರೆ ನಿಮ್ಮ ಪ್ಲೀಗೆ ನಾವು ರಾಜೀನಾಮೆಯನ್ನು ಕೊಡುವುದಕ್ಕೆ ತಯಾರಾಗಿಲ್ಲ. ಇವತ್ತಿನ ದಿವಸ ಜನರು ಏನು

ಹೇಳುತ್ತಾರೆ. ಜನರ ಅಭಿಪ್ರಾಯವೇನಿದೆ, ಆ ಬಗ್ಗೆ ನಾವು ಯೋಚನೆ ಮಾಡುವುದಾದರೆ ನಿಮಗಿಂತ ಹೆಚ್ಚು ಅಧಿಕಾರ ನಮಗಿದೆ. ಅದನ್ನು ತಾವು ಯಾರೂ ಮರೆಯಬೇಡಿ. ಅದಕ್ಕೆ ಕಾರಣ ವೇನೆಂದರೆ ಜನತೆ ನಮಗೆ ಬಹುಮತ ಕೊಟ್ಟಿದ್ದಾರೆ. ಹೆಚ್ಚು ಜನ ನಮ್ಮನ್ನು ಚುನಾಯಿಸಿದ್ದಾರೆ, ಅದಕ್ಕಾಗಿ......

(ಗೊಂದಲ)

ರಾಜೀನಾಮೆಯನ್ನು ಕೊಡುವ ಅಗತ್ಯವಿದ್ದರೆ ನಮ್ಮ ಹಿರಿಯ ಸಹೋದ್ಯೋಗಿಗಳಾದ ಶ್ರೀಮಾನ್ ರಾಚಯ್ಯನವರು ಒಂದು ನಿಮಿಷ ಕೂಡ ಹಿಂದೂಮುಂದು ನೋಡುತ್ತಿರಲಿಲ್ಲ ಆದರೆ ಅವರು ರಾಜಿನಾಮೆಯನ್ನು ಕೊಡುವ ಕಾರಣವಿಲ್ಲ. ಇನ್ನು ಎರಡನೆಯದಾಗಿ ಪತ್ರಿಕೆಗಳಲ್ಲಿ ಬಂದಾಂಥಾದ್ದು, ಪತ್ರಿಕಾ ಹೇಳಿಕೆಗಳನ್ನು ಅನೇಕ ಸಲ ತಾವು ಇಲ್ಲಿ ಓದಿದ್ದೀರಿ. ನಾನು ಏನು ಹೇಳಿದ್ದೇನೆ. ನಾನು ಏನು ಭಾಷಣ ಮಾಡಿದ್ದೇನೆ ಎನ್ನುವ ಟೆಕ್ಸ್ಟ್ ಅನ್ನು ನಿಮ್ಮ ಕೈಯಲ್ಲಿ ಇಟ್ಟುಕೊಂಡು ಸರಿಯಾದ ಚಿತ್ರವನ್ನು ಸದನದ ಮುಂದೆ ತಂದಿದ್ದರೆ ಒಂದು ತರಹ. ಆದರೆ ಆ ರೀತಿಯ ಟೆಕ್ಸ್ಟ್ ಅದಲ್ಲ. ಉದಾಹರಣೆಗೆ ನಾನು ಒಂದು ಮಾತನ್ನು ಹೇಳುತ್ತೇನೆ. ನಿನ್ನೆಯ ದಿವಸ ನಾನು ಈ ಸದನದಲ್ಲಿ ಬಡ್ಜೆಟ್ ಭಾಷಣ ಮಾಡಿದೆ. ಬಡ್ಜೆಟ್‌ನಲ್ಲಿ ಬರೀ ಟ್ಯಾಕ್ಸ್ ಮಾತ್ರ ಇದೆ, ಎನ್ನುವ ಅರ್ಥ ಬರುವ ರೀತಿಯಲ್ಲಿ ಎಲ್ಲಾ ಪತ್ರಿಕೆಗಳ ಮುಖ ಪುಟಗಳಲ್ಲಿ ಹೆಡ್‌ಲೈನ್ಸ್‌ನಲ್ಲಿ ಪ್ರಿಂಟ್ ಮಾಡಿದ್ದಾರೆ. ಪತ್ರಿಕೆಗಳಲ್ಲಿ ಬರುವಂಥಾದ್ದೆಲ್ಲಾ ಸುಳ್ಳು ಎಂದು ನಾನು ಹೇಳುತ್ತಿಲ್ಲ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳು.... ..

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ತಾವು ಈ ರೀತಿ ಮಾಡಿದರೆ ನಾನು ಹೇಗೆ ಮಾತನಾಡುವುದು ? ಈ ರೀತಿಯಾದರೆ ನಾನು ಕುಳಿತುಕೊಳ್ಳುತ್ತೇನೆ......

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಾವು ಹೇಳಿದ ಮಾತನ್ನು ಪತ್ರಿಕೆಗಳವರು ಸರಿಯಾಗಿ ವರದಿ ಮಾಡಿದ್ದರೂ, ಸಂಪೂರ್ಣವಾಗಿ ವರದಿಯಾಗಿರುವುದಿಲ್ಲ. ಸರಿಯಾಗಿರಬಹುದು. ಆದರೆ, ಸಂಪೂರ್ಣವಾಗಿ ಇರುವುದಿಲ್ಲ.

(ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಎದ್ದು ಗಲಾಟೆ ಮಾಡಿದರು)

SRI RAMAHKRISHNA HEGDE.—What is this ?

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನಾನು ಕೇಳುತ್ತಿದ್ದೇನೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್. ಮಾನ್ಯ ಉಮರಬ್ಬನವರು ಏನು ಮಾತ ನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. XXX

(ಗೊಂದಲ)

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಜಿ. ನಾರಾಯಣಕುಮಾರ್.—ಏನ್ ಬಾಯಿಗೆ ಬಂದ ಹಾಗೆ ಮಾತನಾಡುತ್ತಿದ್ದಾರೆ.

(ಗೊಂದಲ)

---

* Not recorded as orderd by the Chair.

ಅಧ್ಯಕ್ಷರು.—ತಾವೆಲ್ಲಾ ಕುಳಿತುಕೊಳ್ಳಿ. ಈಗ ಮಾನ್ಯ ಮುಖ್ಯ ಮಂತ್ರಿಗಳು ಮಾತ ನಾಡುತ್ತಾರೆ. ಅವರು ಮಾತನಾಡುವಾಗ ಯಾರೂ ಮಾತನಾಡತಕ್ಕದ್ದಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಆ ದಿವಸ ಪೋಲೀಸ್ ಅಧಿಕಾರಿಗಳ ಒಂದು ಮೀಟಿಂಗ್ ಇತ್ತು. ಆ ಸಂದರ್ಭದಲ್ಲಿ ನಾವು ಎಲ್ಲಾ ಹೇಳಿದ್ದೇವೆ. ಕೆಲವು ದಿವಸಗಳ ಹಿಂದೆ ಈ ಘಟನೆ ನಡೆಯಿತು. ಅದಕ್ಕೂ ಕೆಲವು ದಿವಸಗಳ ಹಿಂದೆ ಮತ್ತೊಂದು ಘಟನೆ ನಡೆದಿತ್ತು. ಅದಕ್ಕೂ ಹಿಂದೆ ಇನ್ನೊಂದು ಘಟನೆ ನಡೆದಿತ್ತು. ಇದರ ಬಗ್ಗೆ ಹಿರಿಯ ಪೋಲೀಸ್ ಅಧಿಕಾರಿಗಳ ಸಭೆಯಲ್ಲಿ ಗೃಹ ಸಚಿವರು ಮತ್ತು ನಾನು ಅಭಿಪ್ರಾಯಗಳನ್ನು ಹೇಳಿದ್ದೇವೆ. ಇದು ನಮ್ಮ ಆಡಳಿತಕ್ಕೆ ಸಂಬಂಧಪಟ್ಟಂಥ ವಿಚಾರ. ಕೇವಲ ಕರ್ನಾಟಕ ಪೋಲೀಸ್ ಬಗ್ಗೆ ಮಾತ್ರ ಅಲ್ಲ, ಇಡೀ ದೇಶದ ಪೋಲೀಸ್ ಡಿಪಾರ್ಟ್‌ಮೆಂಟ್ ವರ್ಕಿಂಗ್ ನೀತಿಯ ಬಗ್ಗೆ ಬಹಳಷ್ಟು ಚರ್ಚೆಯಾಗುತ್ತಿದೆ. ಈಗ ನಾನು ಬಿಹಾರ ರಾಜ್ಯದ ಪೋಲೀಸರ ಉದಾಹರಣೆ ಕೊಟ್ಟರೆ ತಾವೆಲ್ಲಾ ತಕ್ಷಣ ಎದ್ದು ನಿಲ್ಲುತ್ತೀರಿ. ಇಡೀ ದೇಶದ ಪೋಲೀಸ್ ಇಲಾಖೆಗೆ ಕರ್ನಾಟಕವನ್ನು ತುಲನೆ ಮಾಡಿ ನೋಡಿದಾಗ......

ಶ್ರೀ ಕೆ. ಹೆಚ್. ಪಾಟೀಲ್.—ಬೇರೆದಕ್ಕೆ ಹೋಲಿಸಿ ನಮ್ಮದು ಚೆನ್ನಾಗಿದೆ ಎಂದು ಹೇಳುವುದು ಸರಿಯಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನನ್ನ ಭಾಷಣದ ಮೊದಲನೆಯ ಭಾಗದಲ್ಲೇ ಹೇಳಿದ್ದೇನೆ. ಕರ್ನಾಟಕ ಪೋಲೀಸ್ ಅಧಿಕಾರಿಗಳು ನಮ್ಮ ಕರ್ನಾಟಕ ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತಂದಿದ್ದಾರೆ. ನಾನು ಅನೇಕ ಉದಾಹರಣೆಗಳನ್ನು ಕೊಟ್ಟು ಹೇಳಿದ್ದೇನೆ. ಸಾರ್ಕ್ ಸಮ್ಮೇಳನ ಆಯಿತು ಆನಂತರ ರಾಷ್ಟ್ರೀಯ ಪ್ರತಿನಿಧಿಗಳು ಬಂದಿದ್ದರು. ಸರ್ಕಾರದ ಮುಖ್ಯಸ್ಥರು ಬಂದಿದ್ದರು. ಎಲ್ಲರಿಗೂ ಮನಸ್ಸಿನಲ್ಲಿ ಸ್ವಲ್ಪಮಟ್ಟಿಗೆ ರಕ್ಷಣೆಯ ಬಗ್ಗೆ ಕಸಿವಿಸಿ ಇತ್ತು. ಆದರೆ, ಪೋಲೀಸಿನವರು ಅತಿ ಉತ್ತಮವಾಗಿ ಕೆಲಸವನ್ನು ಮಾಡಿದ್ದಾರೆ. ಅದೇ ರೀತಿ ರೈತರ ಚಳುವಳಿಯಾದಾಗ ಹೇಗೆ ಹ್ಯಾಂಡಲ್ ಮಾಡಿದರು ? ವೆಂಕಟಸ್ವಾಮಿ ಆಯೋಗದ ವಿರುದ್ಧ ಚಳುವಳಿ ನಡೆದಾಗ ಹೇಗೆ ಹ್ಯಾಂಡಲ್ ಮಾಡಿದರು ? ಕಳೆದ ಮೂರು ನಾಲ್ಕು ತಿಂಗಳಿನಲ್ಲಿ ಕೆಲವು ಘಟನೆಗಳು ನಡೆದಿವೆ. ಅದರ ಬಗ್ಗೆ ಪೋಲೀಸಿನವರಿಗೆ ಏನು ಬುದ್ಧಿವಾದ ಹೇಳಬೇಕೋ ಅದನ್ನು ಹೇಳಿದ್ದೇವೆ. ಈ ವಿಚಾರವನ್ನು, ಅವರ ಪರವಾಗಿ ನಾನು ಹೇಳಿದ್ದೇನೆ, ಅವರಿಗೆ ಕಾಂಪ್ಲಿಮೆಂಟ್ ಕೊಟ್ಟಿದ್ದೇವೆ. ಈ ವಿಷಯ ಪತ್ರಿಕೆಗಳಲ್ಲಿ ಬಂದಿಲ್ಲವೆಂದು ಅವರು ಮಾಡಿರುವ ವರದಿಯೇ ತಪ್ಪು ಎಂದು ಹೇಳುವುದಕ್ಕಾಗುತ್ತದೆಯೇ ? ಅದು ಸುಳ್ಳು ವರದಿ ಎಂದು ನಾನು ಹೇಳಲಾರೆ. ಆದರೆ, ಅದು ಸಂಪೂರ್ಣ ವರದಿಯಲ್ಲ. ಆದುದರಿಂದ ಈ ವಿಷಯವನ್ನು ಇಷ್ಟೊಂದು ದೀರ್ಘವಾಗಿ ಚರ್ಚೆ ಮಾಡುವ ಅಗತ್ಯ ಇರಲಿಲ್ಲ. ಮಾನ್ಯ ಗೃಹ ಸಚಿವರು ಸರಿಯಾದಂಥ ಉತ್ತರವನ್ನು ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದ ಮಟ್ಟಿಗೆ ಹೇಳುವುದಾದರೆ, ಅತಿ ಉತ್ತಮವಾದ ಮಟ್ಟವನ್ನು ಪೋಲೀಸ್ ಅಧಿಕಾರಿಗಳು ಕಾಯ್ದುಕೊಂಡು ಬಂದಿದ್ದಾರೆ. ಪೋಲೀಸ್ ಅಧಿಕಾರಿಗಳು ದರ್ಪ ಮಾಡುತ್ತಾರೆ ಮತ್ತೊಂದು ಮಾಡುತ್ತಾರೆಂದು ಹೇಳಬಹುದು. ಅವರೂ ಹಗಲು ರಾತ್ರಿ ಕೆಲಸ ಮಾಡುತ್ತಾರೆ, ಸಮಾಜದಲ್ಲಿ ಒಳ್ಳೆಯವರು ಇರುತ್ತಾರೆ ಹಾಗೆಯೇ ಕೆಟ್ಟವರೂ ಇರುತ್ತಾರೆ. ಅದೇ ರೀತಿ ಪ್ರತಿಯೊಂದು ಇಲಾಖೆಗಳಲ್ಲೂ ಬಹಳಷ್ಟು ಜನ ಒಳ್ಳೆಯವರಿರುತ್ತಾರೆ ಕೆಲವು ಜನ ಕೆಟ್ಟವರು ಇರಬಹುದು. ಅವರುಗಳಿಗೆ ತರಬೇತಿ ಕೊಟ್ಟು ಮನಸ್ಸನ್ನು ಪರಿವರ್ತನೆ ಮಾಡಬೇಕು. ಒಳ್ಳೆಯ ರೀತಿಯಿಂದ, ಸಭ್ಯ ರೀತಿಯಲ್ಲಿ ಜನರ ಜೊತೆಗೆ ವ್ಯವಹಾರ ಮಾಡ ತಕ್ಕಂಥ ಒಂದು ವ್ಯವಸ್ಥೆ ಮಾಡಬೇಕೆಂದು ಚರ್ಚೆ ಮಾಡುತ್ತಿದ್ದೇವೆ. ನನಗನ್ನಿಸುತ್ತದೆ ಈ ವಿಷಯವನ್ನು ಇಷ್ಟಕ್ಕೆ ಮುಕ್ತಾಯ ಮಾಡಿ ಬೇರೆ ವಿಷಯವನ್ನು ತೆಗೆದುಕೊಳ್ಳೋಣ ಎಂದು.

ಅಧ್ಯಕ್ಷರು.—ವಿಷಯ ಇಲ್ಲಿಗೆ ಮುಕ್ತಾಯ ಆಯಿತು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನಮಗೆ ಇನ್ನೂ ಸ್ವಲ್ಪ ಅವಕಾಶ ಮಾಡಿಕೊಡಬೇಕು. ಏಕೆಂದರೆ ಮಾನ್ಯ ಮಂತ್ರಿಗಳು ತಾವು ಮಾತನಾಡುವಾಗ ತಮ್ಮ ವಾದವನ್ನು ಸಮರ್ಥನೆ ಮಾಡುವುದಕ್ಕೋಸ್ಕರವಾಗಿ ಅವರಿಗೆ ಏನು ಬೇಕೋ ಅದನ್ನು ಹೇಳುತ್ತಾರೆ. ಎಕ್ಸ್‌ಟೆಸೀವಲೀ ಕೋಟ್ ಮಾಡಿದ್ದನ್ನು...

ಅಧ್ಯಕ್ಷರು.—ದಯವಿಟ್ಟು ತಾವು ಮುಕ್ತಾಯ ಮಾಡಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪತ್ರಿಕೆಗಳಲ್ಲಿ ಬಂದುದ್ದು ಅಷ್ಟು ಸಮಂಜಸ ಅಲ್ಲ ಎಂದು ಹೇಳುತ್ತಾ ಇದ್ದಾರೆ. ಇವರು ಅಧಿಕಾರಕ್ಕೆ ಬಂದ ಮೇಲೆ ಮೂರು ಸಲ ಇವರಿಗೆ ಬೇಕಾದವುಗಳನ್ನು ಪ್ರಿಂಟ್ ಮಾಡಿಸಿದರು. ಪತ್ರಿಕೆಗಳಲ್ಲಿ ಏನೇನು ಹೇಳಿಕೆಗಳು ಬಂದವು ಅವುಗಳನ್ನು ಕಟ್ ಮಾಡಿ ಕೂಡಿಸಿ, ಮತ್ತೆ ಪ್ರಿಂಟ್ ಮಾಡಿಸಿದರು. ಮಾನ್ಯ ಜನಾರ್ಧನ ಪೂಜಾರಿಯವರು ನಡೆಸುತ್ತಿರುವ ಸಾಲ ಮೇಳದ ಬಗ್ಗೆ....

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಮುಕ್ತಾಯ ಮಾಡಿ.

SRI M. MALLIKARJUNA KHRGE.—'Our best and worst politicians' ಎನ್ನುವ article ಬಂದಿದೆ. ಅದನ್ನು ನೋಡಿರಬೇಕು. ಇಂತಹ ನಿಮಗೆ ಅನುಕೂಲವಾದವುಗಳು ಬೇಕು, ನಿಮಗೆ ಅನುಕೂಲವಾಗದೇ ಇರುವವು ಬೇಡ. ನಾವು ಹೇಳತಕ್ಕಂಥಾದ್ದು ಸರಿಯಲ್ಲ. ಏಕೆಂದರೆ ಅವುಗಳು ಇವರಿಗೆ ಅನ್ವಯಿಸುವುದಿಲ್ಲ. ನಾವು ಎತ್ತಿದ ಪ್ರಶ್ನೆಗಳು ಎಂದರೆ ಮೂರು ವಿಷಯ ಗಳ ಮೇಲೆ. ಈ ಘಟನೆಗೆ ಸಂಬಂಧಪಟ್ಟಂತೆ ಯಾವ ಪೋಲೀಸ್ ಕಾನ್ಸ್‌ಟೇಬಲ್‌ಗಳು ಇದ್ದಾರೆ, ಎಸ್.ಐ. ಗಳು ಇದ್ದಾರೆ, ಅವರಿಗ ನೇರವಾಗಿ ತಾವುಗಳು ಪ್ರಾಸಿಕ್ಯೂಟ್ ಮಾಡಿ ಎನ್ನುವುದು ಮೊದಲನೆಯ ವಿಷಯವಾಗಿದೆ.

ಅಧ್ಯಕ್ಷರು.—ತಾವು ದಯಮಾಡಿ ತಮ್ಮ ಮಾತುಗಳನ್ನು ಮುಗಿಸಬೇಕು.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಂಬಂಧಪಟ್ಟ ಕಾನೂನಿನ ೩೦೨ ರಲ್ಲಿ ಅಂತಹವರ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳಬಹುದು. ಹಾಗೆ ಏಕೆ ಮಾಡಲಿಲ್ಲ ? ಎರಡನೇಯದಾಗಿ ಈ ಘಟನೆ ಗಳಿಗೆ ಸಂಪೂರ್ಣವಾಗಿ ಮುಖ್ಯ ಮಂತ್ರಿಯವರು ಜವಾಬ್ದಾರರಾಗಿರುತ್ತಾರೆ ಎಂದು ಹೇಳಿದ್ದೇವೆ. ಅವರು ರಾಜೀನಾಮೆ ಕೊಡಬೇಕೆಂದು ಹೇಳಿದ್ದೇವೆ. ಆದಕ್ಕೆ ಅವರಿಂದ ಯಾವುದೇ ಉತ್ತರ ಇಲ್ಲ. ನಾವು ಹೇಳುತ್ತಿರುವುದು ಗೃಹ ಸಚಿವರು ಮತ್ತು ಮುಖ್ಯಮಂತ್ರಿಗಳು ಇದಕ್ಕೆ ಜವಾಬ್ದಾರರು ಎಂದು...

ಅಧ್ಯಕ್ಷರು.—ಈ ವಿಷಯ ಇಲ್ಲಿಗೆ ಮುಕ್ತಾಯ ಆಗಿದೆ. ದಯಮಾಡಿ ಎಲ್ಲರೂ ಕುಳಿತು ಕೊಳ್ಳಬೇಕು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನಮ್ಮ ಪ್ರಶ್ನೆಗಳಿಗೆ ನಮಗೆ ಉತ್ತರ ಬೇಕೇ ಬೇಕು. ಇಲ್ಲದಿದ್ದರೇ ಇದೇ ರೀತಿಯಲ್ಲಿ ನಿಂತುಕೊಳ್ಳಬೇಕಾಗುತ್ತದೆ. ತಪ್ಪು ಮಾಡಿದ ಅಧಿಕಾರಿಗಳ ಬಗ್ಗೆ, ಸಿಬ್ಬಂದಿ ಬಗ್ಗೆ ೩೦೨ ರ ಪ್ರಕಾರ ನೇರವಾಗಿ ಪ್ರಾಸಿಕ್ಯೂಟ್ ಮಾಡಿ ಎಂದು ಹೇಳಿದ್ದೇವೆ. ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ...

ಅಧ್ಯಕ್ಷರು.—ಈಗ ವಿಷಯ ಮುಕ್ತಾಯ ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳವರು ಉತ್ತರ ವನ್ನು ಕೊಟ್ಟ ಮೇಲೆ ವಿಷಯವು ಮುಕ್ತಾಯವಾಗಿದೆ ಎಂದು ಹೇಳಿದ್ದೇನೆ. ಮತ್ತೆ ಮಾನ್ಯ ಸದಸ್ಯರು ಗಳು ಅವಕಾಶ ಸಿಕ್ಕಾಗ ಮಾತನಾಡಬಹುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಕೇಳಿದ ವಿಷಯಗಳ ಮೇಲೆ ಮಾನ್ಯರು ಉತ್ತರವನ್ನು ಕೊಟ್ಟಿಲ್ಲ...

ಶ್ರೀ ಬಿ. ರಾಚಯ್ಯ.—ರಾಂಗ್‌ಫುಲ್ ಕನ್‌ಫೈನ್‌ಮೆಂಟ್ ಮತ್ತು ಅಸಾಲ್ಟ್ ಬಗ್ಗೆ ಅವರ ಮೇಲೆ ಕೇಸ್ ಹಾಕಿದ್ದೇವೆ. ಪ್ರಿಲಿಮಿನರಿ ಎನ್‌ಕ್ವೈರಿ ಆದ ಮೇಲೆ ೩೦೨ ರ ಪ್ರಕಾರ ಅವರ ಮೇಲೆ ಕೇಸ್ ರಿಜಿಸ್ಟರ್ ಮಾಡುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ ಎಂದು ಹೇಳಿದ್ದೇನೆ. ಅದಕ್ಕೆ ಅವಕಾಶ ಕೊಡಿ ಎಂದು ಹೇಳಿದ್ದೇನೆ.

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ...

ಅಧ್ಯಕ್ಷರು.—ತಾವುಗಳು ಹಿರಿಯ ಸದಸ್ಯರು...ಹೀಗೆ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಅವರು ಕ್ಲಾರಿಫಿಕೇಶನ್ಸ್ ಕೇಳುತ್ತಾ ಇದ್ದಾರೆ. ದಯಮಾಡಿ ಸ್ವಲ್ಪ ಅವಕಾಶ ಮಾಡಿಕೊಡಿ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಖಾರ್ಗೆಯವರು ತಿಳಿದುಕೊಂಡ ಪ್ರಕಾರ, ೩೦೨ ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡುತ್ತೇವೆ ಎಂದು ಹೇಳಿದ್ದೀರಿ, ಅದು ಸರಿಯೇ ? ಅದನ್ನು ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಹೌದು.

ಶ್ರೀ ಜಿ. ಮಾದೇಗೌಡ.—ನಾವು ನಿಲುವಳಿ ಸೂಚನೆಗೆ ನೋಟಿಸ್ ಕೊಡುವ ಮುಂಚೆಯೇ ಸರ್ಕಾರ ಏನೆಂದು ಉತ್ತರ ಕೊಡುತ್ತದೆ ಎಂದು ಗೊತ್ತಿತ್ತು, ಅದರ ಮೇಲೆ ಏನೆಂದು ನೀವು ರೂಲಿಂಗ್ ಕೊಡುತ್ತೀರಿ ಎನ್ನುವುದು ಗೊತ್ತಿತ್ತು. ಇದರಲ್ಲೆಲ್ಲಾ ಹೊಸದೇನೂ ಇಲ್ಲ.

ಅಧ್ಯಕ್ಷರು.—ನೇರವಾಗಿ ನಿಮ್ಮದೇನೋ ಅದನ್ನು ಹೇಳಿ.

ಶ್ರೀ ಜಿ. ಮಾದೇಗೌಡ.—ಮಾನ್ಯ ಗೃಹ ಮಂತ್ರಿಗಳು ನಿಮ್ಮಗಳ ಮಾತನ್ನು ಕೇಳಿಕೊಂಡು ನಾವು ರಾಜ್ಯಭಾರ ಮಾಡೋಕಾಗೋಲ್ಲ ಎಂದು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳೂ ಅದನ್ನೇ ಹೇಳಿದರು.

(ಗೊಂದಲ)

ಶ್ರೀ ಜಿ. ಮಾದೇಗೌಡ.—ನಿಮ್ಮಂಥವರ ಮಾತನ್ನು ಕಟ್ಟಿಕೊಂಡು ನಾವೇನು ರಾಜ್ಯಭಾರ ಮಾಡೋಕಾಗೋಲ್ಲ ಎಂದು ಮಾತನ್ನು ಹೇಳಿದರು ಅವರಿಬ್ಬರು. ಇದರಿಂದ as a Speaker you look iuto the proceedings.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ಸಾಮಾನ್ಯ ಪ್ರಜೆ ಏನು ಅಪರಾಧ ಮಾಡಿದರೆ ಯಾವ ಕ್ರಮ ತೆಗೆದುಕೊಳ್ಳುತ್ತಿದ್ದೆವೋ ಅದೇ ರೀತಿ ಕ್ರಮವನ್ನು ಪೋಲಿಸರ ಮೇಲೂ ತೆಗೆದುಕೊಳ್ಳಿ ಎಂದು ಏನು ಒಂದು ಜನರಲ್ ಆಗಿ ಪ್ರಸ್ತಾಪವನ್ನು ಮಾಡಿದ್ದಾರೆ ಅದರ ಆಧಾರದ ಮೇಲೆ ಈಗ ಪ್ರಿಲಿಮಿನರಿ ಎನ್‌ಕ್ವಯರಿ ಮಾಡಿಸುತ್ತೇನೆ. ಕೇಸನ್ನೂ ರಿಜಿಸ್ಟರ್ ಮಾಡಿಸಿಕೊಂಡಿದ್ದೇವೆ.

ಅಧ್ಯಕ್ಷರು.—ಆಯಿತು ಈಗ ಮುಂದಿನ ವಿಷಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನೊಂದು ಕ್ಲಾರಿಫಿಕೇಷನ್.

ಅಧ್ಯಕ್ಷರು.—ನೀವು ಎರಡು ಮೂರು ನಾಲ್ಕು ತಾಸು ಮಾತಾಡಿದ್ದೀರಿ. ಆದರೂ ನಿಮಗೆ ಸಮಾಧಾನ ಇಲ್ಲವೇ ? This is too much.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಕೇಳಿದ್ದ ಕ್ಲಾರಿಫಿಕೇಷನ್‌ಗೆ ಮುಖ್ಯ ಮಂತ್ರಿಗಳು ಉತ್ತರ ಹೇಳದೆ ಹಾಗೇ ಹೋಗಿಬಿಟ್ಟರಲ್ಲ.

(ಗೊಂದಲ)

ಅಧ್ಯಕ್ಷರು.—ನಿಮಗೆ ಸಮಾಧಾನವೇ ಇಲ್ಲವಲ್ಲ. ಇದನ್ನು ನೋಡಿಯೇ ನಾನು ಹೇಳಿದ್ದುದು ಮೊದಲು ಬಿಲ್ ಇಟ್ಟುಕೊಳ್ಳೋಣ, ಮಧ್ಯಾಹ್ನದ ಮೇಲೆ ಬೇಕಾದರೆ ಇದರ ಬಗ್ಗೆ ಚರ್ಚೆಮಾಡೋಣ ಎಂದು. ಈಗ ಪಂಚಾಯಿತಿ ವಿಧೇಯಕದ ಮೇಲೆ ಚರ್ಚೆ ನಡೆಯಲಿ.

(ಗೊಂದಲ)

ಶ್ರೀ ಎನ್. ಮಲ್ಲಾರಿಗೌಡ ಪಾಟೀಲ್.—ಅಧ್ಯಕ್ಷರೇ, ಉಪನಾಯಕರು ಮಾತನಾಡುತ್ತಿರುವುದು ಅವರಿಗೇ ನೀವು ಹೀಗೆ ಹೇಳಿದರೆ ನಮಗೆ ಇನ್ನೆಷ್ಟು ಹೇಳುತ್ತೀರಿ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ ತಾವು ದಯವಿಟ್ಟು ಕುಳಿತುಕೊಳ್ಳಿ, ಬೆಳಗಿನಿಂದಲೂ ತಮಗೆ ಅವಕಾಶ ಕೊಟ್ಟಿದ್ದೇನೆ. ಈಗ ಆ ವಿಷಯ ಮುಕ್ತಾಯವಾಗಿದೆ ಪಂಚಾಯತ್ ಮಸೂದೆಯ ತಿದ್ದುಪಡಿಯ ಮೇಲೆ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಪ್ರಶ್ನೆಗೆ ಅವರು ಉತ್ತರ ಕೊಡಬೇಕು, ಸರಿಯಾದ ಉತ್ತರ ಅವರಿಂದ ಬರಲಿಲ್ಲ ನಮಗೆ ಸರಿಯಾದಂತಹ ಉತ್ತರ ಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟಿದ್ದಾರೆ ಚರ್ಚೆ ಮುಗಿದಿದೆ ಎಂದು ಮಾನ್ಯ ಅಧ್ಯಕ್ಷರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ರಘುಪತಿ —ಅವರು ಏಕೆ ಜವಾಬ್ದಾರರಾಗುತ್ತಾರೆ

(ಗೊಂದಲ)

SRI M. MALLIKARJUN KHARGE.—This Government itself is responsible. I can say that.

(INTERRUPTION)

SRI M. MALLIKARJUN KHARGE.—This Government itself is responsible.......

ಅಧ್ಯಕ್ಷರು.—ಈಗ ಶ್ರೀ ಕೆ. ಹೆಚ್. ಪಾಟೀಲ್‌ರವರನ್ನು ಕರೆದಿದ್ದೇನೆ. ಅವರು ಮಾತನಾಡಲಿ ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳ ಭಾಷಣ ಮುಗಿದ ಮೇಲೆ ಕ್ಲಾರಿಫಿಕೇಷನ್ ಕೇಳೋಣವೆಂದು ಕುಳಿತಿದ್ದೆವು. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟು ಹೊರಗೆ ಹೋಗಿದ್ದಾರೆ. ನಮಗೆ ಸರಿಯಾದಂತಹ ಉತ್ತರ ಬೇಕು.

ಅಧ್ಯಕ್ಷರು.—ಈ ವಿಷಯ ಮುಕ್ತಾಯವಾಯಿತೆಂದು ಹೇಳಿದ ಮೇಲೆ ಅವರು ಹೋಗಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮಗೆ ಸಮಂಜಸವಾದ ಉತ್ತರ ಕೊಡಬೇಕು ಈ ರೀತಿ ಮಾಡಿದರೆ ಅದನ್ನು ಖಂಡಿಸಬೇಕಾಗುತ್ತದೆ. ಅವರು ಈ ಮನೆಗೆ ಅಗೌರವವನ್ನು ತೋರಿಸುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಈ ವಿಷಯ ಮುಕ್ತಾಯವಾಯಿತೆಂದು ಹೇಳಿದ ಮೇಲೆ ಮುಗಿಯಿತು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊದಲು ಕ್ಲಾರಿಫಿಕೇಷನ್ ಕೇಳಿದಾಗ ಆಮೇಲೆ ಕೇಳಿ ಎಂದು ಹೇಳಿದ್ದೀರಿ....

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರು ಈ ವಿಷಯ ಮುಕ್ತಾಯವಾಗಿದೆಯೆಂದು ಹೇಳಿದ ಮೇಲೆ ಮಾನ್ಯ ಸಭಾನಾಯಕರು ಹೊರಗಡೆ ಹೋಗಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮಗೆ ಅಧಿಕಾರವಿದೆ ಅವರನ್ನು ಕರೆಯಿಸಬಹುದು.

ಅಧ್ಯಕ್ಷರು.—ಈಗ ನಾವು ಮುಂದಿನ ವಿಷಯಕ್ಕೆ ಬಂದಿದ್ದೇವೆ. ನಾನು ಶ್ರೀ ಕೆ.ಹೆಚ್. ಪಾಟೀಲ್ ರವರನ್ನು ಕರೆದಿದ್ದೇನೆ. ಅವರೂ ಕೂಡ ಎದ್ದು ನಿಂತಿದ್ದಾರೆ ಅವರು ಮಾತನಾಡಲಿ ತಾವು ದಯವಿಟ್ಟು ಕುಳಿತುಕೊಳ್ಳಿ. ಸೋಮವಾರದ ದಿವಸ ಮಾತನಾಡಿ. ನಾನು ಈ ವಿಷಯ ಮುಕ್ತಾಯವಾಯಿತೆಂದು ಹೇಳಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಹೊರಗಡೆ ಹೋಗಿದ್ದಾರೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಕಾಲಮಿತಿ ಇಲ್ಲದೆ ಮಾತನಾಡುತ್ತಿದ್ದಾರೆ, ಅದಕ್ಕೆ ತಾವು ಅವಕಾಶ ಕೊಡಬಾರದು ಯಾವುದಕ್ಕಾದರೂ ಒಂದು ಮಿತಿ ಇದೆ. ಆ ಮಿತಿಯನ್ನು ಅವರು ಮೀರುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ,...

ಅಧ್ಯಕ್ಷರು.—ಈಗ ಕೆ. ಹೆಚ್. ಪಾಟೀಲ್‌ರವರು ಎದ್ದು ನಿಂತಿದ್ದಾರೆ. ಅವರು ಮಾತನಾಡಲಿ ತಾವು ಕುಳಿತುಕೊಳ್ಳಿ.

ಶಾಸನ ರಚನಾ ಕಾರ್ಯಕಲಾಪಗಳು

1987ರ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿಗಳು ಮಂಡಲ ಪಂಚಾಯತ್ ಸಮಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕದ ಬಗ್ಗೆ ಚರ್ಚೆ.

ಪರ್ಯಾಲೋಚನಾ ಪ್ರಸ್ತಾವ (ಮುಂದುವರಿದ ಚರ್ಚೆ)

† ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ಈ ವರೆಗೆ ಬಹಳ ಬಿರುಸಿನ ಹಾಗೂ ಗೊಂದಲವಾದ ವಾತಾವರಣದಲ್ಲಿ ಚರ್ಚೆಯಾಯಿತು. ಈ ಚರ್ಚೆಯ ಹಿನ್ನೆಲೆಯಲ್ಲಿ ತಾವು ಎಷ್ಟರ ಮಟ್ಟಿಗೆ ಮಾನ್ಯ ನಜೀರ್ ಸಾಬ್‌ರವರು ತಂದಿರುವ ಬಿಲ್ಲಿಗೆ ಯೋಗ್ಯವಾದಂತಹ ಸಲಹೆ ಕೊಡುತ್ತೇವೆಯೋ ನನಗೆ ಗೊತ್ತಿಲ್ಲ. ಅವರು ಇವೊತ್ತಿನ ದಿವಸ ಬಹಳ ಮಹತ್ವವಾದಂತಹ ಕಾನೂನನ್ನು ಈ ರಾಜ್ಯಕ್ಕೆ ತಂದು ಕೊಟ್ಟು ಒಂದು ಹೊಸ ಪರಂಪರೆಯನ್ನು ತಂದಿದ್ದೇವೆನ್ನುವ ಧಾಟಿಯಲ್ಲಿ ಈ ಹೊಸ ಅಮೆಂಡ್‌ಮೆಂಟನ್ನು ಸಹ ತಂದಿದ್ದಾರೆ ಏತಕ್ಕೋ ಅವರಿಗೆ ಈ ಕಾನೂನು ಮಾಡಿ ಇಷ್ಟು ದಿವಸಗಳು ಆದರೂ ಸಹಿತ ಈ ಅಮೆಂಡ್‌ಮೆಂಟನ್ನು ತರಲಿಕ್ಕೆ ಇಷ್ಟು ದಿನಗಳು ಹಿಡಿಯಿತೋ ಗೊತ್ತಿಲ್ಲ. ಚುನಾವಣೆ ನಡೆದಂತೆ ಪಕ್ಷಗಳಿಗೆ ಅನುಕೂಲ ಆಗುವಂಥ ವಾತಾವರಣವನ್ನು ನಿರ್ಮಾಣ ಮಾಡಿಕೊಂಡು, ಬರತಕ್ಕಂಥ ತೊಂದರೆಗಳ ನಿವಾರಣೆಗಾಗಿ ಈ ಕಾನೂನನ್ನು ತಂದಿದ್ದೀರಿ. ಈ ದೃಷ್ಟಿಯಿಂದ ನಾನು ಅವರ ಬಗ್ಗೆ ವೈಯುಕ್ತಿಕವಾದಂಥ ಗೌರವಭಾವ ಇದ್ದರೂ ಸಹಿತ ಇದನ್ನು ಪ್ರಬಲವಾಗಿ ವಿರೋಧ ಮಾಡಲಿಕ್ಕೆ ಇಚ್ಛೆಪಡುತ್ತೇನೆ, ಇವೊತ್ತಿನ ದಿವಸ ಈ ಕಾನೂನಿಗೆ ಅನೇಕ ಅಮೆಂಡ್‌ಮೆಂಟ್‌ಗಳನ್ನು ತರಬೇಕು ಎಂದರೂ ಸಹಾ ನಮಗೆ ಅವಕಾಶ ಇಲ್ಲದ ಹಾಗೆ ಆಯಿತು. ನಿನ್ನೆ ರಾತ್ರಿಯವರೆಗೂ ಗೊತ್ತಾಗದೇ ಈ ಕಾನೂನು ಇವೊತ್ತಿನ ದಿವಸ ಬಂದಿದೆ. ಈ ಕಾನೂನಿನ ಹಿನ್ನೆಲೆಯಲ್ಲಿ ಪಾವಗಡದ ಗುಂಡಿನ ಏಟು ಇದೆ. ಈ ಗುಂಡು ಇನ್ನೆಲ್ಲಿ ನಮಗೆ ಬೀಳುತ್ತದೆಯೋ ಗೊತ್ತಿಲ್ಲ ಎನ್ನುವಂಥ ಪರಿಸ್ಥಿತಿ ಉಂಟಾಗಿದೆ. ಶ್ರೀಮಾನ್ ನಜೀರ್ ಸಾಬ್‌ರವರು ಒಂದಲ್ಲ ಅನೇಕ ಸೆಕ್ಷನ್‌ಗಳ ಮೇಲೆ ಅಮೆಂಟ್‌ಮೆಂಟಗಳನ್ನು ತಂದಿದ್ದಾರೆ. ಅದರಲ್ಲಿ ಪ್ರಾಯಶಃ ತಾವು ಹೇಳಬಹುದು, ಸಣ್ಣ ಸಣ್ಣ ಅಮೆಂಡ್‌ಮೆಂಟ್ ತಂದಿದ್ದೇವೆ. ಡೆಪ್ಯುಟಿ ಕಮೀಷನರ್ ಬದಲಿಗೆ ಅಸಿಸ್ಟೆಂಟ್ ಕಮೀಷನರನ್ನು ಇಡುತ್ತೇವೆ, ಕೆಲ ಕೆಲವು ದಿವಸಗಳು ೨೪ ಗಂಟೆಯಿಂದ ೪೮ ಗಂಟೆ ಇಡುತ್ತೇವೆ ಎಂದು ಹೇಳಬಹುದು ನಿಜ. ಅಲ್ಲಿ ನಮಗೆ ಏನಾಗಿದೆ ಎಂದರೆ ಈ ಕಾನೂನನ್ನು ಹಿಡಿದುಕೊಂಡು ನಾವು ಶ್ರೀಮಾನ್ ನಜೀರ್ ಸಾಬ್‌ರವರು ಸರ್ಕಾರದ ವಿರುದ್ಧ ಹೋಗಿ ಕೇಳಿದಾಗ ನಮಗೆ ಗೌರ್ನರ್ ಸಹಿತ ಹೇಳುತ್ತಾರೆ, ಈ ಕಾನೂನನ್ನು ಮಾಡಿದಾಗ ಕಣ್ಣು ಮುಚ್ಚಿಕೊಂಡು ಕುಳಿತಿದ್ದರೆ ಪಾಟೀಲರೇ ಎಂದು ಅದನ್ನು ನೋಡಲಿಕ್ಕೆ ಅವಕಾಶ ಸಿಗದ ಹಾಗೆ ಲಘು ಲಘುವಾಗಿ ಪಾಸ್ ಮಾಡಿಕೊಂಡು ಬಿಟ್ಟರು, ಆ ಹಿನ್ನೆಲೆಯಲ್ಲಿ ನಾವು ಒಪ್ಪಿಕೊಳ್ಳಲೇಬೇಕು. ಏಕೆಂದರೆ ಬಹು ಸಂಖ್ಯಾತರು, ಅಲ್ಪ ಸಂಖ್ಯಾತರು ನಿಮ್ಮನ್ನು ಆರಿಸಿದ್ದಾರೆ ನಿಜ. ನಮಗಿಂತ ಜನರಲ್ಲಿ ನಿಮಗೆ ಹೆಚ್ಚಿನ ಗೌರವ ಇದೆ ನಿಜ, ಆದರೆ ಬಹು ಸಂಖ್ಯಾತರಲ್ಲಿ ೨X೨ ಎಷ್ಟು ಎಂದು ಹೇಳಿದರೆ ಒಂದು ಎಂದು ಹೇಳುತ್ತಾರೆ. ಆಗ ಅಲ್ಪಮತದವರು ಇದನ್ನು ಸರಿಯಿಲ್ಲ ಎಂದು ಹೇಳಿದರೆ ತಪ್ಪಾಗುತ್ತದೆ. ಒಪ್ಪುವುದನ್ನು ಒಪ್ಪಲೇಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕೆಲವು ಚುನಾವಣೆಗಳು ಈ ಆಕ್ಟ್‌ನಿಂದ ಪಾಸಾಗಿ ನಂತರ ಚುನಾವಣೆಯು ಒಳಗೆ ಏನೇನು ನಡೆದಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ಬಹು ನಮ್ರ ಪೂರ್ವಕವಾಗಿ ತರಲಿಕ್ಕೆ ಇಚ್ಛೆಪಡುತ್ತೇನೆ. ಈ ಕಾನೂನನ್ನು ಮಾಡುವಾಗ ಅದರಲ್ಲಿ ಅನೇಕ ಲೋಪದೋಷಗಳು ಇವೆ ಎಂದು ಹೇಳಿದ್ದೇವೆ. ಮೊದಲು ಕ್ಷೇತ್ರಗಳನ್ನು ವಿಂಗಡಣೆ ಮಾಡುವಾಗಲೇ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಆಗಲೀ ದೋಷಗಳನ್ನು ಹೇಳಿಲ್ಲ. ಆ ದೋಷಗಳನ್ನು ತಿದ್ದುಪಡಿ ಮಾಡಲಿಕ್ಕೆ ಆ ಕಾನೂನನ್ನು ತರಬೇಕಾಗಿತ್ತು, ತರಲಿಲ್ಲ. ಇವೊತ್ತು ಎಷ್ಟರ ಮಟ್ಟಿಗೆ ಇದರಲ್ಲಿ ಅನ್ಯಾಯವಾಗಿದೆ ಎಂದು ನಜೀರ್‌ಸಾಬ್‌ರವರು ಸ್ವತಃ